ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಐತಿಹಾಸಿಕ ಹಂಪಿ ಉತ್ಸವವನ್ನು ಉದ್ಘಾಟಿಸಿದರು. ಸಚಿವರಾದ ಜಮೀರ್ ಅಹ್ಮದ್, ಶಿವರಾಜ್ ತಂಗಡಗಿ, ಭೈರತಿ ಸುರೇಶ್, ನಟ ಶಿವರಾಜ್ ಕುಮಾರ್ ಮತ್ತಿತರರು ಇದ್ದರು.

ಕರ್ನಾಟಕ ಸರ್ಕಾರ ಕಂದಾಯ ಇಲಾಖೆ

ಕರ್ನಾಟಕ ಸರ್ಕಾರ

ಉತ್ತಮ ಆಡಳಿತ ನಿಮಗಾಗಿ

ಜನಸೇವೆಯಲ್ಲಿ
ಸಾರ್ಥಕ ಸಾವಿರ ದಿನ

100000

ಕುಟುಂಬಗಳಿಗೆ ಹಕ್ಕು ಪತ್ರ ವಿತರಣೆ
ಸದ್ದಿಲ್ಲದೇ ನಡೆದ ಕ್ರಾಂತಿ - ಪ್ರಣಾಳಿಕೆಯಲ್ಲಿ ಹೇಳದೆ ಕೊಟ್ಟ ಗ್ಯಾರಂಟಿ

ಭೂ ಗ್ಯಾರಂಟಿ
ಸಮರ್ಪಣಾ ಸಮಾವೇಶ

ಫೆಬ್ರವರಿ
14
ಶನಿವಾರ
11:00 ಗಂಟೆಗೆ, ಹಾವೇರಿ

ಐತಿಹಾಸಿಕ ಕ್ರಾಂತಿ
ಕುಟುಂಬಗಳಿಗೆ ಹಕ್ಕುಪತ್ರಗಳು

1,11,000 2023- ಮೇ 2025 | **1,00,000** ಮೇ 2025ರ ನಂತರ

1,39,476 ಮುಂದಿನ ಗುರಿ

ಹಿಂದೆಂದೂ ಆಗದ ವೇಗದಲ್ಲಿ ಸುಧಾರಣೆ
- **ಪೋಡಿ ಅಭಿಯಾನ:** 1.9 ಲಕ್ಷ ರೈತರ ಭೂಮಿ ಪೋಡಿ ಪ್ರಗತಿಯಲ್ಲಿ
- **ಪೌತಿ ಖಾತೆ:** 14,48,536 ಸರ್ವೇ ನಂಬರ್‌ಗಳ ಪೌತಿ ಖಾತೆ ಪೂರ್ಣ

ಡಿಜಿಟಲೀಕರಣ: 67+ ಕೋಟಿ ದಾಖಲೆಗಳ ಸ್ಕ್ಯಾನಿಂಗ್

ಸುರಕ್ಷತೆ: 22.15 ಕೋಟಿ ಆಸ್ತಿಗಳಿಗೆ ಆಧಾರ್ ಲಿಂಕ್

ಲ್ಯಾಂಡ್ ಬೀಟ್: 96% ಸರ್ಕಾರಿ ಆಸ್ತಿ ಜಿಯೋ ಫೆನ್ಸಿಂಗ್

ಕಾವೇರಿ 2.0: ನೋಂದಣಿಯಲ್ಲಿ ಸುಧಾರಣೆ

ಮಾನ್ಯ ಕಂದಾಯ ಸಚಿವರಾದ ಶ್ರೀ ಕೃಷ್ಣಬೈರೇಗೌಡ ಅವರೊಂದಿಗೆ ಸುದ್ದಿಗೋಷ್ಠಿಯೊಂದರಲ್ಲಿ ಮಾನ್ಯ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶಿವಾನಂದ ಪಾಟೀಲ್ ಅವರು.

ಕಂದಾಯ ಸೇವೆಗಳು ಈಗ **ಸರಳ. ಸುಲಭ. ಸುಲಲಿತ.**

ಜನ ಸೇವೆಯ ಸಮರ್ಪಣೆ

ಭಾರತದ ಸಾರ್ವಭೌಮತ್ವ , ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು.

www.revenuecommissionerate.karnataka.gov.in

ಸಮಾಚಾರ ಸಣ್ಣದಲ್ಲ

ಶಾಸಕ ಶಿವಣ್ಣನವರಗೆ ಎದೆ ನೋವು: ಆಸ್ಪತ್ರೆಗೆ



ಹಾವೇರಿ: ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ ಅವರಿಗೆ ಶುಕ್ರವಾರ ಮುಂಜಾನೆ ಸಮಯದಲ್ಲಿ ಆರೋಗ್ಯದಲ್ಲಿ ಏರುಪೇರು ಉಂಟಾಗಿ ಹುಬ್ಬಳ್ಳಿ ವಿಹಾನ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಫೆ.14 ರಂದು ಹಾವೇರಿಯಲ್ಲಿ ಭೂ ಗ್ಯಾರಂಟಿ ಸಮರ್ಪಣಾ ಸಾಧನಾ ಸಮಾವೇಶ ಯಶಸ್ವಿಯಾಗಿ ನಡೆಸಲು ಅಧಿಕಾರಿಗಳೊಂದಿಗೆ ಹಾಗೂ ಸಚಿವರು, ಶಾಸಕರೊಂದಿಗೆ ನಿರಂತರ ಕೆಲಸದಲ್ಲಿ ತೊಡಗಿಕೊಂಡಿದ್ದರು. ಶುಕ್ರವಾರ ಬೆಳಿಗ್ಗೆ ಆರೋಗ್ಯದಲ್ಲಿ ಎದೆ ನೋವು ಸುಸ್ತು ಕಾಣಿಸಿಕೊಂಡಿತ್ತು.ಇದರಿಂದ ತಕ್ಷಣವೇ ಹುಬ್ಬಳ್ಳಿಗೆ ತೆರಳಿ ವಿಹಾನ್ ಖಾಸಗಿ ಆಸ್ಪತ್ರೆ ದಾಖಲಾಗಿದ್ದು ಚಿಕಿತ್ಸೆಗೆ ಒಳಪಡಿಸಿದ ವೈದ್ಯರು ಹೃದಯದಲ್ಲಿ ಸಮಸ್ಯೆ ಇರುವುದನ್ನು ಗುರ್ತಿಸಿ ಸ್ಟಂಟ್ ಅಳವಡಿಕೆ ಮಾಡಿದ್ದಾರೆ. ವೈದ್ಯರು ಸದ್ಯ ಐಸಿಯು ನಲ್ಲಿ ಚಿಕಿತ್ಸೆ ಮುಂದುವರೆಸಿದ್ದಾರೆ ಎಂದು ತಿಳಿದು ಬಂದಿದೆ.

ಇಂದು ಸಚಿವ ಶಿವಾನಂದ ಪಾಟೀಲ ಜಿಲ್ಲಾ ಪ್ರವಾಸ

ಹಾವೇರಿ: ಜವಳಿ, ಮತ್ತು ಸಕ್ಕರೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಫೆ.14 ರಂದು ಜಿಲ್ಲೆಯಲ್ಲಿ ಪ್ರವಾಸಕೈಗೊಂಡಿದ್ದು, ಅಂದು ಬೆಳಿಗ್ಗೆ 9 ಗಂಟೆಗೆ ಹುಬ್ಬಳ್ಳಿಯಿಂದ ಹೊರಟು, 10 ಗಂಟೆಗೆ ಹಾವೇರಿಗೆ ಆಗಮಿಸುವರು. ಬೆಳಿಗ್ಗೆ 11 ಗಂಟೆಗೆ ಮುಖ್ಯಮಂತ್ರಿ ಉದ್ಘಾಟಿಸಲಿರುವ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ ಹಾಗೂ ಜನಸೇವೆಯ ಸಾರ್ಥಕ ಸಾವಿರ ದಿನಗಳ ಸಮರ್ಪಣಾ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಶಿಲ್ಪಾ ಪಾಂಡೆಗೆ ಕವಿವಿ ಪಿಎಚ್.ಡಿ ಪ್ರದಾನ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ ಸಮಾಜ ವಿಜ್ಞಾನ ನಿಕಾಯದ, ಸಮಾಜ ಕಾರ್ಯ ಅಧ್ಯಯನ ವಿಭಾಗದ ಸಂಶೋಧನಾ ವಿದ್ಯಾರ್ಥಿನಿ ಶಿಲ್ಪಾ ಪಾಂಡೆ ಅವರು ಸಲ್ಲಿಸಿದ ''ಇನಕ್ಲೂಸಿವ್ ಎಜುಕೇಶನ್ ಫಾರ್‌ಪೀಪಲ್ ವಿಥ್ ಡಿಸೇಬಿಲಿಟಿಸ್ ಇನ್ ರೂರಲ್ ಕಮ್ಯೂನಿಟೀಸ್: ಎ ಸೋಶಿಯಲ್ ವರ್ಕ್ ಸ್ಟಡೀಸ್'', ಎಂಬ ವಿಷಯ ಕುರಿತು ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಪಿ.ಎಚ್.ಡಿ ಪದವಿ ಪ್ರದಾನ ಮಾಡಿದೆ. ಅವರಿಗೆ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಪ್ರೊ. ರೇಣುಕಾ ಅಸಗಿ ಸಂಶೋಧನಾ ಮಾರ್ಗದರ್ಶಕರಾಗಿದ್ದರು.

ನೇತ್ರಾವತಿ ಉತ್ಸವ ವಸ್ತು ಪ್ರದರ್ಶನ ಇಂದು

ಹುಬ್ಬಳ್ಳಿ: ನೇತ್ರಾವತಿ ಮಹಿಳಾ ಮಂಡಲದ ವತಿಯಿಂದ ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ ನೀಡಲು ನೇತ್ರಾವತಿ ಉತ್ಸವ ವಸ್ತು ಪ್ರದರ್ಶನ ಹಾಗೂ ಆಹಾರ ಮೇಳ ದಿ. 14 ರಂದು ಬೆಳಿಗ್ಗೆ10ರಿಂದ ರಾತ್ರಿ 9 ಗಂಟೆವರೆಗೆ ದೇಶಪಾಂಡೆ ನಗರದ ಶ್ರೀಕೃಷ್ಣ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ. ಮುಖ್ಯ ಅತಿಥಿಯಾಗಿ ಉದ್ಯಮಿ ಶಿಲ್ಪಾ ಶೆಟ್ಟಿ, ಡಿಕೆಡಿಬಿಎಸ್ ಅಧ್ಯಕ್ಷ ಅನಂತಪದ್ಮನಾಭ ಐತಾಳ್, ಕಾರ್ಯದರ್ಶಿ ವಾದಿರಾಜ್ ಭಟ್ ಆಗಮಿಸುವರು. ಹುಬ್ಬಳ್ಳಿ-ಧಾರವಾಡದ ಜನತೆ ಇದರ ಸದುಪಯೋಗಪಡಿಸಿಕೊಳ್ಳಬೇಕೆಂದು ಮಂಡಲದ ಅಧ್ಯಕ್ಷೆ ಶಶಿಮಂಗಳಾ ಐತಾಳ ತಿಳಿಸಿದ್ದಾರೆ.

ನವೀಕರಿಸದ ಗಿರವಿ ಸಂಸ್ಥೆಗಳ ಲೈಸೆನ್ಸ್ ರದ್ದು

ಹಾವೇರಿ: ಲೈಸ್ನ್ಸ್ ನವೀಕರಿಸದ ಜಿಲ್ಲೆಯ ಲೇವಾದೇವಿ, ಗಿರವಿ ಹಾಗೂ ಹಣಕಾಸು ಸಂಸ್ಥೆಗಳು ಸೇರಿ 57 ಲೈಸೆನ್ಸ್ ರದ್ದು ಪಡಿಸಿ, ಭದ್ರತಾ ಠೇವಣಿ ಹಣ ಮುಟ್ಟುಗೋಲು ಹಾಕಿಕೊಳ್ಳಲು ಉದ್ದೇಶಿಸಲಾಗಿದೆ. ಲೇವಾದೇವಿಗಾರರು ಮತ್ತು ಗಿರವಿದಾರರ ಸಹಾಯಕ ನಿಬಂಧಕರು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು ತಿಳಿಸಿದ್ದಾರೆ. ಕರ್ನಾಟಕ ಲೇವಾದೇವಿ ಕಾಯ್ದೆ ಅನ್ವಯ ಈವರೆಗೆ ನವೀಕರಣದ ಅರ್ಜಿ ಸಲ್ಲಿಸಿರುವುದಿಲ್ಲ. ವಾರ್ಷಿಕ ಲೆಕ್ಕಪತ್ರಗಳ ತಪಾಸಣೆಗೆ ಲೆಕ್ಕ ಪುತ್ರಗಳನ್ನು ಹಾಜಪಡಿಸಿರುವುದಿಲ್ಲ. ಆದ್ದರಿಂದ ಏಳು ದಿನದೊಳಗಾಗಿ ಈ ಕಚೇರಿಗೆ ಅಥವಾ ಲೇವಾದೇವಿಗಾರರ ಹಾಗೂ ಗಿರವಿದಾರರ ನಿಬಂಧಕರು, ಜಿಲ್ಲಾಡಳಿತ ಭವನ, ದೇವಗಿರಿ-ಹಾವೇರಿ ಕಚೇರಿಗೆ ಸಲ್ಲಿಸಬೇಕು. ತಪ್ಪಿದಲ್ಲಿ ಲೇವಾದೇವಿ ಹಾಗೂ ಗಿರವಿ ಪರವಾನಗಿ ರದ್ದುಪಡಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

{ಡಿ. ಕೆ. ಶಿವಕುಮಾರ್ } ಉಪ ಮುಖ್ಯಮಂತ್ರಿ

ನಾನು ಡಿಸಿಎಂ ಆಗಿ ಅಲ್ಲ, ನೊಣವಿನಕೆರೆ ಮಠದ ಒಬ್ಬ ಭಕ್ತನಾಗಿ, ಶ್ರೀಗಳ ಶಿಷ್ಯನಾಗಿ, ಅಜ್ಜಯ್ಯನ ಒಬ್ಬ ಅನುಯಾಯಿಯಾಗಿ ಸೇವೆ ಮಾಡುತ್ತಿದ್ದೇನೆ. ಬೇಡುವಾಗ ಭಿಕ್ಷುಕನಾಗು, ಕೊಡುವಾಗ ದಾನಿಯಾಗು, ಬೇಡಿ ಕುಗ್ಗಬೇಡ, ಕೊಟ್ಟು ಕೊರಗಬೇಡ ಎಂಬ ಮಾತಿದೆ. ನನಗೂ ಅಜ್ಜಯ್ಯನಿಗೂ ಇರುವ ಸಂಬಂಧ, ನಂಬಿಕೆ ಎಲ್ಲರಿಗೂ ಗೊತ್ತಿದೆ.

ಹಾವೇರಿಯಲ್ಲಿ ಬೃಹತ್ ವೇದಿಕೆ ಸಜ್ಜು | ಒಂದು ಲಕ್ಷ ಜನ ನಿರೀಕ್ಷೆ | ಸಿಎಂ, ಡಿಸಿಎಂ, ಸಚಿವರ ದಂಡು ಆಗಮನ

ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ ಇಂದು

ಹಾವೇರಿ: ಕಂದಾಯ ಇಲಾಖೆ ಹಾಗೂ ಹಾವೇರಿ ಜಿಲ್ಲಾಡಳಿತ ಸಹಯೋಗದಲ್ಲಿ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ, ಜನಸೇವೆಯಲ್ಲಿ ಸಾರ್ಥಕ ಸಾವಿರ ದಿನ, 1 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ವಿತರಣೆ ಸಮಾರಂಭ ಫೆ. 14 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಹೊರವಲಯದ ಬಿ.ಪಿ. ರಸ್ತೆ ಸಮೀಪ ಜರುಗಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟನೆ ನೆರವೇರಿಸಲಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹಕ್ಕುಪತ್ರ ವಿತರಣೆ ಮಾಡಲಿದ್ದಾರೆ. ಕಂದಾಯ ಸಚಿವ ಕೃಷ್ಣ ಬೈರೇಗೌಡ ಹಾಗೂ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಾನಂದ ಪಾಟೀಲ ಅವರು ಅಭಿನಂದನಾ ಪತ್ರಗಳ ವಿತರಣೆ ಮಾಡಲಿದ್ದಾರೆ.

ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್, ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ, ಆಹಾರ, ಇಂಧನ ಸಚಿವರಾದ ಪ್ರಹ್ಲಾದ ಜೋಶಿ, ಜಲಶಕ್ತಿ ಮತ್ತು ರೈಲ್ವೆ ಇಲಾಖೆ ರಾಜ್ಯ ಸಚಿವ ವಿ.ಸೋಮಣ್ಣ, ಕೈಗಾರಿಕೆ ಹಾಗೂ ಕಾರ್ಮಿಕ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ವಿಧಾನ ಪರಿಷತ್ ಸಭಾಪತಿ ಬಸವರಾಜ ಎಸ್. ಹೊರಟ್ಟಿ, ವಿರೋಧ ಪಕ್ಷದ ನಾಯಕರಾದ ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ ಭಾಗವಹಿಸಲಿದ್ದಾರೆ.

ಸಮಾವೇಶಕ್ಕೆ ಹಾವೇರಿಯ ನಗರದ ಹೊರವಲಯದ ಬಿ.ಪಿ. ರಸ್ತೆ ಸಮೀಪ ಬೃಹತ್ ವೇದಿಕೆ ಸಜ್ಜುಗೊಂಡಿರುವುದು.

ವಿಶೇಷ ಆಹ್ವಾನಿತರಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ, ಕಾನೂನು ಸಚಿವ ಎಚ್.ಕೆ.ಪಾಟೀಲ, ಆಹಾರ ಸಚಿವ ಕೆ.ಎಚ್.ಮುನಿಯಪ್ಪ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್, ಆರೋಗ್ಯ ಸಚಿವ ದಿನೇಶ ಗುಂಡೂರಾವ್, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ,ವಸತಿ, ಸಚಿವ ಬಿ.ಝಡ್ ಜಮೀರ್‌ಅಹಮ್ಮದ್ ಖಾನ್, ಸಣ್ಣ ಕೈಗಾರಿಕೆ ಸಚಿವ ಶರಣಬಸಪ್ಪ ದರ್ಶನಾಪುರ, ಅರಣ್ಯ, ಸಚಿವ ಈಶ್ವರ ಖಂಡ್ರೆ, ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ, ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ, ಪೌರಾಡಳಿತ ಸಚಿವ ರಹೀಂ ಖಾನ್, ಕಾರ್ಮಿಕ ಸಚಿವ ಸಂತೋಷ ಲಾಡ್, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ರುದ್ರಪ್ಪ ಪಾಟೀಲ, ಅಬಕಾರಿ ಸಚಿವ ಆರ್.ಬಿ.ತಿಮ್ಮಾಪೂರ, ಪಶು ಸಂಗೋಪನೆ ಸಚಿವ ಕೆ.ವಿ.ವೆಂಕಟೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ, ಯೋಜನೆ, ಸಾಂಖ್ಯಿಕ ಸಚಿವ ಡಿ.ಸುಧಾಕರ್, ನಗರಾಭಿವೃದ್ಧಿ ಸಚಿವ ಸುರೇಶ ಬಿ.ಎಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ್, ಜಲ ಸಾರಿಗೆ ಸಚಿವ ಮಂಕಾಳ ವೈದ್ಯ, ಶಿಕ್ಷಣ ಸಚಿವ ಮಧು ಬಂಗಾರಪ್ಪ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಭಾಗವಹಿಸುವರು. ವಿಶೇಷ ಆಹ್ವಾನಿತರಾಗಿ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಬ್ಯಾಡಗಿ ಶಾಸಕರು ಹಾಗೂ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ಸೈಯದ್ ಅಜೀಮಪೀರ್‌ಎಸ್ ಖಾದ್ರಿ, ಸಂಸದರಾದ ಬಸವರಾಜ ಬೊಮ್ಮಾಯಿ, ಗ್ಯಾರಂಟಿ ಯೋಜನೆಗಳ ಪ್ರಾಧಿಕಾರ ಉಪಾಧ್ಯಕ್ಷ ಎಸ್.ಆರ್.ಪಾಟೀಲ, ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಶಾಸಕರಾದ ಶ್ರೀನಿವಾಸ ಮಾನೆ, ಯು.ಬಿ.ಬಣಕಾರ, ಪ್ರಕಾಶ ಕೋಳಿ ವಾಡ, ಯಾಸೀರ ಅಹ್ಮದಖಾನ್ ಪಠಾಣ, ವಿಧಾನ ಪರಿಷತ್ ಶಾಸಕರಾದ ಪ್ರೊ.ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್.ಗಾಜಿಗೌಡ್ರ ಹಾಗೂ ಆಹ್ವಾನಿತರಾಗಿ ಸರಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಅಂಜುಮ್ ಪರ್ವೇಜ್ ಹಾಗೂ ಆರ್ಥಿಕ ಇಲಾಖೆ ಸರಕಾರದ ಕಾರ್ಯದರ್ಶಿಗಳು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ವಿಶಾಲ್ ಆರ್. ಅವರು ಭಾಗವಹಿಸಲಿದ್ದಾರೆ.

ಒಳಚರಂಡಿ, ರಸ್ತೆ ಕಾಮಗಾರಿಗಳಿಗೆ ಚಾಲನೆ

ಹುಬ್ಬಳ್ಳಿ: ನ್ಯೂ ಇಂಗ್ಲಿಷ್ ಸ್ಕೂಲ್ನಿಂದ ಇಂಡಿ ಪಂಪ್ ವರೆಗೆ ರಸ್ತೆ ಅಗಲೀಕರಣಕ್ಕೆ ಶೀಘ್ರ ಕ್ರಮ ಕೈಗೊಂಡು ಸುಗಮ ಸಂಚಾರಕ್ಕೆ ಅನುವು ಮಾಡಿ ಕೊಡಲಾಗುವುದು ಎಂದು ಕೊಳಚೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಪ್ರಸಾದ ಅಬ್ಬಯ್ಯ ಹೇಳಿದರು.

ಹುಬ್ಬಳ್ಳಿ ಧಾರವಾಡ ಪೂರ್ವ ಕ್ಷೇತ್ರದಲ್ಲಿ 5.16 ಕೋಟಿಗೂ ಹೆಚ್ಚು ಅನುದಾನದಲ್ಲಿ ವಿವಿಧೆಡೆ ಒಳಚರಂಡಿ, ರಸ್ತೆ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು.

ಕ್ಷೇತ್ರದ ಅಭಿವೃದ್ಧಿಗೆ ಸಹಸ್ರಾರು ಕೋಟಿಗಳ ಅನುದಾನ ತರಲಾಗಿದೆ. ಈಗ ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ವಾರ್ಡ್ ನಂ. 61ರಲ್ಲಿ ಬರುವ ಮೌಲಾಲಿ ಜೋಪಡಿ, ಎಂ. ಅರಳಿಕಟ್ಟಿ, ಕುಲಕರ್ಣಿ ಹಕ್ಕಲ್ ಹಾಗೂ ಬುದ್ಧ ವಿಹಾರದಲ್ಲಿ ತೆರೆದ ಒಳಚರಂಡಿ ಹಾಗೂ ರಸ್ತೆ ಅಭಿವೃದ್ಧಿಗೆ ರೂ. 2 ಕೋಟಿ ವೆಚ್ಚದ ಕಾಮಗಾರಿ, ಕೃಪಾನಗರದಲ್ಲಿ 1 ಕೋಟಿ ವೆಚ್ಚದ ಒಳಚರಂಡಿ ಕಾಮಗಾರಿ ಮತ್ತು ಆನಗಲ್ಲ ಚಾಲ್ ಹತ್ತಿರ 16 ಲಕ್ಷ ವೆಚ್ಚದ ಒಳಚರಂಡಿ ಕಾಮಗಾರಿ, ಎರಡೆತ್ತಿನ ಮಠದಿಂದ ಅಲ್ಪಾ ಹೋಟೆಲ್ ಕ್ರಾಸ್ ವರೆಗೆ 1 ಕೋಟಿ ವೆಚ್ಚದಲ್ಲಿ ಒಳಚರಂಡಿ ಕೊಳವೆಗಳನ್ನು ಹಾಕುವ ಕಾಮಗಾರಿ, ಕಮರಿಪೇಟೆ ಪೊಲೀಸ್ ಠಾಣೆ ಹತ್ತಿರ ಬರುವ ರಸ್ತೆ ಅಭಿವೃದ್ಧಿಗೆ 50 ಲಕ್ಷ ವೆಚ್ಚದ ಕಾಮಗಾರಿ ಮತ್ತು ಗೌಸಿಯಾ ಟೌನ್ ಮುಖ್ಯ ರಸ್ತೆಗೆ 50 ಲಕ್ಷ ವೆಚ್ಚದಲ್ಲಿ ಕಾಂಕ್ರಿಟೀಕರಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಹಳೇ ಹುಬ್ಬಳ್ಳಿಯ ರಸ್ತೆ ಅಗಲೀಕರಣ ಸಮೀಕ್ಷಾ ವರದಿಯಲ್ಲಿ ತಿಳಿಸಿರುವಂತೆ 243 ಖಾಸಗಿ ಸ್ವತ್ತುಗಳು ಸೇರಿದಂತೆ ಭೂಸ್ವಾಧೀನಕ್ಕೆ ಅವಶ್ಯವಿರುವ ರೂ. 5.7 ಕೋಟಿ ಅನುದಾನವನ್ನು ಮುಖ್ಯಮಂತ್ರಿಗಳ ವಿಶೇಷ ಅನುದಾನದಿಂದ ಭರಿಸಲಾಗುವುದು. ಈ ಕುರಿತು ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗುವುದು.

ಕೊಳಚೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಪ್ರಸಾದ ಅಬ್ಬಯ್ಯ ಒಳಚರಂಡಿ, ರಸ್ತೆ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ವಿಶೇಷ ಅನುದಾನ ತರಲಾಗುತ್ತದೆ ಎಂದು ಹೇಳಿದರು.

ನ್ಯೂ ಇಂಗ್ಲಿಷ್ ಸ್ಕೂಲ್ ಬಳಿ 8 ಕೋಟಿ ರೂ. ಅನುದಾನದಲ್ಲಿ ಸಮುದಾಯ ಭವನ ನಿರ್ಮಾಣ ಮಾಡಲಾಗಿದೆ. ಶೀಘ್ರದಲ್ಲಿ ಅದರ ಉದ್ಘಾಟನೆ ಮಾಡಲಿದ್ದೇನೆ. ಹೈಟೆಕ್ ಮಟನ್ ಮಾರುಕಟ್ಟೆ ನಿರ್ಮಾಣಕ್ಕೆ ಒತ್ತು ನೀಡುತ್ತೇನೆ ಎಂದರು.

ಪಾಲಿಕೆ ಸದಸ್ಯರಾದ ಸುಧಾ ಮನುಕುಂಟ್ಲಾ, ಸುನಿತಾ ಬುರಬುರೆ, ಶರೀಫ್ ಆಧೋನಿ, ಆರೀಫ್ ದೊಡ್ಡಮನಿ, ಮುಖಂಡರಾದ ರಾಜಶೇಖರ ಮೆಣಸಿನಕಾಯಿ, ಅನ್ವರ ಮುಧೋಳ, ಮಜರಖಾನ್, ರಜನಿಕಾಂತ ಬಿಜವಾಡ, ದೊರೆರಾಜ ಮನಕುಂಟ್ಲಾ, ಪ್ರಕಾಶ ಬುರಬುರೆ, ಮುಸ್ತಾಕ್ ಅತ್ತಾರ, ಚೇತನ ಬಿಜವಾಡ ಇತರರಿದ್ದರು.

ನೂತನ ಈದ್ಗಾ ಕಟ್ಟಡಕ್ಕೆ 10 ಲಕ್ಷ ಭರವಸೆ

ಅಣ್ಣಿಗೇರಿ: ಇದೊಂದು ಎಲ್ಲ ಧರ್ಮಗಳ ಸಂಗಮ ಕಾರ್ಯಕ್ರಮ ಆಗಿದ್ದು ಸಂತಸ ತಂದಿದೆ ಎಂದು ಮುಖ್ಯ ಸಚೇತಕ ಸಲೀಂ ಅಹ್ಮದ್ ಸಂತಸ ವ್ಯಕ್ತಪಡಿಸಿದರು.

ಪಟ್ಟಣದ ಹೊಸ ಈದ್ಗಾ ಮೈದಾನದಲ್ಲಿ ನೂತನ ಈದ್ಗಾ ಕಟ್ಟಡ ಉದ್ಘಾಟನೆ ಹಾಗೂ ಗಣ್ಯರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು, ಅಣ್ಣಿಗೇರಿ ಅಂಜಮನ್ ಇಸ್ಲಾಂ ಸಮಿತಿ ಸಾಕಷ್ಟು ಕೆಲಸ ಮಾಡಿದ್ದು ಸ್ವಾಗತಾರ್ಹ. ತಮ್ಮ ಸಹಾಯ ಸಹಕಾರ ಇದ್ದು ನಾನು ಸಹ ನನ್ನ ಶಾಸಕರ ನಿಧಿಯಿಂದ ಕಟ್ಟಡಕ್ಕೆ 10 ಲಕ್ಷ ರೂ. ನೀಡುವ ಭರವಸೆ ನೀಡಿದರು.

ಶಾಸಕ ಎನ್.ಎಚ್. ಕೋನರೆಡ್ಡಿ ಮಾತನಾಡಿ, ಕೇವಲ ಯಾವುದೇ ಒಂದು ಸಮಾಜ ಹಾಗೂ ಧರ್ಮಕ್ಕೆ ಸಹಾಯ ಮಾಡಿಲ್ಲ. ಸರ್ವ ಧರ್ಮಗಳ ಮಠ ಹಾಗೂ ಮಸೀದಿಗಳಿಗೆ ಸರಕಾರ ಆರ್ಥಿಕ ಹಾಗೂ ಎಲ್ಲ ರೀತಿಯ ಸಹಾಯ ಮಾಡಿದ್ದಾರೆ ಎಂದರು.

ಸಾನ್ನಿಧ್ಯ ವಹಿಸಿದ್ದ ಗುಲಬರ್ಗಾದ ಸಜ್ಜಾದ್ ನಸೀನ್ ಮುತವಲ್ಲಿ ದರ್ಗಾ ಹಜರತ್ ಖ್ವಾಜಾ ಬಂದಾನವಾಜ್ ನ ಹಜರತ್ ಹಾಫೀಜ್ ಸೈಯದ್ ಮಹ್ಮದ್ ಅಲಿ ಅಲ್ ಸೇನಿಸಾಹೇಬ್ ಮಾತನಾಡಿ, ಈದ್ಗಾ ಮೈದಾನ ಕಟ್ಟಡದ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ದಾಸೋಹ ಮಠದ ಶ್ರೀ ಶಿವಕುಮಾರ್‌ಮಹಾಸ್ವಾಮಿಗಳು, ಕಮಲಾಪುರ ದರ್ಗಾದ ಜನಾಬ್ ಸೈಯದ್ ಸಜ್ಜಾದ್ ಸಾನ್ನಿಧ್ಯ ವಹಿಸಿ ಶುಭ ಹಾರೈಸಿದರು.

ಮಾಜಿ ಸಂಸದ ಪ್ರೋ. ಐ.ಜಿ. ಸನದಿ, ಎಂ.ಎಂ. ಮಳಗಿ, ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಹಾಸಮ್ ಹಿಂಡಸಗೇರಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಅಬ್ದುಲ್ ಖಾದರ್‌ಇ ನಡಕಟ್ಟಿನ, ಪುರಸಭೆ ಅಧ್ಯಕ್ಷ ಶಿವಾನಂದ ಬೆಳಹಾರ, ಉಪಾಧ್ಯಕ್ಷ ನಾಗಪ್ಪ ದಳವಾಯಿ, ಮಾಜಿ ಕ್ರೇಡಲ್ ಅಧ್ಯಕ್ಷ ಷಣ್ಮುಖ ಗುರಿಕಾರ, ಯುವ ಕಾಂಗ್ರೆಸ್ ಮುಖಂಡ ವಿನೋದ ಅಸೂಟಿ, ಅಂಜುಮನ್ ಇಸ್ಲಾಂ ಸಮಿತಿ ಅಧ್ಯಕ್ಷ ಫಕ್ರುಅಲಿ ಲೋಕಾಪುರಿ, ಮಾಜಿ ಅಧ್ಯಕ್ಷ ಇಮಾಮ್ ಹುಸೇನ್ ಸಮುದ್ರಿ ಉಪಸ್ಥಿತರಿದ್ದರು.

ಸರಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಅವರು ಪಟ್ಟಣದ ಹೊಸ ಈದ್ಗಾ ಮೈದಾನದಲ್ಲಿ ನೂತನ ಈದ್ಗಾ ಕಟ್ಟಡ ಉದ್ಘಾಟನೆ ನೆರವೇರಿಸಿದರು.

ಎಂಟು ಜಿಲ್ಲೆಗಳ ಒಂದು ಲಕ್ಷಕ್ಕೂ ಅಧಿಕ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆಗೆ ಕ್ಷಣಗಣನೆ

ಇಂದು ಸಾಧನಾ ಸಮಾವೇಶ, ಜಿಲ್ಲಾಡಳಿತದ ಸಕಲ ಸಿದ್ಧತೆ

ಹಾವೇರಿ: ಹಾವೇರಿ ನಗರದಲ್ಲಿ ಫೆ.14 ರಂದು ನಡೆಯಲಿರುವ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ ಸಮಾರಂಭಕ್ಕೆ ಎಂಟು ಜಿಲ್ಲೆಗಳ ಒಂದು ಲಕ್ಷಕ್ಕೂ ಅಧಿಕ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆಗೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಈ ಸಮಾವೇಶದಲ್ಲಿ ಮುಖ್ಯಮಂತ್ರಿ , ಉಪ ಮುಖ್ಯಮಂತ್ರಿ , ಕಂದಾಯ ಮಂತ್ರಿ ಸೇರಿದಂತೆ ಸಂಪುಟದ ಎಲ್ಲ ಸಚಿವರು, ಜಿಲ್ಲೆಯ ಶಾಸಕರು, ವಿವಿಧ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

130 ಎಕರೆ ಪ್ರದೇಶ :

ನಗರದ ಹೊರವಲಯದ ಅಜ್ಜಯ್ಯನ ಗುಡಿ ಹತ್ತಿರ, ಸುಮಾರು 130 ಎಕರೆ ಜಾಗದಲ್ಲಿ ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶ ಕಾರ್ಯಕ್ರಮಕ್ಕೆ ಸಿದ್ಧತೆಮಾಡಿಕೊಳ್ಳಲಾಗಿದೆ. ಈ ಪೈಕಿ 18 ಎಕರೆ ಜಾಗದಲ್ಲಿ ಮುಖ್ಯ ವೇದಿಕೆ ನಿರ್ಮಾಣವಾಗುತ್ತಿದೆ. 94 ಎಕರೆ ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ, 8 ಎಕರೆ ಜಾಗದಲ್ಲಿ ಒಟ್ಟು 4 ಹೆಲಿಪ್ಯಾಡ್, 10 ಎಕರೆ ಜಾಗದಲ್ಲಿ ಊಟದ ವ್ಯವಸ್ಥೆ ಕೈಗೊಳ್ಳಲಾಗಿದೆ. 200 ಅತಿಥಿಗಳು ಕುಳಿತುಕೊಳ್ಳುವ 140860 ಅಡಿ ವಿಸ್ತೀರ್ಣದ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದೆ. ಒಂದು ಲಕ್ಷಕ್ಕೂ ಅಧಿಕ ಜನರು ಕುಳಿತುಕೊಳ್ಳಲು 2,76,000 ಅವಕಾಶವಿರುವ ಒಟ್ಟು 2,76,000 ಚದರ ಅಡಿಯ ಜರ್ಮನ್ ಟೆಂಟ್ ಅಳವಡಿಸಲಾಗಿದೆ.

ಲಕ್ಷ ಫಲಾನುಭವಿಗಳು: ಹಾವೇರಿ ಜಿಲ್ಲೆಯ ಕಂದಾಯ ಗ್ರಾಮ-20,186, ಇ-ಪೋತಿ-7825, ದಖಾಸ್ತ್ ಪೋಡಿ-502, ಪಿಎಂಜಿಎ-1,675, ಬಗರಹುಕುಂ-16 ಸೇರಿ 30,204 ಫಲಾನುಭವಿಗಳು, ಚಿತ್ರದುರ್ಗ-5,500, ದಾವಣಗೆರೆ-20ಸಾವಿರ, ಶಿವಮೊಗ್ಗ-10 ಸಾವಿರ, ಚಿಕ್ಕಮಗಳೂರು-7ಸಾವಿರ, ಧಾರವಾಡ, ಗದಗ, ಹಾಗೂ ಕೊಪ್ಪಳ ಜಿಲ್ಲೆಯ ತಲಾ 10 ಸಾವಿರ ಮತ್ತು ಉತ್ತರ ಕನ್ನಡ ಜಿಲ್ಲೆಯ ಒಂದು ಸಾವಿರ ಫಲಾನುಭವಿಗಳು ಸೇರಿ 1.23 ಲಕ್ಷಕ್ಕೂ ಅಧಿಕ ಫಲಾನುಭವಿಗಳು ಭಾಗವಹಿಸಲಿದ್ದಾರೆ.

2,550 ವಾಹನಗಳು: ಫಲಾನುಭವಿಗಳನ್ನು ಕರೆತರಲು ಸರ್ಕಾರಿ ಸೌಮ್ಯದ ಎನ್ ಡಬ್ಲ್ಯೂಕೆಆರ್ಟಿಸಿ, ಕೆಕೆಆರ್‌ಟಿಸಿ ಮತ್ತು ಕೆ ಎಸ್ ಆರ್‌ಟಿ ಸಿಯ 2,140 ಬಸ್ಸುಗಳು, 195 ಖಾಸಗಿ ಬಸ್ಗಳು ಹಾಗೂ 215 ಶಾಲಾ ಕಾಲೇಜು ಬಸ್ಸುಗಳು ಸೇರಿ 2,550 ವಾಹನಗಳನ್ನು ಬಳಸಲಾಗುತ್ತಿದೆ. ಪ್ರತಿ ಬಸ್ಸಿಗೆ ಎರಡು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ವಿವಿಧ ಸಮಿತಿ:

ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಡೆಸಲು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಾಹಕ ಸಮಿತಿ. ಹಣಕಾಸು ಸಮಿತಿ, ಕಾನೂನು ಸುವ್ಯವಸ್ಥೆ ಮತ್ತು ಭದ್ರತಾ ಸಮಿತಿ ಮುಖ್ಯ ವೇದಿಕೆ ನಿರ್ಮಾಣ ಸಮಿತಿ, ಆಹಾರ ಮತ್ತು ಕುಡಿಯುವ ನೀರಿನ ಸಮಿತಿ, ಸಾರಿಗೆ ಮತ್ತು ಪಾರ್ಕಿಂಗ್ ವ್ಯವಸ್ಥೆ ಸಮಿತಿ, ಹೆಲಿಪ್ಯಾಡ್ ನಿರ್ಮಾಣ ಸಮಿತಿ, ಕಾರ್ಯಕ್ರಮ ನಿರ್ವಹಣಾ ಮತ್ತು ಮುಖ್ಯ ವೇದಿಕ ಶಿಷ್ಟಾಚಾರ ಸಮಿತಿ, ಫಲಾನುಭವಿಗಳ ಆಸನ ವ್ಯವಸ್ಥೆ ಸಮಿತಿ, ಸ್ವಚ್ಛತೆ ಮತ್ತು ನೈರ್ಮಲ್ಯ ಸಮಿತಿ, ವಸತಿ ಸಮಿತಿ ಆರೋಗ್ಯ ಸಮಿತಿ ಒಳಗೊಂಡಂತೆ 15 ವಿವಿಧ ಸಮಿತಿಗಳನ್ನು ರಚನೆ ಮಾಡಲಾಗಿದೆ.

ಮೂರು ಸಾವಿರ ಪೊಲೀಸ್:

ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಭದ್ರತೆಯ ಸಲುವಾಗಿ ಸುಮಾರು 300 ವಿವಿಧ ಹಂತದ ಅಧಿಕಾರಿಗಳನ್ನು ಹಾಗೂ ಹೋಂ ಗಾರ್ಡ್ ಒಳಗೊಂಡಂತೆ 3,000 ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.



ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ಅವರು ಭೂ ಗ್ಯಾರಂಟಿ ಸಮರ್ಪಣಾ ಸಮಾವೇಶದ ಸ್ಥಳಕ್ಕೆ ಭೇಟಿ ನೀಡಿ ವೇದಿಕೆಯ ಪರಿಶೀಲನೆ ನಡೆಸಿದರು. ಉಸ್ತುವಾರಿ ಸಚಿವ ಶಿವಾನಂದ ಪಾಟೀಲ್, ಶಾಸಕರಾದ ರುದ್ರಪ್ಪಲಮಾಣಿ, ಬಸವರಾಜ ಶಿವಣ್ಣನವರ, ಶ್ರೀನಿವಾಸ ಮಾನೆ, ಯು.ಬಿ ಬಣಕಾರ, ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಸಂಜೀವಕುಮಾರ ನೀರಲಗಿ, ಜಿಲ್ಲಾಧಿಕಾರಿ ಡಾ. ವಿಜಯ ಮಹಾಂತೇಶ ದಾನಮ್ಮನವರ, ಎಸ್ಪಿ ಯಶೋಧಾ ವಂಟಗೋಡಿ, ಸಿಇಒ ರುಚಿ ಬಿಂದಾಲ, ಜೊತೆಗಿದ್ದರು.

ಸಮಾವೇಶದಲ್ಲಿ 200 ಊಟದ ಕೌಂಟರ್

ಸಮಾವೇಶದಲ್ಲಿ ಸುಮಾರು 200 ತಾತ್ಕಾಲಿಕ ಶೌಚಾಲಯಗಳು, ಶುದ್ಧ ಕುಡಿಯುವ ನೀರು, ಅಂಬ್ಯುಲನ್ಸ್, ತುರ್ತು ಆರೋಗ್ಯ ಸೇವೆ ಸೌಕರ್ಯ ಒದಗಿಸಲಾಗುತ್ತಿದೆ. ಒಟ್ಟಾರೆ ಭೂ ಗ್ಯಾರಂಟಿ ಸಮಾವೇಶ ಯಶಸ್ವಿಗೆ ಜನಪ್ರತಿನಿಧಿಗಳು, ಅಧಿಕಾರಿಗಳು, ಸಿಬ್ಬಂದಿ ಹಗಲಿರುಳು ಶ್ರಮಿಸಿದ್ದಾರೆ.

ದಾಖಲೆ ರಹಿತ ಸಮಸ್ಯೆ: ಇಲಾಖೆ ಮಹತ್ವದ ಹೆಜ್ಜೆ

ಹಾವೇರಿ: ತಾಂಡಾ, ಹಟ್ಟಿ, ಹಾಡಿ, ಗೊಲ್ಲರಹಟ್ಟಿ ಮುಂತಾದ ಅನಧಿಕೃತ, ದಾಖಲೆರಹಿತ ಜನವಸತಿಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಿ, ಅಲ್ಲಿನ ಪ್ರತಿ ಕುಟುಂಬಕ್ಕೆ ಡಿಜಿಟಲ್ ಹಕ್ಕುಪತ್ರ (ಸೈಟ್/ಭೂಮಿ/ಮನೆ ಹಕ್ಕು ದಾಖಲೆ) ನೀಡುವ ಮಹತ್ವದ ಕಾರ್ಯಕ್ರಮಕ್ಕೆ ಹಾವೇರಿ ಜಿಲ್ಲೆಯ ಕಂದಾಯ ಇಲಾಖೆ ಮುಂದಾಗಿದೆ. **ಹೊಸ ಗ್ರಾಮಗಳು:** ಮೇ 2025 ರ ನಂತರ 379 ಹೊಸ ಕಂದಾಯ ಗ್ರಾಮಗಳನ್ನು ಗುರುತಿಸಲಾಗಿದೆ. 20 ಮೇ 2025 ರಂದು 2000 ಕ್ಕೂ ಹೆಚ್ಚು ಕುಟುಂಬಗಳಿಗೆ ದೇಶದಲ್ಲೇ ಮೊದಲ ಬಾರಿಗೆ ನೋಂದಾಯಿತ ಡಿಜಿಟಲ್ ಹಕ್ಕುಪತ್ರಗಳನ್ನು ವಿತರಿಸಲಾಗಿದೆ. 14 ಫೆಬ್ರವರಿ 2026 ರಂದು ಮತ್ತೆ 20,000 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಗುತ್ತಿದೆ. ಇದರಿಂದ ಫಲಾನುಭವಿಗಳಿಗೆ ಸ್ವಂತ ಜಾಗದ ಕಾನೂನುಬದ್ಧ ಹಕ್ಕು, ಸರ್ಕಾರಿ ಸೌಲಭ್ಯಗಳು, ಸಬ್ಸಿಡಿಗಳು, ಸುಲಭ ಬ್ಯಾಂಕ್ ಸಾಲ ಸಿಗಲಿದ್ದು, ನೆಮ್ಮದಿಯ ಜೀವನ ಸಾಧ್ಯವಾಗಲಿದೆ.

ಕಂದಾಯ ಗ್ರಾಮಗಳು: ಜಿಲ್ಲೆಯಲ್ಲಿ ಒಟ್ಟು 455 ಕಂದಾಯ ಗ್ರಾಮಗಳನ್ನು ಗುರುತಿಸಲಾಗಿತ್ತು. ಪ್ರಾಥಮಿಕ 338 ಪ್ರಕರಣಗಳು ಅಧಿಸೂಚಿಸಲಾಯಿತು ಹಾಗೂ ಅಂತಿಮ 242 ಪ್ರಕರಣಗಳನ್ನು ಅಧಿಸೂಚಿಸಲಾಗಿದೆ. ದಾಖಲೆಗಳ ಡಿಜಿಟಲೀಕರಣ ಯೋಜನೆಯಡಿ ದಾಖಲೆಗಳನ್ನು ಆಧುನೀಕರಿಸುವಲ್ಲಿ ಇಲಾಖೆ ಯಶಸ್ವಿಯಾಗಿದೆ.

ಹಾವೇರಿ ಜಿಲ್ಲೆಯಲ್ಲಿ ಸಾರ್ವಜನಿಕರು ಒಟ್ಟು 17,62,706 ಸಕಾಲ ಅರ್ಜಿಗಳನ್ನು ಸಲ್ಲಿಸಿದರು.

ಭಾರತದ ನ್ಯಾಯದ ಗಂಟೆ ವ್ಯವಸ್ಥೆ ಅತೀ ಪ್ರಾಚೀನ

ಧಾರವಾಡ: ವಿಶ್ವದ ಬಹುತೇಕ ಕಡೆ ನಾಗರಿಕತೆಯೇ ವಿಕಾಸಗೊಳ್ಳದಿದ್ದಾಗ ನಮ್ಮ ದೇಶದಲ್ಲಿ ನೊಂದ ಮಾನವ ಮಾತ್ರವಲ್ಲ ಸಕಲ ಜೀವಾತ್ಮರಿಗೂ ನ್ಯಾಯದಾನ ಮಾಡುವ ನ್ಯಾಯದ ಗಂಟೆ ವ್ಯವಸ್ಥೆ ಜಾರಿಯಲ್ಲಿತ್ತು ಎಂದು ಹೈಕೋರ್ಟ್ ನ್ಯಾಯಮೂರ್ತಿ ವಿ. ಶೀರ್ಷಾನಂದ ಹೇಳಿದರು.

ನಗರದ ಕವಿವಿ ಸರ್‌ಸಿದ್ದಪ್ಪ ಕಂಬಳಿ ಕಾನೂನು ಕಾಲೇಜ್ ಸಭಾಂಗಣದಲ್ಲಿ ನಡೆದ ಹಿರಿಯ ನ್ಯಾಯವಾದಿ ಲಿಂ. ಐ.ಜಿ. ಹಿರೇಗೌಡರ ಸ್ಮರಣಾರ್ಥ ದತ್ತಿ ಕಾರ್ಯಕ್ರಮದಲ್ಲಿ ಮಾತನಾಡಿ, ಉಜ್ಜೆನಿಯಲ್ಲಿ ರೂಪುಗೊಂಡಿದ್ದ ರಾಜಾ ವಿಕ್ರಮಾದಿತ್ಯನ ನ್ಯಾಯಪೀಠ ಆ ಕಾಲದಲ್ಲಿಯೇ ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಘನತೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ತಿಳಿಸಿದರು.

ನ್ಯಾಯ ಮೀಮಾಂಸೆ ಹಾಗೂ ನ್ಯಾಯವಾದಿಗಳ ನ್ಯಾಯಸಮರ್ಥನೆಯ ವೈಖರಿಯು, ಆದರ್ಶ ಅನುಕರಣೀಯವಾಗಿತ್ತು. ಆದರೆ, ಪರಕೀಯರ ಆಡಳಿತದ ಪರಿಣಾಮದಿಂದ ನಾವಿಂದು ವಿದೇಶಿ ನ್ಯಾಯ ವ್ಯವಸ್ಥೆ ಬಗ್ಗೆ ಅನವಶ್ಯಕ ವ್ಯಾಮೋಹ ಬೆಳೆಸಿಕೊಂಡು ನಮ್ಮ ಸತ್ಪರಂಪರೆ ಮತ್ತು ಅಸ್ಮಿತೆ ಮರೆಯುತ್ತಿದ್ದೇವೆ. ಆದ್ದರಿಂದ ಜಗದ್ವಂದ್ಯವಾದ ಭಾರತೀಯ ನ್ಯಾಯದಾನ ಪದ್ಧತಿಯ ಬಗ್ಗೆ ಅಭಿಮಾನ ಹೊಂದಿ ಅನುಸರಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದರು.

ಇಂದಿನ ಆಧುನಿಕ, ಸ್ಪರ್ಧಾತ್ಮಕ ಯುಗದ ನ್ಯಾಯ ವ್ಯವಸ್ಥೆಯಲ್ಲಿ ಅವಕಾಶಗಳು ದಿನನಿತ್ಯ ವಿಸ್ತಾರಗೊಳ್ಳುತ್ತ ಸಾಗಿವೆ. ಸತತಾಧ್ಯಯನ ಪರಿಶ್ರಮದಿಂದ ಸಾಧನೆ ಮಾಡಿದರೆ ಯಶಸ್ಸು ಖಂಡಿತ ಸಿಗುತ್ತದೆ. ಸಂಪನ್ಮೂಲಗಳ ಅಭಾವವಿದ್ದ ಕಾಲದಲ್ಲಿಯೇ ಗ್ರಾಮೀಣ ಪರಿಸರದಲ್ಲಿ ಹುಟ್ಟಿ ಬೆಳೆದ ಐ. ಜಿ. ಹಿರೇಗೌಡರು ಕಾನೂನು ಕ್ಷೇತ್ರದ ಭೀಷ್ಮ ಪಿತಾಮಹ ಎಂದೆನಿಸಿಕೊಳ್ಳಲು ಅವರ ವೃತ್ತಿನಿಷ್ಠೆಯೇ ಕಾರಣ ಎಂದರು.

ಕವಿವಿ ಕುಲಸಚಿವ ಡಾ. ಶಂಕ್ರೆಪ್ಪ ವಣಿಕ್ಯಾಳ ಮಾತನಾಡಿ, ಸರ್‌ಸಿದ್ದಪ್ಪ ಕಂಬಳಿ ಕಾನೂನು ಕಾಲೇಜಿನ ವಿದ್ಯಾರ್ಥಿಗಳು ರಾಷ್ಟ್ರ ಮಟ್ಟದಲ್ಲಿ ಮಾತ್ರವಲ್ಲ ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿದ್ದಾರೆ. ಅವರ ಆದರ್ಶ ಪರಂಪರೆ ಮುಂದುವರೆಸಲು ಇಂದಿನ ವಿದ್ಯಾರ್ಥಿಗಳು ಸಂಕಲ್ಪ ಮಾಡಬೇಕು ಎಂದರು.

ಕವಿವಿ ಸಿಂಡಿಕೇಟ ಸದಸ್ಯ ರಾಬರ್ಟ ದದ್ದಾಪುರಿ ಮಾತನಾಡಿ, ಬೈಬಲ್ ಮತ್ತು ವಚನ ಸಾಹಿತ್ಯದ ಬಗ್ಗೆ ಆಳ ಅಧ್ಯಯನ ಮಾಡಿದ್ದ ಐ. ಜಿ. ಹಿರೇಗೌಡರು ಬೈಬಲ್-ವಚನಗಳ ಸದ್ವಿಚಾರಗಳನ್ನು ತಮ್ಮ ವೃತ್ತಿ ಜೀವನದಲ್ಲಿ ಅಳವಡಿಸಿಕೊಂಡಿದ್ದರಿಂದ ಅವರೊಬ್ಬ ನಾಡು ಮೆಚ್ಚುವ ಧೀಮಂತ ನ್ಯಾಯವಾದಿಯಾಗಲು ಕಾರಣವಾಯಿತು ಮಾತ್ರವಲ್ಲ ಇದೇ ಕಾಲೇಜಿನಲ್ಲಿ ಅವರು 34 ವರ್ಷಗಳ ವರೆಗೆ ಪಾಠ ಮಾಡಿ ಹಲವಾರು ಆದರ್ಶ ವಕೀಲರನ್ನು ರೂಪಿಸಿದರು ಎಂದು ಸ್ಮರಿಸಿಕೊಂಡರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯೆ ಡಾ. ಎಸ್.ಆರ್. ಮಂಜುಳಾ ಮಾತನಾಡಿ, ಸರ್‌ಸಿದ್ದಪ್ಪ ಕಂಬಳಿಯವರ ಶುಭನಾಮ ಹೊಂದಿರುವ ಈ ಮಹಾವಿದ್ಯಾಲಯದ ಅಭಿವೃದ್ಧಿಗೆ ವಿವಿಧ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲಾಗಿದೆ ಎಂದು ಹೇಳಿದರು.

ಹಿರಿಯ ನ್ಯಾಯವಾದಿಗಳಾದ ಕೆ.ಬಿ. ನಾವಲಗಿಮಠ, ಕೆ.ಎಲ್. ಪಾಟೀಲ ಮಾತನಾಡಿದರು. ಎನ್ ಎಸ್‌ಎಸ್ ಸಂಯೋಜಕ ಪ್ರೊ. ಶಿವಕುಮಾರ ಎಂ.ಎ. ಸ್ವಾಗತಿಸಿದರು. ಭುವನೇಶ್ವರಿ ಜನಾದ್ರಿ ಮತ್ತು ಅಮೃತಾ ಸೋಮಣ್ಣವರ ಪರಿಚಯಿಸಿದರು. ವೈಷ್ಣವಿ ಹಿರೇಮಠ ವಂದಿಸಿದರು. ರೇಗನ್ ದದ್ದಾಪುರಿ ಹಾಗೂ ಶೋಯೆಬ್ ಗೂಢವಾಲಾ ನಿರೂಪಿಸಿದರು.

ಹೈಕೋರ್ಟ್ ನ್ಯಾಯಮೂರ್ತಿ ವಿ. ಶೀರ್ಷಾನಂದ ಅವರು ನಗರದ ಸಿದ್ದಪ್ಪ ಕಂಬಳಿ ಕಾನೂನು ಕಾಲೇಜಿನ ಸಭಾಂಗಣದಲ್ಲಿ ನಡೆದ ದತ್ತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕ್ರಿಕೆಟ್ ದೈತ್ಯರೆದುರು ಜಿಂಬಾಬ್ವೆಗೆ ಜಯ

ಕೊಲಂಬೊದಲ್ಲಿ ಶುಕ್ರವಾರ ನಡೆದ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಕ್ರಿಕೆಟ್ ದೈತ್ಯರಾದ ಆಸ್ಟ್ರೇಲಿಯಾವನ್ನು ಜಿಂಬಾಬ್ವೆ 23 ರನ್ ಗಳಿಂದ ಸೋಲಿಸಿತು. ಕೇವಲ 17 ರನ್ ನೀಡಿ 4 ವಿಕೆಟ್ ಪಡೆದ ಬ್ಲೆಸಿಂಗ್ ಮುಜರಬಾನಿ ಅವರು ಜಿಂಬಾಬ್ವೆಯ ಗೆಲುವಿನ ರೂವಾರಿಯಾದರು.

ಸೊಂಪಾದ ಪುಟಗಳು

ಜಿನ್ನಾ ಓಲೈಕೆ, ವಂದೇ ಮಾತರಂಗೆ ಕತ್ತರಿ
ವೀಕೆಂಡ್ ವಿತ್ ಮೋಹನ್ ಮೋಹನ್ ವಿಶ್ವ 6

ಶಿವರಾತ್ರಿ: ದೇಹ ಶುದ್ಧಿಯಿಂದ ಚಿತ್ತಶುದ್ಧಿವರೆಗೆ
ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ ಡಾ. ಸಾಧನಶ್ರೀ 7

ದಾರಿದೀಪೋಕ್ತಿ



ಪ್ರತಿ ಸೂರ್ಯೋದಯವೂ ಹೊಸ ಅವಕಾಶವನ್ನು ತೆರೆಯುತ್ತದೆ. ನಿನ್ನೆಯ ಸೋಲನ್ನು ನೆನೆದು ಇಂದಿನ ಉಲ್ಲಾಸವನ್ನು ಕಳೆದುಕೊಳ್ಳಬಾರದು. ಒಂದು ವರ್ಷದ ಹಿಂದಿನ ಸೋಲು ಅಥವಾ ಹಿನ್ನಡೆ ನಮಗೆ ನೆನಪಿರುವುದಿಲ್ಲ. ನಿನ್ನೆಯ ಸೋಲು ಸಹ ಒಂದು ವರ್ಷದ ನಂತರ ಮರೆತು ಹೋಗಿರುತ್ತದೆ.

ವಕ್ರತುಂಡೋಕ್ತಿ



ಕೆಲವರಿಗೆ ಕೆಲಸ ಮಾಡುವುದರಲ್ಲಿ ಯಾವ ತೊಂದರೆಯೂ ಇರುವುದಿಲ್ಲ. ಆದರೆ ಆ ಕೆಲಸ ಮಾಡಲು ತಾವೇ ಬೇಕು ಎನ್ನುವುದಷ್ಟೆ ಅವರಿಗೆ ಬೇಸರ.

ತ.ನಾಡು ಹೆಣ್ಮಕ್ಕಳಿಗೆ ಚುನಾವಣೆ ಲಾಟರಿ

ಚೆನ್ನೈ: ತಮಿಳುನಾಡು ಚುನಾವಣೆಗೆ ಮೊದಲೇ ಡಿಎಂಕೆ ಸರ್ಕಾರ ಮಹಿಳೆಯರ ಖಾತೆಗೆ 5 ಸಾವಿರ ರು. ಹಣವನ್ನು ಜಮೆ ಮಾಡಿದೆ. ಕಲೈಗ್ನಾರ್ ಮಗಲಿರ್ ಉರಿಮೈ ತೊಗೈ ಯೋಜನೆಯಡಿ 1.31 ಕೋಟಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ತಲಾ 5 ಸಾವಿರ ರು. ಜಮೆಯಾಗಿದೆ. ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳ ಹಣದ ಜೊತೆ ಬೇಸಿಗೆ ಸಮಯದಲ್ಲಿ ನೆರವಾಗಲು 2 ಸಾವಿರ ರು. ಹಣವನ್ನೂ ಹಾಕಲಾಗಿದೆ. ನಮ್ಮ ಪಕ್ಷ ಮತ್ತೆ ಅಧಿಕಾರಕ್ಕೆ ಬಂದರೆ ಫಲಾನುಭವಿಗಳಿಗೆ ನೀಡಲಾಗುವ ತಿಂಗಳ ಮೊತ್ತವನ್ನು 2 ಸಾವಿರ ರು.ಗೆ ಏರಿಸಲಾಗುವುದು ಎಂದು ಮುಖ್ಯಮಂತ್ರಿ ಸ್ಟಾಲಿನ್ ಭರವಸೆ ನೀಡಿದ್ದಾರೆ.

ಬಾಂಗ್ಲಾದೇಶದಲ್ಲಿ ಬಿಎನ್‌ಪಿ ಜಯಭೇರಿ

ಢಾಕಾ: ಬಾಂಗ್ಲಾದೇಶದಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಬಾಂಗ್ಲಾದೇಶ ರಾಷ್ಟ್ರೀಯತಾವಾದಿ ಪಕ್ಷ (ಬಿಎನ್‌ಪಿ) ಅಭೂತಪೂರ್ವ ಗೆಲುವು ಸಾಧಿಸಿದೆ. ಸಂಸತ್ತಿನ ಒಟ್ಟು ಸ್ಥಾನಗಳ ಪೈಕಿ 299 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಬಿಎನ್‌ಪಿ 212 ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಈ ಅಭೂತಪೂರ್ವ ಗೆಲುವಿನೊಂದಿಗೆ ಇತ್ತೀಚೆಗೆ ನಿಧನರಾದ ಖಲೀದಾ ಜಿಯಾ ಅವರ ಪುತ್ರ ತಾರಿಕ್ ರೆಹಮಾನ್ ಪ್ರಧಾನಿ ಪಟ್ಟ ಅಲಂಕರಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಎನ್‌ಪಿ ನಾಯಕ ತಾರಿಕ್ ರೆಹಮಾನ್‌ಗೆ ಕರೆ ಮಾಡಿ ಶುಭ ಹಾರೈಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಬೆಂಗಳೂರು ನಾಯಿ ಮಾಲೀಕರಿಗೆ ಶಾಕ್, ನಾಯಿಗೆ ಮೈಕ್ರೋ ಚಿಪ್ ಕಡ್ಡಾಯ
ಸುದ್ದಿ



ನಿರ್ಬಂಧದ ನಂತರವೂ ಗಣ್ಯರ ಸಫಾರಿ ಅಬಾಧಿತ, ಬಿಗ್ ಕ್ಯಾಟ್ ಪ್ರತಿನಿಧಿಗಳಿಗೂ ಸಫಾರಿ ಸೇವೆ

ಸಾರ್ವಜನಿಕರಿಗಿಲ್ಲದ ಸಫಾರಿ, ವಿಐಪಿಗಳಿಗೆ ಹೇಗೆ ಸಾಧ್ಯ?

ರಂಜಿತ್ ಎಚ್. ಅಶ್ವತ್ಥ ಬೆಂಗಳೂರು

ಸಂಬಂಧವಿಲ್ಲದ ಹುಲಿ ದಾಳಿಯನ್ನು ಮುಂದಿಟ್ಟುಕೊಂಡು ಸಫಾರಿ ನಿರ್ಬಂಧಿಸಿರುವ ಅರಣ್ಯ ಇಲಾಖೆ ಅಧಿಕಾರಿಗಳು, ಈಗಲೂ ಹಿರಿಯ ಅಧಿಕಾರಿಗಳಿಗೆ, ರಾಜಕಾರಣಿಗಳು, ಅವರ ಕುಟುಂಬದವರನ್ನು ಸಫಾರಿ ಮಾಡುವುದಕ್ಕೆ ರತ್ನಗಂಬಳಿ ಹಾಸಿ ಕರೆಯುತ್ತಿದ್ದಾರೆ.

ಅರಣ್ಯ ಇಲಾಖೆಯ ಅವೈಜ್ಞಾನಿಕ ತೀರ್ಮಾನದಿಂದ ಪ್ರತಿನಿತ್ಯ 25 ಲಕ್ಷ ನಷ್ಟವಾಗುತ್ತಿದೆ ಎನ್ನುವ ಆರೋಪ ದೊಡ್ಡ ಮಟ್ಟದಲ್ಲಿ ಕೇಳಿಬರುತ್ತಿದ್ದರೂ, ಅರಣ್ಯ ಇಲಾಖೆ ಸಚಿವರ ಹಾಗೂ ಅಧಿಕಾರಿಗಳ ಕಿವಿ ಮೇಲೆ ಬೀಳುತ್ತಿಲ್ಲ. ಹಾಗೆಂದು, ಬಂಡೀಪುರ, ನಾಗರಹೊಳೆ ಭಾಗದಲ್ಲಿ ಸಂಪೂರ್ಣವಾಗಿ ಸಫಾರಿ ನಿರ್ಬಂಧವಾಗಿಲ್ಲ. ಬದಲಿಗೆ ಅಧಿಕಾರಿ ವರ್ಗ, ರಾಜಕೀಯ ನಾಯಕರು, ಅವರ ಕುಟುಂದವರು ಬಂದರೆ ಈಗಲೂ ಅರಣ್ಯ ಇಲಾಖೆಯ ಗೆಸ್ಟ್ ಹೌಸ್‌ನಲ್ಲಿಯೇ ರಾಜಾತಿಥ್ಯ ನೀಡಿ, ಸಫಾರಿಗೆ ಕರೆದುಕೊಂಡು ಹೋಗಲಾಗುತ್ತಿದೆ ಎನ್ನುವ ಮಾತುಗಳನ್ನು ಸ್ಥಳೀಯರೇ ಹೇಳುತ್ತಿದ್ದಾರೆ.

ಬಂಡೀಪುರ, ನಾಗರಹೊಳೆ ಸಫಾರಿ ನಿರ್ಬಂಧವಾ ಗಿರುವುದರಿಂದ ರೆಸಾರ್ಟ್‌ಗೆ ಬರುತ್ತಿರುವ ಕೆಲವೇ ಕೆಲ ಪ್ರವಾಸಿಗರನ್ನು ವಯನಾಡು, ಮದುಮಲೈಗೆ ಕರೆದುಕೊಂಡು ಹೋಗುತ್ತಿದ್ದಾರೆ. ಈ ರೀತಿ ಕರೆದು ಕೊಂಡು ಹೋಗಿ ಬರುವಾಗ ಅರಣ್ಯ ಇಲಾಖೆ ಅಧಿಕಾ ರಿಗಳು 'ಪ್ರಭಾವಿ'ಗಳನ್ನು ಕರೆದುಕೊಂಡು ಹೋಗುವ ದೃಶ್ಯಗಳು ಸಾಮಾನ್ಯವಾಗಿ ಕಾಣಿಸುತ್ತಿದೆ ಎನ್ನುವುದನ್ನು ಹೆಸರು ಹೇಳಲು ಇಚ್ಛಿಸದ ರೆಸಾರ್ಟ್ ಮಾಲೀಕರು ಹೇಳುತ್ತಿದ್ದಾರೆ.

ಅಧಿಕಾರಿ, ರಾಜಕಾರಣಿ, ಪ್ರಭಾವಿಗಳನ್ನು ಕರೆದು ಕೊಂಡು ಹೋಗುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಇವರನ್ನು ಕರೆದುಕೊಂಡು ಹೋಗುವಾಗ ಯಾವುದೇ ಸಮಸ್ಯೆ ಇಲ್ಲ ಎನ್ನುವುದಾದರೆ ಸಾಮಾನ್ಯ ಪ್ರವಾಸಿ ಗರಿಗೂ ಅವಕಾಶ ನೀಡಿ. ನೆಲಕಚ್ಚಿರುವ ಪ್ರವಾಸ್ಯೋದಮ ಸಂಪೂರ್ಣವಾಗಿ ಹಾಳಾಗುವ ಮೊದಲು ಸಫಾರಿಗೆ ಅವಕಾಶ ನೀಡಿ ಪ್ರವಾಸಿ ಸಂಸ್ಕೃತಿ ಉಳಿಸಿ ಎನ್ನುವ ಮಾತುಗಳನ್ನು ಹೇಳುತ್ತಿದ್ದಾರೆ.

ಕ್ಯಾಮರಾ ಹೊತ್ತು ಹೋಗುವ ಪ್ರಭಾವಿಗಳು ಇನ್ನು ಅಧಿಕಾರಿಗಳು, ರಾಜಕಾರಣಿಗಳು ಮಾತ್ರವಲ್ಲದೇ ಸ್ಥಳೀಯ ಮಟ್ಟದಲ್ಲಿ ಪ್ರಭಾವ ಹೊಂದಿರುವ 'ಕೆಲವರಿಗೆ' ದಿನದ ಯಾವುದೇ ಸಮಯದಲ್ಲಾದರೂ ಸಫಾರಿಗೆ ಹೋಗಲು ಅರಣ್ಯ ಇಲಾಖೆ ಅಧಿಕಾರಿಗಳು ಅವಕಾಶ ನೀಡುತ್ತಿದ್ದಾರೆ. ಕೇವಲ ಸಫಾರಿಗೆ ಹೋಗುವುದಷ್ಟೇ ಅಲ್ಲದೇ, ದೊಡ್ಡ ದೊಡ್ಡ ಲೆನ್ಸ್‌ಗಳನ್ನು ಹಿಡಿದುಕೊಂಡು ಹೋಗುವುದು, ಫೋಟೋ ಶೂಟ್ ಮಾಡುವುದಕ್ಕೂ ಅವಕಾಶ ನೀಡಲಾಗುತ್ತಿದೆ ಎನ್ನುವ ಆರೋಪ ಕೇಳಿಬಂದಿದೆ.

ಸಫಾರಿ ನಿರ್ಬಂಧದಿಂದ ನಿತ್ಯ ಲಕ್ಷಾಂತರ ರುಪಾಯಿ ಸರಕಾರಕ್ಕೆ ನಷ್ಟವಾಗುತ್ತಿದೆ, ರೆಸಾರ್ಟ್ ಮಾಲೀಕರು, ಸಿಬ್ಬಂದಿಗಳು ಬೀದಿಗೆ ಬರುತ್ತಿದ್ದಾರೆ. ಆದ್ದರಿಂದ ಸಾರ್ವಜನಿಕರು ಸಫಾರಿಗೆ ಹೋಗುವುದಕ್ಕೆ ಅವಕಾಶ ನೀಡಿ ಎನ್ನುವ 'ಬೇಡಿಕೆ'ಯನ್ನು ಕಿವಿ ಮೇಲೆ ಹಾಕಿಕೊಳ್ಳದ ಅರಣ್ಯ ಇಲಾಖೆ, ಪ್ರಭಾವಿಗಳಿಗೆ ಅವಕಾಶ ನೀಡುತ್ತಿರುವುದು ಹೇಗೆ? ಈ ರೀತಿ ಅವಕಾಶ ನೀಡುವಂತೆ ಸ್ಥಳೀಯ ಮಟ್ಟದ ಅಧಿಕಾರಿಗಳಿಗೆ ಒತ್ತಡ ಹೇರುತ್ತಿರುವುದು ಯಾರು ಎನ್ನುವ ಪ್ರಶ್ನೆಗಳನ್ನು ರೆಸಾರ್ಟ್ ಮಾಲೀಕರು ಕೇಳುತ್ತಿದ್ದಾರೆ.

ಬಿಗ್ ಕ್ಯಾಟ್ ಸಮಾವೇಶಕ್ಕೆ ಬಂದವರಿಗೆ ಅವಕಾಶ

ಬಂಡೀಪುರದಲ್ಲಿ ನಡೆಯುತ್ತಿರುವ ಬಿಗ್ ಕ್ಯಾಟ್ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಲು ಹಲವು ದೇಶಗಳ ಪ್ರತಿನಿಧಿಗಳು ಆಗಮಿಸಿದ್ದಾರೆ. ಈ ಪ್ರತಿನಿಧಿಗಳನ್ನು ವಿವಿಧ ಹಂತದಲ್ಲಿ ಸಫಾರಿಗೆ ಕರೆದುಕೊಂಡು ಹೋಗುತ್ತಿದ್ದಾರೆ. ಸಫಾರಿಗೆ ಹೋದರೆ ದಾಳಿಯಾಗಲಿದೆ ಎನ್ನುವ ಆತಂಕವಿದ್ದರೆ, ಅಂತಾರಾಷ್ಟ್ರೀಯ ಪ್ರತಿನಿಧಿಗಳನ್ನು ಕರೆದುಕೊಂಡು ಹೋಗುತ್ತಿರುವುದು ಏಕೆ? ಒಂದು ವೇಳೆ ಅವರ ಮೇಲೆ ಹುಲಿಗಳು ದಾಳಿ ನಡೆದರೆ ಸಮಸ್ಯೆ ಆಗುವುದಿಲ್ಲವೇ? ಅವರು ಹೋಗಲು ಸುರಕ್ಷಿತ ಎನ್ನುವುದಾದರೆ ಜನ ಸಾಮಾನ್ಯರಿಗೆ ಅವಕಾಶ ನೀಡುವುದರಲ್ಲಿ ತಪ್ಪೇನಿದೆ ಎನ್ನುವ ಪ್ರಶ್ನೆಗಳು ಕೇಳಿಬರುತ್ತಿದೆ. ಸಮಾವೇಶದಲ್ಲಿ ಭಾಗವಹಿಸಲು ಆಫ್ರಿಕಾ ಖಂಡದಿಂದ ಬಂದಿರುವ ಅನೇಕ ಪ್ರತಿನಿಧಿಗಳು ರೆಸಾರ್ಟ್‌ಗಳಲ್ಲೇ ಉಳಿದಿದ್ದು, ಸಫಾರಿಗಳಲ್ಲಿ ಆಸಕ್ತಿ ತೋರುತ್ತಿಲ್ಲ. ಆಸಕ್ತಿ ಇಲ್ಲದಿರುವವರನ್ನು ಕರೆದುಕೊಂಡು ಹೋಗುವ ಬದಲು ಆಸಕ್ತಿ ತೋರುತ್ತಿರುವ ಪ್ರವಾಸಿಗರಿಗೆ ಅವಕಾಶ ನೀಡುವುದು ಸೂಕ್ತವಲ್ಲವೇ ಎನ್ನುವುದು ಸ್ಥಳೀಯ ರೆಸಾರ್ಟ್ ಮಾಲೀಕರ ಪ್ರಶ್ನೆಯಾಗಿದೆ.

ಹಾವೇರಿಯಲ್ಲಿ ಇಂದು ಸರಕಾರದ ಬೃಹತ್ ಸಮಾವೇಶ
6500 ಹೊಸ ಕಂದಾಯ ಗ್ರಾಮಗಳ ಘೋಷಣೆಗೆ ಸಿದ್ಧತೆ

ಸಾವಿರ ದಿನದ ಸಂಭ್ರಮ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಐತಿಹಾಸಿಕ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರಿದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರಕಾರ ಶನಿವಾರ ಸಾವಿರ ದಿನಗಳ ಮೈಲಿಗಲ್ಲನ್ನು ತಲುಪಲಿದೆ. ಈ ಮೈಲಿಗಲ್ಲಿನ ನೆನಪಿನಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಜನರಿಗೆ ಹಕ್ಕು ಪತ್ರ ವಿತರಿಸುವ ಬೃಹತ್ ಕಾರ್ಯಕ್ರಮ ಹಾವೇರಿಯಲ್ಲಿ ಆಯೋಜಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ 2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ದಾಖಲೆಯ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಕಾಂಗ್ರೆಸ್ ಚುನಾವಣೆ ವೇಳೆ ನೀಡಿದ್ದ 'ಪಂಚ ಗ್ಯಾರಂಟಿ'ಯನ್ನು ಅಧಿಕಾರಕ್ಕೆ ಬಂದ ಆರೇ ತಿಂಗಳಲ್ಲಿ ಈಡೇರಿಸಿತ್ತು. ಚುನಾವಣಾ ಸಮಯದಲ್ಲಿ ನೀಡಲಾಗಿದ್ದ 'ಹಕ್ಕು ಪತ್ರ'ಗಳನ್ನು ಆರನೇ ಗ್ಯಾರಂಟಿ ಎಂದೇ ಬಿಂಬಿಸಲಾಗಿತ್ತು. ಇದೀಗ ಅಧಿಕಾರಕ್ಕೆ ಬಂದು ಸಾವಿರ ಕಳೆದಿರುವ ಈ ಸಮಯದಲ್ಲಿ ಆರನೇ ಗ್ಯಾರಂಟಿಯನ್ನು ಈಡೇರಿಸಲು ಸರಕಾರ ಮುಂದಾಗಿದೆ.

ಮುಂದಿನ ಉಪಚುನಾವಣೆ, ಸ್ಥಳೀಯ ಸಂಸ್ಥೆ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ರಾಜ್ಯ ಸರಕಾರ ಈ ಕಾರ್ಯಕ್ರಮವನ್ನು ಸಾಧನಾ ಸಮಾವೇಶದ ರೀತಿಯಲ್ಲಿ ಮಾಡಲು ತೀರ್ಮಾನಿಸಿದೆ. ಹಾವೇರಿಯಲ್ಲಿ ನಡೆಯಲಿರುವ ಬೃಹತ್ ಸಮಾವೇಶದಲ್ಲಿ ಪಕ್ಷದ ವರಿಷ್ಠರು ಭಾಗವಹಿಸದಿದ್ದರೂ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವರು, ಶಾಸಕರು ಭಾಗವಹಿಸಲಿದ್ದಾರೆ. ದೆಹಲಿಯಿಂದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸೇರಿದಂತೆ ಕೆಲ ನಾಯಕರು ಭಾಗವಹಿಸುವ ನಿರೀಕ್ಷೆಯಿದೆ.

ಮೂರು ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ: ಬೃಹತ್ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮಾತನಾಡಿರುವ ಕಂದಾಯ ಸಚಿವ ಕೃಷ್ಣಬೈರೇಗೌಡ, ಹಾವೇರಿಯಲ್ಲಿ ನಡೆಯುವ ಸರಕಾರದ ಸಹಸ್ರ ದಿನಗಳ ಕಾರ್ಯಕ್ರಮದಲ್ಲಿ 3 ಲಕ್ಷ ಕುಟುಂಬಗಳಿಗೆ ಹಕ್ಕು ಪತ್ರಗಳನ್ನು ನೀಡಲಾಗುವುದು. ಆರೂವರೆ ಸಾವಿರ ವಸತಿ ಪ್ರದೇಶಗಳಲ್ಲಿ ವಾಸವಾಗಿದ್ದರೂ ಹಕ್ಕುಪತ್ರಗಳಿರಲಿಲ್ಲ. ಈ ಪ್ರದೇಶಗಳನ್ನು ಕಂದಾಯ ಭೂಮಿ ಎಂದು ಘೋಷಿಸಿ ಹಕ್ಕುಪತ್ರ ನೀಡಲಾಗುತ್ತಿದೆ. ಇದುವರೆಗೂ 2.20 ಲಕ್ಷ ಜನರಿಗೆ ಹಕ್ಕುಪತ್ರ ನೀಡಲಾಗಿದೆ. ಕಳೆದ ವರ್ಷ 36000 ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗಿದೆ. ಈ ವರ್ಷ 1 ಲಕ್ಷದ 6 ಸಾವಿರ ಜನರಿಗೆ ಹಕ್ಕುಪತ್ರ ನೀಡಲಾಗುವುದು. ಈ ಕಾರ್ಯಕ್ರಮಕ್ಕೆ ರಾಹುಲ್ ಗಾಂಧಿ ಬರುವುದಿಲ್ಲ. ಸರಕಾರ ಸಾವಿರ ದಿನ ಪೂರೈಸಿದ ಹಿನ್ನೆಲೆ ಈ ಕಾರ್ಯಕ್ರಮ ಮಾಡಲಾಗುತ್ತಿದೆ ಎಂದರು.

ರಾಜ್ಯ ಸರಕಾರದ ಆರನೇ ಗ್ಯಾರಂಟಿ ಯೋಜನೆಯಾದ ಭೂಮಿ ಗ್ಯಾರಂಟಿ ಬಗ್ಗೆ ಮಾಹಿತಿ ನೀಡಿದ್ದಾರೆ. ಸಾರ್ವಜನಿಕರಿಗೆ ನಿವೇಶನಗಳಿಗೆ ಭೂಮಿ ಹಕ್ಕುಗಳನ್ನು ಒದಗಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ಭೂಮಿ ಹಕ್ಕುಗಳಿಲ್ಲದ ಸಾಮಾನ್ಯ ಜನರಿಗೆ ಖಾತೆ ಮತ್ತು ಹಕ್ಕುಪತ್ರಗಳನ್ನು ನೀಡುವ ದೀರ್ಘಕಾಲದ ಸಮಸ್ಯೆಯನ್ನು ಪರಿಹರಿಸಲು ಸರಕಾರ ಪ್ರಯತ್ನಿಸುತ್ತಿದೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಚುನಾವಣೆಯ ಸವಾಲು

ಬಹುಮತದೊಂದಿಗೆ ಅಧಿಕಾರಕ್ಕೆ ಬಂದಿರುವ ರಾಜ್ಯ ಸರಕಾರಕ್ಕೆ ಇಡೀ ವರ್ಷ ಸರಣಿ ಚುನಾವಣೆಗಳ ಸವಾಲಿದೆ. ಪ್ರಮುಖವಾಗಿ ಹಾಲಿ ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಎಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿರುವ ಎರಡು ಕ್ಷೇತ್ರಗಳಿಗೆ ಉಪಚುನಾವಣೆ ಮೇ ತಿಂಗಳಲ್ಲಿ ನಡೆಯಲಿದೆ. ಈ ಉಪಚುನಾವಣೆಯ ಬಳಿಕ ಜಿಬಿಎ ಸೇರಿದಂತೆ ಸ್ಥಳೀಯ ಸಂಸ್ಥೆ ಚುನಾವಣೆಗಳು ಎದುರಾಗುತ್ತಿರುವುದರಿಂದ ಈ ಚುನಾವಣೆಗಳನ್ನು ಗೆಲ್ಲುವ ಸವಾಲಿದೆ. ನಂತರ ವಿಧಾನಪರಿಷತ್ ಚುನಾವಣೆಗಳು ಎದುರಾಗಲಿವೆ. ಆದ್ದರಿಂದ ಕಾಂಗ್ರೆಸ್ ಸರಕಾರಕ್ಕೆ ಈ ವರ್ಷ ತೀವ್ರ ಸವಾಲಿನ ವರ್ಷವಾಗಿರಲಿದೆ.

ಮುಗಿಯದ ನಾಯಕತ್ವ ಗೊಂದಲ

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ನಾಯಕತ್ವದಲ್ಲಿನ ಗೊಂದಲಕ್ಕೆ ಕೊನೆ ಇಲ್ಲವಾಗಿದೆ. ಸರಕಾರ ರಚನೆಗೂ ಮೊದಲು ದೆಹಲಿಯಲ್ಲಿ ವಾರಗಳ ಕಾಲ ನಡೆದ ಕಸರತ್ತಿನ ಬಳಿಕ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸಿದರು. ಎರಡುವರೆ ವರ್ಷಗಳ ಹಂಚಿಕೆಯ ಗೊಂದಲ, ಅದಾದ ಬಳಿಕ ಕುರ್ಚಿ ಕಾದಾಟದ ವಿಷಯದಲ್ಲಿ ದಿನಕ್ಕೊಂದು ಹೇಳಿಕೆ, ವಿವಾದ ಮುಗಿದಿಲ್ಲ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಕ್ಷದ ಹೈಕಮಾಂಡ್ ಬಳಿಕ 'ಸ್ಪಷ್ಟನೆ' ಕೇಳಿದ್ದರೂ, ಸಮಯ ಬಂದಾಗ ಸೂಕ್ತ ತೀರ್ಮಾನ ಕೈಗೊಳ್ಳುತ್ತೇವೆ ಎನ್ನುವ ಮೂಲಕ ಗೊಂದಲ ಸದ್ಯಕ್ಕೆ ಕೊನೆ ಇಲ್ಲವಾಗಿದೆ.

ಜೀವಕ್ಕೆರವಾದ ಪಿಯು ವಿದ್ಯಾರ್ಥಿಗಳ ಸ್ಪೀಡ್ ರೈಡ್
ಅಂಧ ತಾಯಿಯ ಆಸರೆಯಾಗಿದ್ದ ಯುವಕನೂ ಬಲಿ

ಹೊಸಕೋಟೆ ಬಳಿ ಭೀಕರ ಅಪಘಾತ: ಏಳು ಸಾವು

ಬೆಂಗಳೂರು: ಹದಿಹರೆಯದ ವಿದ್ಯಾರ್ಥಿಗಳ ಜಾಲಿ ರೈಡ್, ಆರು ಮಂದಿ ವಿದ್ಯಾರ್ಥಿಗಳು ಮತ್ತು ರಾತ್ರಿ ಪಾಳಿ ಮುಗಿಸಿ ಮನೆಗೆ ಹಿಂತಿರುಗುತ್ತಿದ್ದ ಖಾಸಗಿ ಕಂಪನಿ ನೌಕರ ಸೇರಿದಂತೆ ಏಳು ಜನರ ದಾರುಣ ಸಾವಿಗೆ ಕಾರಣವಾದ ಭೀಕರ ಸರಣಿ ರಸ್ತೆ ಅಪಘಾತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಬಳಿ ಶುಕ್ರವಾರ ನಡೆದಿದೆ.

ಕ್ಯಾಂಟರ್, ಬೈಕ್ ಮತ್ತು ಎಕ್ಸ್‌ಯುವಿ ಕಾರಿನ ನಡುವೆ ನಡೆದ ಈ ಅಪಘಾತದಲ್ಲಿ ಮೃತಪಟ್ಟ ಆರು ವಿದ್ಯಾರ್ಥಿಗಳ ಪೈಕಿ ಒಬ್ಬನನ್ನು ಹೊರತುಪಡಿಸಿ ಉಳಿದವರೆಲ್ಲರೂ 17 ವರ್ಷದ ಎಳೆಯ ವಿದ್ಯಾರ್ಥಿಗಳು. ಇವರು ಚಲಾಯಿಸುತ್ತಿದ್ದ ಕಾರು ಗುದ್ದಿ ಸ್ಥಳದಲ್ಲೇ ಮೃತಪಟ್ಟ 26 ವರ್ಷದ ಬೈಕ್ ಸವಾರ ಗಗನ್ ತನ್ನ ಅಂಧ ತಾಯಿಗೆ ಏಕೈಕ ಆಸರೆಯಾಗಿದ್ದರು. ಕ್ಷಣ ಮಾತ್ರದ ಮೋಜು, ಮಸ್ತಿ ಏಳು ಕುಟುಂಬಗಳನ್ನು ಶಾಶ್ವತವಾಗಿ ಅಂಧಕಾರಕ್ಕೆ ತಳ್ಳಿದೆ.

ಆರು ಮಂದಿ ವಿದ್ಯಾರ್ಥಿಗಳು ಅಯನ್ ಅಲಿ ಎಂಬ 17 ವರ್ಷದ ವಿದ್ಯಾರ್ಥಿಯ ಎಕ್ಸ್‌ಯುವಿ ಕಾರಿನಲ್ಲಿ ಹೊಸಕೋಟೆ-ದಾಬಸ್‌ಪೇಟೆ ನೂತನ ರಾಷ್ಟ್ರೀಯ ಹೆದ್ದಾರಿಯಲ್ಲಿ ಜಾಲಿರೈಡ್ ಹೊರಟಿದ್ದರು. ದೇವನಹಳ್ಳಿ ಕಡೆಗೆ ಅತಿ ವೇಗದಿಂದ ಚಲಿಸುತ್ತಿದ್ದ ಎಕ್ಸ್‌ಯುವಿ ಕಾರು ಹೊಸಕೋಟೆ ತಾಲೂಕಿನ ಎಂ ಸತ್ಯವರ ಗ್ರಾಮದ ಬಳಿ ಮೊದಲು ಬೈಕ್‌ಗೆ ಡಿಕ್ಕಿ ಹೊಡೆದಿದೆ.

→ 4

ಮೃತಪಟ್ಟವರು

- ಅಶ್ವಿನ್ ನಾಯರ್ (17), ಆರ್.ವಿ. ಪಿಯು ಕಾಲೇಜ್ ವಿದ್ಯಾರ್ಥಿ
- ಅರ್ಹನ್ ಶರೀಫ್, ಸಿಎಂಆರ್ ಕಾಲೇಜ್ ವಿದ್ಯಾರ್ಥಿ
- ಅಯನ್ ಅಲಿ (17), ಸಿಎಂಆರ್ ಕಾಲೇಜ್ ವಿದ್ಯಾರ್ಥಿ
- ಭರತ್ (18), ಸಿಎಂಆರ್ ಕಾಲೇಜ್ ವಿದ್ಯಾರ್ಥಿ, ಫ್ರೇಜರ್ ಟೌನ್ ನಿವಾಸಿ
- ಈತನ್ ಜಾರ್ಜ್ (17), ಆರ್‌ವಿ ಪಿಯು ಕಾಲೇಜ್ ವಿದ್ಯಾರ್ಥಿ
- ಫರ್ಹಾನ್ (17) ಆರ್‌ವಿ ಪಿಯು ಕಾಲೇಜ್ ವಿದ್ಯಾರ್ಥಿ
- ಗಗನ್ (26), ಮೃತ ಬೈಕ್ ಸವಾರ, ಸಫಲ್ ಸಂಸ್ಥೆ ಉದ್ಯೋಗಿ.

1,500 ಕೋಟಿ ವೆಚ್ಚದಲ್ಲಿ 58 ಅಣೆಕಟ್ಟುಗಳ ಪುನರುಜ್ಜೀವನ

ಅಣೆಕಟ್ಟು ದುರಸ್ತಿಗೆ ಆದ್ಯತೆ: ಸಿಎಂ

ಬೆಂಗಳೂರು: ಅಣೆಕಟ್ಟು ಸುರಕ್ಷತೆ ಇದೀಗ ಕೇವಲ ತಾಂತ್ರಿಕ ವಿಷಯವಲ್ಲ, ಅದು ರಾಷ್ಟ್ರೀಯ ಭದ್ರತೆಯ ಅನಿವಾರ್ಯ ಅಂಶವಾಗಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮ್ಮೇಳನದಲ್ಲಿ ಮಾತನಾಡಿದ ಅವರು, ಬೆಂಗಳೂರು ನಗರವು ನಾವೀನ್ಯತೆ, ತಂತ್ರಜ್ಞಾನ ಮತ್ತು ಸಂಶೋಧನೆಯ ಕೇಂದ್ರವಾಗಿದ್ದು, ಅಣೆಕಟ್ಟು ಸುರಕ್ಷತೆ ಹಾಗೂ ಸುಸ್ಥಿರ ಜಲ ನಿರ್ವಹಣೆ ಕುರಿತ ಚರ್ಚೆಗೆ ಅತ್ಯಂತ ಸೂಕ್ತ ವೇದಿಕೆಯಾಗಿದೆ. ಕರ್ನಾಟಕ ದೇಶದಲ್ಲೇ ಅತಿ ಹೆಚ್ಚು ಅಣೆಕಟ್ಟುಗಳನ್ನು ಹೊಂದಿರುವ ರಾಜ್ಯಗಳಲ್ಲಿ ಒಂದಾಗಿದ್ದು, ಸುರಕ್ಷತೆ ವಿಷಯದಲ್ಲಿ ಅನುಭವ ಮತ್ತು ಜವಾಬ್ದಾರಿ ಎರಡನ್ನೂ ಹೊಂದಿದೆ ಎಂದರು.

ಸುರಕ್ಷಿತ ಮತ್ತು ಸುಭದ್ರ ಅಣೆಕಟ್ಟುಗಳು ಎಂಬ ವಿಷಯವು ತುರ್ತುಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಅಣೆಕಟ್ಟು ಸುರಕ್ಷತೆ ಇನ್ಮುಂದೆ ತಾಂತ್ರಿಕ ನಂತರದ ಚಿಂತನೆಯಲ್ಲ. ಅದು ರಾಷ್ಟ್ರೀಯ ಜವಾಬ್ದಾರಿಯಾಗಿದೆ. ಭಾರತದ ಸುಮಾರು 70 ಪ್ರತಿಶತ ಅಣೆಕಟ್ಟುಗಳು 25 ವರ್ಷಗಳಿಗಿಂತ ಹಳೆಯವು. ಸಮ್ಮೇಳನವು ವ್ಯವಸ್ಥಿತ ಪರಿಶೀಲನೆ, ಆಧುನೀಕರಣ ಮತ್ತು ಅಪಾಯ ಸೇರಿದಂತೆ ಇನ್ನಿತರ ಮಾಹಿತಿ ಕಾರ್ಯಾಚರಣೆಗಳ ಅಗತ್ಯವನ್ನು ಒತ್ತಿಹೇಳುತ್ತದೆ ಎಂದರು.

ಜೋ ಸೈಮನ್ ಇನ್ನಿಲ್ಲ

ಬೆಂಗಳೂರು: ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ, ಗೀತ ರಚನೆಕಾರ, ಸಂಭಾಷಣೆ ಕಾರ ನಟ ಜೋ ಸೈಮನ್(80) ಅವರು ನಿಧನರಾಗಿದ್ದಾರೆ. ಶುಕ್ರವಾರ ಫಿಲಂ ಚೇಂಬರ್‌ನಲ್ಲಿ ಆಯೋಜಿಸ ಲಾಗಿದ್ದ ಸಭೆಯಲ್ಲಿ ಭಾಗಿಯಾಗಿದ್ದ ಜೋ ಸೈಮನ್ ಅವರಿಗೆ ಹಠಾತ್ತಾಗಿ ಎದೆ ನೋವು ಕಾಣಿಸಿಕೊಂಡಿದೆ. ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದಿದ್ದಾರೆ.

ಮಂಡ್ಯ ಮೂಲದ ಜೋ ಸೈಮನ್ ಅವರು ಅಂಬರೀಶ್, ವಿಷ್ಣುವರ್ಧನ್, ಶಂಕರ್‌ನಾಗ್, ರಜನಿಕಾಂತ್, ದೇವರಾಜ್, ಪ್ರಭಾಕರ್, ಜಗ್ಗೇಶ್ ಸೇರಿದಂತೆ ದಿಗ್ಗಜ ನಟರ ಸಿನಿಮಾಗಳನ್ನು ನಿರ್ದೇಶನ ಮಾಡಿ ಪ್ರಸಿದ್ಧಿ ಪಡೆದವರು. 1977ರಲ್ಲಿ ರಜನಿಕಾಂತ್ ಅಭಿನಯದ 'ಒಂದು ಪ್ರೇಮಕಥೆ' ಸಿನಿಮಾ ವನ್ನು ನಿರ್ದೇಶನ ಮಾಡುವ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಗುರುತಿಸಿಕೊಂಡ ಸೈಮನ್ ನೂರಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇ ಶಿಸಿದ್ದಾರೆ. 2013ರಲ್ಲಿ ಅವರಿಗೆ ಬಿ.ಆರ್.ಪಂತುಲು ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು.

ಹೊಸ ಶಕ್ತಿ ಕೇಂದ್ರ, ಪ್ರಧಾನಿ ಮೋದಿಯಿಂದ ಲೋಕಾರ್ಪಣೆ

ಪ್ರಧಾನಿ ಕಾರ್ಯಾಲಯಕ್ಕೆ ಹೊಸ ಕಚೇರಿ

ದೆಹಲಿ: ಪ್ರಧಾನಮಂತ್ರಿ ಕಾರ್ಯಾಲಯದ ಹೊಸ ಕಚೇರಿಯಾದ ಸೇವಾ ತೀರ್ಥ ಭವನವನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರ ವಾರ ಲೋಕಾರ್ಪಣೆ ಮಾಡಿದರು. ಮಹತ್ವಾಕಾಂಕ್ಷೆಯ ಸೆಂಟ್ರಲ್ ವಿಸ್ತಾ ಯೋಜನೆಯಡಿ ವಿವಿಧ ಸಚಿವಾಲ ಯಗಳ ಕಾರ್ಯ ನಿರ್ವಹಣೆಗೆ 'ಸೇವಾ ತೀರ್ಥ' ಹಾಗೂ ಕರ್ತವ್ಯ ಭವನ' 1 ಹಾಗೂ 2 ನಿರ್ಮಿಸಲಾ ಗಿದೆ. ಫೆ.13 ರಂದು ಮೂರು ಸಂಕೀರ್ಣಗಳನ್ನು ಮೋದಿ ಲೋಕಾರ್ಪಣೆಗೊಳಿಸಿದರು.

ಭಾರತದ ಆಡಳಿತದಲ್ಲಿ ಇದು ಮಹತ್ವದ ಮೈಲಿಗಲ್ಲು ಎಂದು ಸರಕಾರ ಬಣ್ಣಿಸಿದೆ. ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯ ಮತ್ತು ಸಂಪುಟ ಸಚಿವಾಲಯವೂ ಈ ವಿಸ್ತೃತ ಕಟ್ಟಡದಿಂದಲೇ ಕಾರ್ಯಾಚರಿಸಲಿದೆ. ಈ ಕ್ಷಣವನ್ನು ಸಾಕ್ಷಿಯಾಗಿಸಲು, ಪ್ರಧಾನ ಮಂತ್ರಿ 100 ರೂಪಾಯಿಗಳ ಸ್ಮರಣಾರ್ಥ ನಾಣ್ಯವನ್ನು ಬಿಡುಗಡೆ ಮಾಡಿದರು. ಸೇವಾ ತೀರ್ಥದ ಗೋಡೆಯ ಮೇಲೆ

'ನಾಗರಿಕೋ ದೇವೋ ಭವ' ಎಂಬ ಧ್ಯೇಯ ವಾಕ್ಯವನ್ನು ಬರೆಯಲಾಗಿದೆ.

1931ರ ಫೆಬ್ರವರಿ 13ರಂದು, ದೆಹಲಿ ನಗರವು ಭಾರತದ ರಾಜಧಾನಿಯಾಗಿ ಔಪಚಾರಿಕವಾಗಿ ಉದ್ಘಾಟನೆಗೊಂಡಿತ್ತು. 95 ವರ್ಷಗಳ ಬಳಿಕ ಸೇವಾ ತೀರ್ಥದ ಜೊತೆಗೆ ಕರ್ತವ್ಯ ಭವನ 1 ಮತ್ತು 2 ಅನ್ನು ಪ್ರಧಾನಿ ಉದ್ಘಾಟಿಸಿದ್ದಾರೆ.

ಹೊಸ ಸೇವೆ ಘೋಷಣೆ

'ಸೇವಾ ತೀರ್ಥ' ಕ್ಕೆ ತೆರಳಿದ ನಂತರ ತಮ್ಮ ಮೊದಲ ನಿರ್ಧಾರಗಳಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ರೈತರು, ಮಹಿಳೆಯರು, ಯುವಕರು ಮತ್ತು ದುರ್ಬಲ ನಾಗರಿಕರಿಗೆ ಅನುಕೂಲವಾಗುವ ಪ್ರಮುಖ ಕೆಲವು ಯೋಜನೆಗಳನ್ನು ಪ್ರಕಟಿಸಿದರು. ಇವುಗಳಲ್ಲಿ ಅಪಘಾತಕ್ಕೀಡಾದವರಿಗೆ 1.5 ಲಕ್ಷ ರೂ.ವರೆಗೆ ನಗದುರಹಿತ ಚಿಕಿತ್ಸೆಯನ್ನು ಒದಗಿಸುವ ಪಿಎಂ ರಹತ್ ಯೋಜನೆ, ಲಖ್ಪತಿ ದೀದಿಯರ ಗುರಿಯನ್ನು ಮಾರ್ಚ್ 2029ರ ವೇಳೆಗೆ 6 ಕೋಟಿಗೆ ಏರಿಸುವ ಯೋಜನೆ ಸೇರಿದೆ. ಇದೇ ವೇಳೆ ಕೃಷಿ ಮೌಲ್ಯ ಸರಪಳಿಯನ್ನು ಬಲಪಡಿಸಲು ವೆಚ್ಚವನ್ನು ಕೃಷಿ ಮೂಲಸೌಕರ್ಯ ನಿಧಿಯನ್ನು 1 ಲಕ್ಷ ಕೋಟಿ ರೂ.ಗಳಿಂದ 2 ಲಕ್ಷ ಕೋಟಿ ರೂ.ಗಳಿಗೆ ದ್ವಿಗುಣಗೊಳಿಸಲಾಗಿದೆ.

ಸಂರಕ್ಷಣೆ ಹೆಸರಿನಲ್ಲಿ ಮಾಫಿಯಾ

ಬೆಂಗಳೂರು: ಹುಲಿ ಸಂರಕ್ಷಣೆ ಹೆಸರಿನಲ್ಲಿ ನಾಗರಹೊಳೆ ಅರಣ್ಯ ವ್ಯಾಪ್ತಿಯಲ್ಲಿ ಕೈಗೊಳ್ಳಲಿರುವ ಇಂಟರ್ ನ್ಯಾಷನಲ್ ಬ್ಲಾಕ್ ಕ್ಯಾಟ್ ಅಲಯನ್ಸ್ ಶೃಂಗಸಭೆಗೆ ನಾಗರಹೊಳೆ ಆದಿವಾಸಿ ಜಮ್ಮ-ಪಾಳೆ ಹಕ್ಕು ಸ್ಥಾಪನಾ ಸಮಿತಿ ತೀವ್ರ ವಿರೋಧ ವ್ಯಕ್ತಪಡಿಸಿದೆ. ಈ ಕುರಿತು ಸಮಿತಿ ಅಧ್ಯಕ್ಷ ಜೆ.ಕೆ.ತಿಮ್ಮ ಮಾತನಾಡಿ, ಹುಲಿ ಸಂರಕ್ಷಿತ ಪ್ರದೇಶಗಳ ಸಂರಕ್ಷಣೆ ಹೆಸರಿನಲ್ಲಿ ಕೇಂದ್ರ ಸರಕಾರ ಅರಣ್ಯ ವಾಸಿಗಳನ್ನು ಒಕ್ಕಲೆಬ್ಬಿಸಲು ಮುಂದಾಗಿದೆ. ಸರಕಾರ ಸಂರಕ್ಷಣೆ ಹೆಸರಿನಲ್ಲಿ ಮಾಫಿಯಾ ನಡೆಸುತ್ತಿದೆ. ಆದಿವಾಸಿಗಳಿಗೆ ಪೂರ್ವಜರ ಕಾಲದಿಂದಲೂ ಅರಣ್ಯವೇ ಮೂಲ ನೆಲೆಯಾಗಿದ್ದು ಇಲ್ಲಿನ ಪರಿಸರ, ಪ್ರಾಣಿ ಪಕ್ಷಿಗಳನ್ನು ದೈವವೆಂದು ಭಾವಿಸಿ ಪೂಜಿಸಿ, ಸಂರಕ್ಷಿಸಿಕೊಂಡು ಬಂದಿದ್ದಾರೆ. ಇದೀಗ ಸರಕಾರವು 58 ಹುಲಿ ಸಂರಕ್ಷಿತ ವಲಯಗಳನ್ನು ಘೋಷಿಸಿ ಮೂಲ ಆದಿವಾಸಿಗಳನ್ನು ಬಲವಂತವಾಗಿ ಸ್ಥಳಾಂತರಿಸಲು ಮುಂದಾಗಿದೆ ಎಂದರು.

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 33/2025–26 ದಿನಾಂಕ: 11.02.2026

ಮೇಲ್ಕಂಡ ಟೆಂಡರ್ ಪ್ರಕಟಣೆಯಲ್ಲಿ ಚಿಕ್ಕಮಗಳೂರು ಜಿಲ್ಲೆ ಲೋಕೋಪಯೋಗಿ ಇಲಾಖೆ ಉಪವಿಭಾಗಗಳಿಗೆ ಒಳಪಡುವ ಲೆಕ್ಕ ಶೀರ್ಷಿಕೆ: 5054–03–337–0–17–154 ರಾಜ್ಯ ಹೆದ್ದಾರಿಗಳ ಸುಧಾರಣೆ, 3054–03–102–0–01–200 ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆ, 4059–80–051–0–60–132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು, 4059–80–051–0–60–422 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಪರಿಶಿಷ್ಟ ಜಾತಿ ಉಪಯೋಜನೆ (SCP) ಅಡಿಯಲ್ಲಿನ ಒಟ್ಟು 7 ಕಾಮಗಾರಿಗಳಿಗೆ ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ, ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ (Standard Tender Document KW -1,2 & 4 ರಂತೆ) ವಿವರಗಳನ್ನು ಲಗತ್ತಿಸತಕ್ಕದ್ದು, ಗುತ್ತಿಗೆದಾರರಿಗೆ ಅಧಿನಿಯಮ 3ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕನಿಷ್ಟ ಅಂದಾಜು ಮೊತ್ತ ರೂ.9.00ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ.540.96 ಲಕ್ಷಗಳು ಆಗಿರುತ್ತವೆ. ಕೆಪಿಪಿ ಪೋರ್ಟಲ್ ಟೆಂಡರ್ ಸಲ್ಲಿಸಬೇಕಾಗಿರುವ 7 ಕಾಮಗಾರಿಗಳಿಗೆ (ಇ,ಸಂಖ್ಯೆ:31630, 29795 ದಿ: 19.02.2026, ಇ,ಸಂಖ್ಯೆ:33487, 33489 ದಿ: 20.02.2026, ಇ,ಸಂಖ್ಯೆ:33162 ದಿ: 24.02.2026, ಇ,ಸಂಖ್ಯೆ: 30145, 30273 ದಿ: 26.02.2026 ರಂದು) ಸಂಜೆ 4.30 ಗಂಟೆಯೊಳಗೆ ಟೆಂಡರ್ ಸಲ್ಲಿಸಬೇಕು, ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು.

ವಾ.ಸಾ.ಸಂ.ಇ/ಕೆಎಸ್ಎಂಸಿಎ/ಚಿ/25–26/162/1836

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಬಾಗಲಕೋಟ ಜಿಲ್ಲಾ ಆಡಳಿತ ಭವನ ಕೊಠಡಿ ಸಂಖ್ಯೆ:130 ನವನಗರ, ಬಾಗಲಕೋಟ–587103

Email ID:dhobagalkote@gmail.com ದೂವಾಣಿ ಸಂಖ್ಯೆ:08354–230028

ಕ್ರ.ಸಂ:DHS/DSO/CPHC-UHC/ /2025-26 ದಿನಾಂಕ:12.02.2026

ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ (KTPP) ನಿಯಮಗಳು 1999/2000 ರನ್ವಯ ನೋಂದಾಯಿತ ಅರ್ಹ ಸಂಸ್ಥೆಗಳಿಂದ/ಮೂಲ ತಯಾರಕರು /ಅಧೀಕೃತ ಪ್ರತಿನಿಧಿಗಳು / ಅಧೀಕೃತ ವಿತರಕರಿಂದ 2025–26 ನೇ ಸಾಲಿಗೆ ಜಿಲ್ಲೆಯ 31 ಆಯುಷ್ಮಾನ ಆರೋಗ್ಯ ಮಂದಿರಗಳಿಗೆ ಹೋರ್ಡಿಂಗ್ ರಚನೆಗಳನ್ನು ಅಳವಡಿಸಲು ಅಲ್ಪಾವಧಿ ಇ–ಟೆಂಡರ್ ಕರೆದಿದ್ದು (Short Term E-Procurement Tender) ಅರ್ಹ ಟೆಂಡರ್‌ದಾರರು ಇ–ಪ್ರಕ್ಯೂರ್ ಮೆಂಟ್ ಪೋರ್ಟಲ್ www.kppp.karnataka.gov.in ಮುಖಾಂತರ ಟೆಂಡರನಲ್ಲಿ ಭಾಗವಹಿಸಬಹುದು.

1	ಟೆಂಡರ್ ಪ್ರಕಟಣೆ ದಿನಾಂಕ	ಸಂಖ್ಯೆ:DHS/DSO/CPHC UHC/ /2025-26 ದಿನಾಂಕ:12.02.2026
2	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ	ದಿನಾಂಕ : 12.02.2025
3	ಈ ಟೆಂಡರ್ ಬಗ್ಗೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಇ–ಸಂಗ್ರಹಣೆಯಲ್ಲಿ ಸಲ್ಲಿಸಬಹುದು.	ದಿನಾಂಕ: 16.02.2026ರ ಸಂಜೆ 05:00 ಗಂಟೆಗೆ
4	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ದಿನಾಂಕ:20.02.2026 ರ ಸಂಜೆ 05:00 ಗಂಟೆಗೆ
5	ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ, ಬಾಗಲಕೋಟ ಜಿಲ್ಲೆ,ದಿನಾಂಕ: 21.02.2026ರ ಬೆಳಿಗ್ಗೆ 11:00 ಗಂಟೆಗೆ
6	ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಜಿಲ್ಲಾ ಆ.ಕು.ಕ ಅಧಿಕಾರಿಗಳ ಕಛೇರಿ, ಬಾಗಲಕೋಟ ಜಿಲ್ಲೆ, ದಿನಾಂಕ:24.02.2026 ರ ಬೆಳಿಗ್ಗೆ 11:00 ಗಂಟೆಗೆ
7	ಟೆಂಡರ್‌ನ ಒಟ್ಟು ಅಂದಾಜು ಮೊತ್ತ	ರೂ.10,14,750/–
8	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ರೂ. 20,295/–
9	ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬಾಗಲಕೋಟೆ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.
10	ವೆಬ್ ಸೈಟ್ ವಿಳಾಸ	https://kppp.karnataka.gov.in/

ಸಹಿ/–ಉಪಾಧ್ಯಕ್ಷರು, ಜಿಲ್ಲಾ ಆರೋಗ್ಯ ಸಂಘ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು, ಬಾಗಲಕೋಟೆ ಜಿಲ್ಲೆ.

DIPR/BGK/RO-NO-584/KSMCA/2025-26

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ

ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು - 560 027.

ಸಂಖ್ಯೆ. ಬೆಂಮಸಾಸಂಸ್ಥೆ/ಕೇಕ/ಉ&ಖನಿ/14/2025–26 ದಿನಾಂಕ:13.02.2026

ಟೆಂಡರ್ ಆಹ್ವಾನ ಪ್ರಕಟಣೆ

ಬೆ.ಮ.ಸಾ.ಸಂಸ್ಥೆಗೆ ಈ ಕೆಳಗೆ ನಮೂದಿಸಿರುವ ಬಿಡಿಭಾಗಗಳನ್ನು/ಸೇವೆಗಳನ್ನು ಪಡೆಯಲು KPP Portalನ ಮೂಲಕ ಟೆಂಡರ್‌ನ್ನು ಆಹ್ವಾನಿಸಿದ್ದು, ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ವಿವರ	ಕೆಪಿಪಿಪಿ ಮೂಲಕ ಬಿಡ್‌ನ್ನು ಸಲ್ಲಿಸಲು ಕೊನೆ ದಿನಾಂಕ
		ನಿಯಮಿತ ಟೆಂಡರ್	
1	BMTC/2025-26/IND0260	ಗೇರ್ ಮತ್ತು ಗೇರ್ ಭಾಗಗಳ ಖರೀದಿ ಬಗ್ಗೆ.	16.03.2026 at 17.00 Hrs
2	BMTC/2025-26/IND0261	ವೈಪರ್ ಮೋಟಾರ್, ಆರ್ಮ್ಸ್, ಬ್ಲೇಡ್‌ಗಳ ಖರೀದಿ ಬಗ್ಗೆ.	02-03-2026 at 17.00 Hrs
3	BMTC/2025-26/IND0262	ರೇಡಿಯೇಟರ್ ಅಸೆಂಬ್ಲಿ ಮತ್ತು ಕೋರ್‌ಗಳ ಖರೀದಿ ಬಗ್ಗೆ.	16.03.2026 at 17.00 Hrs
4	BMTC/2025-26/SE1169	ಕೇಂದ್ರೀಯ ಉಗ್ರಾಣದಿಂದ ಘಟಕಗಳಿಗೆ ಸರಕು ಮತ್ತು ಸಾಮಗ್ರಿಗಳನ್ನು ಸಾಗಿಸಲು ಏಜೆನ್ಸಿಯನ್ನು ನೇಮಿಸಿಕೊಳ್ಳುವ ಬಗ್ಗೆ.	16.03.2026 at 17.00 Hrs
5	BMTC/2025-26/IND0263	ಆಯಿಲ್ ಸೀಲ್‌ಗಳ ಖರೀದಿ ಬಗ್ಗೆ.	02.03.2026 at 17.00 Hrs
6	BMTC/2025-26/IND0264	ವೋಲ್ವೋ ಫಿಲ್ಟರ್‌ಗಳ ಖರೀದಿ ಬಗ್ಗೆ.	16.03.2026 at 17.00 Hrs
7	BMTC/2025-26/IND0265	ಅಲ್ಯೂಮಿನಿಯಂ ಸಾಕೆಟ್‌ಗಳ ಖರೀದಿ ಬಗ್ಗೆ.	02.03.2026 at 17.00 Hrs
8	BMTC/2025-26/IND0266	ಆಟೋಮೋಟಿವ್ ಗ್ಲಾಸ್‌ಗಳ ಖರೀದಿ ಬಗ್ಗೆ.	16.03.2026 at 17.00 Hrs
9	BMTC/2025-26/IND0267	ಸ್ಪ್ರಿಂಗ್ ಕ್ಲಾಂಪ್‌ಗಳ ಖರೀದಿ ಬಗ್ಗೆ.	02.03.2026 at 17.00 Hrs
10	BMTC/2025-26/IND0268	ಆಟೋ ಕೇಬಲ್ ಮತ್ತು ವೈರ್‌ಗಳ ಖರೀದಿ ಬಗ್ಗೆ.	02.03.2026 at 17.00 Hrs
11	BMTC/2025-26/IND0269	ನಾನ್–ಆಮಿನೊ ಬೇಸ್ಡ್ ಕೂಲಂಟ್ ಖರೀದಿ ಬಗ್ಗೆ.	02.03.2026 at 17.00 Hrs
12	BMTC/2025-26/IND0270	ರಿಫ್ಲೆಕ್ಟಿವ್ ಟೇಪ್ಸ್ ಮತ್ತು ಟ್ರಾನ್ಸ್‌ಪರೆಂಟ್ ಶೀಟ್‌ಗಳ ಖರೀದಿ ಬಗ್ಗೆ.	02.03.2026 at 17.00 Hrs
13	BMTC/2025-26/IND0271	ವಿವಿಧ ಗಾತ್ರದ GHT ನಟ್‌ಗಳು ಮತ್ತು ಬೋಲ್ಟ್‌ಗಳ ಖರೀದಿ ಬಗ್ಗೆ.	02.03.2026 at 17.00 Hrs
14	BMTC/2025-26/IND0272	ವಿವಿಧ ರೀತಿಯ ಕನ್ನಡಿಗಳ ಖರೀದಿ ಬಗ್ಗೆ. (ರೇರ್ ವ್ಯೂ ಮಿರರ್‌ಗಳು)	02.03.2026 at 17.00 Hrs
15	BMTC/2025-26/IND0273	ಕ್ಯೂರಿಂಗ್ ಎನ್ವಲಪ್ಸ್ ಖರೀದಿ ಬಗ್ಗೆ.	02.03.2026 at 17.00 Hrs
		ತಿದ್ದುಪಡಿ: kpp–ಪೋರ್ಟಲ್‌ನಲ್ಲಿ ಈ ಕೆಳಕಂಡ ಟೆಂಡರ್‌ಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯವನ್ನು ಕೆಳಕಂಡಂತೆ ವಿಸ್ತರಿಸಲಾಗಿದೆ.	
16	BMTC/2025-26/IND0259	ಆಟೋ ಎಲೆಕ್ಟ್ರಿಕಲ್ ವಸ್ತುಗಳ ಖರೀದಿ ಬಗ್ಗೆ.	02-03-2026 at 17.00 Hrs

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು https://kppp.karnataka.gov.in ನಿಂದ ಪಡೆಯಬಹುದು. ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕದಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ kpp–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು kpp–ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ kpp–ಪೋರ್ಟಲ್ ವೆಬ್‌ಸೈಟ್:https://kppp.karnataka.gov.in ನಿಂದ ಪಡೆಯಬಹುದಾಗಿರುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ಸದ್ಗುರು ಸನ್ನಿಧಿಯಲ್ಲಿ 4ನೇ ಮಹಾಶಿವರಾತ್ರಿ ಆಚರಣೆ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಜಿಲ್ಲೆಯ ಜನರ ಸಹಕಾರದಿಂದ 4ನೇ ವರ್ಷದ ಮಹಾಶಿವರಾತ್ರಿಯನ್ನು ಸದ್ಗುರು ಸನ್ನಿಧಿಯಲ್ಲಿ ಆಚರಿಸಲಾಗುತ್ತಿದ್ದು, ಕೊಯಂಬತ್ತೂರಿನ ಕಾರ್ಯಕ್ರಮದ ನೇರ ಪ್ರಸಾರವನ್ನು ದೊಡ್ಡಪರದೆಯಲ್ಲಿ ಅಹೋರಾತ್ರಿ ಪ್ರದರ್ಶಿಸಲಾಗುವುದು.

ಲಕ್ಷ ಮಂದಿ ಕೂರಬೇಕಾದಬೇಕಾದ ಎಲ್ಲ ವ್ಯವಸ್ಥೆಯನ್ನು ಈಶಾ ಸನ್ನಿಧಾನದಲ್ಲಿ ಮಾಡಲಾಗಿದೆ ಎಂದು ಸ್ವಾಮಿ ವಿಮೋಹಾನಂದ ಸ್ವಾಮೀಜಿ ತಿಳಿಸಿದರು. ಸುದ್ದಿ ಗೋಷ್ಠಿಯಲ್ಲಿ ಮಾತನಾಡಿ, ಕೊಯಂಬತ್ತೂರಿನ ಈಶಾ ಯೋಗ ಕೇಂದ್ರದಲ್ಲಿ ಸದ್ಗುರು ಅವರ ಉಪಸ್ಥಿತಿಯಲ್ಲಿ 33ನೇ ಮಹಾಶಿವರಾತ್ರಿ ಆಚರಣೆ ನಡೆಯಲಿದೆ. ಆಚರಣೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್, ಮಾಹಿತಿ ಮತ್ತು ಪ್ರಸಾರ ಸಚಿವ ಎಲ್.ಮುರುಗನ್ ಹಾಗೂ ಇತರ ಪ್ರಮುಖ ಗಣ್ಯರು ಭಾಗವಹಿಸಲಿದ್ದಾರೆ. ಮಹಾ ಶಿವರಾತ್ರಿ ಆಚರಣೆಯ ನೇರ ಪ್ರಸಾರವನ್ನು ಸದ್ಗುರು ಸನ್ನಿಧಿಯಲ್ಲಿ ಮಾಡಲಾಗುತ್ತದೆ.

ಈ ಕಾರ್ಯಕ್ರಮವು 100ಕ್ಕೂ ಹೆಚ್ಚು ಟಿವಿ ಚಾನೆಲ್‌ಗಳಲ್ಲಿ ಪ್ರಸಾರವಾಗಲಿದ್ದು, 23 ಭಾರತೀಯ ಹಾಗೂ ವಿದೇಶಿ ಭಾಷೆಗಳಲ್ಲಿ ಲಭ್ಯವಿರುತ್ತದೆ. ಈ ಬಾರಿ 14 ಕೋಟಿಗೂ ಹೆಚ್ಚು ವೀಕ್ಷಕರನ್ನು ತಲುಪುವ ನಿರೀಕ್ಷೆಯಿದೆ. ಬರುವ ಭಕ್ತರಿಗೆ ಅನ್ನಪ್ರಸಾದ ಲಭ್ಯವಿರುತ್ತದೆ ಹಾಗೂ ರುದ್ರಾಕ್ಷಿಯನ್ನು ವಿತರಿಸಲಾಗುತ್ತದೆ ಎಂದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.16 & 17/2025–26 ದಿನಾಂಕ: 12.02.2026

ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ಮೂರನೇ ಹಾಗೂ ನಾಲ್ಕನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಟೆಂಡರ್ ಪ್ರಕಟಣೆ ಸಂ. 16/2025–26ರ ಜಿಲ್ಲಾ ಪಂಚಾಯತ್ ವಿವಿಧ ಲೆಕ್ಕಶೀರ್ಷಿಕೆ ಹಾಗೂ ಟೆಂಡರ್ ಪ್ರಕಟಣೆ ಸಂ. 17/2025–26ರ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸನ್ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (CMIDP) ಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.02.2026 ಸಂಜೆ 5.30 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ವಿವರಗಳನ್ನು kppp.karnataka.gov.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293

ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–1/2025–26/1989 ದಿ:07.02.2026

ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲೂ–4 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 Plan ಯೋಜನೆಯಡಿ ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ 01 ಕಾಮಗಾರಿಗೆ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 240.83 ಲಕ್ಷಗಳಿರುತ್ತದೆ. ಟೆಂಡರ್‌ನ್ನು ದಿನಾಂಕ: 07.02.2026 ರಿಂದ ದಿನಾಂಕ: 09.03.2026 ರ ಸಂಜೆ 5.30 ಗಂಟೆಯವರೆಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 11.03.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ದಿನಾಂಕ: 13.03.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "KPPP" ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ

ಡಿಐಪಿಆರ್/ಬಳ್ಳಾರಿ/999/ಕೆಎಸ್ಎಂಸಿಎ/2025–26

ಕರ್ನಾಟಕ ಸರ್ಕಾರ
ತಾಲೂಕಾ ಆಸ್ಪತ್ರೆ, ಯಲ್ಲಾಪುರ

ತಾ॥ ಯಲ್ಲಾಪುರ ಜಿಲ್ಲೆ: ಉತ್ತರ ಕನ್ನಡ–581 359

ದೂರವಾಣಿ ಸಂಖ್ಯೆ: 08419–261103 E-mail: amoth.yellapur@gmail.com

ಸಂ: ತಾ.ಆ.ಯ: ಟೆಂಡರ್/216/2025–26 ದಿನಾಂಕ: 12–02–2026

ಇ–ಟೆಂಡರ್ ಪ್ರಕಟಣೆ

2026–2027 ನೇ ಸಾಲಿಗೆ ತಾಲೂಕಾ ಆಸ್ಪತ್ರೆ, ಯಲ್ಲಾಪುರ ಜಿ॥ ಉತ್ತರ ಕನ್ನಡ ಇಲ್ಲಿಯ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಹ್ಯ ಸಂಪನ್ಮೂಲ ಸಂಸ್ಥೆಯ ಮುಖಾಂತರ ಗ್ರೂಪ್ "ಡಿ" / ನಾನ್–ಕ್ಲಿನಿಕಲ್ ಸೇವೆಯನ್ನು ಪೂರೈಸಲು ಇ–ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನ ವೇಳಾ ಪಟ್ಟಿಯು ಈ ಕೆಳಗಿನಂತಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08389–261103 ಸಂಪರ್ಕಿಸಬಹುದಾಗಿದೆ. ವೆಬ್‌ಸೈಟ್ ವಿಳಾಸ: https://kppp.karnataka.gov.in

ಹುದ್ದೆಗಳ ವಿವರ: (1) ಗ್ರೂಪ್ "ಡಿ" / ನಾನ್ ಕ್ಲಿನಿಕಲ್ ಸೇವೆಯನ್ನು ಪೂರೈಸಲು, ಪೂರೈಸಬೇಕಾದ ಗ್ರೂಪ್ "ಡಿ" / ನಾನ್ ಕ್ಲಿನಿಕಲ್ ಸೇವೆಯ ನೌಕರರ ಸಂಖ್ಯೆ: 20, ಒಟ್ಟೂ ಟೆಂಡರ ಮೊತ್ತ: ರೂಪಾಯಿ 57,85,560=00, ಇ.ಎಂ.ಡಿ. ಮೊತ್ತ: 2.5 %: ರೂಪಾಯಿ 1,44,639=00

ಟೆಂಡರ್ ವೇಳಾ ಪಟ್ಟಿ: ವಿವರಗಳು: (1) ಟೆಂಡರ್ ಪ್ರಕಟಣೆ ದಿನಾಂಕ: 12–02–2026 (2) ಇ–ಟೆಂಡರ್‌ನಲ್ಲಿ ಅರ್ಜಿ ಸಲ್ಲಿಸಲು ಪಾರಂಭಿಸುವ ದಿನಾಂಕ: 12–02–2026 (3) ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 13–03–2026 ಮಧ್ಯಾಹ್ನ: 04.15 ಘಂಟೆಗೆ (4) ತಾಂತ್ರಿಕ ಇ–ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 16–03–2026 ಮಧ್ಯಾಹ್ನ: 04.15 ಘಂಟೆಗೆ (5) ಆರ್ಥಿಕ ಇ–ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯ ನಂತರ.

* ಮೇಲಿನ ದಿನಾಂಕಗಳಂದು ಸಾರ್ವಜನಿಕ ರಜೆಯೆಂದ ಘೋಷಣೆಯಾದಲ್ಲಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಲಾಗುವುದು.

ಸಹಿ/– ಆಡಳಿತ ವೈದ್ಯಾಧಿಕಾರಿಗಳು ತಾಲೂಕಾ ಆಸ್ಪತ್ರೆ, ಯಲ್ಲಾಪುರ, ಜಿಲ್ಲೆ: ಉತ್ತರ ಕನ್ನಡ

DIPR/KWR/KSMCA/1087/25-26 dt.12.02.2026

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಧುಗಿರಿ ಉಪ ವಿಭಾಗ (ಪ್ರಾದೇಶಿಕ), ಶಿರಾ ರಸ್ತೆ, ಮಧುಗಿರಿ–572132

E-Mail:acfmadhugiri@gmail.com

ಸಂಖ್ಯೆ–ಸ.ಅ.ಸಂ/ಮಉವಿ/ಮರುಇಟೆಂಡರ್/ಸಿಆರ್–07/2025–26

ದಿನಾಂಕ: 10.02.2026

ಇ–ಟೆಂಡರ್ ಪ್ರಕಟಣೆ

2025–26ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಿಗೆ CAMPA ಯೋಜನೆಗಳಡಿ ತುಮಕೂರು ಪ್ರಾದೇಶಿಕ ವಿಭಾಗ, ಮಧುಗಿರಿ ಉಪ ವಿಭಾಗದ, ಕೊರಟಗೆರೆ, ಶಿರಾ ಮತ್ತು ಪಾವಗಡ ವಲಯಗಳಲ್ಲಿ ಜಾನುವಾರು ತಡೆ ಕಂದಕ ಹಾಗೂ ಬೆಂಕಿ ಕಾವಲುಗಾರರನ್ನು (Fire Watchers) ನೇಮಕ ಮತ್ತು ಇನ್ನಿತರೆ ಕಾಮಗಾರಿಗಳನ್ನು ಕೈಗೊಳ್ಳಲು 2025–26ನೇ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ನೊಂದಾವಣೆಯಾಗಿರುವ ಗುತ್ತಿಗೆದಾರರಿಂದ ಪ್ರತ್ಯೇಕವಾಗಿ ಇ–ಟೆಂಡರ್‌ಗಳನ್ನು ದಾಖಲಿಸಲು ಕೋರಿ ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟು 09 ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.1,65,450/– ಗಳಿಗೆ ಇ.ಎಂ.ಡಿ ಮೊತ್ತ ರೂ.2068/– ಗಳಾಗಿರುತ್ತದೆ ಮತ್ತು ಕನಿಷ್ಠ ಅಂದಾಜು ಮೊತ್ತ ರೂ.1,08,702/– ಗಳಿಗೆ ಇ.ಎಂ.ಡಿ. ಮೊತ್ತ ರೂ.2718/– ಗಳಾಗಿರುತ್ತದೆ. ದಿನಾಂಕ: 19–02–2026 ರ ಅಪರಾಹ್ನ 3–00 ಗಂಟೆಯವರೆಗೆ ಟೆಂಡರ್ ಸಲ್ಲಿಸಬಹುದಾಗಿದೆ ಹಾಗೂ ದಿನಾಂಕ: 20–02–2025ರಂದು ಅಪರಾಹ್ನ 3–00 ಗಂಟೆಗೆ ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗುವುದು. ಪರಿಮಾಣ, ಇಎಂಡಿ ಹಾಗೂ ಇನ್ನತರೆ ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ.

ವೆಬ್‌ಸೈಟ್ ವಿಳಾಸ– http://www. kppp.karnataka.gov.in.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ತುಮಕೂರು ಉಪ ವಿಭಾಗ, ತುಮಕೂರು.

DIPR/TUM/438/KSMCA/2024-25

ಜಾಲತಾಣದಲ್ಲಿ ವೈರಲ್ ಆದ ಸಿಎಂ ಟಿಪ್ಪಣಿ ಪತ್ರ | ನಕಲಿ ಪತ್ರದ ವಿರುದ್ಧ ದೂರು

ಭಾರಿ ವಿವಾದ ಸೃಷ್ಟಿಸಿದ ನಕಲಿ ಟಿಪ್ಪಣಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವೈದ್ಯಾಧಿಕಾರಿಯನ್ನು ಅಬಕಾರಿ ಇಲಾಖೆ ಉಪ ಆಯುಕ್ತರನ್ನಾಗಿ ವರ್ಗಾಯಿಸುವ ಮುಖ್ಯಮಂತ್ರಿಗಳ ಟಿಪ್ಪಣಿ ತೀವ್ರ ವಿವಾದಕ್ಕೆ ಕಾರಣವಾಗಿದ್ದು, ನಕಲಿ ಟಿಪ್ಪಣಿಯೆಂದು ಮುಖ್ಯಮಂತ್ರಿ ಕಚೇರಿ ಅಧಿಕಾರಿಗಳು ದೂರು ಸಲ್ಲಿಸಿದ್ದಾರೆ.

ಮಂಡ್ಯ ಜಿಲ್ಲೆಯ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರನ್ನು ಅಬಕಾರಿ ಇಲಾಖೆಗೆ ವರ್ಗಾಯಿಸುವಂತೆ ಸಿಎಂ ಸಿದ್ದರಾಮಯ್ಯ ಅವರ ಹೆಸರಿನಲ್ಲಿ ಬರೆದಿರುವ ಪತ್ರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಯಿತು. ನಿಯಮಾವಳಿಗಳನ್ನು ಗಾಳಿಗೆ ತೂರಿ, ಆರೋಗ್ಯ ಇಲಾಖೆಯ ಡಿಎಚ್‌ಒ ಮೋಹನ್ ಅವರನ್ನು ಅಬಕಾರಿ ಉಪ ಆಯುಕ್ತರನ್ನಾಗಿ ನೇಮಿಸಲು ಶಿಫಾರಸ್ಸು ಮಾಡಿರುವ ಪತ್ರದ ಬಗ್ಗೆ ಬಿಜೆಪಿ ನಾಯಕರು ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ವೈರಲ್ ಆಗಿದ್ದ ಪತ್ರದಲ್ಲಿ ಪತ್ರದ ಸಂಖ್ಯೆಯಾಗಲಿ ಅಥವಾ ದಿನಾಂಕವಾಗಲಿ ನಮೂದಾಗಿಲ್ಲ.

ಸಚಿವಾಲಯ ಹೇಳಿದ್ದೇನು?: ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಅರುಣ್ ಫುರ್ಟಾಡೋ, ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಕೆ. ಮೋಹನ್ ಅವರನ್ನು ಮೈಸೂರು ಗ್ರಾಮಾಂತರ ಜಿಲ್ಲೆಯ ಅಬಕಾರಿ ಉಪ ಆಯುಕ್ತರನ್ನಾಗಿ ನೇಮಿಸುವಂತೆ ಹೇಳಿರುವ ಟಿಪ್ಪಣಿ ಹರಿದಾಡುತ್ತಿದೆ. ಅಧಿಕೃತ ಸಂಖ್ಯೆ ಮತ್ತು ದಿನಾಂಕವಿಲ್ಲದ ಈ ಟಿಪ್ಪಣಿಯು ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಇ–ತಂತ್ರಾಂಶದಲ್ಲಿ ನೊಂದಾಯಿಸಿರುವುದಿಲ್ಲ ಟಿಪ್ಪಣಿಯನ್ನು ಯಾವುದೇ ಇಲಾಖೆಗೆ ರವಾನಿಸಿರುವುದಿಲ್ಲ, ಇದರ ಆಧಾರದಲ್ಲಿ ಯಾವುದೇ ವರ್ಗಾವಣೆ/ನಿಯೋಜನೆ ಆದೇಶ ಹೊರಡಿಸಿರುವುದಿಲ್ಲ, ಆದರೂ ಮುಖ್ಯಮಂತ್ರಿಯವರಿಗೆ ಹಾಗೂ ಸರಕಾರಕ್ಕೆ ಕೆಟ್ಟ ಹೆಸರನ್ನು ತರುವ ದುರುದ್ದೇಶದಿಂದ ಈ ತರಹದ ಕೃತ್ಯವನ್ನು ಎಸಗಿರುವುದು ಕಂಡುಬಂದಿರುವುದರಿಂದ, ಈ ಬಗ್ಗೆ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರನ್ನು ಪತ್ತೆಹಚ್ಚಿ ತುರ್ತಾಗಿ ಸದರಿಯವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ ಎಂದು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಹಳಿ ತಪ್ಪಿದ ಆಡಳಿತ: ಮಂಡ್ಯ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯನ್ನು ಮೈಸೂರು ಗ್ರಾಮಾಂತರ ಜಿಲ್ಲೆ ಅಬಕಾರಿ ಡಿಸಿಯಾಗಿ ನಿಯೋಜಿಸುವಂತೆ ಖುದ್ದು ಮುಖ್ಯಮಂತ್ರಿಗಳೇ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದು ನಿರ್ದೇಶನ ನೀಡಿರುವುದು ಸಿಎಂ ಸಿದ್ದರಾಮಯ್ಯನವರ ಹಳಿ ತಪ್ಪಿದ ಆಡಳಿತದ ಕ್ಲಾಸಿಕ್ ಉದಾಹರಣೆ ಎಂದು ಬಿಜೆಪಿ ಶಾಸಕ ಸುನೀಲ್ ಕುಮಾರ್ ವ್ಯಂಗ್ಯವಾಡಿದ್ದಾರೆ.

ಸಾಮಾಜಿಕ ಜಾಲ ತಾಣ ಎಕ್ಸ್‌ನ ತಮ್ಮ ಖಾತೆಯಿಂದ ಮುಖ್ಯಮಂತ್ರಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವುದನ್ನು ಹಂಚಿಕೊಂಡಿರುವ ಅವರು, ಇದು ಅಬಕಾರಿ ಹಾಗೂ ಆರೋಗ್ಯ ಇಲಾಖೆಯ ವೃಂದ ನಿಯಮಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಸಿದ್ದರಾಮಯ್ಯನವರೂ ಇಂದ್ರಿಯ ವಶವಾಗಿ ಆಡಳಿತದ ಹದ ಕಳೆದುಕೊಂಡಿದ್ದಾರೆ ಎಂಬುದಕ್ಕೆ ಇದು ನಿದರ್ಶನವಾಗಿದೆ ಎಂದು ಕುಹಕವಾಡಿದ್ದಾರೆ. ಅಲ್ಲದೆ, ಅಬಕಾರಿ ಇಲಾಖೆಯಲ್ಲಿ ನಡೆದಿರುವ 6000 ಕೋಟಿ ರು. ಅಧಿಕ ಮೊತ್ತದ ಅವ್ಯವಹಾರ ಹಾಗೂ ಕಿಕ್ ಬ್ಯಾಕ್ ದಂಧೆಯ ಹಿಂದೆ ಇಂಥ ಅವೈಜ್ಞಾನಿಕ ಹಾಗೂ ನಿಯಮ ಬಾಹಿರ ವರ್ಗಾವಣೆಯ ಸೂಚನೆಗಳು ಕೆಲಸ ಮಾಡಿರುವ ಸಾಧ್ಯತೆಗಳು ದಟ್ಟವಾಗಿದೆ ಎಂದು ಬರೆದಿದ್ದಾರೆ.

ಮುಖ್ಯಮಂತ್ರಿಗಳೇ , ಆಯಕಟ್ಟಿನ ಇಲಾಖೆಗೆ ಮಾತ್ರ ನೀವು ಈ ರೀತಿ ಎರವಲು ಸೇವೆಯ ಶಿಫಾರಸು ಮಾಡುತ್ತೀರಾ? ಅಥವಾ ನಿಮ್ಮಿಂದ ಮಾಡಿಸುತ್ತಾರಾ? ಎಂದು ಪ್ರಶ್ನೆ ಮಾಡಿದ್ದಾರೆ. ಆರೋಗ್ಯ ಇಲಾಖೆಯಲ್ಲಿ ವೈದ್ಯರ ಕೊರತೆಯಿಂದ ಸಾರ್ವಜನಿಕರು ನರಳುತ್ತಿರುವಾಗ ಜಿಲ್ಲಾ ವೈದ್ಯಾಧಿಕಾರಿಯೊಬ್ಬನನ್ನು ಅಬಕಾರಿ ಇಲಾಖೆಗೆ ನಿಯೋಜನೆ ಮಾಡುವಂತೆ ನೀವೇ ಖುದ್ದಾಗಿ ನಿರ್ದೇಶನ ನೀಡುತ್ತಿರೆಂದರೆ ಅದೆಂಥ ಒತ್ತಡ ಹಾಗೂ ವ್ಯಾಮೋಹ ನಿಮ್ಮನ್ನು ಕಾಡುತ್ತಿರಬಹುದು? ಅಥವಾ ಅಧಿಕಾರ ಹಸ್ತಾಂತರದ ಚಿಂತೆ ನಿಮನ್ನು ಆವರಿಸಿದೆಯೋ? ಎಂದು ಸುನೀಲ್ ಕುಮಾರ್ ಸಿಎಂ ಸಿದ್ದರಾಮಯ್ಯ ಅವರನ್ನು ವ್ಯಂಗ್ಯ ಭರಿತವಾಗಿ ಪ್ರಶ್ನಿಸಿದ್ದಾರೆ.

ಶಾಸಕ ಅಭಯ್ ಪಾಟೀಲ್ ಪ್ರತಿಕ್ರಿಯಿಸಿದ್ದು, ಸಾರಾಯಿ ಮಾರೋಕೆ ಡಾಕ್ಟ್ರ ಯಾಕೆ? ಇಮಾಮ್ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ? ಸಿಎಂಗೆ ಅರಳು ಮರಳಾಗಿದ್ದು, ಚಿಕಿತ್ಸೆಯ ಅಗತ್ಯವಿದೆ ಎಂದು ಲೇವಡಿ ಮಾಡಿದ್ದಾರೆ.

ಯಾರೋ ಕೆಲವು ಕಿಡಿಗೇಡಿಗಳ ಕೆಲಸ: ಸಿಎಂ

ಇನ್ನು ಈ ವಿವಾದಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ ಅವರು, ಯಾರೋ ಕೆಲವು ಕಿಡಿಗೇಡಿಗಳು ನನ್ನ ಕಚೇರಿಯ ನಕಲಿ ಟಿಪ್ಪಣಿಯೊಂದನ್ನು ಸೃಷ್ಟಿಸಿ, ಮಂಡ್ಯ ಜಿಲ್ಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಮೋಹನ್ ಇವರನ್ನು ಮೈಸೂರು ಗ್ರಾಮಾಂತರದ ಅಬಕಾರಿ ಉಪ ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು, ಅಪಪ್ರಚಾರದಲ್ಲಿ ತೊಡಗಿರುವುದು ಖಂಡನೀಯ ಮತ್ತು ಅತ್ಯಂತ ಗಂಭೀರ ಸ್ವರೂಪದ ಅಪರಾಧವಾಗಿದೆ. ಈ ಬಗ್ಗೆ ನನ್ನ ಸಚಿವಾಲಯದ ಅಧಿಕಾರಿಗಳು ದೂರು ದಾಖಲಿಸಿದ್ದು, ಪೊಲೀಸ್ ಇಲಾಖೆ ಇದರ ಹಿಂದಿರುವ ದುಷ್ಟರನ್ನು ಪತ್ತೆ ಮಾಡಿ, ಕಾನೂನು ಕ್ರಮ ಕೈಗೊಳ್ಳಲಿದೆ. ಇಂತಹ ನಕಲಿ ಸುದ್ದಿಗಳನ್ನು ನಂಬಿ ಶೇರ್ ಮಾಡುವ ಮುನ್ನ ಜಾಲತಾಣ ಬಳಕೆದಾರರು ಎಚ್ಚರಿಕೆ ವಹಿಸಬೇಕು. ಈಗಿನ ಫೋಟೋಶಾಪ್/ಎಐ ಯುಗದಲ್ಲಿ ವಾಟ್ಸ್‌ಆ್ಯಪ್ ಮಾಹಿತಿಗಳ ಸತ್ಯಾಸತ್ಯತೆಯನ್ನು ಪರಾಮರ್ಶಿಸದೆ ಇತರರ ಜೊತೆ ಹಂಚಿಕೊಳ್ಳುವುದು ಕೂಡ ಅಪರಾಧವೆ ಆಗಿದೆ. ಸಕಾರಾತ್ಮಕ ಟೀಕೆಗೆ ನಾವು ಮುಕ್ತರಿದ್ದೇವೆ, ಸುಳ್ಳು ಸುದ್ದಿಗಳ ಅಪಪ್ರಚಾರವನ್ನು ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ವರ್ಗಾವಣೆ ಪತ್ರ ಅಧಿಕೃತವೋ? ಅಲ್ಲವೋ? ಎಂಬುದು ತಮಗೆ ತಿಳಿದಿಲ್ಲ. ಆದರೆ ಆರೋಗ್ಯ ಇಲಾಖೆಯಿಂದ ಅಬಕಾರಿ ಇಲಾಖೆಗೆ ಹೋಗಲು ನಿಯಮಗಳಲ್ಲಿ ಅವಕಾಶವೇ ಇಲ್ಲ. ಬಿಜೆಪಿಯವರು ಕೇವಲ ಟ್ವೀಟ್ ಮಾಡಿ ದಿಕ್ಕು ತಪ್ಪಿಸುತ್ತಿದ್ದಾರೆ. ಸರಕಾರ ಮಾಡುತ್ತಿ ರುವ ಅಭಿವೃದ್ಧಿ ಕೆಲಸಗಳು ಚರ್ಚೆಯಾಗಬಾರದು.

-ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಹೊಸಕೋಟೆ ಬಳಿ ಭೀಕರ ಅಪಘಾತ: 7 ಸಾವು

← ಮೊದಲಪುಟದಿಂದ

ಬಳಿಕ ಡಿವೈಡರ್‌ಗೆ ಗುದ್ದಿ ಹಿಂಬದಿಯಿಂದ ಕ್ಯಾಂಟರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಚಾಲಕ ಗಗನ್ ಸ್ಥಳದಲ್ಲೇ ಮೃತಪಟ್ಟರೆ, ಕ್ಯಾಂಟರ್ ಮಗುಚಿ ಬಿದ್ದು ಚಾಲಕ ಗಾಯಗೊಂಡಿದ್ದಾನೆ. ಕಾರಿನಲ್ಲಿದ್ದ ವಿದ್ಯಾರ್ಥಿಗಳೆಲ್ಲರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಇವರ ಶವಗಳೂ ಛಿದ್ರಛಿದ್ರವಾಗಿವೆ. ಕಾರಿನ ಹಿಂಭಾಗ ಮತ್ತು ಮುಂಭಾಗ ಬೇರ್ಪಟ್ಟು ಬಿಡಿಭಾಗಗಳು ಚೆಲ್ಲಾಪಿಲ್ಲಿಯಾಗಿವೆ. ಮೃತ ವಿದ್ಯಾರ್ಥಿಗಳೆಲ್ಲರೂ ಕೊತ್ತನೂರಿನ ನಿವಾಸಿಗಳಾಗಿದ್ದು ನಾಲ್ವರು ಸಿಎಂಆರ್ ಕಾಲೇಜು ವಿದ್ಯಾರ್ಥಿಗಳಾಗಿದ್ದು, ಇನ್ನಿಬ್ಬರು ಆರ್ ವಿ ಕಾಲೇಜಿನಲ್ಲಿ ಓದುತ್ತಿದ್ದರು. ಅಪಘಾತದ ಮಾಹಿತಿ ತಿಳಿದ ಕೂಡಲೇ ಸ್ಥಳೀಯರು ಹಾಗೂ ಪೊಲೀಸರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದರು. ಓದಿ ಉತ್ತಮ ಭವಿಷ್ಯ ರೂಪಿಸಿಕೊಂಡು ಕುಟುಂಬಕ್ಕೆ ಆಧಾರ ಸ್ತಂಭವಾಗಬೇಕಿದ್ದ ವಿದ್ಯಾರ್ಥಿ ಗಳು ಜವರಾಯನ ಪಾದ ಸೇರಿದ್ದಾರೆ. ಇವರ ಜತೆ ತನ್ನದಲ್ಲದ ತಪ್ಪಿಗೆ ಜೀವ ತೆತ್ತ ಬೈಕ್ ಸವಾರ ಗಗನ್ ಜೀವ ಕಳೆದುಕೊಂಡಿದ್ದಾರೆ. ಇವರನ್ನು ಕಳೆದುಕೊಂಡ ಪೋಷಕರು ಮತ್ತು ಕುಟುಂಬಸ್ಥರ ಆಕ್ರಂದನ ಕರುಳು ಹಿಂಡುವಂತಿತ್ತು. ಅಪಘಾತ ನಡೆದ ಸ್ಥಳಕ್ಕೆ ತಕ್ಷಣವೇ ದೌಡಾಯಿಸಿದ ಬೆಂಗಳೂರು ಗ್ರಾಮಾಂತರ ಎಸ್ಪಿ ಚಂದ್ರಕಾಂತ್ ಹಾಗೂ ಪೊಲೀಸರ ತಂಡ ಪರಿಶೀಲನೆ ನಡೆಸಿ ಪೋಷಕರಿಗೆ ಮಾಹಿತಿ ನೀಡಿದ್ದಾರೆ.

ಹೊಸ ಹೆದ್ದಾರಿಯಲ್ಲಿ ಅಪಘಾತಗಳ ಸರಮಾಲೆ

ಕಳೆದ ತಿಂಗಳು ಇದೇ ಹೆದ್ದಾರಿಯ ಸೂಲಿಬೆಲೆ ಬಳಿ ಸಂಭವಿಸಿದ ಭೀಕರ ಅಪಘಾತದಲ್ಲಿ ಕಾರ್ಖಾನೆ ಕೆಲಸಕ್ಕೆ ತೆರಳುತ್ತಿದ್ದ ಮೂವರು ಕಾರ್ಮಿಕರು ಮೃತಪಟ್ಟಿದ್ದರು. ಅಲ್ಲಿಯೂ ಸಹ ಚಾಲಕನ ಅತಿ ವೇಗ ಮತ್ತು ನಿಯಂತ್ರಣ ತಪ್ಪಿದ್ದೇ ಪ್ರಮುಖ ಕಾರಣವಾಗಿತ್ತು. ಕಳೆದ ವರ್ಷದ ಅಂತ್ಯದಲ್ಲಿ ಹೊಸಕೋಟೆ ಬೈಪಾಸ್ ಬಳಿ ಖಾಸಗಿ ಬಸ್ ಮತ್ತು ನಿಂತಿದ್ದ ಲಾರಿ ನಡುವೆ ಡಿಕ್ಕಿ ಸಂಭವಿಸಿ ಐವರು ಪ್ರಯಾಣಿಕರು ಮೃತಪಟ್ಟಿದ್ದರು. ಆ ಘಟನೆಯ ನಂತರ ಹೆದ್ದಾರಿಯಲ್ಲಿ ಬೀದಿದೀಪ ಮತ್ತು ವೇಗ ನಿಯಂತ್ರಕಗಳ ಅಳವಡಿಕೆಗೆ ದೊಡ್ಡ ಮಟ್ಟದ ಒತ್ತಾಯ ಕೇಳಿಬಂದಿತ್ತು.

ತುಮಕೂರು ಜಿಲ್ಲಾ ಪಂಚಾಯತ್

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ತುಮಕೂರು ಕುಣಿಗಲ್ ರಸ್ತೆ, ತುಮಕೂರು–572101.

ಇ–ಮೇಲ್: eerwstmk@gmail.com ದೂರವಾಣಿ ಸಂಖ್ಯೆ: 0816– 2272620

ಸಂ: ಕಾಇಂ:ಗ್ರಾಕುನೀ&ನೈ:ವಿ:ತುಮ:ಸ.ಇಂ:3529:2025–26 ದಿನಾಂಕ: 11–02–2026

ಕೊಟೇಷನ್ ಪ್ರಕಟಣೆ

ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ತುಮಕೂರು ರವರು CEPMIZ ಕೆ.ಎಂ.ಇ.ಆರ್.ಸಿ ಯೋಜನೆಯಡಿ ಅನುಷ್ಠಾನಗೊಳಿಸುವ Providing Sanitation of Liquid waste Management to CN halli Taluk, Tumkur district ಕಾಮಗಾರಿಗೆ Preliminary scheme report including Topgraphic Survey ನ್ನು ಮಾಡಲು ಅರ್ಹ ನೊಂದಾಯಿತಿ ಸಂಸ್ಥೆಗಳಿಂದ ಈ ಕೆಳಕಂಡ ಕೊಷ್ಟಕದಲ್ಲಿನ ವಿವರಗಳಿಗೆ ಕೊಟೇಷನ್ ಆಹ್ವಾನಿಸಲಾಗಿರುತ್ತದೆ. ಮೊಹರಾದ ಕೊಟೇಷನನ್ನು ಈ ಕೆಳಕಂಡ ವಿಳಾಸಕ್ಕೆ ಕಛೇರಿಯ ಕೆಲಸದ ಅವಧಿಯಲ್ಲಿ **ದಿನಾಂಕ: 21–02–2026 ರ ಸಂಜೆ 5.00** ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ.

SL No	DESCRIPTION	Unit	Qty	Rate in Rs, (Rate to be Quoted in Each Nos)
1	Topographic with survey. Carrying of detailed topographic survey by using DGPS along the existing details inside the Row like electric telephone line, Sanitation line, water supply Boundary line and block levels (5m interval) etc. preparing Auto CAD plan by using above data taking out 1 set of black and white printout on sheet as per required size and 3 sets of colored printout sheet as per required size submitting soft copy all data on layout. Condut the. Topography survey mentioning the highest contour channelizing the LW with lowest contours and denoting all the outfall points in the drawings.	Scheme	48	
2	Conduct the household survey, to verify type/method for LW collection system and connection to LW network/LW drains	HHs	10% of HHS	
3	Assessment of LW network system in the villages and improvement required	Scheme	48	
4	Assessment of suitable treatment technologies required approximate costing to treat and manage the Liquid waste water	Scheme	48	
5	Develop Road map for IEC activities on Liquid waste water facility. Develop module for training on Liquid waste water management for various stakeholders	job	48	
6	Tentative costing for the proposed Liquid waste water system such as network system, treatment system, house hold connections etc., and prepare BOQ for the same	Scheme	48	
	Total Amount			
	GST Amount (18%)			
	Grand Total			

ನಿಬಂಧನೆಗಳು:

1. ದರಪಟ್ಟಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿ ಅಂಚೆ ಮೂಲಕ, ಕೊರಿಯರ್ ಮೂಲಕ ಖುದ್ದಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ತುಮಕೂರು ಕಛೇರಿಗೆ **ದಿನಾಂಕ:21–02–2026 ರ ಸಂಜೆ 5.00 ಗಂಟೆ**ಯೊಳಗಾಗಿ ತಲುಪಿಸಬೇಕು.
2. ತಮ್ಮ ದರವನ್ನು ಸಂಖ್ಯೆಗಳಲ್ಲಿ ಸ್ಪಷ್ಟವಾಗಿ ಹಾಗೂ ತಿದ್ದದೆ ನಮೂದಿಸಬೇಕು.
3. ಯಾವ ಕಾರಣವನ್ನು ನೀಡದೇ ಕೊಟೇಷನ್ ಅನ್ನು ಸ್ವೀಕರಿಸುವ ಹಾಗೂ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ.
4. ಮೊಹರು ಮಾಡಿದ ಲಕೋಟೆಯಲ್ಲಿ ಕೊಟೇಷನ್ ಎಂದು ನಮೂದಿಸುವುದು.
5. ಮೊಹರು ಮಾಡಿದ ಲಕೋಟೆಯನ್ನು ಅದೇ ದಿನ ಅಂದರೆ **ದಿನಾಂಕ: 21–02–2026 ರಂದು** ತೆರೆಯಲಾಗುವುದು.
6. ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ ದರಗಳನ್ನು ಕೊಟೇಷನ್‌ನಲ್ಲಿ ನಮೂದಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ.& ನೈರ್ಮಲ್ಯ ವಿಭಾಗ, ತುಮಕೂರು

DIPR/TUM/RO-263/25-26/Oysters

ಪ್ರೇಮಿಗಳಿಗೆ ಯುವ ಕಾಂಗ್ರೆಸ್ ರಕ್ಷಣೆ

ಬೆಂಗಳೂರು: ಪ್ರೇಮಿಗಳ ದಿನ ನಿರ್ಭಯದಿಂದ ಆಚರಿಸಲು ಯುವ ಕಾಂಗ್ರೆಸ್ ರಕ್ಷಣೆ ನೀಡಲಿದೆ. ವಿಶ್ವ ಹಿಂದೂ ಪರಿಷತ್, ಭಜರಂಗ ದಳದಂತಹ ಸಂಘಟನೆಗಳ ಪುಂಡಾಟಿಕೆಗೆ ಹೆದರಬೇಕಿಲ್ಲ. ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರೀತಿಯ ಸೈನಿಕರಾಗಿ ನಿಲ್ಲಲಿದ್ದಾರೆ ಎಂದು ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಂಜುನಾಥ್ ಗೌಡ ತಿಳಿಸಿದ್ದಾರೆ.

ಪ್ರತಿ ವರ್ಷ ಫೆ.14ರ ಪ್ರೇಮಿಗಳ ದಿನದಂದು ಸಂಸ್ಕೃತಿ ರಕ್ಷಣೆಯ ಹೆಸರಿನಲ್ಲಿ ವಿಶ್ವ ಹಿಂದೂ ಪರಿಷತ್, ಭಜರಂಗ ದಳ, ಶ್ರೀರಾಮಸೇನೆಯಂತಹ ಆರ್‌ಎಸ್‌ಎಸ್‌ನ ಸಂತತಿಗಳು ಸಮಾಜದಲ್ಲಿ ಭಯದ ವಾತಾವರಣ ಸೃಷ್ಟಿ ಮಾಡಲು ಯತ್ನಿಸುತ್ತಾರೆ. ಈ ಬಾರಿಯೂ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ, ಪೊಲೀಸರ ಮೂಗಿನ ಕೆಳಗೇ ಬಜರಂಗ ದಳದಂತಹ ಸಂಘಟನೆಗಳ ದಾಂಧಲೆ ಶುರುವಾಗಿದೆ. ಇಂತಹ ಕುಕೃತ್ಯಕ್ಕೆ ರಾಜ್ಯ ಪೊಲೀಸ್ ಇಲಾಖೆ ಅವಕಾಶ ನೀಡಬಾರದು. ಒಂದು ವೇಳೆ ಇಂತಹ ಸಮಾಜಘಾತುಕ ಕೃತ್ಯಗಳಿಗೆ ಕೆಲ ಸಂಘಟನೆಗಳು ಮುಂದಾದರೆ ಯುವ ಕಾಂಗ್ರೆಸ್ ಕಾರ್ಯಕರ್ತರು ಅದನ್ನು ತಡೆಯಲು ಹಾಗೂ ಪ್ರೇಮಿಗಳ ಪರ ನಿಲ್ಲಲಿದ್ದಾರೆ. ಪ್ರೇಮಿಗಳಿಗೆ ಭದ್ರತೆ ಹಾಗೂ ಸುರಕ್ಷತೆಯ ಹೊಣೆ ನಿರ್ವಹಣೆಗೆ ಮುಂದಾಗಲಿದ್ದಾರೆ. ವಿಶೇಷವಾಗಿ ಈ ಗೂಂಡಾಗಳ ವಿರುದ್ಧ ಶನಿವಾರ ದೇಶಾದ್ಯಂತ ಯುವ ಕಾಂಗ್ರೆಸ್ ಕಾರ್ಯಕರ್ತರು ಪ್ರೀತಿಯ ಸೈನಿಕರಾಗಿ ನಿಲ್ಲಲಿದ್ದಾರೆ ಎಂದಿದ್ದಾರೆ. ಪ್ರೇಮಿಗಳ ದಿನದಂದು ಹಿಂದೂ ಪರ ಸಂಘಟನೆಗಳು ವಿರೋಧ ವ್ಯಕ್ತಪಡಿಸುತ್ತವೆ. ಉಡುಗೊರೆ, ಹೂವು ಮಾರಾಟ ಮಾಡುವ ಅಂಗಡಿಗಳ ಮೇಲೆ ದಾಳಿ ಮಾಡುವುದು. ಬಡವರ ಬದುಕು ಕಸಿಯುವ ಕೃತ್ಯಗಳನ್ನು ಮಾಡುತ್ತಾರೆ. ಪ್ರೇಮಿಗಳ ದಿನದಂದು ಪಾರ್ಕ್, ಸಾರ್ವಜನಿಕ ಸ್ಥಳಗಳಲ್ಲಿ ಪ್ರೇಮಿಗಳ ಮೇಲೆ ನೈತಿಕ ಪೊಲೀಸ್‌ಗಿರಿಯೂ ನಡೆಯುತ್ತದೆ. ಮಂಗಳೂರು ಮತ್ತಿತರ ಕಡೆ ನಾವು ರಕ್ಷಣೆ ಒದಗಿಸುತ್ತೇವೆ ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಶಾಸಕ ಶಿವಣ್ಣನವರ ಆಸ್ಪತ್ರೆಗೆ ದಾಖಲು

ಹಾವೇರಿ: ಜಿಲ್ಲೆಯ ಬ್ಯಾಡಗಿ ವಿಧಾನಸಭಾ ಕ್ಷೇತ್ರದ ಶಾಸಕ ಬಸವರಾಜ ಶಿವಣ್ಣನವರ ಅವರ ಆರೋಗ್ಯದಲ್ಲಿ ಏರುಪೇರು ಉಂಟಾಗಿದ್ದು, ಅವರನ್ನು ಹುಬ್ಬಳ್ಳಿಯ ವಿಹಾನ್ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ನಗರದಲ್ಲಿ ಫೆ.14ರಂದು ರಾಜ್ಯ ಸರಕಾರದ ಸಾಧನಾ ಸಮಾವೇಶ ನಡೆಯುತ್ತಿದ್ದು, ಇದರ ತಯಾರಿ ಕೆಲಸಗಳ ಬಗ್ಗೆ ಬಸವರಾಜ ಶಿವಣ್ಣನವರ ನಿತ್ಯವೂ ಪರಿಶೀಲಿಸುತ್ತಿದ್ದರು. ಸಮಾವೇಶದ ಸ್ಥಳಕ್ಕೂ ಪದೇ ಪದೆ ಭೇಟಿ ನೀಡುತ್ತಿದ್ದರು. ಗುರುವಾರ ರಾತ್ರಿಯೂ ಭೇಟಿ ನೀಡಿ ಮನೆಗೆ ವಾಪಸು ಹೋಗಿ ದ್ದರು. ಶುಕ್ರವಾರ ಬೆಳಗ್ಗೆ ಎದೆ ನೋವು ಹಾಗೂ ಸುಸ್ತು ಕಾಣಿಸಿಕೊಂಡಿತ್ತು. ಇದರಿಂದಾಗಿ ಅವರು ಚಿಕಿತ್ಸೆಗಾಗಿ ಹುಬ್ಬಳ್ಳಿಯ ಆಸ್ಪತ್ರೆಗೆ ತೆರಳಿದ್ದರು. ಆರೋಗ್ಯ ತಪಾಸಣೆ ನಡೆಸಿದ ವೈದ್ಯರು, ಹೃದಯ ದಲ್ಲಿ ಸಮಸ್ಯೆ ಇರುವುದನ್ನು ಪತ್ತೆ ಮಾಡಿದರು. ನಂತರ, ಶಸ್ತ್ರಚಿಕಿತ್ಸೆ ಮಾಡಿ ಶಿವಣ್ಣನವರ ಅವರಿಗೆ ಸ್ಟಂಟ್ ಅಳವಡಿಕೆ ಮಾಡಿದ್ದಾರೆ. ಸದ್ಯ ಐಸಿಯುನಲ್ಲಿ ಚಿಕಿತ್ಸೆ ಮುಂದುವರಿದಿದೆ.

ಪ್ರತಿಪಕ್ಷದ ವೈಫಲ್ಯವೇ ಆಡಳಿತ ಪಕ್ಷಕ್ಕೆ ಲಾಭ

ಉಡುಪಿ: ಅಬಕಾರಿ ಹಗರಣದ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಏನೂ ಮಾತನಾಡಿಲ್ಲ. ಹೋರಾಟ ತಾರ್ಕಿಕ ಅಂತ್ಯ ಕಂಡಿಲ್ಲ. ವಿರೋಧ ಪಕ್ಷದ ವೈಫಲ್ಯದ ಲಾಭ ಆಡಳಿತ ಪಕ್ಷಕ್ಕೆ ಸಿಕ್ಕಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕಿಡಿಕಾರಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಈ ಬಾರಿ ಅಧಿವೇಶನದಲ್ಲಿ ಜನರ ತೆರಿಗೆ ಹಣ ಹಾಳು ಮಾಡುವ ಕೆಲಸವಾಯಿತು. ಕೇಂದ್ರ ಸರಕಾರ ಮತ್ತು ಮೋದಿ ಅವರನ್ನು ಟೀಕೆ ಮಾಡಲು ಕರೆದ ಅಧಿವೇಶನ. ಜಿ ರಾಮ್ ಜಿ ಬಗ್ಗೆ ಸರಿಯಾದ ಚರ್ಚೆ ಆಗಲಿಲ್ಲ. ಅಬಕಾರಿ ಇಲಾಖೆ ಭ್ರಷ್ಟಾಚಾರ ತಾರ್ಕಿಕ ಅಂತ್ಯವಾಗಿಲ್ಲ. ಇದೊಂದು ಅರ್ಥಹೀನ ಅಧಿವೇಶನ. ಕೇಂದ್ರ ಸರಕಾರದ ಪ್ರತಿನಿಧಿಯಾದ ರಾಜ್ಯಪಾಲರಿಂದ ಕೇಂದ್ರವನ್ನೇ ಟೀಕೆ ಮಾಡಿಸುವುದು ಎಷ್ಟು ಸರಿ? ರಾಜ್ಯ ಮತ್ತು ಕೇಂದ್ರದ ಸಂಬಂಧ ಹಾಳಾಗುತ್ತದೆ. ಶಾಸಕರ ಸಂಬಳ ಭತ್ಯೆಗಾಗಿ ಅಧಿವೇಶನ ನಡೆಯಿತು. ಅಬಕಾರಿ ಇಲಾಖೆ ಭ್ರಷ್ಟಾಚಾರ ವಿಪಕ್ಷ ಸರಿಯಾಗಿ ನಿರ್ವಹಿಸಿಲ್ಲ ಎಂದು ಆರೋಪಿಸಿದರು.

ಸೂಚನೆ ಪಾಲಿಸುವಂತೆ ಇಲಾಖೆಗಳಿಗೆ ಆದೇಶ

ಬೆಂಗಳೂರು: ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನೌಕರರು ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಮುಂಬಡ್ತಿ ನೀಡಲು ಇಲಾಖಾ ಸಮಿತಿಗಳ ರಚನೆ ಹಾಗೂ ಅನುಸರಿಸಬೇಕಾದ ಕಾರ್ಯವಿಧಾನವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸರಕಾರ ಆದೇಶ ಹೊರಡಿಸಿದೆ. ರಾಜ್ಯ ಸರಕಾರಿ ಹುದ್ದೆಗಳಿಗೆ ಸಂಬಂಧಿಸಿದಂತೆ ಸುತ್ತೋಲೆಗಳಲ್ಲಿ ಕಾಲಕಾಲಕ್ಕೆ ಸೂಚನೆಗಳನ್ನು ನೀಡಿದ್ದರೂ ಪಾಲಿಸದಿರುವುದು ಸರಕಾರದ ಗಮನಕ್ಕೆ ಬಂದಿದೆ. ಹೀಗಾಗಿ ಇನ್ನು ಮುಂದೆ 6 ತಿಂಗಳಿಗೊಮ್ಮೆ ಸಭೆಗಳನ್ನು ನಡೆಸಬೇಕೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಅಲ್ಲದೆ, ಸರಕಾರದ ಅಪರ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಮೇಲಿನ ಸೂಚನೆಗಳನ್ನು ಅವರ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲಾ ನೇಮಕಾತಿ ಪ್ರಾಧಿಕಾರಗಳ ಗಮನಕ್ಕೆ ತಂದು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧೀನ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ.

ದಿನ ವಿಶೇಷ

14 ಫೆಬ್ರವರಿ 2026 ಶನಿವಾರ

» ಸೂರ್ಯೋದಯ	: 06-47
» ಸೂರ್ಯಾಸ್ತ	: 06-11
» ತಿಥಿ	: ದ್ವಾದಶಿ
» ನಕ್ಷತ್ರ	: ಪೂ.ಷಾ
» ಸಂವತ್ಸರ	: ವಿಶ್ವಾವಸು
» ಆಯನ	: ಉತ್ತರಾಯಣ
» ಋತು	: ಶಿಶಿರ
» ಮಾಸ	: ಪುಷ್ಯ
» ಪಕ್ಷ	: ಕೃಷ್ಣ ಪಕ್ಷ

ಶಾಸಕರು ದಿನಕ್ಕೊಂದು ಹೇಳಿಕೆ ನೀಡುವುದನ್ನು ನಿಲ್ಲಿಸಲಿ | ಹೈಕಮಾಂಡ್ ಸೂಕ್ತ ತೀರ್ಮಾನ ಕೈಗೊಳ್ಳಲಿದೆ

ನಾಯಕತ್ವ ಬಗ್ಗೆ ಬಹಿರಂಗ ಚರ್ಚೆ ಬೇಡ: ಪರಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಪರ-ವಿರೋಧ ಚರ್ಚೆಗಳು ಜೋರಾಗಿರುವ ನಡುವೆಯೇ, ಶಾಸಕರು ಬಹಿರಂಗ ಚರ್ಚೆ ಮಾಡಬಾರದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಅಧಿಕಾರ ಹಂಚಿಕೆ, ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಯಾರೂ ಬಹಿರಂಗ ವಾಗಿ ಮಾತನಾಡಬಾರದು. ಎಲ್ಲರೂ ಬಾಯಿ ಮುಚ್ಚಿಕೊಂಡಿರಿ ಎಂದು ಹೈಕಮಾಂಡ್ ಹೇಳಿದ್ದರೂ ಕೆಲ ಶಾಸಕರು ಈ ಬಗ್ಗೆ ಮಾತನಾಡುತ್ತಿರುವುದು ಸರಿಯಲ್ಲ. ಯಾವಾಗ ಏನು ಮಾಡಬೇಕು ಎಂಬುದು ಹೈಕಮಾಂಡ್‌ಗೆ ಗೊತ್ತಿದೆ. ಸಂದರ್ಭ ಬಂದಾಗ ಹೈಕಮಾಂಡ್ ಈ ಬಗ್ಗೆ ತೀರ್ಮಾನ ಮಾಡುತ್ತದೆ. ನಾವುಗಳು ಈ ಬಗ್ಗೆ ಮಾತನಾಡುವುದನ್ನು ಬಿಟ್ಟು ಜನರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿಯತ್ತ ಗಮನಹರಿಸುವುದು ಸೂಕ್ತ ಎಂದರು.

ಜನ ಎಲ್ಲವನ್ನು ಗಮನಿಸುತ್ತಿದ್ದಾರೆ. ಸಾರ್ವಜನಿಕವಾಗಿ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ದಿನವೂ ಮಾತನಾಡುವುದು ಸರಿಯಲ್ಲ. ಇದು ಸಾರ್ವಜನಿಕವಾಗಿ ಪಕ್ಷ ಹಾಗೂ ಸರಕಾರದ ಮೇಲೆ ತಪ್ಪು ಅಭಿಪ್ರಾಯ ಮೂಡಿಸುತ್ತದೆ. ಹಾಗಾಗಿ ಹೈಕಮಾಂಡ್ ಹೇಳಿರುವಂತೆ ಎಲ್ಲರೂ ಬಾಯಿ ಮುಚ್ಚಿಕೊಂಡು ಇರುವುದು ಒಳ್ಳೆಯದು. ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಬಹಿರಂಗವಾಗಿ ಕೆಲ ಶಾಸಕರು ಮಾತನಾಡುತ್ತಿರುವುದನ್ನು ಹೈಕಮಾಂಡ್ ಗಮನಿಸಿದೆ. ಹೈಕಮಾಂಡ್‌ಗೆ ಎಲ್ಲವೂ ಗೊತ್ತಿದೆ. ಸೂಕ್ತ ಸಂದರ್ಭದಲ್ಲಿ ಕ್ರಮಗಳಾಗುತ್ತವೆ ಹೇಳಿದರು.

ಅಧಿಕಾರ ಹಂಚಿಕೆ, ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ನಾವು ಸಹನೆಯಿಂದ ನಡೆದುಕೊಳ್ಳುವುದು ಒಳ್ಳೆಯದು. ಹೈಕಮಾಂಡ್ ಸೂಕ್ತ ತೀರ್ಮಾನ ಮಾಡುತ್ತದೆ. ಕಾಂಗ್ರೆಸ್ ಪಕ್ಷಕ್ಕೆ ಇಂತಹ ಸನ್ನಿವೇಶಗಳು ಹೊಸದೇನಲ್ಲ. ಹಿಂದೆ ಬಹಳಷ್ಟು ಇಂತಹ ಸಂದರ್ಭಗಳು ಬಂದಿವೆ. ಕರ್ನಾಟಕದಲ್ಲೂ ಹಿಂದೆ ಈ ರೀತಿ ನಡೆದಿದೆ. ಎಲ್ಲವನ್ನೂ ಹೈಕಮಾಂಡ್ ಸೂಕ್ತ ಸಂದರ್ಭ ನೋಡಿ ತೀರ್ಮಾನಿಸುತ್ತದೆ. ಅಲ್ಲಿಯವರೆಗೂ ನಾವೆಲ್ಲಾ ಸುಮ್ಮನಿರುವುದು ಒಳ್ಳೆಯದು ಎಂದು ತಿಳಿಸಿದರು.

ಸಿಎಂ ಯಾರೆಂದು ಹೈ ತೀರ್ಮಾನ

ಇನ್ನು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮಾತನಾಡಿದ್ದು, ಮುಖ್ಯಮಂತ್ರಿಯಾರಾಗಿರಬೇಕು ಎನ್ನುವುದನ್ನು ಪಕ್ಷದ ಹೈಕಮಾಂಡ್ ತೀರ್ಮಾನಿಸಲಿದೆ. ವರಿಷ್ಠರ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಸ್ಪಷ್ಟಪಡಿಸಿದರು. ನಾಯಕತ್ವ ಬದಲಾವಣೆ, ಮುಖ್ಯಮಂತ್ರಿ ಕುರ್ಚಿ ಒಪ್ಪಂದದ ಬಗ್ಗೆ ಯಾರೊಂದಿಗೆ ಮಾತುಕತೆ ನಡೆದಿದೆ ಎನ್ನುವ ಬಗ್ಗೆ ಮಾಹಿತಿ ಇಲ್ಲ. ಆದರೆ ನಾನು ಪಕ್ಷದ ವರಿಷ್ಠರು ಹೇಳಿದಂತೆ ಕೇಳುತ್ತೇವೆ. ಮುಂದಿನ ಎರಡು ಅವಧಿಗೂ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ವಿಶ್ವಾಸವ್ಯಕ್ತಪಡಿಸಿದರು.

ಶಿವರಾತ್ರಿ ನಂತರ ಶುಭವಾಗಲಿದೆ

ತಿಪಟೂರು: ಶಿವರಾತ್ರಿ ಹಬ್ಬದ ನಂತರ ಶುಭವಾಗಲಿದೆ. ಎಲ್ಲರಿಗೂ ಒಳ್ಳೆಯದಾಗಲಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು. ತಾಲೂಕಿನ ಕಾಡಸಿದ್ದೇಶ್ವರ ಮಠಕ್ಕೆ ಶುಕ್ರವಾರ ಭೇಟಿ ನೀಡಿ ಮಾತನಾಡಿದ ಅವರು, ಅಧಿಕಾರ ಹಂಚಿಕೆ ವಿಚಾರಕ್ಕೆ ಸಂಬಂಧಿಸಿ ಹೈಕಮಾಂಡ್ ಜತೆಗೆ ಏನೆಲ್ಲ ಮಾತುಕತೆ ನಡೆಯಿತು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದರು. ಮುಂದೆ ಏನಾಗುತ್ತದೆ ಎಂಬ ಬಗ್ಗೆ ಚರ್ಚಿಸುವುದಿಲ್ಲ. ಏನು ಮಾಡಬೇಕು ಎಂದು ಚಿಂತಿಸುತ್ತೇನೆ. ಅಜ್ಜಯ್ಯ ಅವರೊಂದಿಗೆ ವಿಶೇಷ ಸಂಬಂಧವಿದೆ. ಈ ಕ್ಷೇತ್ರದ ಶಕ್ತಿ ಎಲ್ಲರಿಗೂ ಗೊತ್ತಿದೆ. ಇದೇ ಶಕ್ತಿಯಿಂದ ನಮ್ಮ ಸರಕಾರ ಸ್ಥಾಪನೆಯಾಗಿ, ಮುಂದುವರಿದಿದೆ ಎಂದು ತಿಳಿಸಿದರು.

ಬೇರೆಯವರು ಸಿಎಂ ಆದ್ರೆ ಕಷ್ಟ

ಕೊಪ್ಪಳ: ಸಿದ್ದರಾಮಯ್ಯ ಅಲ್ಲದೇ ಬೇರೆ ಯಾರೇ ಸಿಎಂ ಆದರೂ ಸರಕಾರ ನಡೆಸುವುದು ಕಷ್ಟ ಇದೆ ಎಂದು ಶಾಸಕ ಅಶೋಕ್ ಪಟ್ಟಣ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಬದಲಾವಣೆ ಆಗಲ್ಲ ಅಂತ ಎಲ್ಲರೂ ಹೇಳಿದ್ದಾರೆ. ಸಿಎಂ ಸಹ ಹೈಕಮಾಂಡ್ ಹೇಳಿದರೆ ನಾನು ರಾಜೀನಾಮೆ ಕೊಡುತ್ತೇನೆ ಎಂದಿದ್ದಾರೆ. ಹೈಕಮಾಂಡ್ ಹೇಳುತ್ತಿಲ್ಲ, ಅವರು ಬಿಡ್ತಾ ಇಲ್ಲ. ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಚೆನ್ನಾಗಿದ್ದಾರೆ. ಜಗಳ ಆಗ್ತಾ ಇದೆ ಅಂತಾ ಸೃಷ್ಟಿ ಮಾಡಲಾಗುತ್ತಿದೆ ಎಂದರು. ಇಕ್ಬಾಲ್ ಹುಸೇನ್ ಮೊದಲ ಬಾರಿ ಶಾಸಕರಾಗಿದ್ದಾರೆ. ಅವರಿಗೆ ಸ್ವಲ್ಪ ಮೆಚ್ಯೂರಿಟಿ ಕಡಿಮೆ ಇರುವ ಹಾಗೆ ಕಾಣಿಸುತ್ತಿದೆ ಎಂದರು.

ಎಸ್‌ಸಿ, ಎಸ್‌ಟಿಗೆ ನಿವೇಶನ ಶೀಘ್ರ ಜಾರಿ: ಜಾರಕಿಹೊಳಿ

ದಾವಣಗೆರೆ: ರಾಜ್ಯ ಬಜೆಟ್‌ನಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯದ ಬಡವರಿಗೆ ನಿವೇಶನ ನೀಡುವ ಹೊಸ ಯೋಜನೆಗೆ ಸರಕಾರ ಈಗಾಗಲೇ ಅನುಮೋದನೆ ನೀಡಿದ್ದು, ಶೀಘ್ರವೇ ಜಾರಿಗೆ ಬರಲಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸರಕಾರಿ ಜಾಗಗಳನ್ನು ಗುರುತಿಸಿ, ಎಸ್‌ಸಿ, ಎಸ್‌ಟಿ ಫಲಾನುಭವಿಗಳಿಗೆ ನಿವೇಶನ ನೀಡುವ ಯೋಜನೆಗೆ ಈಗಾಗಲೇ ಅನುಮೋದನೆ ನೀಡಲಾಗಿದೆ. ಸರಕಾರಿ ಜಮೀನುಗಳನ್ನು ಗುರುತಿಸಿ ಅವುಗಳನ್ನು ಅಭಿವೃದ್ಧಿಪಡಿಸಿ ಮನೆಗಳ ಹಂಚಿಕೆಗೆ ಚಾಲನೆ ನೀಡಲಾಗುವುದು ಎಂದರು. ಸಿಎಂ ಸಿದ್ದರಾಮಯ್ಯ ಅವರು ಮಾರ್ಚ್ 6ರಂದು ರಾಜ್ಯ ಬಜೆಟ್ ಮಂಡಿಸಲಿದ್ದು, ಈ ಬಾರಿ ಬಜೆಟ್ ಗಾತ್ರವು ಕಳೆದ ವರ್ಷಕ್ಕಿಂತ ಸುಮಾರು 10 ರಿಂದ 20 ಸಾವಿರ ಕೋಟಿ ರುಪಾಯಿಗಳಷ್ಟು ಹೆಚ್ಚಾಗುವ ಸಾಧ್ಯತೆಯಿದೆ. ಜನಸಾಮಾನ್ಯರ ನಿರೀಕ್ಷೆಗಳಿಗೆ ಪೂರಕವಾದ ಹಾಗೂ ಅಭಿವೃದ್ಧಿ ಪರವಾದ ಬಜೆಟ್ ಇದಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಕ್ಲು ಕೊಲೆ ಪ್ರಕರಣ: ಬೈರತಿ ಬಸವರಾಜ್ ಇಂದು ನ್ಯಾಯಾಧೀಶರ ಮುಂದೆ ಹಾಜರು

ಬೆಂಗಳೂರು: ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣದ ಐದನೇ ಆರೋಪಿಯಾಗಿ ಬಂಧನಕ್ಕೆ ಒಳಗಾಗಿರುವ ಬಿಜೆಪಿ ಶಾಸಕ ಬೈರತಿ ಬಸವರಾಜ್‌ಗೆ ಸೂಕ್ತ ಚಿಕಿತ್ಸೆ ಕೊಡಿಸಿದ ಬಳಿಕ ಶನಿವಾರ ಹಾಜರುಪಡಿಸುವಂತೆ 42ನೇ ಎಸಿಜೆಎಂ ನ್ಯಾಯಾಲಯ ಸಿಐಡಿಗೆ ಸೂಚಿಸಿದೆ.

ಜಯದೇವ ಆಸ್ಪತ್ರೆಯಲ್ಲಿ ಹೃದಯ ಸಂಬಂಧಿ ಕಾಯಿಲೆಯ ತಪಾಸಣೆ ನಡೆಸಲು ತನಿಖಾಧಿಕಾರಿ ಡಿವೈಎಸ್‌ಪಿ ಗೌತಮ್‌ಗೆ ನ್ಯಾಯಾಧೀಶರು ಸೂಚನೆ ನೀಡಿದರು. ಇಂದು ಎರಡನೇ ಶನಿವಾರ ರಜೆಯಾಗಿದ್ದು, ಈ ಹಿನ್ನೆಲೆಯಲ್ಲಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ ಬಳಿಕ ತಮ್ಮ ಮನೆಗೆ ಆರೋಪಿಯನ್ನು ಹಾಜರುಪಡಿಸುವಂತೆ ಕೋರ್ಟ್ ತಿಳಿಸಿದೆ. ಬೈರತಿ ಬಸವರಾಜ್‌ಗೆ ನ್ಯಾಯಾಂಗ ಬಂಧನವೋ ಅಥವಾ ಪೊಲೀಸ್ ಕಸ್ಟಡಿಯೋ? ಎಂಬ ಭೀತಿ ಕಾಡಿದ್ದು, ಇಂದು (ಶನಿವಾರ) ಉತ್ತರ ಸಿಗಲಿದೆ. ಗುಜರಾತ್‌ನ ಅಹಮದಾಬಾದ್‌ನಿಂದ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯುತ್ತಿದ್ದಂತೆ ವಶಕ್ಕೆ ಪಡೆಯಲಾಗಿತ್ತು. ತನಿಖಾಧಿಕಾರಿ ಡಿವೈಎಸ್‌ಪಿ ಗೌತಮ್ ಅವರು ಆರೋಪಿಯನ್ನು ವಿಚಾರಣೆ ನಡೆಸಿ, ಬಂಧನ ಪ್ರಕ್ರಿಯೆ ನಡೆಸಿದರು. ಬೌರಿಂಗ್ ಆಸ್ಪತ್ರೆಗೆ ಕರೆದೊಯ್ದು, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ಬಳಿಕ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದರು.

ಜಾಮೀನು ಕೋರಿ ಅರ್ಜಿ ಸಲ್ಲಿಸಿದ ಬೈರತಿ: ಹತ್ಯೆ ಪ್ರಕರಣದಲ್ಲಿ ಬಂಧನವಾಗುತ್ತಿದ್ದಂತೆ ಜಾಮೀನು ಕೋರಿ ಬೈರತಿ ಪರ ವಕೀಲ ಹೇಮಂತ್ ಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಯಿತು. ಇದಕ್ಕೂ ಮುನ್ನ ಆರೋಪಿಯನ್ನ ಅಧಿಕಾರಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಬಳಿಕ ವಾದ ಮಂಡಿಸಿದ ಸರಕಾರಿ ವಿಶೇಷ ಅಭಿಯೋಜಕ ಅಶೋಕ್ ನಾಯ್ಕ್, ಹತ್ಯೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಬೈರತಿ ಬಸವರಾಜ್ ಅವರನ್ನ ಈ ಹಿಂದೆ ಎರಡು ಬಾರಿ ಪೊಲೀಸರು ವಿಚಾರಣೆ ನಡೆಸಿದಾಗ ತಪ್ಪು ಮಾಹಿತಿ ನೀಡಿದ್ದಾರೆ. ಪ್ರಕರಣದ ಮೊದಲ ಆರೋಪಿ ಜಗದೀಶ್ ಜತೆ ನಿಕಟ ಸಂಪರ್ಕ ಬಗ್ಗೆ ದಾಖಲಾತಿಗಳನ್ನು ಸಿಐಡಿ ಸಂಗ್ರಹಿಸಿದೆ. ಆರೋಪಿ ವಿರುದ್ಧ ಹಲವು ಸಾಕ್ಷ್ಯಾಧಾರಗಳನ್ನ ಸಂಗ್ರಹಿಸಿದೆ. ಆರೋಪಿ ಸಾಮಾನ್ಯ ವ್ಯಕ್ತಿಯಲ್ಲ. ಶಾಸಕರಾಗಿದ್ದಾರೆ. ಪ್ರಭಾವ ಬೀರಿ ಸುಳ್ಳು ಹೇಳಿಕೆಗಳನ್ನು ಕೊಡಿಸಲಾಗಿದೆ. ಹೀಗಾಗಿ, ಸಂಪೂರ್ಣ ವಿಚಾರಣೆ ನಡೆಸುವ ಅಗತ್ಯವಿದೆ. 14 ದಿನಗಳ ಕಾಲ ಆರೋಪಿಯನ್ನು ಸಿಐಡಿ ಕಸ್ಟಡಿಗೆ ನೀಡಿ ಎಂದು ಮನವಿ ಮಾಡಿದರು.

ನಿರ್ದೇಶಕ ಜೋ ಸೈಮನ್ ನಿಧನ

ಬೆಂಗಳೂರು: ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ, ಗೀತ ರಚನೆಕಾರ, ಸಂಭಾಷಣೆಕಾರ ನಟ ಜೋ ಸೈಮನ್(80) ಅವರು ಹಠಾತ್ತಾಗಿ ನಿಧನರಾಗಿದ್ದಾರೆ.

ಶುಕ್ರವಾರ ಫಿಲಂ ಚೇಂಬರ್‌ನಲ್ಲಿ ಆಯೋಜಿಸಲಾಗಿದ್ದ ಸಭೆಯಲ್ಲಿ ಭಾಗಿಯಾಗಿದ್ದ ಜೋ ಸೈಮನ್ ಅವರು ಲವಲವಿಕೆಯಿಂದಲೇ ಇದ್ದರು. ಆದರೆ ಅವರಿಗೆ ಹಠಾತ್ತಾಗಿ ಎದೆ ನೋವು ಕಾಣಿಸಿಕೊಂಡಿದೆ. ಕೂಡಲೇ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆಗೆ ಸ್ಪಂದಿಸದೆ ಜೋ ಸೈಮನ್ ಅವರು ಕೊನೆಯುಸಿರೆಳೆದಿದ್ದಾರೆ.

ನೂರಕ್ಕೂ ಹೆಚ್ಚು ಚಿತ್ರಗಳನ್ನು ನಿರ್ದೇಶಿಸಿದ್ದ ಜೋ ಸೈಮನ್ ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಜೋ ಸೈಮನ್ ಅವರ ಅಗಲಿಕೆಯಿಂದ ಕನ್ನಡ ಚಿತ್ರರಂಗಕ್ಕೆ ಅಪಾರ ನಷ್ಟ ಸಂಭವಿಸಿದೆ. ಜೋ ಸೈಮನ್ ನಿಧನಕ್ಕೆ ಕಲಾವಿದರು, ಗಣ್ಯರು ಸಂತಾಪ ಸೂಚಿಸಿದ್ದಾರೆ. ರವೀಂದ್ರ ಕಲಾಕ್ಷೇತ್ರದಲ್ಲಿ ಮೃತರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದ್ದು, ಶನಿವಾರ ಅಂತ್ಯ ಸಂಸ್ಕಾರ ನೆರವೇರಲಿದೆ.

ಜೋ ಸೈಮನ್ ಅವರು ಅಂಬರೀಶ್, ವಿಷ್ಣುವರ್ಧನ್, ಶಂಕರ್‌ನಾಗ್, ರಜನಿಕಾಂತ್, ದೇವರಾಜ್, ಪ್ರಭಾಕರ್, ಜಗ್ಗೇಶ್ ಸೇರಿದಂತೆ ದಿಗ್ಗಜ ನಟರ ಸಿನಿಮಾಗಳನ್ನು ನಿರ್ದೇಶನ ಮಾಡಿ ಪ್ರಸಿದ್ಧಿ ಪಡೆದಿದ್ದಾರೆ. ಮೂಲತಃ ಮಂಡ್ಯದವರಾದ ಜೋ ಸೈಮನ್ ಅವರಿಗೆ ಕಾಲೇಜು ದಿನಗಳಲ್ಲಿಯೇ ಸಿನಿಮಾದ ಬಗ್ಗೆ ಅಪಾರ ಆಸಕ್ತಿ ಮೂಡಿತ್ತು. ಹಾಗಾಗಿ ಕಾಲೇಜು ಶಿಕ್ಷಣ ಮುಗಿಸಿ ಸಿನಿಮಾರಂಗದತ್ತ ಮುಖ ಮಾಡಿದರು. ಚಿತ್ರರಂಗದಲ್ಲಿ ವಿವಿಧ ವಿಭಾಗಳಲ್ಲಿ ಕಾರ್ಯನಿರ್ವಹಿಸಿದ ಜೋ ಸೈಮನ್ ನಿರ್ದೇಶನದತ್ತಲೂ ಆಸಕ್ತಿ ತಳೆದರು. ಕಣಗಾಲ್ ಪ್ರಭಾಕರ ಶಾಸ್ತ್ರಿ, ಆರ್.ಎನ್,ಜಯಗೋಪಾಲ್, ರಾಜೇಂದ್ರ ಸಿಂಗ್ ಬಾಬು ಅವರಂತಹ ಖ್ಯಾತ ನಿರ್ದೇಶಕರ ಜತೆಗೆ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು. 1977ರಲ್ಲಿ ತೆರೆಗೆ ಬಂದ ಒಂದು ಪ್ರೇಮಕಥೆ ಸಿನಿಮಾವನ್ನು ನಿರ್ದೇಶನ ಮಾಡುವ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಗುರುತಿಸಿಕೊಂಡರು. ಈ ಚಿತ್ರದಲ್ಲಿ ರಜನಿಕಾಂತ್ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದರು. ಮೊದಲ ಚಿತ್ರದಲ್ಲಿಯೇ ಅತ್ಯುತ್ತಮ ನಿರ್ದೇಶಕರಾಗಿ ಗುರುತಿಸಿಕೊಂಡ ಜೋ ಸೈಮನ್, ಬಂಗಾರದ ಗುಡಿ, ರೌಡಿ ರಾಜ್ಯ, ಟೈಂ ಬಾಂಬು, ದಿ ಕಿಲ್ಲರ್, ಅಗ್ನಿ ಐಪಿಎಸ್, ಸಿಂಹ ಜೋಡಿ, ಸಾಹಸ ಸಿಂಹ, ರವಿವರ್ಮ, ರಕ್ತತಿಲಕ, ಪ್ರೇಮಜಾಲ, ಸ್ನೇಹದ ಕಡಲಲ್ಲಿ.. ಹೀಗೆ ಹಲವು ಸೂಪರ್ ಹಿಟ್ ಸಿನಿಮಾಗಳನ್ನು ನಿರ್ದೇಶಿಸಿದರು. ಪ್ರೇಮಕಥೆಯ ಸಿನಿಮಾಗಳನ್ನೇ ಹೆಚ್ಚಾಗಿ ನಿರ್ದೇಶಿಸುತ್ತಿದ್ದ ಜೋ ಸೈಮನ್ ಅದರ ನಡುವೆ, ಆ್ಯಕ್ಷನ್, ಥ್ರಿಲ್ಲರ್ ಸಿನಿಮಾಗಳಿಗೂ ಆ್ಯಕ್ಷನ್ ಕಟ್ ಹೇಳಿದ್ದರು. ಒಬ್ಬ ನಿರ್ದೇಶಕ ಪ್ರೇಕ್ಷಕರಿಗೆ ರುಚಿಸುವ ಎಲ್ಲಾ ಜಾನರ್ ಸಿನಿಮಾಗಳನ್ನು ತೆರೆಗೆ ತರಬೇಕು ಎಂದು ತೋರಿಸಿಕೊಟ್ಟರು.

ನಿರ್ದೇಶನದ ಜತೆಗೆ ನಿರ್ಮಾಪಕರಾಗಿಯೂ ಗುರುತಿಸಿಕೊಂಡಿದ್ದ ಜೋ ಸೈಮನ್, ಒಡೆದು ಹಾಲು, ಮಹಾಪುರುಷ, ಕೃಷ್ಣಾರ್ಜುನ ಸಿನಿಮಾಗಳನ್ನು ನಿರ್ಮಾಣ ಮಾಡಿದ್ದಾರೆ. ಸ್ನೇಹಿತರ ಸವಾಲ್, ಏಕದಂತ, ಯಮಕಿಂಕರ, ಪಾಂಡವ ಸೇರಿದಂತೆ ಹಲವು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ಜೋ ಸೈಮನ್ ಅವರ ಸಾಧನೆಯನ್ನು ಗುರುತಿಸಿ 2013ರಲ್ಲಿ ಬಿ.ಆರ್.ಪಂತುಲು ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ವಂದೇ ಮಾತರಂ ಕ್ರೆಡಿಟ್ ಪಡೆವ ಹಕ್ಕು ಡಿಕೆಶಿಗೆ ಇಲ್ಲ

ಬೆಂಗಳೂರು: ಡಿ.ಕೆ.ಶಿವಕುಮಾರ್ ಅವರು ವಂದೇ ಮಾತರಂ ವಿಷಯದ ಬಗ್ಗೆ ಕ್ರೆಡಿಟ್ ತೆಗೆದುಕೊಳ್ಳುವ ನೈತಿಕ ಹಕ್ಕನ್ನು ಹೊಂದಿಲ್ಲ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಹೇಳಿದ್ದಾರೆ.

1937 ರಲ್ಲಿ ಮುಸ್ಲಿಂ ಲೀಗ್ ನಾಯಕರು ವಂದೇ ಮಾತರಂನ ಕೊನೆಯ ನಾಲ್ಕು ಚರಣಗಳನ್ನು ದುರ್ಗಾ ದೇವಿ ಮತ್ತು ಲಕ್ಷ್ಮೀದೇವಿಯ ಉಲ್ಲೇಖವಿದೆ. ಅದು ವಿಗ್ರಹಾರಾಧನೆಗೆ ಸಮನಾಗಿರುತ್ತದೆ ಮತ್ತು ಆದ್ದರಿಂದ ಮುಸ್ಲಿಮರಿಗೆ ಸ್ವೀಕಾರಾರ್ಹವಲ್ಲ ಎಂಬುದಕ್ಕೆ ಇತಿಹಾಸವು ಸಾಕ್ಷಿಯಾಗಿದೆ. ಮುಸ್ಲಿಮರನ್ನು ಸಮಾಧಾನಪಡಿಸಲು ರಾಷ್ಟ್ರೀಯ ಗೀತೆಯನ್ನು ಮೊಟಕುಗೊಳಿಸಲಾಗಿದೆ ಎಂದು ಆರೋಪಿಸಿದ್ದಾರೆ. 1937 ರಲ್ಲಿ ಫೈಜಲ್‌ಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಪಂಡಿತ್ ಜವಾಹರಲಾಲ್ ನೆಹರು, ಮಹಾತ್ಮ ಗಾಂಧಿಯವರೊಂದಿಗೆ ಚರ್ಚಿಸಿ, ರವೀಂದ್ರನಾಥ ಠಾಗೋರ್ ಅವರ ಸಲಹೆಯ ಮೇರೆಗೆ, ವಂದೇ ಮಾತರಂ ಅನ್ನು ಮೊದಲ ಎರಡು ಚರಣಗಳಿಗೆ ಇಳಿಸುವ ಮೂಲಕ ಅದನ್ನು ಮೊಟಕುಗೊಳಿಸಲು ಒಪ್ಪಿಕೊಂಡರು. ಇದು ಕಾಂಗ್ರೆಸ್‌ನ ಮುಸ್ಲಿಂ ತುಷ್ಟೀಕರಣದ ನೀತಿಯ ಮುಂದುವರಿಕೆಯಾಗಿತ್ತು. ವಂದೇ ಮಾತರಂ ವಿಭಜನೆಯು ನಂತರ ದೇಶದ ವಿಭಜನೆಗೆ ಕಾರಣವಾಯಿತು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವಂದೇ ಮಾತರಂ ಮೊಟಕುಗೊಳಿಸುವುದು ಲಕ್ಷಾಂತರ ಭಾರತೀಯರಿಗೆ ಅವರ ಧಾರ್ಮಿಕ ಪಂಗಡವನ್ನು ಲೆಕ್ಕಿಸದೆ ಕಾಂಗ್ರೆಸ್ ಮಾಡಿದ ದೊಡ್ಡ ದ್ರೋಹ. ಪರಿಸ್ಥಿತಿ ಧೈರ್ಯವನ್ನು ಬೇಡಿದಾಗ ಕಾಂಗ್ರೆಸ್ ರಾಜಿ ಮಾಡಿಕೊಳ್ಳಲು ನಿರ್ಧರಿಸಿತು. ಮುಸ್ಲಿಂ ಲೀಗ್ ಒತ್ತಡಕ್ಕೆ ಮಣಿಯುವ ಬದಲು, ಕಾಂಗ್ರೆಸ್ ಧೈರ್ಯ, ದೃಢನಿಶ್ಚಯ ತೋರಿಸಿದ್ದರೆ ದೇಶದ ಭವಿಷ್ಯ ವಿಭಿನ್ನವಾಗಿರುತ್ತಿತ್ತು.

-ಎನ್.ರವಿಕುಮಾರ್, ವಿಪ ಪ್ರತಿಪಕ್ಷದ ಮುಖ್ಯ ಸಚೇತಕ

1937ರ ಅಕ್ಟೋಬರ್ 20ರಂದು ನೆಹರು ಸುಭಾಷ್ ಚಂದ್ರ ಬೋಸ್ ಅವರಿಗೆ ಬರೆದ ಪತ್ರದ ಆಯ್ದ ಭಾಗಗಳನ್ನು ರವಿಕುಮಾರ್ ಉಲ್ಲೇಖಿಸಿದ್ದಾರೆ. ಅದರಲ್ಲಿ ಅವರು ವಂದೇ ಮಾತರಂ ವಿರುದ್ಧದ ಪ್ರಸ್ತುತ ಕೂಗು ಹೆಚ್ಚಾಗಿ ಕೋಮುವಾದಿಗಳಿಂದ ತಯಾರಿಸಲ್ಪಟ್ಟಿದೆ. ಆದರೆ ಅದರಲ್ಲಿ ಕೆಲವು ವಿಷಯಗಳಿವೆ ಎಂದು ತೋರುತ್ತದೆ ಎಂದು ಬರೆದಿದ್ದರು. ಈ ಪತ್ರದ ನಂತರ, ಅಕ್ಟೋಬರ್ 26 ಮತ್ತು ನವೆಂಬರ್ 1, 1937 ರ ನಡುವೆ, ನೆಹರೂ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ವಂದೇ ಮಾತರಂ ಅನ್ನು ಔಪಚಾರಿಕವಾಗಿ ಮೊಟಕುಗೊಳಿಸಿತು ಎಂದು ದೂರಿದ್ದಾರೆ.

ರಾಗಾ ಸತ್ಯಗಳನ್ನು ಎಕ್ಸ್‌ಪೋಸ್ ಮಾಡುತ್ತಿರುವುದಕ್ಕೆ ಬಿಜೆಪಿಗೆ ಹೊಟ್ಟೆನೋವು

ಕಲಬುರಗಿ: ರಾಹುಲ್ ಗಾಂಧಿಯವರು ಕೇಂದ್ರದ ವೈಫಲ್ಯಗಳನ್ನು ಬಹಿರಂಗಪಡಿಸುತ್ತಿರುವುದನ್ನು ಸಹಿಸಲಾಗದೆ ಬಿಜೆಪಿಯವರು ಹತಾಶರಾಗಿದ್ದಾರೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಟೀಕಿಸಿದರು.

ರಾಹುಲ್ ಗಾಂಧಿ ಅವರ ಸದಸ್ಯತ್ವ ರದ್ದು ಕೋರಿ ನಿಲುವಳಿ ಮಂಡನೆ ಮಾಡುತ್ತಿರುವ ವಿಚಾರವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದೆಯೂ ಇವರು ಇದೇ ರೀತಿ ಮಾಡಿದ್ದರು, ಆದರೆ ನ್ಯಾಯಾಲಯದಲ್ಲಿ ಏನಾಯಿತು ಎಂಬುದು ಎಲ್ಲರಿಗೂ ತಿಳಿದಿದೆ. ರಾಹುಲ್ ಗಾಂಧಿ ಅವರು ಸರಕಾರದ ಸತ್ಯಗಳನ್ನು ಎಕ್ಸ್‌ಪೋಸ್ ಮಾಡುತ್ತಿರುವುದು ಬಿಜೆಪಿಗೆ ಹೊಟ್ಟೆನೋವು ತಂದಿದೆ. ಹಾಗಾಗಿಯೇ ಈ ರೀತಿಯ ತಂತ್ರಗಳನ್ನು ಹೂಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಶಾಸಕರು ಇಲಾಖೆಯ ಅಧ್ಯಯನಕ್ಕಾಗಿ ವಿದೇಶ ಪ್ರವಾಸಕ್ಕೆ ತೆರಳಿದ್ದಾರೆ. ರಾಜ್ಯ ರಾಜಕೀಯದ ಬೆಳವಣಿಗೆಗಳ ಬಗ್ಗೆ ಏನಾದರೂ ಕೇಳುವುದಿದ್ದರೆ ನೀವು ಡಿ.ಕೆ.ಶಿವಕುಮಾರ್ ಅವರನ್ನೇ ಕೇಳಿ, ಮಾಧ್ಯಮದವರಿಗೆ ಎಷ್ಟು ಗೊತ್ತಿದೆಯೋ ನನಗೂ ಅಷ್ಟೇ ಗೊತ್ತು.

-ರಾಮಲಿಂಗರೆಡ್ಡಿ, ಸಚಿವ

ಅಮೆರಿಕ ಸುಂಕ ಕಡಿಮೆ ಮಾಡಿರುವ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಧಾನಿ ಮೋದಿ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದ ಅವರು, ಇವರ ಸ್ಥಿತಿ ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಅಂದಂತಾಗಿದೆ ಎಂದು ವ್ಯಂಗ್ಯವಾಡಿದರು.

ಬಿಜೆಪಿ ಶಾಸಕ ಬೈರತಿ ಬಸವರಾಜ್ ಬಂಧನದ ವಿಚಾರವಾಗಿ ಮಾತನಾಡಿ, ತಪ್ಪು ಮಾಡಿದಾಗ ಬಂಧನ ಆಗಲೇಬೇಕಲ್ಲವೇ? ಆದರೆ ಇಷ್ಟು ದಿನ ಯಾಕೆ ಬಂಧಿಸಿರಲಿಲ್ಲ ಎಂಬ ಪ್ರಶ್ನೆಗೆ ಗೃಹ ಸಚಿವರೇ ಉತ್ತರಿಸಬೇಕು ಎಂದರು.

ಹಾವೇರಿಯಲ್ಲಿ ನಡೆಯುವುದು ಸಾರ್ಥಕ ಕೆಲಸದ ಸಮರ್ಪಣಾ ಕಾರ್ಯಕ್ರಮ

ಗದಗ: ರಾಜ್ಯ ಸರಕಾರ ಇಂದಿಗೆ 1 ಸಾವಿರ ದಿನಗಳನ್ನು ಪೂರೈಸಿದೆ. ಇದೊಂದು ಮೈಲುಗಲ್ಲು. ಅದರ ಜತೆಗೆ, ಸಿದ್ದರಾಮಯ್ಯ ಅವರು ಸುದೀರ್ಘ ಅವಧಿಯ ಮುಖ್ಯಮಂತ್ರಿಯಾಗಿ ದಾಖಲೆ ಬರೆದಿದ್ದಾರೆ. ಹಾಗಂತ, ಹಾವೇರಿಯಲ್ಲಿ ಶನಿವಾರ ನಡೆಯುವುದು ಸಂಭ್ರಮಾ ಚರಣೆಯ ಕಾರ್ಯಕ್ರಮವಲ್ಲ. ಸಾವಿರ ದಿನಗಳ ಸಾರ್ಥಕ ಕೆಲಸವನ್ನು ಸಮರ್ಪಣೆ ಮಾಡುವ ಕಾರ್ಯಕ್ರಮವಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾವು ಮಾಡಿದ ಕೆಲಸಗಳ ವರದಿಯನ್ನು ಜನರಿಗೆ ವರದಿ ಒಪ್ಪಿಸುವುದು ಕೂಡ ಪ್ರಜಾಪ್ರಭುತ್ವದ ಭಾಗ. ಜನರ ಅನಿಶ್ಚಿತತೆ ಕಳೆದು, ಅವರ ನೆಮ್ಮದಿಯ ಬದುಕಿಗೆ ಭೂ ಗ್ಯಾರಂಟಿ ಕೊಡುವ ಕೆಲಸವನ್ನು ನಮ್ಮ ಸರಕಾರ ಮಾಡಿದೆ. ಇದೊಂದು ಮೌನ ಕ್ರಾಂತಿ. ಅದನ್ನು ಸಂಭ್ರಮಿಸುವ ದಿನ ಇದಾಗಿದೆ ಎಂದು ತಿಳಿಸಿದರು.

6,500 ಕಂದಾಯ ಗ್ರಾಮಗಳನ್ನು ಘೋಷಣೆ ಮಾಡುವ ಗುರಿ ಯೊಂದಿಗೆ ನಮ್ಮ ಸರಕಾರ ಕೆಲಸ ಮಾಡುತ್ತಿದೆ. ಇನ್ನೂ 1.39 ಲಕ್ಷ ಕುಟುಂಬ ಗಳಿಗೆ ಹಕ್ಕುಪತ್ರ ಕೊಡುವ ಕೆಲಸ ಆಗ ಬೇಕಿದೆ. ಆದರೆ, ಕೇಂದ್ರ ಸರಕಾರ ಜನ ಗಣತಿ ಆರಂಭಿಸಿದ್ದು, ಅದರ ನಡುವೆ ಹೊಸ ಕಂದಾಯ ಗ್ರಾಮಗಳ ಘೋಷಣೆ ಮಾಡದಂತೆ ಸೂಚನೆ ನೀಡಿದೆ. ಅವರ ಸೂಚನೆ ಪಾಲಿಸುತ್ತಿದ್ದೇವೆ. ಜನಗಣತಿ ಮುಗಿದ ನಂತರ ಮತ್ತೇ ಈ ಕೆಲಸ ಆರಂಭಿಸಲಾಗುವುದು.

-ಕೃಷ್ಣಬೈರೇಗೌಡ, ಕಂದಾಯ ಸಚಿವ

ರಾಜ್ಯದಲ್ಲಿ 6,500 ವಸತಿ ಪ್ರದೇಶಗಳ ಜನರು ಈವರೆಗೆ ದಾಖಲೆ, ಹಕ್ಕುಪತ್ರ ಗಳಿಲ್ಲದೇ ಆತಂಕದಲ್ಲಿ ಬದುಕುತ್ತಿದ್ದರು. ಇಂತಹ ಜನರಿಗೆ ಶಾಶ್ವತ ಪರಿಹಾರ ಕೊಡುವ ನಿಟ್ಟಿನಲ್ಲಿ ನಮ್ಮ ಸರಕಾರ 2016ರಲ್ಲಿ ಕಾನೂನು ತಿದ್ದುಪಡಿ ತಂದು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವ ಅಭಿಯಾನ ಆರಂಭಿಸಿತು. 2017ರಿಂದ 2023ರ ನಡುವೆ ಈ ರೀತಿಯ 1 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ಕೊಟ್ಟು, 1,557 ಕಂದಾಯ ಗ್ರಾಮಗಳನ್ನು ಘೋಷಿಸಲಾಗಿತ್ತು. ಆರು ವರ್ಷಗಳಲ್ಲಿ 1 ಲಕ್ಷ ಕುಟುಂಬಕ್ಕೆ ಹಕ್ಕುಪತ್ರ ನೀಡಲಾಗಿತ್ತು. ಅದರಲ್ಲಿ ಇನ್ನೂ 3.50 ಲಕ್ಷ ಕುಟುಂಬಗಳಿಗೆ ಈ ಸೌಲಭ್ಯ ಒದಗಿಸುವ ಕೆಲಸವನ್ನು ಹಿಂದಿನ ಸರಕಾರ ಮಾಡಲಿಲ್ಲ ಎಂದು ದೂರಿದರು. 2023ರಲ್ಲಿ ನಮ್ಮ ಸರಕಾರ ಅಧಿಕಾರಕ್ಕೆ ಬಂದ ನಂತರ ಇದನ್ನು ಆದ್ಯತೆಯಾಗಿ ತೆಗೆದುಕೊಂಡು ಎರಡೂವರೆ ವರ್ಷಗಳಲ್ಲಿ 2.20 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ಒದಗಿಸಿದೆ. ಹಿಂದೆ ಹೊಸಪೇಟೆಯಲ್ಲಿ ನಡೆದ ಕಾರ್ಯ ಕ್ರಮದಲ್ಲಿ 1.10 ಲಕ್ಷ ಹಕ್ಕುಪತ್ರಗಳನ್ನು ನೀಡಲಾಗಿತ್ತು.

ಫೆ.14ರಂದು ನಡೆಯುವ ಕಾರ್ಯ ಕ್ರಮದಲ್ಲಿ 1.06 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರಗಳನ್ನು ವಿತರಿಸುವ ಮೂಲಕ ಅವರ ದಶಕಗಳ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಿ, ಬದುಕಿಗೆ ಭೂ ಗ್ಯಾರಂಟಿ ಕೊಡುವ ಕೆಲಸವನ್ನು ನಮ್ಮ ಸರಕಾರ ಮಾಡಲಿದೆ ಎಂದರು.

ಯಾವ ಸಾಧನೆಗಾಗಿ ಸಮಾವೇಶ?: ಆರ್.ಅಶೋಕ

ಚಿತ್ರದುರ್ಗ: ಕಳೆದ ಸಾವಿರ ದಿನಗಳು ಕಾಂಗ್ರೆಸ್ ಸರಕಾರದ ಆಡಳಿತದ ಕರಾಳ ದಿನಗಳು. ಅಂದ ಮೇಲೆ ಯಾವ ಸಾಧನೆಗಾಗಿ ಸಮಾವೇಶ ಮಾಡುತ್ತಿದ್ದಾರೆ? ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ದಲ್ಲಿ ಯಾರು ಮುಖ್ಯಮಂತ್ರಿ ಎಂದು ತಿಳಿದಿಲ್ಲ. ಈ ಬಗ್ಗೆ ಮಾಧ್ಯಮದವರು ಪ್ರಶ್ನೆ ಮಾಡಿದರೆ ನೀವು ಯಾರ ಏಜೆಂಟ್‌ಗಳು ಎಂದು ಸಿಎಂ ಸಿದ್ದರಾಮಯ್ಯ ಕೇಳುತ್ತಾರೆ. ಇಂತಹ ಸ್ಥಿತಿಯಲ್ಲಿ ಯಾವ ಸಾಧನೆಗಾಗಿ ಸಾವಿರದ ದಿನಗಳ ಸಮಾ ವೇಶ ಮಾಡುತ್ತಿದ್ದಾರೆ? ಇವು ಕರಾಳ ದಿನಗಳು. ಸರಕಾರದಿಂದ ರೇಷನ್ ಕಾರ್ಡ್ ರದ್ದು ಮಾಡಲಾಗಿದೆ. ಬಗರ್‌ಹುಕುಂ ಜಮೀನನ್ನು ಯಾರಿಗೂ ಕೊಡುತ್ತಿಲ್ಲ. 80 ಪರ್ಸೆಂಟ್ ಕಮಿ ಷನ್‌ನಿಂದಾಗಿ ಗುತ್ತಿಗೆದಾರರು ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ. ಅಬಕಾರಿ ಇಲಾಖೆಯಲ್ಲಿ 6,000 ಕೋಟಿ ರು. ಹಗರಣ ನಡೆದಿದ್ದು, ಈ ಹಣ ರಾಹುಲ್ ಗಾಂಧಿಯ ಬಳಿ ಇದೆಯೇ ಅಥವಾ ಸಿಎಂ ಸಿದ್ದರಾಮಯ್ಯನವರಿಗೆ ಸಂದಾಯವಾಗಿದೆಯೇ ಎಂಬುದು ಗೊತ್ತಿಲ್ಲ. ಅಥವಾ ಇದೇ ಹಣದಿಂದ ಸಮಾವೇಶ ಆಯೋಜಿಸಿರಬಹುದು ಎಂದರು. ರೈತರು ಹಾಗೂ ಅಧಿಕಾರಿಗಳ ಆತ್ಮಹತ್ಯೆ, ಸರಕಾರಿ ಆಸ್ಪತ್ರೆಗಳಲ್ಲಿ ಜೀವರಕ್ಷಕ ಔಷಧಿಗಳ ಕೊರತೆ, ಮೊದಲಾದ ಸಮಸ್ಯೆಗಳು ರಾಜ್ಯ ದಲ್ಲಿವೆ. ಆದರೂ ಸಾವಿರದ ದಿನಗಳ ಸಮಾವೇಶ ಮಾಡುತ್ತಿದ್ದಾರೆ. ಭ್ರಷ್ಟಾಚಾರದಿಂದಾಗಿ ಈಗಾಗಲೇ ಒಬ್ಬ ಸಚಿವರು ರಾಜೀನಾಮೆ ನೀಡಿದ್ದು, ಅಬಕಾರಿ ಸಚಿವರು ರಾಜೀನಾಮೆ ನೀಡಬೇಕಿದೆ. ಸಿಎಂ ಸಿದ್ದರಾಮಯ್ಯನವರೇ ಶಾಸಕರನ್ನು ಫಾರಿನ್ ಟೂರ್‌ಗೆ ಕಳುಹಿಸಲು ತಯಾರಿ ನಡೆ ಸಿದ್ದಾರೆ. ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಅವರ ಸೋದರ ಡಿ.ಕೆ.ಸುರೇಶ್ ರಾಜಕೀಯದ ಗನ್ ಹಿಡಿದು ಬೀದಿಗಿಳಿದಿದ್ದಾರೆ. ಯಾರು ಶೂಟ್ ಮಾಡುತ್ತಾರೆಂದು ನೋಡಬೇಕಿದೆ ಎಂದರು. ಶಾಸಕ ಬೈರತಿ ಬಸವರಾಜು ಬಂಧನ ಪ್ರಕರಣದ ಬಗ್ಗೆ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರ ಬಿಜೆಪಿ ಶಾಸಕರನ್ನು ಗುರಿ ಮಾಡುತ್ತಿದೆ. ಇದು ರಾಜಕೀಯ ಷಡ್ಯಂತ್ರ ಎಂದರು.

ಮುಡಾ ಹಗರಣದ ಮೂಲಕ ಸಿದ್ದರಾಮಯ್ಯ ಅವರು ಹಗರಣಗಳ ಮೂಲ ಪುರುಷ ಎನಿಸಿದ್ದಾರೆ. ಸಾವಿರ ದಿನಗಳು ಬರೀ ಲೂಟಿಯಿಂದ ಕೂಡಿದ್ದವು. ರಾಹುಲ್ ಗಾಂಧಿ ಅವರಿಗೆ ಲೂಟಿ ಹಣ ರವಾನೆಯಾಗುತ್ತಿದೆ. ಅಲಿಬಾಬಾ ಮತ್ತು 30 ಮಂದಿ ಕಳ್ಳರಿಂದ ಸಾಧನಾ ಸಮಾವೇಶ ನಡೆಯುತ್ತಿದೆ. ಭಿಕ್ಷಾ ಪಾತ್ರೆ ಹಿಡಿದಿರುವ ರಾಜ್ಯ ಸರಕಾರ ಜನರಿಗೆ ಟೋಪಿ ಹಾಕುತ್ತಿದೆ.

-ಆರ್.ಅಶೋಕ, ಪ್ರತಿಪಕ್ಷ ನಾಯಕ

www.pravasiprapancha.com

ಸಂಪಾದಕೀಯ

ಸಂಕಟದ ವೇಳೆಯೂ ಸುಂಕವೇ?

ಇದು ನಿಜಕ್ಕೂ ಮನಸ್ಸನ್ನು ವಿಹ್ವಲಗೊಳಿಸುವ ಸಂಗತಿ. ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದ ಮಹಿಳೆಯೊಬ್ಬರ ಶವವನ್ನು ಅವರ ಕುಟುಂಬಿಕರಿಗೆ ಪ್ಯಾಕ್ ಮಾಡಿಕೊಡಲು ಐವರು ಹೊರಗುತ್ತಿಗೆ ಸಿಬ್ಬಂದಿ ನಾಚಿಕೆ ಬಿಟ್ಟು ಹಣವಸೂಲಿ ಮಾಡಿದ್ದರು ಎಂಬ ಸುದ್ದಿ ಇದಕ್ಕೆ ಕಾರಣ. ಈ ಅಮಾನವೀಯ ಕೃತ್ಯದಿಂದ ರೋಸಿಹೋದ ಮೃತರ ಕುಟುಂಬಸ್ಥರು ಆಕ್ರೋಶವನ್ನು ಹೊರಹಾಕಿದ ಬಳಿಕ ಸದರಿ ನೌಕರರನ್ನು ಅಮಾನತು ಮಾಡಲಾಗಿದೆಯಂತೆ. ಪುರಂದರ ದಾಸರು ಬರೆದಿರುವ 'ಅಂತಕನ ದೂತರಿಗೆ ಕಿಂಚಿತ್ತೂ ಭಯವಿಲ್ಲ' ಎಂಬ ಕೀರ್ತನೆಯನ್ನು ನೀವು ಕೇಳಿರಬಹುದು. ಯಮದೂತರು ಮನುಷ್ಯ ಒಡ್ಡುವ ಹಣ ಮುಂತಾದ ಆಮಿಷಗಳಿಗೆ ಮಣಿಯದೆ, ಸಮಯ ಬರುತ್ತಿದ್ದಂತೆ ಯಾವುದೇ ದಯೆ-ದಾಕ್ಷಿಣ್ಯ ತೋರದೆ ಅವನ ಪ್ರಾಣವನ್ನು ಕರೆದೊಯ್ಯುತ್ತಾರೆ ಎಂಬ ಸೂಚ್ಯಾರ್ಥವನ್ನು ಹೊಂದಿರುವ ಮತ್ತು ಜೀವನದ ನಶ್ವರತೆಯನ್ನು ಸಾರುವ ಕೀರ್ತನೆಯಿದು. ಇಲ್ಲಿ ಕಾಣಬರುವುದು ಯಮದೂತರ ಕರ್ತವ್ಯಪ್ರಜ್ಞೆಯೇ ವಿನಾ, ಹಿಂಸಾವಿನೋದವಲ್ಲ. ಆದರೆ ಮೇಲೆ ಉಲ್ಲೇಖಿಸಿರುವ ಐವರು ಸಿಬ್ಬಂದಿಗಳು, ಅದಾಗಲೇ ಸಾವಿನ ಸಂಕಟದಲ್ಲಿರುವ ಕುಟುಂಬಿಕರಲ್ಲೂ ಹಣವನ್ನು ಹೀಗೆ ಕಿತ್ತಿದ್ದಕ್ಕೆ ಏನನ್ನುವುದು? ಇದು 'ಕಲ್ಲುಹೃದಯ' ಎಂಬ ರೂಪಕವನ್ನೂ ಮೀರಿಸುವ ಅಮಾನವೀಯತೆಗೆ ದ್ಯೋತಕ ಎಂದಷ್ಟೇ ಹೇಳಬಹುದು. ವ್ಯಕ್ತಿಯೊಬ್ಬರು ಅಸ್ವಸ್ಥಗೊಂಡು ಆಸ್ಪತ್ರೆಯ ಪಾಲಾದಾಗಲೇ ಅವರ ಕುಟುಂಬಿಕರ ಸಾಕಷ್ಟು ಮನೋಸ್ಥೈರ್ಯ ಕುಸಿದಿರುತ್ತದೆ; ಇನ್ನು ಸಾವು ಸಂಭವಿಸಿದರಂತೂ ಕೇಳುವುದೇ ಬೇಡ. ಇಂಥ ನೋವಿನ ಗಳಿಗೆಯಲ್ಲೇ ತಮ್ಮ ಬಯಕೆಯ ಬೇಳೆ ಬೇಯಿಸಿಕೊಳ್ಳಲು ಮುಂದಾಗುವ ಇಂಥ ಭ್ರಷ್ಟ ಮತ್ತು ನಿರ್ಲಜ್ಜ ಸಿಬ್ಬಂದಿಗಳಿಗೆ ಧಿಕ್ಕಾರವಿರಲಿ...

ಸೊಂಪಾದಕೀಯ

ಸ್ಟ್ಯಾಂಡರ್ಡ್ ಮರೆದ ಪಿಳ್ಳೈ

ಕಳ್ಳನಿಗೊಂದು ಪಿಳ್ಳೆ ನೆವ ಅನ್ನೋ ಮಾತನ್ನು ನಾವೆಲ್ಲಾ ಕೇಳಿರ್ತೀವಿ. ಆದರೆ ಮನೋಜ್ ಪಿಳ್ಳೈ ಎಂಬಾತ ಕಳ್ಳತನದಲ್ಲೂ ತನ್ನ ಸ್ಟ್ಯಾಂಡರ್ಡ್ ಮೆರೆದ ಕಥೆಯಿದು. ಅಂದರೆ ಈತ ನೇಪಾಳದಿಂದ ತನ್ನ ಸ್ನೇಹಿತ ಅಥವಾ ಸಹಚರನೊಂದಿಗೆ ಬೆಂಗಳೂರಿಗೆ ಫ್ಲೈಟಿನಲ್ಲಿ ಬಂದು ಇಲ್ಲಿ ಕಳ್ಳತನ ಮಾಡುತ್ತಿದ್ದನಂತೆ. ಫ್ಲೈಟ್‌ನಲ್ಲಿ ಬಂದ ಅಂದಾಕ್ಷಣ ಅದನ್ನು ಲೈಟ್ ಆಗಿ ತಗೊಂಡು ಇಂಥವರನ್ನು ಸಾಚಾ ಮನುಷ್ಯ ಅಂತ ತಪ್ಪು ತಿಳಿದುಕೊಳ್ಳುವ ಹಾಗಿಲ್ಲ ಅನ್ನೋ ಸಂದೇಶ ನೀಡಿದ ಆಸಾಮಿ ಈತ. ಮೊದಲು ಮುಂಬೈನಲ್ಲಿ ಪಕ್ಕಾ ಪ್ರೊಫೆಷನಲ್ ಕಳ್ಳ ಆಗಿದ್ದ ಈತ ಈ ಮೊದಲು ಕೂಡಾ ಬೆಂಗಳೂರಿನಲ್ಲಿ ಇದ್ದುಕೊಂಡೇ ಕಳ್ಳತನ ಮಾಡಿದ್ದನಂತೆ. ಆಗ ಬೆಂಗಳೂರಿನ ವಿದ್ಯಾರಣ್ಯಪುರದ ಪೊಲೀಸರು ಈತನನ್ನು ಮಾವನ ಮನೆಗೆ ಕಳಿಸಿದ್ದರಂತೆ. ಅಲ್ಲಿಂದ ಬಿಡುಗಡೆ ಆಗಿ ಈತ ತನ್ನ ಸ್ವಂತ ಮನೆಗೆ ತೆರಳಿದ್ದ. ಆದರೆ ವಿದ್ಯಾರಣ್ಯಪುರ ಪೊಲೀಸರು ಈತನನ್ನು ಜೈಲಿಗೆ ಹಾಕಿದರೂ ಈತ ಕಲಿತ ವಿದ್ಯೆಯನ್ನು ಮಾತ್ರ ಬಿಡಲಿಲ್ಲ. ಜತೆಗೆ ವಿದ್ಯೆ ಅಷ್ಟೇ ಅಲ್ಲ, ಒಳ್ಳೆಯ ಬುದ್ಧಿಯನ್ನೂ ಕಲಿಯಲಿಲ್ಲ. ನಂಗೆ ಗೊತ್ತಿರೋದು ಅದೊಂದೇ ವಿದ್ಯೆ ಅನ್ನೋ ಹಾಗೆ ಮತ್ತೆ ಕಳ್ಳತನದ ಫೀಲ್ಡಿಗೇ ಇಳಿದಿದ್ದ. ವಿಶೇಷ ಅಂದ್ರೆ ಈತ ಮುಂಬೈನಲ್ಲಿ ಮೊದಲು ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದನಂತೆ. ಪಾಪ ಕೆಲಸ ಮಾಡಿ ದುಡಿದು ತಿನ್ನೋದು ಇವನಿಗೆ ಆಗಿಬರಲಿಲ್ಲ ಅನ್ಸುತ್ತೆ. ಹಾಗಾಗಿ ಬೇರೆಯವರು ಕಳ್ಳತನ ಮಾಡಬಾರದು ಅಂತ ಎಚ್ಚರವಾಗಿದ್ದು ಕೆಲಸ ಮಾಡುವ ಸೆಕ್ಯುರಿಟಿ ಗಾರ್ಡ್ ಆಗಿದ್ದವನು ನಂತರ ತಾನೇ ಕಳ್ಳತನ ಮಾಡಲು ಇಳಿದ. ಹಾಗಂತ ಇದನ್ನು 'ಬೇಲಿಯೇ ಎದ್ದು ಹೊಲ ಮೇಯ್ದ ಹಾಗೆ' ಅನ್ನೋದು ಸರಿ ಅಲ್ಲ. ಬೇಲಿ ಎದ್ದು ಇನ್ನೊಬ್ಬರ ಹೊಲ ಮೇಯ್ದ ಹಾಗೆ ಅನ್ನಬಹುದು ಅಷ್ಟೇ. ಮಾಡೋಕೆ ಕೆಲಸ ಇದ್ದರೂ ದುಡಿದು ತಿನ್ನೋದು ಕಷ್ಟ ಗುರೂ ಅಂತ ಪಿಳ್ಳೆ ನೆವ ಹೇಳಿಕೊಂಡು ಈ ಪಿಳ್ಳೈ ಕಳ್ಳನಾದ. ಅಷ್ಟೇ ಅಲ್ಲದೆ ಮತ್ತೆ ಪೊಲೀಸರ ಅತಿಥಿಯಾದ..!!

ಸಂಪಾದಕರ ಸದ್ಯಶೋಧನೆ

ಗೋರಖಪುರದ ಗೀತಾ ಪ್ರೆಸ್

ಭಾರತೀಯ ಸಂಸ್ಕೃತಿ, ಆಧ್ಯಾತ್ಮಿಕತೆ ಮತ್ತು ಸನಾತನ ಧರ್ಮದ ಇತಿಹಾಸದಲ್ಲಿ ಗೋರಖಪುರದ ಗೀತಾ ಪ್ರೆಸ್‌ಗೆ ಅತ್ಯಂತ ಮಹತ್ವದ ಸ್ಥಾನವಿದೆ. ಇದು ಕೇವಲ ಒಂದು ಮುದ್ರಣಾಲಯ ಅಥವಾ ಪ್ರಕಾಶನ ಸಂಸ್ಥೆಯಲ್ಲ, ಇದು ಕಳೆದ ಒಂದು ಶತಮಾನದಿಂದ ಭಾರತೀಯ ಮೌಲ್ಯಗಳನ್ನು ಮನೆಮನೆಗೆ ತಲುಪಿಸುತ್ತಿರುವ ಒಂದು ಸಾಂಸ್ಕೃತಿಕ ಆಂದೋಲನವಾಗಿದೆ. ಶ್ರೀಮದ್ ಭಗವದ್ಗೀತೆ, ರಾಮಾಯಣ, ಉಪನಿಷತ್ತುಗಳು ಮತ್ತು ಪುರಾಣಗಳಂಥ ಪವಿತ್ರ ಗ್ರಂಥಗಳನ್ನು ಅತ್ಯಂತ ಕಡಿಮೆ ದರದಲ್ಲಿ ಜನಸಾಮಾನ್ಯರಿಗೆ ತಲುಪಿಸುವ ಮೂಲಕ ಗೀತಾ ಪ್ರೆಸ್ ಜಾಗತಿಕ ಮಟ್ಟದಲ್ಲಿ ಖ್ಯಾತಿ ಗಳಿಸಿದೆ. ಗೀತಾ ಪ್ರೆಸ್ ಅನ್ನು 1923ರಲ್ಲಿ ಸ್ಥಾಪಿಸಲಾಯಿತು. ಇದರ ಸ್ಥಾಪನೆಯ ಹಿಂದೆ ಒಂದು ಆಸಕ್ತಿದಾಯಕ ಕಥೆಯಿದೆ. ಮೂಲತಃ ರಾಜಸ್ಥಾನದವರಾದ ಮತ್ತು ಕೋಲ್ಕತ್ತಾದಲ್ಲಿ ವ್ಯಾಪಾರ ಮಾಡುತ್ತಿದ್ದ ಜಯದಯಾಲ್ ಗೋಯಂದಕಾ ಅವರು ಗೀತೆಯ ಪರಮ ಭಕ್ತರಾಗಿದ್ದರು. ಅವರು ಗೀತೆಯ ಸಾರವನ್ನು ಪ್ರಚಾರ ಮಾಡಲು ಸತ್ಸಂಗಗಳನ್ನು ನಡೆಸುತ್ತಿದ್ದರು. ಒಮ್ಮೆ ಅವರು ಮುದ್ರಿಸಿದ ಗೀತೆಯ ಪ್ರತಿಯಲ್ಲಿ ಅನೇಕ ತಪ್ಪುಗಳನ್ನು ಕಂಡು ಬೇಸರಗೊಂಡರು. ಪರಿಶುದ್ಧವಾದ ಮತ್ತು ದೋಷರಹಿತವಾದ ಧಾರ್ಮಿಕ ಗ್ರಂಥಗಳನ್ನು ಮುದ್ರಿಸಬೇಕೆಂಬ ಸಂಕಲ್ಪವನ್ನು ಅವರು ಮಾಡಿದರು. ಈ ಉದ್ದೇಶಕ್ಕಾಗಿ, ಉತ್ತರ ಪ್ರದೇಶದ ಗೋರಖಪುರದಲ್ಲಿ ಒಂದು ಸಣ್ಣ ಬಾಡಿಗೆ ಮನೆಯಲ್ಲಿ ಕೇವಲ ಹತ್ತು ರುಪಾಯಿ ಬಾಡಿಗೆಯೊಂದಿಗೆ ಗೀತಾ ಪ್ರೆಸ್ ಅನ್ನು ಪ್ರಾರಂಭಿಸಲಾಯಿತು. ಅಂದಿನಿಂದ ಇಂದಿನವರೆಗೆ, ಈ ಸಂಸ್ಥೆಯು ಕೋಟ್ಯಂತರ ಪುಸ್ತಕಗಳನ್ನು ಮುದ್ರಿಸಿ ವಿತರಿಸಿದೆ. ಗೀತಾ ಪ್ರೆಸ್‌ನ ಯಶಸ್ಸಿನ ಹಿಂದೆ ಇಬ್ಬರು ಮಹಾನ್ ದಾರ್ಶನಿಕರ ತ್ಯಾಗ ಮತ್ತು ಪರಿಶ್ರಮವಿದೆ. ಒಬ್ಬರು ಸೇಠ್ ಜಯದಯಾಲ್ ಗೋಯಂದಕಾ. ಇವರು ಸಂಸ್ಥೆಯ ಸಂಸ್ಥಾಪಕರು. ಇವರ ದೂರದೃಷ್ಟಿಯಿಂದಾಗಿ ಇಂದು ಪ್ರತಿಯೊಬ್ಬ ಹಿಂದೂವಿನ ಮನೆಯಲ್ಲಿಯೂ ಗೀತಾ ಪ್ರೆಸ್‌ನ ಪುಸ್ತಕಗಳು ಕಂಡುಬರುತ್ತಿವೆ. ಇನ್ನೊಬ್ಬರು ಹನುಮಾನ್ ಪ್ರಸಾದ್ ಪೋದ್ದಾರ್. ಇವರು ಗೀತಾ ಪ್ರೆಸ್‌ನ ಪ್ರಸಿದ್ಧ ಮಾಸಪತ್ರಿಕೆಯಾದ 'ಕಲ್ಯಾಣ್'ನ ಸ್ಥಾಪಕ ಸಂಪಾದಕರಾಗಿದ್ದರು. ತಮ್ಮ ಜೀವಿತಾವಧಿಯನ್ನು ಧಾರ್ಮಿಕ ಸಾಹಿತ್ಯದ ಸೇವೆಗಾಗಿ ಮುಡಿಪಾಗಿಟ್ಟ ಇವರು, ಗೀತಾ ಪ್ರೆಸ್ ಅನ್ನು ವಿಶ್ವವಿಖ್ಯಾತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಗೀತಾ ಪ್ರೆಸ್ ಲಾಭೋದ್ದೇಶವಿಲ್ಲದ ಒಂದು ಸಂಸ್ಥೆಯಾಗಿದೆ. ಇದರ ಮುಖ್ಯ ಉದ್ದೇಶ- ಸನಾತನ ಧರ್ಮದ ಪ್ರಚಾರ. ಧಾರ್ಮಿಕ ಗ್ರಂಥಗಳನ್ನು ಜನಸಾಮಾನ್ಯರಿಗೆ ತಲುಪಿಸುವುದು. ಅತ್ಯಂತ ಉತ್ತಮ ಗುಣಮಟ್ಟದ ಕಾಗದ ಮತ್ತು ಬೈಂಡಿಂಗ್ ಬಳಸಿದರೂ, ಪುಸ್ತಕಗಳ ಬೆಲೆ ಮಾರುಕಟ್ಟೆ ದರಕ್ಕಿಂತ ಬಹಳ ಕಡಿಮೆಯಿರುತ್ತದೆ. ಬಡವರಿಗೂ ಧಾರ್ಮಿಕ ಜ್ಞಾನ ಸಿಗಬೇಕು ಎಂಬುದು ಮತ್ತು ಗ್ರಂಥಗಳಲ್ಲಿ ಯಾವುದೇ ಮುದ್ರಣ ದೋಷಗಳಿಲ್ಲದಂತೆ ನೋಡಿಕೊಳ್ಳುವುದು, ಮೂಲ ಸಂಸ್ಕೃತ ಶ್ಲೋಕಗಳೊಂದಿಗೆ ನಿಖರವಾದ ಅನುವಾದವನ್ನು ನೀಡುವುದು ಇದರ ಆಶಯ. ಗೀತಾ ಪ್ರೆಸ್‌ನ ಅತ್ಯಂತ ಜನಪ್ರಿಯ ಪ್ರಕಟಣೆಯೆಂದರೆ 'ಕಲ್ಯಾಣ್' ಮಾಸಪತ್ರಿಕೆ. 1927ರಲ್ಲಿ ಪ್ರಾರಂಭವಾದ ಈ ಹಿಂದಿ ಪತ್ರಿಕೆಯು ಇಂದಿಗೂ ಲಕ್ಷಾಂತರ ಚಂದಾದಾರರನ್ನು ಹೊಂದಿದೆ. ಇದರಲ್ಲಿ ಬರುವ ಲೇಖನಗಳು ಭಕ್ತಿ, ಜ್ಞಾನ, ವೈರಾಗ್ಯ ಮತ್ತು ಧರ್ಮದ ವಿಷಯಗಳನ್ನು ಒಳಗೊಂಡಿರುತ್ತವೆ. ಮಹಾತ್ಮ ಗಾಂಧಿ, ಡಾ. ರಾಜೇಂದ್ರ ಪ್ರಸಾದ್ ಅವರಂಥ ಗಣ್ಯರು ಕೂಡ ಈ ಪತ್ರಿಕೆಗೆ ಲೇಖನಗಳನ್ನು ಬರೆದಿದ್ದಾರೆ. ಇಂಗ್ಲಿಷ್ ಓದುಗರಿಗಾಗಿ 'ಕಲ್ಯಾಣ್ -ಕಲ್ಪತರು' ಎಂಬ ಪತ್ರಿಕೆಯನ್ನು ಸಹ ಪ್ರಕಟಿಸಲಾಗುತ್ತದೆ. ಗೀತಾ ಪ್ರೆಸ್ ಇತರ ಪ್ರಕಾಶನ ಸಂಸ್ಥೆಗಳಿಗಿಂತ ಏಕೆ ಭಿನ್ನವಾಗಿದೆ ಎಂಬುದಕ್ಕೆ ಕೆಲವು ಕಾರಣಗಳಿವೆ. ಕಳೆದ ನೂರು ವರ್ಷಗಳಲ್ಲಿ, ಗೀತಾ ಪ್ರೆಸ್ ತನ್ನ ಪುಸ್ತಕಗಳಲ್ಲಿ ಅಥವಾ 'ಕಲ್ಯಾಣ್' ಪತ್ರಿಕೆಯಲ್ಲಿ ಯಾವುದೇ ಹೊರಗಿನ ಜಾಹೀರಾತನ್ನು ಪ್ರಕಟಿಸಿಲ್ಲ. ಆದಾಯಕ್ಕಾಗಿ ಜಾಹೀರಾತನ್ನು ಅವಲಂಬಿಸದಿರುವುದು ಇಂದಿನ ವಾಣಿಜ್ಯ ಯುಗದಲ್ಲಿ ಒಂದು ವಿಸ್ಮಯವೇ ಸರಿ. ಸಂಸ್ಥೆಯು ತನ್ನ ನಿರ್ವಹಣಾ ವೆಚ್ಚಕ್ಕಾಗಿ ಸಾರ್ವಜನಿಕರಿಂದ ದೇಣಿಗೆಯನ್ನು ಯಾಚಿಸುವುದಿಲ್ಲ. ಪುಸ್ತಕಗಳ ಮಾರಾಟದಿಂದ ಬರುವ ಅಲ್ಪ ಆದಾಯ ಮತ್ತು ಟ್ರಸ್ಟಿಗಳ ನೆರವಿನಿಂದಲೇ ಇದು ನಡೆಯುತ್ತದೆ. ಇಲ್ಲಿ ಪುಸ್ತಕಗಳು ಕೇವಲ ಹಿಂದಿ ಅಥವಾ ಸಂಸ್ಕೃತದಲ್ಲಿ ಮಾತ್ರವಲ್ಲದೆ, ಕನ್ನಡ, ತಮಿಳು, ತೆಲುಗು, ಮರಾಠಿ, ಗುಜರಾತಿ, ಒಡಿಯಾ, ಬಂಗಾಳಿ, ಇಂಗ್ಲಿಷ್ ಸೇರಿದಂತೆ ನೇಪಾಳಿ ಭಾಷೆಯಲ್ಲಿಯೂ ಲಭ್ಯವಿವೆ. ಇಲ್ಲಿನ ವಾತಾವರಣವು ದೇವಸ್ಥಾನದಷ್ಟೇ ಪವಿತ್ರವಾಗಿದೆ. ಪ್ರತಿದಿನ ಕೆಲಸ ಪ್ರಾರಂಭಿಸುವ ಮೊದಲು ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ.

ಜಿನ್ನಾ ಓಲೈಕೆ, ವಂದೇ ಮಾತರಂಗೆ ಕತ್ತರಿ

ಮೋಹನ್ ವಿಶ್ವ
ವೀಕೆಂಡ್ ವಿತ್ ಮೋಹನ್
vveditoped@gmail.com

ಇತಿಹಾಸದಲ್ಲಿ ಪಶ್ಚಿಮ ಬಂಗಾಳವೆಂದರೆ ನೆನಪಾಗುವುದು ಯುಗಪುರುಷರು ಮತ್ತು ಸ್ವಾತಂತ್ರ್ಯ ಹೋರಾಟಗಾರರು. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಸುಭಾಷ್‌ಚಂದ್ರ ಬೋಸ್, ಸೋದರಿ ನಿವೇದಿತ, ಜಗದೀಶ್‌ಚಂದ್ರ ಬೋಸ್, ರವೀಂದ್ರ ನಾಥ ಟ್ಯಾಗೋರ್, ಬಂಕಿಮಚಂದ್ರ ಚಟರ್ಜಿ ಹೀಗೆ ಪಟ್ಟಿ ದೊಡ್ಡದಾಗಿ ಬೆಳೆಯುತ್ತದೆ. ಬ್ರಿಟಿಷರ ವಿರುದ್ಧ ಹೋರಾಡಲು ಜಾತಿ ಮತ್ತು ಧರ್ಮಗಳನ್ನೂ ಮೀರಿ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಬಂಗಾಳದ ಬಂಕಿಮಚಂದ್ರ ಚಟರ್ಜಿ ರಚಿಸಿದ ದೇಶಭಕ್ತಿ ಗೀತೆ 'ವಂದೇ ಮಾತರಂ'. 1875ರಲ್ಲಿ ಮೊದಲ ಬಾರಿಗೆ ಈ ಗೀತೆಯನ್ನು ಪ್ರಕಟಿಸಲಾಯಿತು. ಇದು ಕಾಂಗ್ರೆಸ್ಸಿನ ಸದಸ್ಯರು ಕೂಡ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದ ದೇಶಭಕ್ತಿ ಗೀತೆಯಾಗಿತ್ತು. 1896ರಲ್ಲಿ ಮೊದಲ ಬಾರಿಗೆ ರವೀಂದ್ರನಾಥ ಟ್ಯಾಗೋರರು ಕೋಲ್ಕತ್ತಾ ಕಾಂಗ್ರೆಸ್ಸಿನ ಸಮಾವೇಶದಲ್ಲಿ ವಂದೇ ಮಾತರಂ ಗೀತೆಯನ್ನು ಹಾಡಿದ್ದರು. ನಂತರ 1901ರಲ್ಲಿ ಕೋಲ್ಕತ್ತಾದಲ್ಲಿ ನಡೆದ ಮತ್ತೊಂದು ಕಾಂಗ್ರೆಸ್ ಸಮಾವೇಶದಲ್ಲಿ ದಕಿನ ಚರನ್ ಸೇನ್ ಈ ಗೀತೆಯನ್ನು ಹಾಡಿದ್ದರು. ನಂತರ 1905ರಲ್ಲಿ ಕವಯಿತ್ರಿ ಸರಳಾದೇವಿ ಚೌಧುರಾಣಿ ಅವರು, ಬನಾರಸ್‌ನಲ್ಲಿ ನಡೆದ ಕಾಂಗ್ರೆಸ್ಸಿನ ಸಮಾವೇಶದಲ್ಲಿ ಮತ್ತು ಹೀರಾಲಾಲ್ ಸೇನ್ 1905ರಲ್ಲಿ ರಾಜಕೀಯ ಕಥೆಯುಳ್ಳ ಚಲನಚಿತ್ರ ನಿರ್ದೇಶಿಸಿ ಸಿನಿಮಾದ ಕೊನೆಯಲ್ಲಿ ವಂದೇ ಮಾತರಂ ಗೀತೆಯನ್ನು ಹಾಡಿದ್ದರು. ಲಾಲಾ ಲಜಪತ್ ರಾಯ್ ಅವರು 'ವಂದೇ ಮಾತರಂ' ಎಂಬ ಹೆಸರಿನ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಬ್ರಿಟಿಷರ ಗುಂಡಿಗೆ ಬಲಿಯಾದ 'ಮಾತಂಗಿನಿ ಹಜ್ರಾ' ಹೇಳಿದ ಕೊನೆಯ ಮಾತು 'ವಂದೇ ಮಾತರಂ'.

ದೇಶಭಕ್ತಿಯ ಪ್ರತೀಕವಾಗಿದ್ದ 'ವಂದೇ ಮಾತರಂ' ಗೀತೆಯನ್ನು 62 ವರ್ಷಗಳ ನಂತರ ಮೊದಲ ಬಾರಿಗೆ 1937ರಲ್ಲಿ ವಿರೋಧಿಸಿದ್ದು ಮೊಹಮ್ಮದ್ ಅಲಿ ಜಿನ್ನಾ ಮತ್ತು ಮುಸ್ಲಿಂ ಲೀಗ್. ಗೀತೆಯ ನಾಲ್ಕು ಮತ್ತು ಐದನೇ ಚರಣದಲ್ಲಿ ದುರ್ಗಾ ಮಾತೆಯ ಉಲ್ಲೇಖವಿದ್ದು ಮುಸಲ್ಮಾನರು ಅದನ್ನು ಒಪ್ಪುವುದಿಲ್ಲವೆಂದು ತಕರಾರು ತೆಗೆದಿದ್ದರು. ಅಂದು ಜಿನ್ನಾ ಮತ್ತು ಮುಸಲ್ಮಾನರನ್ನು ಓಲೈಸಲು ನೆಹರು ಮತ್ತು ಕಾಂಗ್ರೆಸ್ ಪಕ್ಷ ವಂದೇ ಮಾತರಂ ಗೀತೆಯ ಮೊದಲ ಎರಡು ಚರಣಗಳನ್ನು ಮಾತ್ರ ಹಾಡಬೇಕೆಂದು ಹೇಳಿತ್ತು. ಈ ಗೀತೆ ರಚನೆಯಾದ ಮೊದಲ ದಿನದಿಂದಲೂ ವಿರೋಧಿಸುತ್ತಿದ್ದೇವೆಂದು ಕೆಲವು ಮುಸ್ಲಿಂ ನಾಯಕರು ಸುಳ್ಳು ಹೇಳುತ್ತಾರೆ. ಆದರೆ 20ನೇ ಮೇ, 1906ರಲ್ಲಿ, ವಂದೇ ಮಾತರಂ ರಚನೆಯಾದ 31 ವರ್ಷಗಳ ನಂತರ 'ಬರಿಸಾಯಿ' (ಈಗ ಬಾಂಗ್ಲಾದೇಶದಲ್ಲಿದೆ) ನಲ್ಲಿ ಸುಮಾರು 10,000ಕ್ಕೂ ಹೆಚ್ಚಿನ ಹಿಂದೂ ಮತ್ತು ಮುಸ್ಲಿಮರು, ಬ್ರಿಟಿಷರ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿ ವಂದೇ ಮಾತರಂ ಬಾವುಟ ಪ್ರದರ್ಶಿಸಿದ್ದರು. ಜಾತಿ ಮತ್ತು ಧರ್ಮವನ್ನೂ ಮೀರಿ ವಂದೇ ಮಾತರಂ ಗೀತೆಗೆ ಗೌರವ ಸೂಚಿಸಿದ್ದರು. ಮೊಹಮ್ಮದ್ ಅಲಿ ಜಿನ್ನಾ ವಿರೋಧಿಸಿದ್ದ ವಂದೇ ಮಾತರಂ ಗೀತೆಯ ಚರಣಗಳನ್ನು ಕಾಂಗ್ರೆಸ್ ಮತ್ತು ಭಾರತದ ಮುಸಲ್ಮಾನರು ವಿರೋಧಿಸುತ್ತಿದ್ದಾರೆ. ಮೂರ್ತಿಪೂಜೆಯನ್ನು ವಿರೋಧಿಸುತ್ತೇವೆಂಬ ಸಬೂಬು ಹೇಳಿ ವಂದೇ ಮಾತರಂ ಗೀತೆ ವಿರೋಧಿಸುವವರು, ಮತಾಂಧ ಟಿಪ್ಪು ಸುಲ್ತಾನನನ್ನು ಮಾತ್ರ ಆರಾಧಿಸಿ ಟಿಪ್ಪು ಜಯಂತಿ ಆಚರಿಸುತ್ತಾರೆ.

ಅಖಂಡ ಭಾರತ ವಿಭಜನೆಯಾದದ್ದು ಧರ್ಮದ ಆಧಾರದ ಮೇಲೆ ಎಂಬ ಸಾಮಾನ್ಯ ಜ್ಞಾನವಿಲ್ಲದವರು ಜಾತ್ಯತೀತತೆಯ ಬಗ್ಗೆ ಮಾತನಾಡುತ್ತಾರೆ. ಕೇಂದ್ರ ಗೃಹ ಸಚಿವಾಲಯ ಜಾರಿಗೆ ತಂದಿರುವ ಸೂಚನೆಯ ಪ್ರಕಾರ ವಂದೇ ಮಾತರಂ ಗೀತೆಯ ಆರು ಚರಣಗಳನ್ನೂ ಹಾಡಬೇಕು. 2017ರಲ್ಲಿ ತಮಿಳುನಾಡು ಉಚ್ಚ ನ್ಯಾಯಾಲಯ ನೀಡಿದ ಆದೇಶದಲ್ಲಿ ವಂದೇ ಮಾತರಂ ಗೀತೆಯನ್ನು ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಕನಿಷ್ಠ ವಾರಕ್ಕೊಮ್ಮೆಯಾದರೂ ಹಾಡಬೇಕೆಂದು ಹೇಳಿತ್ತು. ಸರಕಾರಿ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ ಕನಿಷ್ಠ ತಿಂಗಳಿಗೊಮ್ಮೆಯಾದರೂ ಈ ಗೀತೆಯನ್ನು ಹಾಡಬೇಕೆಂದು ಅದು ಹೇಳಿತ್ತು. 2022ರಲ್ಲಿ ಸರಕಾರವು, 'ಜನಗಣ ಮನ' ಮತ್ತು 'ವಂದೇ ಮಾತರಂ' ಎರಡಕ್ಕೂ ಸಮಾನವಾದ ಗೌರವ ನೀಡಬೇಕೆಂದು ದೆಹಲಿ ಉಚ್ಚ ನ್ಯಾಯಾಲಯದಲ್ಲಿ ಅಫಿಡವಿಟ್ ಸಲ್ಲಿಸಿತ್ತು.

24ನೇ ಜನವರಿ 1950ರಲ್ಲಿ ಸಂವಿಧಾನ ರಚನಾ ಸಮಿತಿಯು 'ವಂದೇ ಮಾತರಂ' ಗೀತೆಯನ್ನು ಭಾರತದ ರಾಷ್ಟ್ರೀಯ ಹಾಡನ್ನಾಗಿ ಪರಿಗಣಿಸಿತ್ತು. ಅಂದಿನ ರಾಷ್ಟ್ರಪತಿಗಳಾಗಿದ್ದ ರಾಜೇಂದ್ರ ಪ್ರಸಾದರು 'ವಂದೇ ಮಾತರಂ' ಮತ್ತು 'ಜನ ಗಣ ಮನ' ಎರಡನ್ನೂ ಸಮಾನವಾಗಿ ಗೌರವಿಸಬೇಕೆಂದು ಹೇಳಿದ್ದರು. 1875ರಿಂದ 1937ರವರೆಗೂ ಇಲ್ಲದ ಆಕ್ಷೇಪ, 62 ವರ್ಷಗಳ ನಂತರ ಜಿನ್ನಾ ಮೂಲಕ ಬಂದಿತ್ತು. ಅವರ ಆಕ್ಷೇಪಕ್ಕೆ ಮಣಿದು ಗೀತೆಯನ್ನು ಕೇವಲ ಎರಡು ಚರಣಕ್ಕೆ ಇಳಿಸಿದ್ದು ನೆಹರು



ಮತ್ತು ಕಾಂಗ್ರೆಸ್. 1907ರಲ್ಲಿ 'ಮೇಡಂ ಕಾಮಾ' ಅವರು ವಿನ್ಯಾಸಗೊಳಿಸಿದ್ದ ಭಾರತದ ಧ್ವಜದ ಮಧ್ಯದಲ್ಲಿ 'ವಂದೇ ಮಾತರಂ' ಎಂದು ಬರೆಯಲಾಗಿತ್ತು. ಇದು ಕೇವಲ ಗೀತೆಯಾಗಿರಲಿಲ್ಲ, ಸ್ವಾತಂತ್ರ್ಯ ಹೋರಾಟಗಾರರ ಕೆಚ್ಚಿನ ಕಹಳೆಯಾಗಿತ್ತು. ಸಂವಿಧಾನದ ಮೂಲಪೀಠಿಕೆಯಲ್ಲಿ ಜಾತ್ಯತೀತತೆ ಪದವಿರಲಿಲ್ಲ, ಇಂದಿರಾಗಾಂಧಿ ಅವರು ತುರ್ತು ಪರಿಸ್ಥಿತಿ ಹೇರಿದ ನಂತರ ಸಂವಿಧಾನದ ಮೂಲಪೀಠಿಕೆಯನ್ನು ತಿದ್ದುಪಡಿ ಮಾಡಿ 'ಜಾತ್ಯತೀತ' ಪದವನ್ನು ಸೇರಿಸಿದ್ದರು. ತಿದ್ದುಪಡಿಯ ನಂತರ ಮುಸ್ಲಿಂ ಧರ್ಮದ ಓಲೈಕೆಯನ್ನು ಸಮರ್ಥಿಸಲು 'ಜಾತ್ಯತೀತತೆ' ಹೆಸರಿನಲ್ಲಿ ಸತತವಾಗಿ ರಾಜಕೀಯ ನಡೆಯುತ್ತಿದೆ. ಇಸ್ಲಾಂ ಧರ್ಮದ ಆಚರಣೆಗಳ ಪರವಾಗಿ ವಾದಿಸಲು ಸಂವಿಧಾನದ ಜಾತ್ಯಾತೀತತೆ ಪದವನ್ನು ಮುನ್ನೆಲೆಗೆ ತರುವ ಮುಸಲ್ಮಾನರಿಗೆ, ವಂದೇ ಮಾತರಂ ಹಾಡಿನ ಚರಣದಲ್ಲಿ ಮಾತ್ರ ಜಾತ್ಯತೀತತೆ ನೆನಪಾಗುವುದಿಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಧರ್ಮಗಳನ್ನೂ ಮೀರಿ ಬ್ರಿಟಿಷರ ವಿರುದ್ಧದ ಹೋರಾಟದ ಕಹಳೆಯಾಗಿ ರಚನೆಯಾದ ವಂದೇ ಮಾತರಂ ಗೀತೆಯಲ್ಲಿ ಧರ್ಮವನ್ನು ಹುಡುಕಿ, ನೈಜ ಜಾತ್ಯತೀತತೆಯ ಆಶಯಗಳನ್ನು ಗಾಳಿಗೆ ತೂರುತ್ತಿದ್ದಾರೆ. 'ರಘುಪತಿ ರಾಘವ ರಾಜಾರಾಮ್, ಪತಿತ ಪಾವನ ಸೀತಾರಾಮ್, ಈಶ್ವರ್ ಅಲ್ಲಾ ತೇರೋ ನಾಮ್' ಗೀತೆಯ ಬಗ್ಗೆ ಮುಸಲ್ಮಾನರಿಗೆ ತಕರಾರಿಲ್ಲ; ಆದರೆ ವಂದೇ ಮಾತರಂ ಗೀತೆಯಲ್ಲಿ ದುರ್ಗಾ (ಹೆಣ್ಣು ದೇವರು) ದೇವಿಯ ಹೆಸರಿನ ಬಗ್ಗೆ ತಕರಾರು. ಇಸ್ಲಾಂ ಧರ್ಮದಲ್ಲಿ ಹೆಣ್ಣಿಗೆ ಹೆಚ್ಚಿನ ಸ್ವಾತಂತ್ರ್ಯವಿಲ್ಲದ ವಿಷಯ ಅವರ ಆಚರಣೆಗಳಾದ ಬುರ್ಖಾ, ಹಿಜಾಬ್, ತ್ರಿವಳಿ ತಲಾಕ್‌ಗಳಿಂದ ಈಗಾಗಲೇ ಜಗಜ್ಜಾಹೀರಾಗಿದೆ.

'ವಂದೇ ಮಾತರಂ' ಎಂದಿಗೂ ಒಂದು ಧರ್ಮಕ್ಕೆ ಸೀಮಿತವಾದ ಗೀತೆ ಆಗಿರಲಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಬಂಗಾಳದ ಬಂಕಿಮಚಂದ್ರ ಚಟರ್ಜಿ ಅವರು ದೇಶಭಕ್ತರನ್ನು ಒಗ್ಗೂಡಿಸುವ ಸಲುವಾಗಿ ಇದನ್ನು ರಚಿಸಿದ್ದರು. ಹತ್ತು ಕೈಗಳಿರುವ ದುರ್ಗೆಯು ಸ್ವಾತಂತ್ರ್ಯ ಹೋರಾಟಗಾರರ ರಕ್ಷಣೆಗಾಗಿ ನಿಂತಿರುವಳೆಂಬ ಸಾಲುಗಳು ಎಂಥವರಿಗೂ ಸ್ವಾತಂತ್ರ್ಯದ ಕಿಚ್ಚು ಹಬ್ಬಿಸುವಂತಿದೆ. ಕಾಂಗ್ರೆಸ್ಸಿನ ಮತಬ್ಯಾಂಕ್ ರಾಜಕಾರಣದ ಪರಮಾವಧಿಗಳಲ್ಲಿ ವಂದೇ ಮಾತರಂ ಗೀತೆಯ ಚರಣಗಳನ್ನು ತುಂಡರಿಸಿದ್ದು ಮೊಟ್ಟಮೊದಲ ಸ್ಥಾನದಲ್ಲಿ ನಿಲ್ಲುತ್ತದೆ. ತಮ್ಮ ಪಕ್ಷ ಮಾತ್ರವೇ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದೆಂದು ಬೊಬ್ಬೆ ಹೊಡೆಯುವ ಕಾಂಗ್ರೆಸ್ಸಿಗರಿಗೆ, ವಂದೇ ಮಾತರಂ ದೇಶಭಕ್ತ ಗೀತೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗಲಿಲ್ಲ. ಭೂತದ ಬಾಯಲ್ಲಿ ಭಗವದ್ಗೀತೆ ಎಂಬಂತೆ ಜಿನ್ನಾನ ಮಾತು ಕೇಳಿ ಮುಸಲ್ಮಾನರನ್ನು ಓಲೈಸಲು ಕಾಂಗ್ರೆಸ್ಸಿಗರು ವಂದೇ ಮಾತರಂ ಗೀತೆಗೆ ಕತ್ತರಿ ಹಾಕಿದ್ದರು. ಮಹಾತ್ಮ ಗಾಂಧಿಯವರ ಹೆಸರನ್ನು ಹೈಜಾಕ್ ಮಾಡಿ, ರಾಜಕೀಯ ಮಾಡಿ ಅಧಿಕಾರದ ಗದ್ದುಗೆ ಹಿಡಿದ ನಂತರ, ಅವರ ಆದರ್ಶಗಳನ್ನು ಒಮ್ಮೆಯೂ ಪಾಲಿಸಲಿಲ್ಲ.ಬಾಯಲ್ಲಿ ಮತ್ತು ಹೆಸರಲ್ಲಿ ಮಾತ್ರ ಗಾಂಧಿ, ಆದರೆ ನಡೆಯಲ್ಲಿ ಗಾಂಧಿ ಆದರ್ಶಗಳ ವಿರುದ್ಧ ಮತ್ತು ಓಲೈಕೆಯ ಪರಮಾವಧಿ.

ಭಗತ್‌ಸಿಂಗ್, ರಾಜಗುರು, ಸುಖ್ ದೇವ್, ಚಾಪೇಕರ್ ಸಹೋದರರು, ಅಶ್ಫಕುಲ್ಲಾ, ಖುದಿರಾಮ್ ಬೋಸ್, ಮದನ್‌ಲಾಲ್ ಧಿಂಗ್ರಾ ಹತ್ತೊಂಬತ್ತನೆಯ ವಯಸ್ಸಿನಲ್ಲಿ ನೇಣಿನ ಕುಣಿಕೆಗೆ ತಮ್ಮ ಕೊರಳನ್ನು ಒಡ್ಡಿದಾಗ ಹೇಳಿದ್ದ ಮಾತು 'ವಂದೇ ಮಾತರಂ'. ಸ್ವಾತಂತ್ರ್ಯ ಹೋರಾಟವನ್ನು ಕೇವಲ ಒಂದು ಕುಟುಂಬ ಹೈಜಾಕ್ ಮಾಡಿ ಲಕ್ಷಾಂತರ ಯುವಕರ ಹೋರಾಟವನ್ನು ಇತಿಹಾಸದ ಪುಟಗಳಿಂದ ಅಳಿಸಿ ಹಾಕಿದ್ದು ಮಾತ್ರ ವಿಪರ್ಯಾಸ. ಬ್ರಿಟಿಷರ ವಿರುದ್ಧ ಯುವಕರು ಮುಗಿಬೀಳುತ್ತಿದ್ದ ಸಂದರ್ಭದಲ್ಲಿ ಪ್ರತಿಯೊಬ್ಬರ ನಾಲಗೆಯ ಮೇಲೆ ವಂದೇ ಮಾತರಂ ಘೋಷಣೆಗಳು ಸರಾಗವಾಗಿ ಕೇಳಿಬರುತ್ತಿದ್ದವು. ವಂದೇ ಮಾತರಂ ಕಿವಿಯಲ್ಲಿ ಗುನುಗುವ ಸಾಮಾನ್ಯ ಗೀತೆಯಾಗಿರಲಿಲ್ಲ, ದಶಕಗಳ ಕಾಲ ಸ್ವಾತಂತ್ರ್ಯ ಹೋರಾಟದ ಕಹಳೆಯಾಗಿತ್ತು. ಸ್ವಾತಂತ್ರ್ಯ ಸಿಗುವ ಸಮಯ ಹತ್ತಿರವಾಗುತ್ತಿದ್ದಂತೆ ಅಖಂಡ ಭಾರತ ವಿಭಜನೆಯ ಕೂಗು ಜಿನ್ನಾರ ಬಾಯಿಯಿಂದ ಕೇಳಿಬಂದಾಗ, ಆರು ದಶಕಗಳ ಕಾಲದ ಹೋರಾಟದ ಕಹಳೆಯಂತಿದ್ದ ವಂದೇ ಮಾತರಂ ಗೀತೆಯಲ್ಲಿ ಧರ್ಮವನ್ನು ಕಂಡವರ ತಾಳಕ್ಕೆ ಕುಣಿದದ್ದು ನೆಹರು. ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷರ ಲಾಠಿ ಏಟು ತಿನ್ನುವಾಗ ಲಕ್ಷಾಂತರ ಹೆಣ್ಣುಮಕ್ಕಳ ಬಾಯಲ್ಲಿ ಕೇಳಿಬಂದ ಗೀತೆ ವಂದೇ ಮಾತರಂ; ಬ್ರಿಟಿಷರ ಗುಂಡಿಗೆ ಬಲಿಯಾದ ಸಾವಿರಾರು ಯುವಕ-ಯುವತಿಯರ ಕೊನೆಯ ಮಾತಾಗಿತ್ತು ವಂದೇ ಮಾತರಂ. ಮಾತೃ ಸ್ವರೂಪಿಣಿಯಾದ ಭಾರತಮಾತೆಯ ನೆನೆದು ವಂದೇ ಮಾತರಂ ಘೋಷಣೆಯ ಮೂಲಕ ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಧುಮುಕುತ್ತಿದ್ದರು ಅಂದಿನ ದೇಶಭಕ್ತರು. ವಂದೇ ಮಾತರಂ ಗೀತೆಯು ದೇಶದ ಕಟ್ಟ ಕಡೆಯ ಹಳ್ಳಿಗಳನ್ನೂ ತಲುಪಿತ್ತು. ಅಂದಿನ ಕಾಲದಲ್ಲಿ ಇಂಟರ್‌ನೆಟ್, ಟಿ.ವಿ. ಮುಂತಾದವು ಇರಲಿಲ್ಲ, ಸರಿಯಾದ ಸಮಯದಲ್ಲಿ ದಿನಪತ್ರಿಕೆ ಸಿಗುತ್ತಿರಲಿಲ್ಲ, ಆದರೂ ವಂದೇ ಮಾತರಂ ಗೀತೆ ದೇಶವ್ಯಾಪಿ ಹರಡಿತ್ತು. ಇಂಥ ಗೀತೆಯಲ್ಲಿ ಧರ್ಮವನ್ನು ಕಂಡು 150 ವರ್ಷಗಳ ನಂತರವೂ ವಿರೋಧಿಸುವವರಿಗೆ ಸ್ವಾತಂತ್ರ್ಯ ಹೋರಾಟದ ಮಹತ್ವ ತಿಳಿದಿಲ್ಲ, ಲಕ್ಷಾಂತರ ಯುವಕ-ಯುವತಿಯರ ಬಲಿದಾನದ ಅರಿವಿಲ್ಲ, ಬ್ರಿಟಿಷರ ಕೈಗೆ ಸಿಕ್ಕು ಜೈಲುಗಳಲ್ಲಿ ಚಿತ್ರಹಿಂಸೆ ಅನುಭವಿಸಿದವರ ನೋವಿನ ಊಹೆಯೂ ಇಲ್ಲ. ಜಿನ್ನಾರನ್ನು ಓಲೈಸಲು ಅಂದು ನೆಹರು ಮಾಡಿದ ಪ್ರಮಾದದ ಫಲವಾಗಿ ಇಂದಿಗೂ ಭಾರತದ ಮುಸಲ್ಮಾನರು ವಂದೇ ಮಾತರಂ ಗೀತೆಯ ಸಾಲುಗಳಲ್ಲಿ ಧರ್ಮವನ್ನು ಕಂಡು ವಿರೋಧಿಸುತ್ತಾರೆ. ಜಾತಿ, ಧರ್ಮವನ್ನೂ ಮೀರಿದ ಸ್ವಾತಂತ್ರ್ಯ ಹೋರಾಟದ ದೇಶಭಕ್ತಿಯಲ್ಲಿ 150 ವರ್ಷಗಳ ನಂತರವೂ ಇವರಿಗೆ ಧರ್ಮ ಮಾತ್ರ ಕಾಣಿಸುತ್ತಿರುವುದು ದುರಂತ.

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕೌಶಲವನ್ನು ಹೆಚ್ಚಿಸಿಕೊಳ್ಳಿ

'ವರ್ಷದೊಳಗೆ ಸಾಫ್ಟ್‌ವೇರ್ ಎಂಜಿನಿಯರ್‌ಗಳ ಕಣ್ಮರೆ?' ಶೀರ್ಷಿಕೆಯ ಕೇಶವ ಪ್ರಸಾದ್ ಅವರ ಅಂಕಣಬರಹವನ್ನು (ಫೆ.13) ಓದಿದಾಗ ಒಂದಷ್ಟು ದಿಗಿಲಾಗಿದ್ದು ನಿಜ. ಸಾಫ್ಟ್‌ವೇರ್ ಉದ್ಯಮವು ಸುಮಾರು 4 ದಶಕಗಳಿಂದ ಯಾವ ರೀತಿಯಲ್ಲಿ ಬೆಳೆದಿದೆಯೆಂದರೆ, ಈ ಉದ್ಯಮದಿಂದಾಗಿ ಜನರ ಆರ್ಥಿಕ ಮತ್ತು ಸಾಮಾಜಿಕ ಜೀವನಶೈಲಿಯೇ ಬದಲಾಗಿಹೋಗಿದೆ. ಅಂಕಣಕಾರರು ಹೇಳಿರುವಂತೆ, ಕೃತಕ ಬುದ್ಧಿಮತ್ತೆಯ (ಎಐ) ಬಳಕೆಯಿಂದ ಸಿಬ್ಬಂದಿ ಕಡಿತವಾದರೆ ಅದರಿಂದ ಸಮಾಜದ ಮೇಲೆ ಗಂಭೀರ ಪರಿಣಾಮವಾಗಲಿದೆ. 'ಎಐ' ಬೆಳವಣಿಗೆಯನ್ನು ಗಮನಿಸಿದಾಗ ಇಂಥ ಆತಂಕ ಸಹಜವೆನಿಸಿದರೂ ಇದು ಸಂಪೂರ್ಣ ಸತ್ಯವಲ್ಲ ಎಂದು ನನ್ನ ಅನಿಸಿಕೆ. ತಂತ್ರಜ್ಞಾನದ ಇತಿಹಾಸವನ್ನು ಗಮನಿಸಿದರೆ, ಹೊಸ ಆವಿಷ್ಕಾರಗಳು ಹಳೆಯ ಉದ್ಯೋಗಗಳನ್ನು ಕಸಿದುಕೊಳ್ಳುವ ಬದಲು ಅವುಗಳ ಸ್ವರೂಪವನ್ನು ಬದಲಿಸಿವೆ. ಕೋಡಿಂಗ್ ಎನ್ನುವುದು ಕೇವಲ ಭಾಷೆ. 'ಎಐ' ಇಂದು ಕೋಡ್ ಅನ್ನು ಸುಲಭವಾಗಿ ಬರೆಯಬಲ್ಲದು ನಿಜ. ಆದರೆ ಸಾಫ್ಟ್‌ವೇರ್ ಎಂಜಿನಿಯರಿಂಗ್ ಎಂದರೆ ಕೇವಲ ಕೋಡ್ ಅನ್ನು ಟೈಪ್ ಮಾಡುವುದಲ್ಲ; ಒಂದು ಸಂಕೀರ್ಣ ಸಮಸ್ಯೆಗೆ ತಾಂತ್ರಿಕ ಪರಿಹಾರವನ್ನು ಕಂಡುಹಿಡಿಯುವುದು ಅದರಲ್ಲಿ ಸೇರಿರುತ್ತದೆ. 'ಎಐ' ಎಂಬುದು ಎಂಜಿನಿಯರ್‌ಗಳ ಕೈಲಿರುವ ಒಂದು 'ಸುಧಾರಿತ ಉಪಕರಣ' ಅಷ್ಟೇ!ಸಾಫ್ಟ್‌ವೇರ್‌ನ ವಿನ್ಯಾಸ, ಡೇಟಾ ಸುರಕ್ಷತೆ ಮತ್ತು ಮಾನವೀಯ ಅಗತ್ಯಗಳಿಗೆ ತಕ್ಕಂತೆ ತಂತ್ರಜ್ಞಾನವನ್ನು ರೂಪಿಸಲು ಮನುಷ್ಯನ ಕ್ರಿಯಾಶೀಲತೆ ಮತ್ತು ವಿವೇಚನೆ ಇಂದಿಗೂ ಅಗತ್ಯವಿದೆ. ಲೆಕ್ಕಪರಿಶೋಧನೆಗೆ ಕ್ಯಾಲ್ಕ್ಯುಲೇಟರ್ ಬಂದಾಗ ಗಣಿತಜ್ಞರು ಕಣ್ಮರೆಯಾಗಲಿಲ್ಲ, ಬದಲಿಗೆ ಅವರ ಕೆಲಸದ ವೇಗ ಹೆಚ್ಚಾಯಿತು. ಹಳೆಯ ಮಾದರಿಯ ಉದ್ಯೋಗಗಳು ಕಡಿಮೆ ಆಗಬಹುದು, ಆದರೆ 'ಎಐ' ನಿರ್ವಹಣೆ, ಡೇಟಾ ಸೈನ್ಸ್ ಮತ್ತು ಸೈಬರ್ ಸೆಕ್ಯುರಿಟಿಯಂಥ ಕ್ಷೇತ್ರಗಳಲ್ಲಿ ಲಕ್ಷಾಂತರ ಹೊಸ ಉದ್ಯೋಗಗಳು ಸೃಷ್ಟಿಯಾಗಬಹುದು. ಹೀಗಾಗಿ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಕಣ್ಮರೆಯಾಗುವುದಿಲ್ಲ, ಬದಲಾಗಿ, ತಂತ್ರಜ್ಞಾನಕ್ಕೆ ತಕ್ಕಂತೆ ತಮ್ಮನ್ನು ತಾವು ಅಪ್‌ಡೇಟ್ ಮಾಡಿಕೊಳ್ಳದವರು ಮಾತ್ರ ಹಿಂದುಳಿಯಬಹುದು. ಕಾಲಕ್ಕೆ ತಕ್ಕಂತೆ ಕೌಶಲವನ್ನು ಬದಲಿಸಿಕೊಳ್ಳುವುದು/ಉನ್ನತೀಕರಿಸಿಕೊಳ್ಳುವುದು ಇಂದಿನ ಅನಿವಾರ್ಯತೆ. ಸಾಫ್ಟ್‌ವೇರ್ ಉದ್ಯಮದಲ್ಲಿ ಈಗ ಆಗುತ್ತಿರುವ ರೂಪಾಂತರ ಮತ್ತು ಅದಕ್ಕೆ ಸರಿಯಾಗಿ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಬದಲಾಗಬೇಕಾಗಿರುವ ಅನಿವಾರ್ಯತೆಯನ್ನು ಅಂಕಣಕಾರರು ತುಂಬಾ ಚೆನ್ನಾಗಿ ವಿವರಿಸಿದ್ದಾರೆ. ಪ್ರಸ್ತುತ 'ಎಐ' ವಿಷಯದಲ್ಲಿ ಕಾಣಬರುತ್ತಿರುವ ಜನರ ಆತಂಕಕ್ಕೆ ಕನ್ನಡಿ ಹಿಡಿದಿದೆ ಈ ಲೇಖನ ಎಂದರೆ ತಪ್ಪಾಗಲಾರದು.

- ಬಾಲಚಂದ್ರ ಹೆಗಡೆ, ಬೆಂಗಳೂರು

ಈ ಕ್ರಮ ಸರಿಯಲ್ಲ

ಒಂದು ಸಾಮಗ್ರಿಯ ಸರಬರಾಜಿಗೆ ಆದೇಶ ನೀಡಿ, ಅದು ಪೂರೈಕೆಯಾಗುವ ಸಮಯದಲ್ಲಿ ಅಲ್ಲಲ್ಲಿ ಮಾದರಿಯನ್ನು ಹೆಕ್ಕಿ ತೆಗೆದು, ಅವುಗಳ ಗುಣಮಟ್ಟವನ್ನು ಪರಿಶೀಲಿಸಿ, ಎಲ್ಲಾ ಸರಿಯಾಗಿದ್ದಲ್ಲಿ ಖರೀದಿದಾರರು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವುದು ವಾಡಿಕೆ. ಇದು ಎಲ್ಲಾ ಇಲಾಖೆಗಳಲ್ಲೂ ಇರುವಂಥದ್ದು. ನಂತರ, ಸರಬರಾಜುದಾರರಿಗೆ ಮತ್ತು ಆ ಸಾಮಗ್ರಿಗಳಿಗೆ ಯಾವ ಸಂಬಂಧವೂ ಇರುವುದಿಲ್ಲ. ಅಕಸ್ಮಾತ್ ದೋಷ ಕಂಡುಬಂದರೂ ಅವುಗಳನ್ನು ಹಿಂದಿರುಗಿಸುವಂತಿರುವುದಿಲ್ಲ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಪುಸ್ತಕಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು 3 ವರ್ಷಕ್ಕೂ ಮೇಲಾಗಿದೆ. ಅವುಗಳ ಜವಾಬ್ದಾರಿ ಇಲಾಖೆಯದು. ಆದರೆ ಈಗ ಅದು ಗುಣಮಟ್ಟ ಪರೀಕ್ಷಿಸಲು ಮುಂದಾಗಿದೆ. ಇದು ನಿಯಮಕ್ಕೆ ವಿರುದ್ಧವಾದುದು. ಆದ್ದರಿಂದ, ಈಗಾಗಲೇ ಉಗ್ರಾಣಕ್ಕೆ ತೆಗೆದುಕೊಂಡಿರುವ ಪುಸ್ತಕಗಳ ಬಾಬ್ತು ಮೊಬಲಗನ್ನು ಸರಬರಾಜುದಾರರಿಗೆ ಪಾವತಿಸಬೇಕೆಂದು ಇಲಾಖೆಯಲ್ಲಿ ವಿನಂತಿಸುತ್ತೇನೆ.

- ಸತ್ಯಬೋಧ, ಬೆಂಗಳೂರು

ಅನುಮಾನವೇಕೆ? ಬಸವಣ್ಣನವರು ಸನಾತನ ಹಿಂದೂ...

ಹಿಂದೂ ಧರ್ಮ ಎಂದರೆ ಜಾತಿವ್ಯವಸ್ಥೆ, ಇದನ್ನು ಬಸವಣ್ಣನವರು ವಿರೋಧಿಸಿದ್ದರು, ಆದ್ದರಿಂದ ಅವರು ಹಿಂದೂಗಳಲ್ಲ ಎಂಬುದು ಕೆಲವರ ವಾದ. ಹುಟ್ಟಿನಿಂದ ಬರುವ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಕಾರಣಕ್ಕಾಗಿಯೇ ಬಸವಣ್ಣನವರು ಹಿಂದೂಗಳು. ಏಕೆಂದರೆ ಭಾರತದಲ್ಲಿ ಹಿಂದಿನಿಂದ ವರ್ಣವ್ಯವಸ್ಥೆ ಇತ್ತು, ಜಾತಿವ್ಯವಸ್ಥೆ ಇರಲಿಲ್ಲ. ವರ್ಣಗಳು ಗುಣ-ಕರ್ಮಗಳ ಆಧಾರದಿಂದ ನಿರ್ಧಾರವಾಗುತ್ತಿದ್ದವು.

ವಿಶ್ಲೇಷಣೆ
ಜನಮೇಜಯ ಉಮರ್ಜಿ
vveditoped@gmail.com

ಸನಾತನವೆಂದರೆ ನಿತ್ಯನೂತನ. ಅದು ಜಡ್ಡುಗಟ್ಟಿದ್ದಲ್ಲ, ಬದಲಾವಣೆಗೆ ತೆರೆದುಕೊಂಡಿರುವಂಥದ್ದು. ಹತ್ತು ಸಾವಿರ ವರ್ಷಗಳಲ್ಲಿ ಭಾರತೀಯ ಜೀವನಕ್ರಮ ಕಾಲಕಾಲದ ಸುಧಾರಣೆಗೆ ತೆರೆದುಕೊಂಡು ಬಂದಿದೆ. ಹೀಗಾಗಿ ಅದು ಉಳಿದಿದೆ. ಅವಸ್ಥೆಯ ಜತೆಗಿರುವುದೇ ವ್ಯವಸ್ಥೆ. ಅವ್ಯವಸ್ಥೆ ಆದಾಗಲೆಲ್ಲ ಸುಧಾರಿಸಲು ಮಹಾಪುರುಷರ ಅವತಾರವಾಗುತ್ತದೆ. ಕ್ರಿ.ಶ. 12ನೆಯ ಶತಮಾನದಲ್ಲಿಯೂ ಆಗಿದ್ದು ಅದೇ. ಜಡ್ಡುಗಟ್ಟಿದ ಸನಾತನ ಹಿಂದೂ ಧರ್ಮವನ್ನು ಪುನರುಜ್ಜೀವನಗೊಳಿಸಲು ಬಂದ ಯುಗಾವತಾರವೇ ವಿಶ್ವಗುರು ಬಸವಣ್ಣನವರು. ಉದಾತ್ತ ಲಿಂಗಾಯತವನ್ನು ಹಿಂದೂ ಧರ್ಮದಿಂದ ಬೇರ್ಪಡಿಸಲು ಕಮ್ಯುನಿಸ್ಟರು, ವಸಾಹತುಶಾಹಿ ಬಾಲಬಡುಕರು, ಸೆಮೆಟಿಕ್ ಮತಗಳ ಗೀಳು ಹಿಡಿದವರು ಪ್ರಯತ್ನಿಸುತ್ತಿರುವುದು ಸಮಾಜಕ್ಕೆ ಗೊತ್ತೇ ಇದೆ. ಇವರು ಬೆರಳೆಣಿಕೆಯಷ್ಟು ಇದ್ದರೂ ಕಥನ ಕಟ್ಟುವುದರಲ್ಲಿ ನಿಸ್ಸೀಮರು.

ಹಿಂದೂ ಧರ್ಮ ಎಂದರೆ ಜಾತಿವ್ಯವಸ್ಥೆ, ಇದನ್ನು ಬಸವಣ್ಣನವರು ವಿರೋಧಿಸಿದ್ದರು, ಆದ್ದರಿಂದ ಅವರು ಹಿಂದೂಗಳಲ್ಲ ಎಂಬುದು ಈ ಬೆರಳೆಣಿಕೆಯವರ ವಾದ. ಹುಟ್ಟಿನಿಂದ ಬರುವ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಕಾರಣಕ್ಕಾಗಿಯೇ ಬಸವಣ್ಣನವರು ಹಿಂದೂಗಳು. ಏಕೆಂದರೆ ಭಾರತದಲ್ಲಿ ಹಿಂದಿನಿಂದ ವರ್ಣವ್ಯವಸ್ಥೆ ಇತ್ತು, ಜಾತಿವ್ಯವಸ್ಥೆ ಇರಲಿಲ್ಲ. ವರ್ಣಗಳು ಗುಣ-ಕರ್ಮಗಳ ಆಧಾರದಿಂದ ನಿರ್ಧಾರವಾಗುತ್ತಿದ್ದವು. ಅಷ್ಟೇ ಅಲ್ಲದೆ, ಒಬ್ಬ ವ್ಯಕ್ತಿಯು ತನ್ನ ಗುಣ-ಕರ್ಮಗಳ ಆಧಾರದಿಂದ ಯಾವುದೇ ವರ್ಣದಲ್ಲಿ ಗುರುತಿಸಿಕೊಳ್ಳಬಹುದಾಗಿತ್ತು. 8ನೇ ಶತಮಾನದಿಂದ ಈಚೆಗೆ, ಯಾವಾಗ ಮತಾಂಧ ವಿದೇಶಿಗರ ಆಕ್ರಮಣ ಶುರುವಾಯಿತೋ ಆಗ ಹಿಂದೂ ಸಮಾಜವು ನಿರಂತರ ಹಿಂಸೆ, ದೇವಾಲಯ ಧ್ವಂಸ, ಜಜಿಯಾ ತೆರಿಗೆ ಮತ್ತು ಬಲಾತ್ಕಾರದ ಮತಾಂತರಗಳ ಒತ್ತಡಕ್ಕೆ ಒಳಗಾಯಿತು. ಈ ಪರಿಸ್ಥಿತಿಯಲ್ಲಿ ತನ್ನ ಧಾರ್ಮಿಕ-ಸಾಂಸ್ಕೃತಿಕ ಅಸ್ಮಿತೆಯನ್ನು ರಕ್ಷಿಸಿಕೊಳ್ಳಲು ಹಿಂದೂ ಸಮಾಜವು ಒಳಮುಖಿಯಾಯಿತು. ಅದರ ಫಲವಾಗಿ, ವೃತ್ತಿ, ಆಹಾರ ಪದ್ಧತಿ, ವಿವಾಹ ಮತ್ತು ಪೂಜಾಕ್ರಮಗಳನ್ನು ವಂಶಪಾರಂಪರ್ಯಕ್ಕೆ ಕಟ್ಟಿಹಾಕುವ ಪ್ರವೃತ್ತಿ ಬಲವಾಯಿತು. ಮೊದಲು ಗುಣ-ಕರ್ಮ ಆಧಾರಿತವಾಗಿದ್ದ ವರ್ಣವ್ಯವಸ್ಥೆ, ಆಕ್ರಮಣ ಕಾಲಘಟ್ಟದಲ್ಲಿ ವಂಶಾವಳಿ ಮೂಲಕ ಗುರುತಿಸಿಕೊಳ್ಳುವ ಅಗತ್ಯದಿಂದ ಜನ್ಮಾಧಾರಿತ ಜಾತಿವ್ಯವಸ್ಥೆಯಾಗಿ ಗಟ್ಟಿಯಾಯಿತು.

ಭಾರತೀಯರು ಆಕ್ರಮಣಗಳ ನಂತರ ಸಾಮಾಜಿಕವಾಗಿ ಮುಚ್ಚಿಕೊಂಡರು ಎಂದು 11ನೆಯ ಶತಮಾನದ ಅಲ್-ಬೀರೂನಿ ದಾಖಲಿಸಿದರೆ, ಎಡ, ಸಾಫ್ಟ್ ಎಡವಾಲುವಿಕೆಯ ಆರ್.ಎಸ್. ಶರ್ಮಾ ಮತ್ತು ಉಪಿಂದರ್ ಸಿಂಗ್ ಮುಂತಾದ ಇತಿಹಾಸಕಾರರೂ ''ಜಾತಿ ಪದ್ಧತಿ ವೇದಕಾಲದಲ್ಲಿರಲಿಲ್ಲ, ಬದಲಾಗಿ ವಿದೇಶಿ ಆಕ್ರಮಣಕಾರರ ಆಡಳಿತ ಕಾಲದಲ್ಲಿ ತೀವ್ರಗೊಂಡಿತು'' ಎಂದು ಹೇಳಿದ್ದಾರೆ. ಹೀಗಾಗಿ ಜನ್ಮಾಧಾರಿತ ಜಾತಿವ್ಯವಸ್ಥೆ ಸನಾತನ ಹಿಂದೂ ಧರ್ಮದ ಮೂಲ ತತ್ತ್ವವಲ್ಲ, ಅದು ಆಕ್ರಮಣಗಳಿಂದ ಹುಟ್ಟಿದ ಸಾಮಾಜಿಕ ವಿಕೃತಿ. 12ನೆಯ ಶತಮಾನದ ಹೊತ್ತಿಗೆ ಭಾರತದ ದಕ್ಷಿಣ ಭಾಗಕ್ಕೆ ಆಕ್ರಮಣದ ಬಿಸಿ ತಟ್ಟುತ್ತಿರುವ ಹೊತ್ತಿನಲ್ಲಿ, ಹಿಂದೂ ಸಮಾಜವು ಹುಟ್ಟಿನಿಂದ ಜಾತಿ ಎಂಬ ಕಠಿಣ ನಿಯಮವನ್ನು ಹಾಕಿಕೊಂಡಿತ್ತು. ಸನಾತನ ಹಿಂದೂ ಅಲ್ಲದ ಈ ಪದ್ಧತಿ ಬಸವಣ್ಣನವರಿಗೆ ಸರಿ ಎನಿಸಲಿಲ್ಲ. ಹೀಗಾಗಿ ಹುಟ್ಟಿನ ಆಧಾರದಲ್ಲಿ ಏನನ್ನೂ ನಿರ್ಧರಿಸುವುದು ಸರಿಯಲ್ಲ ಎಂದು ಒತ್ತಾಯಿಸಿದರು. ''ಆನು ಹಾರವನೆಂದರೆ ಕೂಡಲಸಂಗಯ್ಯ ನಗುವ'' ಎಂದದ್ದೂ ಇದೇ ಆಧಾರದಲ್ಲಿ. ರಾಜನ ಆಸ್ಥಾನದಲ್ಲಿ ಕರಣಿಕನಾಗಿ, ವಿತ್ತಮಂತ್ರಿಯಾಗಿ ಸಂಬಳಕ್ಕೆ ಕೆಲಸದಲ್ಲಿರುವ



ತಮ್ಮನ್ನು ಸ್ವಾಧ್ಯಾಯ, ಪಾಠ ಪ್ರವಚನ ಮಾಡಿಕೊಂಡಿರಬೇಕಾಗಿರುವ ಹಾರವ ಎಂದರೆ ಕೂಡಲಸಂಗಮದೇವ ನಗುವ ಎಂದು ಸ್ವಯಂಪ್ರಶ್ನೆ ಹಾಕಿಕೊಂಡಿದ್ದಾರೆ. ಶಿವಭಕ್ತನಾದವರಿಗೆ ಜಾತಿಯಿಲ್ಲ, ತಮ್ಮನ್ನು ಹಾರವ ಎಂದು ಗುರುತಿಸಬಾರದು ಎಂದಿದ್ದಾರೆ. ಇನ್ನೂ ಮುಂದುವರಿದು, ತಾವು ಸಾಧನೆಯಲ್ಲಿ ವಯಸ್ಸಿನಲ್ಲಿ ಆದ್ಯರಾದ ಚೆನ್ನಯ್ಯನವರ ಮಗ ಎಂದು ಹೇಳಿಕೊಂಡಿದ್ದಾರೆ.

''ನಿಜಭಾವ ಲಕ್ಷ್ಮಿ-ಸರಸ್ವತಿ ಒಲಿದರೆ ಕುಲವನರಸಲದೇಕೆ?'' ಎಂಬ ಬಸವಣ್ಣನವರ ವಚನವು ಮಾನವನ ಮೌಲ್ಯವನ್ನು ನಿರ್ಧರಿಸುವುದು ಜನ್ಮವಲ್ಲ, ಅದರ ಆಧಾರಿತ ಜಾತಿ ಅಲ್ಲ, ಬದಲಾಗಿ ಲಿಂಗ ಮೆಚ್ಚಿದ ಅವನ ನಿಜಭಾವ. ಸಾಧನೆಯ ಮೂಲಕ ಬರುವ ಅರ್ಹತೆಯೇ ಮಾನದಂಡ ಎಂಬ ಸನಾತನ ತತ್ತ್ವವನ್ನು ಸಾರುತ್ತದೆ. ಲಕ್ಷ್ಮಿ-ಸರಸ್ವತಿಯರ ಅಸ್ತಿತ್ವವನ್ನು ಮತ್ತು ಭಕ್ತರ ಮೇಲೆ ಅವರ ಒಲವನ್ನು ನಿರಾಕರಿಸಿಲ್ಲ. ಇಲ್ಲಿ ಲಕ್ಷ್ಮಿ ಎಂದರೆ ಕೇವಲ ಧನಸಂಪತ್ತು ಅಲ್ಲ, ಧರ್ಮಸಹಿತ ಐಶ್ವರ್ಯ; ಸರಸ್ವತಿ ಎಂದರೆ ಕೇವಲ ವಿದ್ಯೆಯಲ್ಲ, ವಿವೇಕಜ್ಞಾನ. ಇವೆರಡೂ ನಿಜಭಾವದಿಂದ ಒಲಿದಾಗ, ವ್ಯಕ್ತಿ ಆತ್ಮೋನ್ನತಿಯ ಶಿಖರಕ್ಕೆ ಏರುತ್ತಾನೆ. ಆಗ 'ಕುಲ' ಎನ್ನುವುದು ಅವನ ಸಾಧನೆಗೆ ಅಡ್ಡಿಯಾಗುವುದಿಲ್ಲ, ಸನಾತನದಲ್ಲಿ ಜಾತಿವ್ಯವಸ್ಥೆ ಇರಲಿಲ್ಲ ಎಂಬುದನ್ನು ಹೇಳಲು ಬಸವಣ್ಣನವರು ಹಲವು ಋಷಿಮುನಿಗಳನ್ನು ಪಟ್ಟಿ ಮಾಡುತ್ತಾರೆ. ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ, ಮಂಡೋದರಿ ಕಪ್ಪೆಯ ಮಗಳು, ಅಗಸ್ತ್ಯ ಕಬ್ಬಿಲ, ದುರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ ಋಷಿ ನಾವಿದ. ಹೀಗಾಗಿ ''ಶಿವಭಕ್ತರಲಿ ಕುಲವನರಸದಿ ಭೋ'' ಎಂದು ಉದ್ಗರಿಸುತ್ತಾರೆ.

ಹಿಂದೂಗಳಲ್ಲಿ ಮೂವತ್ಮೂರು ಕೋಟಿ ದೇವರಿದ್ದಾರೆ. ಅದು ಬಹುದೇವೋಪಾಸನೆಯ ಸಂಸ್ಕೃತಿ, ಬಸವಣ್ಣನವರು ಹೇಳಿದ್ದು 'ಏಕದೇವೋಪಾಸನೆ' ಆದ್ದರಿಂದ ಅವರು ಹಿಂದೂಗಳಲ್ಲ- ಇದು ಎರಡನೆಯ ವಾದ. ಸನಾತನ ಹಿಂದೂ ಧರ್ಮದಲ್ಲಿ 'ಏಕದೇವೋಪಾಸನೆ' ಎಂದರೆ ಒಂದೇ ರೂಪದ ದೇವರ ಆರಾಧನೆಯಲ್ಲ. ಅದು ಎಲ್ಲ ದೈವಿಕ ಶಕ್ತಿಗಳ ಹಿಂದೆ ಇರುವ ಒಂದೇ ಪರಮತತ್ತ್ವದ ಅಂಗೀಕಾರ. ಋಗ್ವೇದದ ಪ್ರಸಿದ್ಧ ವಾಕ್ಯ ''ಏಕಂ ಸತ್ ವಿಪ್ರಾ ಬಹುಧಾ ವದಂತಿ'' ಎಂಬುದು ಇದನ್ನು ಸ್ಪಷ್ಟಪಡಿಸುತ್ತದೆ. ಸತ್ಯ ಒಂದೇ, ತಿಳಿದವರು ಅದನ್ನು ಹಲವು ರೂಪ, ನಾಮಗಳಿಂದ ಉಪಾಸಿಸುತ್ತಾರೆ. ಕೃಷಿಗೆ ಇಂದ್ರನನ್ನು, ವಿದ್ಯೆಗೆ ಸರಸ್ವತಿಯನ್ನು, ಐಶ್ವರ್ಯಕ್ಕೆ ಲಕ್ಷ್ಮಿಯನ್ನು, ಸ್ಥಿತಿಗೆ ವಿಷ್ಣುವನ್ನು, ಸೃಷ್ಟಿಗೆ ಬ್ರಹ್ಮನನ್ನು, ಸಂಹಾರಕ್ಕೆ ಶಿವನನ್ನು ಆರಾಧಿಸುವ ಪದ್ಧತಿ ಕಾರ್ಯವಿಭಾಗದ ದೈವಿಕ ಅಭಿವ್ಯಕ್ತಿ ಮಾತ್ರ; ಈ ಎಲ್ಲ ಕಾರ್ಯಗಳ ಹಿಂದೆ ಕಾರ್ಯನಿರ್ವಹಿಸುವ ಪರಮಶಕ್ತಿ ಒಂದೇ. ಆದ್ದರಿಂದ ಸನಾತನ ಹಿಂದೂ ಧರ್ಮವು ಬಹುದೇವಾರಾಧನೆ ಅಲ್ಲ, ಅದು ಏಕತತ್ತ್ವಾಧಾರಿತ ಬಹುರೂಪೋಪಾಸನೆ. ಕಾರ್ಯಾನುಸಾರ ರೂಪ ವಿಭಿನ್ನವಾದರೂ, ಕಾರ್ಯಸಿದ್ಧಿಯನ್ನು ನೀಡುವ ಪರಮಾತ್ಮ ಒಂದೇ ಎಂಬ ಅರಿವೇ ವೇದಕಾಲದಿಂದ ಮುಂದುವರಿದ ಸನಾತನ ದರ್ಶನದ ಸಾರವಾಗಿದೆ.

ಇದನ್ನು ಬಸವಣ್ಣನವರು ''ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ: ಒಬ್ಬನೇ ಕಾಣಿರೋ, ಇಬ್ಬರೆಂಬುದು ಹುಸಿ ನೋಡಾ! ಕೂಡಲಸಂಗಮದೇವನಲ್ಲದೆ ಇಲ್ಲವೆಂದಿತ್ತು ವೇದ'' ಎಂದು ಪ್ರಮಾಣೀಕರಿಸಿದ್ದಾರೆ. ಇನ್ನೊಂದು ''ನಿಮ್ಮ ವೇದಶಾಸ್ತ್ರಂಗಳು ಆರ ಹೊಗಳುತ್ತಿದ್ದಾವು? 'ಓಂ ದ್ಯಾವಾ ಭೂಮೀ ಜನಯಂ ದೇವ ಏಕೋ ದೇವ' ಎಂದು ಶ್ರುತಿ ಸ್ಮೃತಿಗಳು ಸಾರುತ್ತಲಿದ್ದಾವು'' ಎಂದು ಒಬ್ಬ ಕೂಡಲಸಂಗಮನನ್ನೇ ಶೃತಿ-ಸ್ಮೃತಿಗಳು ಹೇಳುತ್ತವೆ ಎಂದು ಸನಾತನ ಹಿಂದುತ್ವವನ್ನು ಪುಷ್ಟೀಕರಿಸುತ್ತಾರೆ. ''ಉಮಾಧಿನಾಥರು ಕೋಟಿ, ಪಂಚವಕ್ತ್ರರು ಕೋಟಿ, ನಂದಿವಾಹನರೊಂದು ಕೋಟಿ, ನೋಡಯ್ಯಾ; ಸದಾಶಿವರೊಂದು ಕೋಟಿ, ಗಂಗೆವಾಳುಕ ಸಮರುದ್ರರು ಇವರೆಲ್ಲರೂ ಕೂಡಲಸಂಗನ ಸಾನ್ನಿಧ್ಯರಲ್ಲದೆ, ಸಮರಸವೇದ್ಯರೊಬ್ಬರೂ ಇಲ್ಲಾ!''. ಬಸವಣ್ಣನವರಿಗೆ ಕೂಡಲಸಂಗಮನು ಒಂದೇ ಪರಮತತ್ತ್ವ. ಅವನು ಹೊರಗಿರುವ ಪ್ರತಿಮೆ ಮಾತ್ರವಲ್ಲ; ಆತನು ಅಂತರಂಗದಲ್ಲಿಯೇ ನೆಲೆಸಿರುವ ಚೇತನಶಕ್ತಿ ಕೂಡಾ. ಹೀಗಾಗಿ ಅಂತರಂಗ-ಬಹಿರಂಗ ಶುದ್ಧಿ ಎರಡನ್ನೂ ಹೇಳಿದ್ದಾರೆ. ಇಷ್ಟಲಿಂಗ ಉಪಾಸನೆ ಎಂಬುದು ಬಹುದೇವಾರಾಧನೆಯ ನಿರಾಕರಣೆ ಅಲ್ಲ, ಎಲ್ಲರಲ್ಲಿ ಇರುವ ದೇವರು ಒಬ್ಬನೇ ಎಂಬ ಅರಿವಿನ ಕುರುಹು.

ಉದಾತ್ತ ಲಿಂಗಾಯತವನ್ನು ಮರಳುಗಾಡಿನ ಮತಗಳಂತೆ ವಿನ್ಯಾಸಗೊಳಿಸಲು ಬಸವಣ್ಣನವರು ಪ್ರವಾದಿ, ಅವರು ಸ್ಥಾಪಿಸಿದ್ದು ಪ್ರತ್ಯೇಕ ಧರ್ಮ, ವಚನಗಳು ಮಾತ್ರವೇ ಅಂತಿಮ ಗ್ರಂಥ ಎಂಬಂತೆ ಕಮ್ಯುನಿಸ್ಟರು, ವಸಾಹತುಶಾಹಿ ಬಾಲಬಡುಕರು, ಸೆಮೆಟಿಕ್ ಮತಗಳ ಗೀಳು ಹಿಡಿದವರು, ರಾಜಕೀಯವಾಗಿ ಲಾಭಗಳಿಸಬೇಕೆನ್ನುವವರು ಶತಪ್ರಯತ್ನಿಸುತ್ತಿದ್ದಾರೆ. ಅದರ ಭಾಗವಾಗಿ ಪೌರಾಣಿಕ ಶಿವ ಮತ್ತು ಶರಣರ ಶಿವ, ಸ್ಥಾವರ ಲಿಂಗ, ಇಷ್ಟಲಿಂಗ ಬೇರೆ ಬೇರೆ ಎಂದು ಗೊಂದಲ ಎಬ್ಬಿಸಲು ಹೆಣಗುತ್ತಿದ್ದಾರೆ. ಬಸವಣ್ಣನವರಿಗೆ ಮೊದಲಿನಿಂದ ಕೊನೆಯವರೆಗೂ ಕೂಡಲಸಂಗಮನೇ ದೇವರು, ಅವರ ನಿಷ್ಠೆ ಎಂದಿಗೂ ಬದಲಾಗಿಯೇ ಇಲ್ಲ. ಪೌರಾಣಿಕ ಶಿವನ ಕುರಿತು ಅವರ ವಚನ ಇಂತಿದೆ: ''ಕಾಳಿಯ ಕಣ್ ಕಾಣದಿಂದ ಮುನ್ನ, ತ್ರಿಪುರಸಂಹಾರದಿಂದ ಮುನ್ನ, ಹರಿವಿರಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ, ಮುನ್ನ, ಮುನ್ನ ಮುನ್ನ-ಅಂದಿಂಗೆಳೆಯ ನೀನು, ಹಳೆಯ ನಾನು, ಮಹಾದಾನಿ ಕೂಡಲಸಂಗಮದೇವಾ''.

ಇನ್ನೂ ಒಂದು ಅಪರೂಪದ ವಚನವಿದೆ. ''ಭವಬಂಧನ-ದುರಿತಂಗಳ ಗೆಲುವೊಡೆ 'ಓಂ ನಮಃ ಶಿವಾಯ'-ಶರಣೆಂದಡೆ ಸಾಲದೆ? 'ಹರ ಹರ ಶಂಕರ, ಶಿವ ಶಿವ ಶಂಕರ, ಜಯ ಜಯ ಶಂಕರ ಶರಣೆ'ನ್ನುತ್ತಿರ್ದನೆ; ಎನ್ನ ಪಾತಕ ಪರಿಹಾರ! ಕೂಡಲಸಂಗಮದೇವಾ ಶರಣೆ'ನ್ನುತ್ತಿರ್ದನೆ''. ಇಲ್ಲಿ 'ಓಂ ನಮಃ ಶಿವಾಯ' ಎಂಬ ವೇದವಾಕ್ಯವಿದೆ. ಇಲ್ಲಿ ಪರಮಾತ್ಮನನ್ನು ಶಿವ, ಶಂಕರ ಎಂಬ ಪುರಾಣದ ಹೆಸರುಗಳಿಂದ ಶರಣೆಂದಿದ್ದಾರೆ. ಕರ್ಮ ಸಿದ್ಧಾಂತದಲ್ಲಿ ಹೇಳಲಾಗುವ ಭವಬಂಧನ, ದುರಿತ, ಪುಣ್ಯ, ಪಾತಕ ಎಲ್ಲವೂ ಇವೆ. ಸಪ್ತ ಶೈವದಲ್ಲಿಯ ಹೊಟ್ಟ ತೂರಿ ಗಟ್ಟಿ ಕಾಳುಗಳನೆಲ್ಲ ಸಂಗ್ರಹಿಸಿ. ಅನಾದಿ ಲಿಂಗಾಯತವನ್ನು ಗಟ್ಟಿಗೊಳಿಸಿದ್ದಾರೆ ಬಸವಣ್ಣನವರು. ಭಕ್ತಿ ಸಂಕ್ರಮಣದ ಮೂಲಕ ಮನೆ-ಮನ ತಲುಪಿ ಸಮಾಜವನ್ನು ಶಿವಭಕ್ತಿಯಿಂದ ಒಂದುಗೂಡಿಸಿದ್ದಾರೆ ಬಸವಣ್ಣನವರು. ಹಿಂದೂ ಧರ್ಮದ ಉಳಿವಿಗೆ ಕಟಿಬದ್ಧರಾಗಿ ಬಸವಣ್ಣನವರು ನಿಂತಿದ್ದರಿಂದಲೇ ಇಂದು ಭಾರತದ ದಕ್ಷಿಣಭಾಗದಲ್ಲಿ ಹಿಂದೂಧರ್ಮ ಉಳಿದಿದೆ. ಈ ಲೇಖನದಲ್ಲಿ ನಾನು ಬರೆದದ್ದು ತುಂಬಾ ಕಡಿಮೆಯೇ. ಅಬ್ಬಿಗೇರಿಯ ಕಲಾತಪಸ್ವಿ ಡಿ.ಎನ್. ಉಪಾಧ್ಯ ಅವರು ಬರೆದ 'ಬಸವ ಶೈವದಲ್ಲಿ ಹಿಂದುತ್ವ' ಪುಸ್ತಕದಲ್ಲಿ ಇನ್ನೂ ಬಹಳ ನೋಡಬಹುದು.

(ಲೇಖಕರು, ಸಂಸ್ಕೃತಿ ಚಿಂತಕರು)

ಭಟ್ಟರ್ ಸ್ಕಾಚ್

- ಸಿ.ಚಂದ್ರಶೇಖರ, (ಇಮೇಲ್ ಮೂಲಕ)
ಗಾಂಧಿ ಪ್ರಶಸ್ತಿ ಎನ್ನುತ್ತಿದ್ದಂತೆ ಭಟ್ಟರು ಕೈ ಒಡ್ಡಿದ್ದೇಕೆ?
- **'ಪದ್ಮ'ಗಿಂತ ಗಾಂಧಿಯೇ ವಾಸಿಯಲ್ಲವೇ?!**

- ಚಂದ್ರಿಕಾ ನಾರಾಯಣ, ಬೆಂಗಳೂರು
ಭಟ್ರೇ, ಡಿಕೆಶಿ ಮುಖ್ಯಮಂತ್ರಿ ಆಗ್ತಾರಾ?
- **ನೊಣವಿನಕೆರೆ ಅಜ್ಜಯ್ಯನಿಗೆ ಕೇಳಬೇಕಾದ ಪ್ರಶ್ನೆಯನ್ನು ನನಗೆ ಕೇಳ್ತಾ ಇದ್ದೀಯಲ್ಲಮ್ಮ!**

- ಸಿದ್ದೇಶ ಅರಸೀಕೆರೆ, (ಇಮೇಲ್ ಮೂಲಕ)
ಭಟ್ರೇ, 'ವ್ಯಾಲೆಂಟೈನ್ಸ್ ಡೇ' ದಿನ ಪ್ರೇಮಿಗಳ ಮುಖದಲ್ಲಿ ನಗು ಇರಲು ಕಾರಣವೇನು?
- **ಯಾಕೆಂದರೆ ಫೆಬ್ರವರಿ 15ರಿಂದ ಸಾಲ ವಾಪಸ್ ಕೇಳುವವರ ಕಾಟ ಶುರುವಾಗುತ್ತದೆ ಅನ್ನೋದು ಅವರಿಗೆ ಗೊತ್ತಿರುವುದಿಲ್ಲ!**

- ಭರತ್ ರೆಡ್ಡಿ, ಜಯನಗರ
ಭಟ್ರೇ, ಮದುವೆಯಾದವರು 'ವ್ಯಾಲೆಂಟೈನ್ಸ್ ಡೇ'ಯನ್ನು ಯಾಕೆ ಸಂಭ್ರಮಿಸುವುದಿಲ್ಲ?
- **ಯಾಕೆಂದರೆ, ದಿನಾ 'ಯುದ್ಧ' ಮಾಡುವವರಿಗೆ ವರ್ಷಕ್ಕೊಮ್ಮೆ ಬರುವ 'ಶಾಂತಿ ಒಪ್ಪಂದ'ದ ಮೇಲೆ ನಂಬಿಕೆ ಇರುವುದಿಲ್ಲ!**

- ರಮೇಶ ಗೌಡ, ಮಳವಳ್ಳಿ
ಭಟ್ರೇ, ಪ್ರೇಮಿಗಳ ದಿನಕ್ಕೂ, ಸಂಬಳದ ದಿನಕ್ಕೂ ಸಾಮ್ಯತೆ ಏನು?
- **ಎರಡೂ ಬಂದಾಗ ಬಹಳ ಖುಷಿ ಕೊಡುತ್ತವೆ, ಆದರೆ ಕೈ ಸೇರುವ ಮೊದಲೇ ಖರ್ಚಿನ ಪಟ್ಟಿ ರೆಡಿಯಾಗಿರುತ್ತದೆ!**

- ಸಂಪತ್ ರಾಜ್, (ಇಮೇಲ್ ಮೂಲಕ)
ಭಟ್ರೇ, ಫೆಬ್ರವರಿ 14ರಂದು ಒಂಟಿಯಾಗಿರುವ ಹುಡುಗರ ಪರಿಸ್ಥಿತಿ ಹೇಗಿರುತ್ತದೆ?
- **ಪಾಕ್ ಬ್ಯಾಟ್ಸ್‌ಮನ್‌ಗಳ ಥರ, ಫೀಲ್ಡರ್ ಇರುವಲ್ಲೇ ಬಾಲ್ ಹೊಡೀತಾರೆ, ಆದ್ರೆ ರನ್ ಮಾತ್ರ ಬರಲ್ಲ!**

- ರಮೇಶ ಹೆಗಡೆ, ಸಿದ್ದಾಪುರ
ಭಟ್ರೇ, 'ವ್ಯಾಲೆಂಟೈನ್ಸ್ ಡೇ' ದಿನ ಗಿಫ್ಟ್ ಕೊಡದಿದ್ದರೆ ಏನಾಗುತ್ತದೆ?
- **ಏನೂ ಆಗಲ್ಲ, ನೀವು ಕರೆ ಮಾಡುವ ಚಂದಾದಾರರು ನಿಮ್ಮ ಕರೆಯನ್ನು ಬ್ಲಾಕ್ ಮಾಡಿರುತ್ತಾರೆ!**

- ಸುರೇಶ ಶೆಟ್ಟಿ, ಬಾರಕೂರು
ಭಟ್ರೇ, 'ವ್ಯಾಲೆಂಟೈನ್ಸ್ ಡೇ'ಗೂ, ಅಮಾವಾಸ್ಯೆಗೂ ಏನು ಸಂಬಂಧ?
- **ಎರಡೂ ದಿನ ಹುಡುಗರ ಜೇಬಿನಲ್ಲಿ 'ಕತ್ತಲೆ' ಆವರಿಸಿರುತ್ತದೆ!**

ಶಿವರಾತ್ರಿ: ದೇಹಶುದ್ಧಿಯಿಂದ ಚಿತ್ತಶುದ್ಧಿವರೆಗೆ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ. ಸಾಧನಶ್ರೀ
vveditoped@gmail.com

ಫಾಲ್ಗುಣ ಮಾಸದ ಮಧುರ ರಾತ್ರಿಯಲ್ಲಿ, ಪ್ರಕೃತಿ ನಿಧಾನವಾಗಿ ತನ್ನ ನಿದ್ರೆಯಿಂದ ಎಚ್ಚರಗೊಳ್ಳಲು ಸಿದ್ಧವಾಗಿರುವಾಗ, ಮಹತ್ವದ ಮತ್ತು ಪವಿತ್ರವಾದ ಒಂದು ರಾತ್ರಿ ನಮ್ಮ ಜೀವನದಲ್ಲಿ ಆಗಮಿಸುತ್ತದೆ- ಅದುವೇ ಮಹಾಶಿವರಾತ್ರಿ. ಇದು ಕೇವಲ ಹಬ್ಬವಲ್ಲ, ಇದು ಜಾಗೃತಿ. ಇದು ಕೇವಲ ಆಚರಣೆ ಅಲ್ಲ; ಇದು ಒಳಗಿನ ಪರಿವರ್ತನೆ. ಈ ಮಹಾರಾತ್ರಿಯು, ಪ್ರಕೃತಿಯಲ್ಲಿಯೂ ಮತ್ತು ನಮ್ಮ ಅಂತರಂಗದಲ್ಲಿಯೂ ನಡೆಯುವ ಸೂಕ್ಷ್ಮ ಬದಲಾವಣೆಗಳನ್ನು ಅರಿಯುವ ಒಂದು ಆಧ್ಯಾತ್ಮಿಕ ಅವಕಾಶ.

ಆಯುರ್ವೇದದ ದೃಷ್ಟಿಯಿಂದ ನೋಡಿದರೆ, ಶಿವರಾತ್ರಿ ಸಂಭವಿಸುವ ಕಾಲವೇ ಒಂದು ಮಹತ್ವದ ಸಂಧಿಕಾಲ. ಶಿಶಿರ ಋತುವಿನ ತಂಪು ಮತ್ತು ಜಡತ್ವದ ನಂತರ, ವಸಂತ ಋತು ತನ್ನ ಮೃದು ಚೈತನ್ಯವನ್ನು ವ್ಯಕ್ತಗೊಳಿಸಲು ಪ್ರಾರಂಭಿಸುತ್ತದೆ. ಶಿಶಿರದಲ್ಲಿ ಸಂಚಿತವಾದ ಕಫ ದೋಷವು, ವಸಂತದಲ್ಲಿ ಪ್ರಚೋದಿತವಾಗುತ್ತದೆ. ದೇಹದಲ್ಲಿ ಕಫ ದೋಷವು ವಸಂತದಲ್ಲಿ ಪ್ರಕೋಪಗೊಳ್ಳುತ್ತದೆ ಎಂದು ಆಯುರ್ವೇದ ಹೇಳುತ್ತದೆ. ಈ ಸಮಯದಲ್ಲಿ ದೇಹದಲ್ಲಿ ಭಾರ, ಆಲಸ್ಯ, ಹೆಚ್ಚು ನಿದ್ರೆ, ಮಂದಾಗ್ನಿ, ಕಫಸಂಬಂಧಿತ ಅಸ್ವಸ್ಥತೆಗಳು ಕಾಣಿಸಬಹುದು. ಪ್ರಕೃತಿಯಲ್ಲಿರುವ ಮಂಜು ಕರಗುವಂತೆ, ದೇಹದಲ್ಲಿಯೂ ಸಂಚಿತವಾದ ಕಫ ಬಿಸಿಲಿನ ಪ್ರಭಾವದಿಂದ ದ್ರವೀಕೃತವಾಗಿ ಚಲನೆಯತ್ತ ಸಾಗುತ್ತದೆ.

ಇಂಥ ಸಂಧಿಕಾಲದಲ್ಲಿಯೇ ಶಿವರಾತ್ರಿಯ ಆಚರಣೆಯು ನಮಗೆ ಅರಿವು ಮೂಡಿಸುತ್ತದೆ- 'ಸ್ತಬ್ಧತೆಯಿಂದ ಚೈತನ್ಯದತ್ತ ಸಾಗುವ ಕಾಲ ಬಂದಿದೆ' ಎಂದು. ಈ ರಾತ್ರಿಯ ಅಧಿಪತಿ, ಯೋಗೇಶ್ವರನಾದ ಶಿವನು, ತಮಸ್ಸನ್ನು ಭಸ್ಮಗೊಳಿಸುವ ಜ್ಞಾನಸ್ವರೂಪಿ. ಶಿವನ ತತ್ತ್ವವೇ ಲಯ ಮತ್ತು ಪುನರುದಯ. ಅವನ ತೃತೀಯ ನೇತ್ರವು ಅಜ್ಞಾನವನ್ನು ದಹಿಸುವ ಜ್ಞಾನಾಗ್ನಿಯ ಪ್ರತೀಕ. ವಸಂತದಲ್ಲಿ ಪ್ರಕೃತಿ ಪುಷ್ಪಿಸುವಂತೆ, ಶಿವರಾತ್ರಿಯು ನಮ್ಮ ಅಂತರಂಗದ ಪುನರ್ಜನ್ಮಕ್ಕೆ ಆಹ್ವಾನ ನೀಡುತ್ತದೆ.

ಋತುಸಂಧಿ ಮತ್ತು ವಸಂತ ಋತುಚರ್ಯೆ

ಸಾಮಾನ್ಯವಾಗಿ ಫೆಬ್ರವರಿ ಮಧ್ಯದಿಂದ ಏಪ್ರಿಲ್ ಮಧ್ಯದವರೆಗೆ ವಸಂತ ಋತು ವ್ಯಾಪಿಸುತ್ತದೆ. ಈ ಸಮಯದಲ್ಲಿ ಪ್ರಕೃತಿ ನಿರ್ಮಲವಾಗಿರುತ್ತದೆ, ಸೂರ್ಯನ ಕಿರಣಗಳು ತಾಮ್ರವರ್ಣದ ತೇಜಸ್ಸಿನಿಂದ ಹೊಳೆಯುತ್ತವೆ, ದಕ್ಷಿಣಗಾಳಿ ಬೀಸುತ್ತದೆ, ಮರಗಳು ಹೊಸ ಮೊಗ್ಗು, ಎಲೆಗಳಿಂದ ಅರಳುತ್ತವೆ; ಕೋಗಿಲೆ ಮತ್ತು ಜೇನುಹುಳುಗಳ ಮಧುರ ಧ್ವನಿಯಿಂದ ಭೂಮಿ ಮಿಡಿಯುತ್ತದೆ. ಆದರೆ ದೇಹದೊಳಗೆ ನಡೆಯುವ ಪ್ರಕ್ರಿಯೆ ಇನ್ನೂ ಸೂಕ್ಷ್ಮ. ಹಿಮಶೀತಲ ವಾತಾವರಣದಲ್ಲಿ ಮತ್ತು ಸ್ನಿಗ್ಧ-ಗುರು ಆಹಾರದಿಂದ ಶಿಶಿರದಲ್ಲಿ ಸಂಚಿತವಾದ ಕಫ, ವಸಂತದಲ್ಲಿ ಸೂರ್ಯನ ಉಷ್ಣತೆಯಿಂದ ಕರಗಿ ಪ್ರಚೋದಿತವಾಗುತ್ತದೆ. ಈ ದ್ರವೀಕೃತ ಕಫವು ಅಗ್ನಿಯನ್ನು ನೇರವಾಗಿ ಕುಂಠಿತಗೊಳಿಸಿ ಜೀರ್ಣಶಕ್ತಿಯನ್ನು ಕಡಿಮೆ ಮಾಡುತ್ತದೆ. ಪರಿಣಾಮವಾಗಿ ಅಜೀರ್ಣ, ಕಫಸಂಬಂಧಿ ರೋಗಗಳು- ಕೆಮ್ಮು, ಅಸ್ತಮಾ, ಅಲರ್ಜಿ, ಶ್ವಾಸಕೋಶ ತೊಂದರೆಗಳು, ಜ್ವರ, ತಲೆನೋವು, ಮಧುಮೇಹ ಇತ್ಯಾದಿ- ಕಾಣಿಸಬಹುದು. ದೇಹಬಲ ಮಧ್ಯಮವಾಗಿರುವ ಈ ಕಾಲದಲ್ಲಿ, ಕಫ ಹೆಚ್ಚು ಪ್ರಚೋದಿತವಾಗಿದ್ದರೆ ಪಂಚಕರ್ಮ ಕ್ರಮಗಳಾದ ವಮನ, ನಸ್ಯ, ಧೂಮಪಾನ, ಗಂಡೂಷ (ಪರಿಣತ ವೈದ್ಯರ ಮಾರ್ಗದರ್ಶನದಲ್ಲಿ) ಉಪಕಾರಿಯಾಗುತ್ತವೆ. ಸೌಮ್ಯ ಕಫವಿಕೃತಿಯಲ್ಲಿ, ಸರಿಯಾದ ವಸಂತ ಋತುಚರ್ಯೆಯೇ ಸಮರ್ಪಕ ಪರಿಹಾರ. ಅಭ್ಯಂಗ ಮತ್ತು ನಸ್ಯ (ಎಳ್ಳೆಣ್ಣೆಯಂಥ ಕಫಹರ ತೈಲಗಳಿಂದ), ಉದ್ವರ್ತನ, ಮಿತ ವ್ಯಾಯಾಮ (ಅರ್ಧಶಕ್ತಿ ಮಟ್ಟದವರೆಗೆ), ಹಗಲು ನಿದ್ರಾ ತ್ಯಾಗ- ಇವು ಅತ್ಯವಶ್ಯಕ. ಆಹಾರದಲ್ಲಿ ಕಟು-ತಿಕ್ತ-ಕಷಾಯ ರಸ ಪ್ರಧಾನ, ಉಷ್ಣ, ಲಘು, ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಬಳಸಿ; ಹಳೆಯ ಧಾನ್ಯಗಳು, ಜೋಳ, ಯವ, ಕೆಂಪು ಅಕ್ಕಿ, ಹೆಸರುಬೇಳೆ, ಮಜ್ಜಿಗೆ ಉಪಯುಕ್ತ. ಸಿಹಿ-ಹುಳಿ-ಉಪ್ಪು, ಅತಿ ಸ್ನಿಗ್ಧ, ತಣ್ಣನೆಯ, ಜೀರ್ಣಕ್ಕೆ ಜಡವಾದ ಆಹಾರ, ಉದ್ದಿನಬೇಳೆ, ಮೈದಾ, ಪನ್ನೀರ್, ಸಿಹಿತಿಂಡಿಗಳು, ಹಾಲಿನ ಶೇಕ್, ಕರಿದ ಪದಾರ್ಥಗಳನ್ನು ತಪ್ಪಿಸಬೇಕು. ಮೊಸರು ಸಂಪೂರ್ಣವಾಗಿ ನಿಷಿದ್ಧ. ಅಗ್ನಿ ಸ್ಥಿತಿಯನ್ನು ಪರಿಗಣಿಸಿ ಉಪವಾಸ ಆಚರಿಸಬಹುದು. ಹಗಲು ಊಟದ ನಂತರ ನಿದ್ರೆ ಸಂಪೂರ್ಣ ವರ್ಜ್ಯ.

ಜಾಗರಣೆ: ಭಕ್ತಿಯಷ್ಟೇ ಅಲ್ಲ, ಆಯುರ್ವೇದದ ಜ್ಞಾನವೂ ಹೌದು

ಶಿವರಾತ್ರಿಯ ಪ್ರಮುಖ ಆಚರಣೆಗಳಲ್ಲಿ ಜಾಗರಣೆ ಒಂದು. ಇಡೀ ರಾತ್ರಿ ಜಾಗರಣೆಯಿಂದ ಭಜನೆ, ಧ್ಯಾನ, ಜಪ ಮಾಡುವ ಪದ್ಧತಿ ಇದೆ. ಸಾಮಾನ್ಯವಾಗಿ ರಾತ್ರಿ ಕಾಲವು ಕಫ ಮತ್ತು ತಮಸ್ಸಿನ ಪ್ರಭಾವದ ಸಮಯ. ನಿದ್ರೆ ಸ್ವಾಭಾವಿಕವಾಗಿ ದೇಹವನ್ನು ವಿಶ್ರಾಂತಿಗೊಳಿಸಿದರೂ, ವಸಂತದ ಆರಂಭದಲ್ಲಿ ಅಧಿಕ ನಿದ್ರೆ ಕಫದ ವೃದ್ಧಿಗೆ ಕಾರಣವಾಗಬಹುದು.

ಆಯುರ್ವೇದವು ಹೇಳುವಂತೆ, ಕಫದ ಪ್ರಾಬಲ್ಯವಿರುವ ಕಾಲದಲ್ಲಿ ಲಘು, ಚುರುಕು, ಉತ್ಸಾಹಭರಿತ ಕ್ರಮಗಳು ಅಗತ್ಯ. ಶಿವರಾತ್ರಿಯ ಜಾಗರಣೆ, ಆಧ್ಯಾತ್ಮಿಕವಾಗಿ ಜಾಗೃತಿ ನೀಡುವುದರೊಂದಿಗೆ, ದೇಹದಲ್ಲಿ ಸಂಚಿತವಾದ ಭಾರವನ್ನು ತಗ್ಗಿಸುವ ಒಂದು ಸೂಕ್ಷ್ಮ ಉಪಾಯವೂ ಆಗಬಹುದು. ಇಡೀ ರಾತ್ರಿ ಜಪ ಮತ್ತು ಧ್ಯಾನದಲ್ಲಿ ಕಳೆಯುವುದರಿಂದ ಮನಸ್ಸು ತಮಸ್ಸಿನಿಂದ ಸತ್ವದತ್ತ ಸಾಗುತ್ತದೆ. ಇದು ಕೇವಲ ದೇಹದ ಜಾಗರಣೆ ಅಲ್ಲ, ಜತೆಗೆ ಚೇತನದ ಜಾಗೃತಿಯೂ ಹೌದು.

'ಜಾಗರಣೆ' ಎಂದರೆ ಕೇವಲ ನಿದ್ರೆ ತ್ಯಜಿಸುವುದು ಅಲ್ಲ; ಅಜ್ಞಾನವನ್ನು ತ್ಯಜಿಸುವುದು. ಆಯುರ್ವೇದದ ತ್ರಿಗುಣ ಸಿದ್ಧಾಂತದ ಪ್ರಕಾರ, ಕಫ ಮತ್ತು ತಮಸ್ಸು ಭಾರ, ಜಡತ್ವ, ಆಲಸ್ಯವನ್ನು ಸೂಚಿಸುತ್ತವೆ. ಶಿವರಾತ್ರಿಯು ಆ ಭಾರವನ್ನು ಕರಗಿಸಿ, ಚೈತನ್ಯವನ್ನು ಉಜ್ಜೀವನಗೊಳಿಸುವ ಒಂದು ಸನ್ನಿವೇಶ.

ಉಪವಾಸ: ಕಫಶಮನ ಮತ್ತು ಅಗ್ನಿದೀಪನ

ಶಿವರಾತ್ರಿಯ ಉಪವಾಸದ ಮತ್ತೊಂದು ಆಯಾಮವನ್ನು ಆಯುರ್ವೇದ ಸ್ಪಷ್ಟಪಡಿಸುತ್ತದೆ. ಕಫದ ಪ್ರಾಬಲ್ಯದಲ್ಲಿ 'ಲಂಘನಂ'- ಉಪವಾಸವು ಮೊದಲ ಚಿಕಿತ್ಸೆ. ಉಪವಾಸವು ಅಗ್ನಿಯನ್ನು ಪ್ರಜ್ವಲಿತಗೊಳಿಸುತ್ತದೆ, ಆಮವನ್ನು ಕರಗಿಸುತ್ತದೆ. ಲಘು ಆಹಾರ, ಫಲಾಹಾರ ಅಥವಾ ನಿರ್ಜಲ ವ್ರತ- ನಿಮ್ಮ ದೇಹಸ್ಥಿತಿಗೆ ಅನುಗುಣವಾಗಿ ಯಾವ ರೂಪದಲ್ಲೇ ಆಚರಿಸಿದರೂ, ಅದು ದೇಹಕ್ಕೆ ವಿಶ್ರಾಂತಿ ನೀಡುವ ಒಂದು ಅವಕಾಶ.

ವಸಂತ ಋತುವಿನಲ್ಲಿ ಮಂದವಾಗಿರುವ ಜಠರಾಗ್ನಿಗೆ ಉಪವಾಸವು ಚೈತನ್ಯ ನೀಡುತ್ತದೆ. ದೇಹದಲ್ಲಿ ಸಂಚಿತವಾದ ವಿಷಮಯ ಪದಾರ್ಥಗಳನ್ನು ಹೊರಹಾಕುವ ಪ್ರಕ್ರಿಯೆಗೆ ಇದು ಚಾಲನೆ ನೀಡುತ್ತದೆ. ಈ ರೀತಿ ನೋಡಿದರೆ, ಶಿವರಾತ್ರಿ ಉಪವಾಸವು ಕೇವಲ ಭಕ್ತಿಯ ಆಚರಣೆ ಅಲ್ಲ, ಜತೆಗೆ ಋತುಚರ್ಯೆಯ ಭಾಗ.

ರಾತ್ರಿಯ ಅಂಧಕಾರ ಮತ್ತು ಒಳಗಿನ ಬೆಳಕು

ಶಿವರಾತ್ರಿಯನ್ನು ಕತ್ತಲೆಯ ಮಧ್ಯದಲ್ಲಿ ಆಚರಿಸಲಾಗುತ್ತದೆ. ಅಮಾವಾಸ್ಯೆಯ ಸಮೀಪದ ಈ ರಾತ್ರಿಯಲ್ಲಿ, ಹೊರಗಿನ ಅಂಧಕಾರವು ಗಾಢವಾಗಿರುತ್ತದೆ. ಆದರೆ ಈ ಅಂಧಕಾರದಲ್ಲೇ ನಾವು ದೀಪ ಹಚ್ಚುತ್ತೇವೆ, ಜಪ ಮಾಡುತ್ತೇವೆ, ಶಿವನ ಧ್ಯಾನದಲ್ಲಿ ತಲ್ಲೀನರಾಗುತ್ತೇವೆ. ಇದು ಒಂದು ಆಂತರಿಕ ಸಂದೇಶ- ಹೊರಗಿನ ಕತ್ತಲೆಯ ನಡುವೆ ಒಳಗಿನ ಬೆಳಕನ್ನು ಕಾಣುವ ಪ್ರಯತ್ನ.

ವಸಂತವು ಪುಷ್ಪಿಸುವ ಕಾಲ. ಮರಗಳ ಒಣ ಎಲೆಗಳು ಬಿದ್ದು, ಹೊಸ ಮೊಗ್ಗುಗಳು ಮೂಡುವ ಕಾಲ. ನಮ್ಮ ಜೀವನದಲ್ಲಿಯೂ ಹಳೆಯ ಸಂಸ್ಕಾರಗಳು, ಆಲಸ್ಯ, ಅಜ್ಞಾನ ಕರಗಿ, ಹೊಸ ಚೈತನ್ಯ ಮೂಡುವ ಸಮಯವೇ ಶಿವರಾತ್ರಿ. ಈ ಹಬ್ಬ ನಮಗೆ ಹೇಳುತ್ತದೆ: ''ನಿನ್ನೊಳಗಿನ ಕಫವನ್ನು ಕರಗಿಸು, ನಿನ್ನೊಳಗಿನ ತಮಸ್ಸನ್ನು ದಹಿಸು, ನಿನ್ನೊಳಗಿನ ಶಿವತತ್ತ್ವವನ್ನು ಅರಿತುಕೋ'' ಎಂದು.

ಋತುಸಂಧಿ: ಪರಿವರ್ತನೆಯ ಸನ್ನಿವೇಶ

ಶಿಶಿರದಿಂದ ವಸಂತಕ್ಕೆ ಬರುವ ಸಂಧಿಕಾಲವನ್ನು ಆಯುರ್ವೇದವು 'ಋತುಸಂಧಿ' ಎಂದು ಕರೆಯುತ್ತದೆ. ಈ ಕಾಲದಲ್ಲಿ ದೇಹವು ಸೂಕ್ಷ್ಮವಾಗಿ ಬದಲಾವಣೆ ಅನುಭವಿಸುತ್ತದೆ. ಆಹಾರ, ಜೀವನಶೈಲಿ, ಚಿಂತನೆ- ಎಲ್ಲವೂ ಸಮತೋಲನದಲ್ಲಿರಬೇಕು. ಶಿವರಾತ್ರಿ ಈ ಸಂಧಿಕಾಲದಲ್ಲೇ ಬರುತ್ತದೆ ಎಂಬುದು ಅಸಾಧಾರಣ ಯಾದೃಚ್ಛಿಕತೆ ಅಲ್ಲ; ಅದು ಪ್ರಕೃತಿಯ ಸಂಗತಿ. ಈ ಸಮಯದಲ್ಲಿ ಲಘು ಆಹಾರ, ವ್ಯಾಯಾಮ, ಉಷ್ಣ ಜಲಪಾನ, ಕಫಶಮನ ಕ್ರಮಗಳು ಉಪಕಾರಿಯಾಗುತ್ತವೆ. ಶಿವರಾತ್ರಿಯ ಜಾಗರಣೆ ಮತ್ತು ಉಪವಾಸವು ಈ ಋತುಸಂಧಿಯಲ್ಲಿ ದೇಹ-ಮನಸ್ಸಿಗೆ ಸಮತೋಲನ ನೀಡುವ ಸಾಧನೆ.

ನಿದ್ರಾ, ಸಮತೋಲನ ಮತ್ತು ಅಗ್ನಿ ಸಂರಕ್ಷಣೆ

ಶಿವರಾತ್ರಿಯಂದು ಜಾಗರಣೆ ಮಾಡಿದ ನಂತರದ ದಿನದ ಆಚರಣೆಯೂ ಆಯುರ್ವೇದದ ದೃಷ್ಟಿಯಲ್ಲಿ ಅತ್ಯಂತ ಮಹತ್ವದ್ದು. ಒಂದು ರಾತ್ರಿ ನಿದ್ರಾಭಾವವಾಗಿದೆಯಾದರೆ, ಅದನ್ನು ಸಮಚಿತ್ತದಿಂದ ಪೂರೈಸುವುದು ಅಗತ್ಯ. ಆಯುರ್ವೇದದಲ್ಲಿ ನಿದ್ರೆಯನ್ನು ತ್ರಯೋಪಸ್ತಂಭಗಳಲ್ಲಿ ಒಂದೆಂದು ಹೇಳಲಾಗಿದೆ; ಆದ್ದರಿಂದ ಅದರ ವ್ಯತ್ಯಯವನ್ನು ಸರಿಯಾಗಿ ಸಮತೋಲನಗೊಳಿಸಬೇಕು.

ಆಯುರ್ವೇದದ ಸೂಚನೆಯ ಪ್ರಕಾರ, ಶಿವರಾತ್ರಿಯ ಜಾಗರಣೆಯ ನಂತರದ ದಿನ ಬೆಳಗ್ಗೆ ಮೊದಲಿಗೆ ದೇಹಕ್ಕೆ ಎಳ್ಳೆಣ್ಣೆಯ ಅಭ್ಯಂಗ ಮಾಡುವುದು ಶ್ರೇಯಸ್ಕರ. ನಂತರ ಉಷ್ಣಜಲ ಸ್ನಾನ ಮಾಡಬಹುದು. ಇದರ ಮೂಲಕ ಕಫ-ವಾತದ ಪ್ರಭಾವ ಶಮನವಾಗುತ್ತದೆ ಮತ್ತು ದೇಹ-ಮನಸ್ಸು ವಿಶ್ರಾಂತಿಗೊಳ್ಳಲು ಸಿದ್ಧವಾಗುತ್ತದೆ.

ಹಿಂದಿನ ರಾತ್ರಿ ಎಷ್ಟು ಹೊತ್ತು ನಿದ್ರೆ ತಪ್ಪಿದೆಯೋ, ಅದರ ಅರ್ಧ ಪ್ರಮಾಣದಷ್ಟು ನಿದ್ರೆಯನ್ನು ಮುಂದಿನ ದಿನ ಪೂರೈಸಬಹುದು. ಉದಾಹರಣೆಗೆ, ಆರು ಗಂಟೆಗಳ ನಿದ್ರೆ ತಪ್ಪಿದ್ದರೆ, ಮುಂದಿನ ದಿನ ಖಾಲಿ ಹೊಟ್ಟೆಯಲ್ಲಿ ಮೂರು ಗಂಟೆಗಳಷ್ಟು ನಿದ್ರೆ ಮಾಡಬಹುದು. ಇದು ಆಹಾರ ಸೇವನೆಯ ಮೊದಲು ಇರಬೇಕು. ಎದ್ದು ಬಂದ ನಂತರ, ತಮ್ಮ ನಿಯತ ಆಹಾರ ಸಮಯಕ್ಕೆ ಅನುಗುಣವಾಗಿ, ಲಘು, ಉಷ್ಣ ಮತ್ತು ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಸೇವಿಸಬೇಕು.

ಜಾಗರಣೆಯ ನಂತರದ ದಿನ ಹೊಟ್ಟೆತುಂಬ ಊಟ ಮಾಡಿ ನಂತರ ನಿದ್ರೆ ಮಾಡುವುದರಿಂದ ಕಫದ ಪ್ರಚೋದನೆ ಹೆಚ್ಚಾಗಿ ದೇಹದಲ್ಲಿ ಭಾರ, ಆಲಸ್ಯ, ಅಜೀರ್ಣ ಮುಂತಾದ ತೊಂದರೆಗಳು ಉಂಟಾಗುವ ಸಾಧ್ಯತೆ ಇದೆ. ಜಾಗರಣೆಯಿಂದ ಅಗ್ನಿಯೂ ಸ್ವಲ್ಪ ಮಂದಗೊಳ್ಳುವ ಸಾಧ್ಯತೆ ಇರುವುದರಿಂದ, ಜೀರ್ಣಕ್ಕೆ ಕಷ್ಟವಾದ ಆಹಾರವನ್ನು ತಪ್ಪಿಸುವುದು ಒಳಿತು. ಬದಲಾಗಿ ಲಘು, ಉಷ್ಣ, ಸುಪಾಚ್ಯ ಆಹಾರ- ಉದಾಹರಣೆಗೆ ಗಂಜಿ, ಸೂಪ್, ತಿಳಿಸಾರು ಅನ್ನ- ಸೇವಿಸುವುದು ದೇಹಕ್ಕೆ ಅನುಕೂಲಕರ.

ಈ ರೀತಿಯಾಗಿ ಜಾಗರಣೆ ಮಾಡಿದ ನಂತರವೂ ದೇಹದ ಸಮತೋಲನವನ್ನು ಕಾಪಾಡಿಕೊಳ್ಳುವುದು ಆಯುರ್ವೇದದ ಸೌಂದರ್ಯ. ಭಕ್ತಿಯೊಂದಿಗೆ ಆಚರಿಸಿದ ಶಿವರಾತ್ರಿ, ಜ್ಞಾನಪೂರ್ಣ ಕ್ರಮಗಳ ಮೂಲಕ ದೇಹ-ಮನಸ್ಸಿನ ಆರೋಗ್ಯವನ್ನೂ ರಕ್ಷಿಸಲಿ.

ಆಧ್ಯಾತ್ಮಿಕ ವಸಂತ

ವಸಂತವು ಕೇವಲ ಹೊರಗಿನ ಹೂವುಗಳ ಕಾಲವಲ್ಲ, ಜತೆಗೆ ಒಳಗಿನ ಅರಳಿಕೆಯ ಕಾಲವೂ ಹೌದು. ಶಿವರಾತ್ರಿ ನಮ್ಮೊಳಗಿನ ಕುಂಡಲಿನಿ ಶಕ್ತಿಯನ್ನು ಜಾಗೃತಗೊಳಿಸುವ ಒಂದು ಸನ್ನಿವೇಶ. ಶಿವನ ಧ್ಯಾನದಲ್ಲಿ ಲೀನವಾಗುವಾಗ, ಮನಸ್ಸಿನ ಅಲೆಗಳು ಶಾಂತವಾಗುತ್ತವೆ. ತಮಸ್ಸು ಕರಗಿ, ಸತ್ವ ಬೆಳೆಯುತ್ತದೆ. ಶಿವನ ಭಸ್ಮಾಭರಣವು ನಮಗೆ ಈ ಅಂಶವನ್ನು ಮನವರಿಕೆ ಮಾಡಿಕೊಡುತ್ತದೆ- ಎಲ್ಲವೂ ನಶ್ವರ, ಆದರೆ ಆತ್ಮಚೈತನ್ಯ ಶಾಶ್ವತ. ವಸಂತದ ಪುಷ್ಪಗಳು ಕ್ಷಣಿಕವಾದರೂ, ಅವು ನೀಡುವ ಸೌಂದರ್ಯ ಅನಂತ. ಅದೇ ರೀತಿ, ಜೀವನದ ಸಂಧಿಕಾಲಗಳು ತಾತ್ಕಾಲಿಕವಾದರೂ, ಅವು ನೀಡುವ ಜ್ಞಾನ ಶಾಶ್ವತ.

ಸ್ನೇಹಿತರೇ, ಮಹಾಶಿವರಾತ್ರಿ ಕೇವಲ ಒಂದು ಪರ್ವದಿನವಲ್ಲ; ಅದು ದೇಹ, ಮನಸ್ಸು ಮತ್ತು ಆತ್ಮದ ಸಮನ್ವಯದ ರಾತ್ರಿ. ವಸಂತ ಋತುವಿನ ಆರಂಭದಲ್ಲಿ, ಕಫದ ಪ್ರಾಬಲ್ಯವನ್ನು ಶಮನಗೊಳಿಸಿ, ಅಗ್ನಿಯನ್ನು ಪ್ರಜ್ವಲಿತಗೊಳಿಸಿ, ತಮಸ್ಸನ್ನು ದಹಿಸಿ, ಸತ್ವವನ್ನು ಅರಳಿಸುವ ಒಂದು ಅವಕಾಶವಿದು. ಪ್ರಕೃತಿ ಪುಷ್ಪಿಸುವಂತೆ, ನಮ್ಮೊಳಗಿನ ಚೈತನ್ಯವೂ ಅರಳಲಿ. ಶಿವರಾತ್ರಿಯ ಜಾಗರಣೆ ಕೇವಲ ಕಣ್ಣು ತೆರೆಯುವ ಜಾಗರಣೆ ಆಗದೆ, ಚೇತನದ ಜಾಗರಣೆ ಆಗಲಿ. ಉಪವಾಸ ಕೇವಲ ಆಹಾರ ತ್ಯಾಗವಾಗದೆ, ಅಜ್ಞಾನದ ತ್ಯಾಗವಾಗಲಿ. ಈ ಮಹಾರಾತ್ರಿಯಲ್ಲಿ, ಹೊರಗಿನ ದೇವಾಲಯಗಳಿಗೆ ಮಾತ್ರವಲ್ಲದೆ, ನಮ್ಮೊಳಗಿನ ಹೃದಯಮಂದಿರಕ್ಕೂ ದೀಪ ಹಚ್ಚೋಣ. ಕಫದ ಭಾರ ಕರಗಿಸಿ, ಮನಸ್ಸಿನ ಮಂಜು ದೂರ ಮಾಡಿ, ಶಿವತತ್ತ್ವದ ಪ್ರಕಾಶದಲ್ಲಿ ನಮ್ಮ ಜೀವನವನ್ನು ಪುನಃ ರೂಪಿಸೋಣ.

ಇದೇ ಮಹಾಶಿವರಾತ್ರಿಯ ನಿಜವಾದ ವಸಂತ- ದೇಹದಲ್ಲಿ ಸಮತೋಲನ, ಮನಸ್ಸಿನಲ್ಲಿ ಶಾಂತಿ, ಆತ್ಮದಲ್ಲಿ ಜಾಗೃತಿ.

ಅನಿಸಿಕೆ

ರಾಘವೇಂದ್ರ ಜೋಯಿಸ್, ಮೈಸೂರು

ಕೃತಕ ಬುದ್ಧಿಮತ್ತೆ ಮತ್ತು ಉದ್ಯೋಗ

'ಕೃತಕ ಬುದ್ಧಿಮತ್ತೆ' (Artificial Intelligence- AI) ಅತಿಯಾಗಿ ಬಳಕೆಯಾಗುವುದರಿಂದ ನೌಕರರ ಉದ್ಯೋಗಕ್ಕೆ ಕುತ್ತು ಬರುತ್ತದೆ ಎನ್ನುವ ಮಾತುಗಳು ಈಗ ಎಲ್ಲೆಡೆ ಕೇಳಿಬರುತ್ತಿವೆ. 'ಐ' (ನಾನು) ಮಾಡುವ ಕೆಲಸವನ್ನು ಹೀಗೆ 'ಎಐ' ಮಾಡತೊಡಗುವುದರಿಂದ ಮುಂದೊಮ್ಮೆ ನನಗೆ ಕೆಲಸ ಇಲ್ಲದಂತಾಗುತ್ತದೆ ಎಂಬ ಆತಂಕ ಅನೇಕರನ್ನು, ಅದರಲ್ಲೂ ನಿರ್ದಿಷ್ಟವಾಗಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುವವರನ್ನು ಕಾಡುತ್ತಿದೆ. ಇದಕ್ಕೆ ನಮ್ಮ ದೇಶವೂ ಹೊರತಾಗಿಲ್ಲ. ಇಷ್ಟು ಸಾಲದೆಂಬಂತೆ ಇತ್ತೀಚೆಗೆ 'ಆಂಥ್ರೋಪಿಕ್' ಎಂಬ 'ಎಐ' ಕಂಪನಿಯು, 'ಎಐ ಟೂಲ್‌ನಿಂದ ತಂತ್ರಜ್ಞಾನ ಕ್ಷೇತ್ರದಲ್ಲಿ ಬದಲಾವಣೆ ಆಗುತ್ತದೆ' ಎಂಬ ಹೇಳಿಕೆ ನೀಡಿರುವುದು ಉದ್ಯೋಗಿಗಳನ್ನು ಮತ್ತಷ್ಟು ತಲ್ಲಣಗೊಳಿಸಿದೆ. ಈ ಹೇಳಿಕೆಯ ನಂತರ ಕೆಲವು ಪ್ರಮುಖ ತಂತ್ರಜ್ಞಾನ ಕಂಪನಿಗಳ ಷೇರುಗಳೂ ಸ್ವಲ್ಪ ಮುಗ್ಗರಿಸಿದವು. ಆಂಥ್ರೋಪಿಕ್ ಕಂಪನಿಯ 'ಎಐ ಸೇಫ್ಟಿ ಟೀಮ್' ಮುಖ್ಯಸ್ಥ ಮತ್ತು ಹಿರಿಯ ಸಂಶೋಧಕ ಮೃಣಾಂಕ್ ಶರ್ಮಾ ಅವರು ತಮ್ಮ ಹುದ್ದೆಗೆ ದಿಢೀರ್ ರಾಜೀನಾಮೆ ಸಲ್ಲಿಸಿ, 'ಜಗತ್ತು ವಿನಾಶದ ಅಂಚಿನಲ್ಲಿದೆ' ಎಂಬ ಹೇಳಿಕೆ ಕೊಟ್ಟಿರುವುದು ಸಹ ಭವಿಷ್ಯದ ಬಗೆಗಿನ ಆತಂಕವನ್ನು ಇನ್ನಷ್ಟು ಹೆಚ್ಚಿಸಿದೆ.

ಈ ಎಲ್ಲಾ ಬದಲಾವಣೆಗಳಿಂದಾಗಿ ಕೆಲವರು 'ಪ್ರಪಂಚ ಮುಳುಗೇಹೋಯಿತು, ಜನರಿಗೆ ಮಾಡಲಿಕ್ಕೆ ಏನೂ ಕೆಲಸಗಳೇ ಇರುವುದಿಲ್ಲ' ಅಂತ ಷರಾ ಬರೆಯುತ್ತಿದ್ದರೆ, ಮತ್ತೆ ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಮನಸ್ಸಿಗೆ ಬಂದಿದ್ದು ಹೇಳಿ ಇನ್ನಷ್ಟು ಹೆದರಿಸುತ್ತಿದ್ದಾರೆ. ಇವೆಲ್ಲಾ ಸ್ವಲ್ಪ ಉತ್ಪ್ರೇಕ್ಷೆ ಎನಿಸಿದರೂ, ಈ 'ಎಐ' ಎಂಬುದರಿಂದ ಸ್ವಲ್ಪ ಮಟ್ಟಿನ ಉದ್ಯೋಗ ನಷ್ಟವಾಗುವುದನ್ನೂ, ತನ್ಮೂಲಕ ದೇಶದ ಪ್ರಗತಿಗೆ ಅದು ಮಾರಕವಾಗುವುದನ್ನೂ ಅಲ್ಲಗಳೆಯಲಾಗದು. ಇದೇ ರೀತಿ ಎಲ್ಲಾ ಕ್ಷೇತ್ರಗಳಲ್ಲೂ 'ಎಐ' ಬಳಕೆ ಅತಿಯಾಗುತ್ತಾ ಹೋದರೆ, ಉದ್ಯೋಗ ನಷ್ಟದ ಪ್ರಮಾಣ ತೀವ್ರವಾಗಬಹುದು. 'ಎಐ' ಸಂಬಂಧಿತ ಕೌಶಲ ಬೆಳೆಸಿಕೊಂಡವರಿಗೆ ಮಾತ್ರ ಉದ್ಯೋಗ ಸಿಗಬಹುದು, ಕೌಶಲದ ಉನ್ನತೀಕರಣ ಮಾಡಿಕೊಂಡವರಷ್ಟೇ ಕೆಲಸದಲ್ಲಿ ಉಳಿಯಬಹುದು. ಯಾವುದೇ ಒಂದು ದೇಶವು ಹೊಸ ಆವಿಷ್ಕಾರದಲ್ಲಿ, ತಂತ್ರಜ್ಞಾನದಲ್ಲಿ ಎಷ್ಟೇ ಮುಂದು ವರಿದರೂ ಮಾನವ ಸಂಪನ್ಮೂಲವನ್ನು ಕಡೆಗಣಿಸಬಾರದು; ಅದಕ್ಕೆ ನೀಡುವ ಪ್ರಾಮುಖ್ಯವನ್ನು ನೀಡಲೇಬೇಕು. ಉದಾಹರಣೆಗೆ, 1000 ಜನರು ಮಾಡುವ ಕೆಲಸವನ್ನು ಅಥವಾ ನೀಡುವ ಸೇವೆಯನ್ನು, ಎಐ ತಂತ್ರಜ್ಞಾನದ ಮೂಲಕ ಕಡಿಮೆ ವೆಚ್ಚದಲ್ಲಿ, ಕಡಿಮೆ ಸಮಯದಲ್ಲಿ 10 ಜನರು ಮಾಡಬಹುದು ಅಥವಾ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಉತ್ಪಾದನೆ ಮಾಡಬಹುದು ಅಂದುಕೊಳ್ಳೋಣ. ಆದರೆ ಆ ಸೇವೆ ಅಥವಾ ಉತ್ಪನ್ನವನ್ನು ಬಳಸಲು ಜನರೇ ಬೇಕು. ಜನರಿಗೆ ಆದಾಯ ಬೇಕು, ಆದಾಯಕ್ಕೆ ಕೆಲಸ ಬೇಕು. ಜನರಿಗೆ ಕೈತುಂಬಾ ಕೆಲಸವಿದ್ದಲ್ಲಿ ಮಾತ್ರವೇ ದೇಶದ ಆರೋಗ್ಯಕರ ಪ್ರಗತಿ ಸಾಧ್ಯ. ಈ ನಿಟ್ಟಿನಲ್ಲೂ ಒಮ್ಮೆ ಯೋಚಿಸುವಂತಾಗಬೇಕು. 'ಕೃತಕ ಬುದ್ಧಿಮತ್ತೆ' ಯಿಂದಾಗುವ ಉಪಯೋಗ/ಪ್ರಗತಿಯ ಜತೆಗೆ, ಅದರಿಂದ ಉಂಟಾಗುವ ಉದ್ಯೋಗನಷ್ಟ, ದೇಶಕ್ಕೆ ಒದಗುವ ಮಾರಕ ಪರಿಣಾಮಗಳ ಕುರಿತೂ ಕೂಲಂಕಷವಾಗಿ ಚರ್ಚಿಸುವಂತಾಗಬೇಕು.

ಇದೇ ಮೊದಲ ಬಾರಿಗೆ 'ಕೃತಕ ಬುದ್ಧಿಮತ್ತೆ' ಕ್ಷೇತ್ರದ 'ಇಂಪ್ಯಾಕ್ಟ್ ಸಮ್ಮಿಟ್' ಎಂಬ ಜಾಗತಿಕ ಮಟ್ಟದ ಶೃಂಗಸಭೆಯನ್ನು ದೆಹಲಿಯಲ್ಲಿ ಫೆಬ್ರವರಿ 16ರಿಂದ 20ರವರೆಗೆ ಆಯೋಜಿಸಲಾಗಿದ್ದು, ಭಾರತದ ಪ್ರಧಾನಿ ನರೇಂದ್ರ ಮೋದಿ, ಫ್ರಾನ್ಸ್ ಮತ್ತು ಬ್ರೆಜಿಲ್ ದೇಶಗಳ ಅಧ್ಯಕ್ಷರು, ಗೂಗಲ್ ಕಂಪನಿಯ ಸಿಇಒ ಸುಂದರ್ ಪಿಚೈ, ಆಂಥ್ರೋಪಿಕ್ ಕಂಪನಿಯ ಸಿಇಒ ಡೇರಿ ಮೊದಲಾದವರು ಇದರಲ್ಲಿ ಭಾಗಿಯಾಗಲಿದ್ದಾರೆ. 'ಎಐ' ಕ್ಷೇತ್ರದಲ್ಲಿ ಆಗುವ ಬದಲಾವಣೆಗಳು, ಇದರಿಂದ ಆಗುವ ಉಪಯೋಗ ಹಾಗೂ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಈ ಸಭೆಯಲ್ಲಿ ಒಂದಷ್ಟು ಚರ್ಚೆಯಾಗಬಹುದು ಮತ್ತು ಇದರ ಬಗ್ಗೆ ನಮಗೆಲ್ಲಾ ಒಂದಷ್ಟು ಮಾಹಿತಿ ಸಿಗಬಹುದು ಎಂಬ ನಿರೀಕ್ಷೆಯಿದೆ.

(ಲೇಖಕರು ಬ್ಯಾಂಕ್ ಅಧಿಕಾರಿ)

ಸಂಗೀತ ಎಂಬುದು ಮನದ ಮಂತ್ರಶಕ್ತಿ, ಹೃದಯದ ಮಧುರ ಭಾಷೆ

ಝೇಂಕಾರ

ಮಾಯಾ ಬಾಲಚಂದ್ರ
vveditoped@gmail.com

'ಸಂಗೀತ' ಎಂದ ಕೂಡಲೆ, ಮನರಂಜನೆಯ ಸಾಧನ ಎನ್ನುವ ಆಲೋಚನೆಯೇ ಸಾಮಾನ್ಯವಾಗಿ ಬಂದುಬಿಡುತ್ತದೆ. ಮನರಂಜನೆಯೊಂದಿಗೆ, ಶರೀರ, ಮನಸ್ಸು, ಬುದ್ಧಿ, ಚಿತ್ತ ಎಲ್ಲವುಗಳ ನಡುವೆ ಸೇತುವೆಯಾಗಿ ಕೆಲಸ ಮಾಡುವ ಅದ್ಭುತ ಮಾಧ್ಯಮ ಇದು. ''ಚೈತನ್ಯಂ ಸರ್ವಭೂತಾನಾಂ ನಿವೃತ್ತಿಂ ಜಗದಾತ್ಮನಾ, ನಾದಬ್ರಹ್ಮ ಸದಾನಂದಂ ಅದ್ವಿತೀಯಮುಪಾಸ್ಮಹೇ'' ಎಂದರೆ, ಯಾವುದು ಸಕಲ ಜೀವಿಗಳಿಗೆ ಚೈತನ್ಯವೂ, ತಾನೇ ಜಗತ್ತೂ ಆಗಿ ಸುಖ ಕೊಡುವುದೋ, ಯಾವುದು ಏಕೈಕವಾಗಿದ್ದು ಆನಂದವೇ ತಾನಾಗಿರುವುದೋ ಅಂಥ ನಾದಬ್ರಹ್ಮನನ್ನು ಉಪಾಸಿಸುತ್ತೇವೆ ಎಂದು ನಮ್ಮ ಭಾರತೀಯ ಪರಂಪರೆಯಲ್ಲಿ ಹೇಳಲಾಗಿದೆ. ಸಂಗೀತವನ್ನು ನಾದವಾಗಿ, ನಾದವೇ ಬ್ರಹ್ಮವಾಗಿ, ಬ್ರಹ್ಮನೆಂದರೆ ವಿಶಿಷ್ಟ ಶಕ್ತಿಯಾಗಿ ಆರಾಧಿಸುತ್ತೇವೆ. ''ಪ್ರಾಣಾಗ್ನಿ ಸಂಯೋಗದಿ ಜನಿಸಿದ ಪ್ರಣವನಾದ ಸಪ್ತಸ್ವರ ರೂಪಿಣಿ'' ಎಂದು ಮುತ್ತಯ್ಯ ಭಾಗವತರ್ ಅವರು ಹೇಳಿರುವುದು ಸಹ ಇದನ್ನೇ. ನಮ್ಮ ಭಾರತೀಯ ಪರಂಪರೆಯಲ್ಲಿ ಯಾವುದೇ ವಿಚಾರವನ್ನು ತೆಗೆದುಕೊಂಡರೂ, ಅದನ್ನು ಆಧ್ಯಾತ್ಮಿಕ, ಸಾಂಸ್ಕೃತಿಕ ನೆಲೆಯಲ್ಲಿ ನೋಡುವುದು ರೂಢಿಯಾಗಿದೆ. ಬೇರೆ ದೇಶಗಳಲ್ಲಿ ಕೇವಲ ಮನರಂಜನೆ ಆಗುವ ಸಂಗೀತ, ನಮ್ಮಲ್ಲಿ ಇಡೀ ಸಮಾಜದ ಸಾಂಸ್ಕೃತಿಕ ಮೌಲ್ಯವನ್ನು ವರ್ಧಿಸುವ ಸಾಧನ ಆಗುತ್ತದೆ. ಬೇರೆಲ್ಲಾ ದೇಶಗಳಲ್ಲಿ ಸಹ ಸಪ್ತಸ್ವರಗಳ ಆಧಾರದಲ್ಲಿಯೇ ಸಂಗೀತ ಇದ್ದರೂ, ನಮ್ಮಲ್ಲಿ ಈ ಸಪ್ತಸ್ವರಗಳಿಗೂ ಅಧ್ಯಾತ್ಮದ ರೂಪ ಕೊಟ್ಟು ಆರಾಧಿಸುವ ಕಲೆ, ನಮ್ಮ ಸಂಗೀತ ಪರಂಪರೆಯನ್ನು ವಿಶ್ವದಲ್ಲಿಯೇ ವಿಶಿಷ್ಟ ಸ್ಥಾನದಲ್ಲಿ ನಿಲ್ಲುವಂತೆ ಮಾಡಿದೆ.

ದೃಶ್ಯವಿಲ್ಲದ ಅಭಿವ್ಯಕ್ತಿ

ಚಿತ್ರಕಲೆ, ನಾಟ್ಯಕಲೆ, ಶಿಲ್ಪಕಲೆ, ನಾಟಕ ಕಲೆ ಮುಂತಾದ ಸೃಜನಶೀಲ ಕಲೆಗಳಲ್ಲಿ, ಒಂದು ವಸ್ತು-ಕೇಂದ್ರಿತವಾದ ವಿವರಣೆ ಇರುತ್ತದೆ. ದೃಷ್ಟಿಗೆ ಗೋಚರವಾಗುವ ಮಾಧ್ಯಮವು ಇರುತ್ತದೆ. ಈ ಎಲ್ಲಾ ಮಾಧ್ಯಮಗಳು ಲೌಕಿಕದ ವಿವಿಧ ಆಯಾಮಗಳಿಗೆ ತೆರೆದುಕೊಳ್ಳುವ ಸಾಧ್ಯತೆ ಹೆಚ್ಚು. ಸಾಮಾಜಿಕ, ರಾಜಕೀಯ ತಿರುವುಗಳನ್ನು ಪಡೆಯುವ ಸಾಧ್ಯತೆಯೂ ಇಲ್ಲಿದೆ. ಎಷ್ಟೋ ಸಲ, ಮೂಲ ಉದ್ದೇಶವೇ ಮರೆಯಾಗಿ, ವಿರುದ್ಧ ದಿಕ್ಕಿನಲ್ಲಿ ಅಭಿವ್ಯಕ್ತವಾಗುವುದನ್ನು ಸಹ ನೋಡುತ್ತಿರುತ್ತೇವೆ. ಸಂಗೀತದ ಅಭಿವ್ಯಕ್ತಿಗೆ ಭಾಷೆಯ ಹಂಗಿಲ್ಲ. ಕೇವಲ ಸ್ವರ, ಲಯಗಳಲ್ಲಿ ಭಾವಾಭಿವ್ಯಕ್ತಿಯನ್ನು ಗ್ರಹಿಸಬಹುದು. ಆಲಿಸುವುದರಿಂದಲೇ ಶ್ರೋತೃಗಳು ಭಾವತೀವ್ರತೆಯ ಅನುಭೂತಿಯನ್ನು ಪಡೆಯಬಹುದು. ಎಲ್ಲ ವಿಧವಾದ ಸಂಗೀತಗಳಿಂದ, ಅದರದ್ದೇ ಆದ ವಿಭಿನ್ನ ಅನುಭವ ಪಡೆಯಲು ಸಾಧ್ಯವಿದ್ದರೂ, ಶಾಸ್ತ್ರೀಯ ಸಂಗೀತದಿಂದ ಮನೋವಿಕಾಸಕ್ಕೆ ಕಲಾತ್ಮಕವಾದ ಹರಹು ದೊರೆಯುತ್ತದೆ. ಯಾವುದೇ ಘಟನೆಯ ಕಥನವಿಲ್ಲದೆಯೂ, ಕೇವಲ ಆಲಾಪನೆ, ಕಲ್ಪನಾಸ್ವರ ವಿನ್ಯಾಸಗಳಿಂದ ಸಂಗೀತದಲ್ಲಿ ತಾದಾತ್ಮ್ಯವನ್ನು ಪಡೆಯಬಹುದು. ಶಾಸ್ತ್ರೀಯ ಸಂಗೀತದ **ಪ್ರಗಲ್ಭತೆ,** ಒಂದು ಸಮಾಜದ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿಹಿಡಿಯುತ್ತದೆ.

ಚಿಕಿತ್ಸಾತ್ಮಕ ಸಂಗೀತ

ಸಂಗೀತಕ್ಕೆ ಅದರದ್ದೇ ಆದ ವಿಭಿನ್ನ ಆಯಾಮಗಳಿವೆ. ವೈಜ್ಞಾನಿಕ, ಸಾಮಾಜಿಕ, ಮನೋವೈಜ್ಞಾನಿಕ, ಆಧ್ಯಾತ್ಮಿಕ ನೆಲೆಯಲ್ಲಿ, ಸಂಗೀತ ಬೆಳೆದು ಬಂದ ದಾರಿಯನ್ನು ಗಮನಿಸಿದರೆ, ಸಂಗೀತದ ವಿಶಾಲ ವ್ಯಾಪ್ತಿಯ ಅರಿವಾಗುತ್ತದೆ. ಸಂಗೀತಕ್ಕೆ ವಾಸ್ತವದ ಗ್ರಹಿಕೆಯನ್ನೇ ಬದಲಿಸುವ ಶಕ್ತಿ ಇದೆ. ಸಂಶೋಧನೆಗಳ ಪ್ರಕಾರ, ಸಂಗೀತವು ಮಿದುಳಿನಲ್ಲಿ ಡೋಪಮೈನ್ ಮತ್ತು ಸಿರೊಟೋನಿನ್ ಎಂಬ ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತದೆ. ಸಂಗೀತವು, ಮನಸ್ಥಿತಿ, ಸ್ಮರಣಶಕ್ತಿ ಮತ್ತು ದೃಶ್ಯಗಳನ್ನು ನೋಡುವ ರೀತಿಯನ್ನು ನಿರ್ದೇಶಿಸುತ್ತದೆ. ಅಂದರೆ ನಾವು ಕೇಳುವ ಹಾಡಿನ ಪ್ರಕಾರ, ನಮ್ಮ ಜಗತ್ತು ನಮಗೆ ಆ ಕ್ಷಣದಲ್ಲಿ ಸುಂದರವಾಗಿಯೋ, ಗಂಭೀರವಾಗಿಯೋ, ಶೋಕದ ಮಡುವಾಗಿಯೋ, ರಸಾನುಭೂತಿಯನ್ನು ನೀಡುವ ಸನ್ನಿವೇಶವಾಗಿಯೋ ಕಾಣಿಸಬಹುದು.

ಮನಸ್ಸಿನ ಒತ್ತಡವನ್ನು ಕಡಿಮೆ ಮಾಡಲು, ಭಾವನೆಗಳನ್ನು ಸಮತೋಲನದಲ್ಲಿಡಲು ಇತ್ತೀಚಿನ ದಿನದಲ್ಲಿ *Music Therapy*ಯನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಮೃದುವಾದ ಸಂಗೀತವನ್ನು ಆಲಿಸುವುದರಿಂದ cortisol (stress causing hormone) ಮಟ್ಟವನ್ನು ಕಡಿಮೆ ಮಾಡಲು ಸಾಧ್ಯ ಎನ್ನುವುದು ಸಾಬೀತಾದ ಅಂಶ. ಸುಮಧುರ ಸಂಗೀತವನ್ನು ಆಲಿಸುವ ಸಂದರ್ಭದಲ್ಲಿ ಹೃದಯವು ಸಹಜವಾಗಿ ಸ್ಪಂದಿಸಲಾರಂಭಿಸಿ, ಉಸಿರಾಟದ ವೇಗ ಸಮತೋಲನಕ್ಕೆ ಬರುತ್ತದೆ. ಇದರಿಂದ ಮನಸ್ಸು ನಿರಾಳವಾಗಿ, ವಿಶ್ರಾಂತ ಸ್ಥಿತಿಗೆ ಹೋಗುತ್ತದೆ. ಇದರಿಂದ, ಮೊದಲೇ ಖಿನ್ನವಾಗಿದ್ದ ಮನಸ್ಸಿನಲ್ಲಿ ಪ್ರಶಾಂತತೆ ಆವರಿಸಿದ ಭಾವ ಮೂಡುತ್ತದೆ. ಮಿದುಳಿನಲ್ಲಿ ಡೋಪಮೈನ್ ಉತ್ಪತ್ತಿ ಹೆಚ್ಚಿಸಿ, ಸಂಭ್ರಮದ ಭಾವಕ್ಕೆ ಕಾರಣವಾಗುತ್ತದೆ. ದೈಹಿಕ ನೋವುಗಳಾದ, ಸ್ನಾಯು ಸೆಳೆತ, ಶಸ್ತ್ರಚಿಕಿತ್ಸೆಯ ನಂತರದ ನೋವು, ಮಾಂಸಖಂಡಗಳ ಬಿಗಿತ, ತಲೆನೋವು ಈ ಎಲ್ಲವುಗಳ ತೀವ್ರತೆಯನ್ನು ಕಡಿಮೆ ಮಾಡುತ್ತದೆ. ಪ್ರತಿದಿನ ಸಂಗೀತಾಭ್ಯಾಸ (ಗಾಯನ, ಕೊಳಲು ವಾದನ, ಸ್ಯಾಕ್ಸೊಫೋನ್ ವಾದನ) ಮಾಡುವುದರಿಂದ ಉಸಿರಾಟದ ಪ್ರಕ್ರಿಯೆ ಅನೂಹ್ಯವಾಗಿ ಉತ್ತಮಗೊಳ್ಳುತ್ತದೆ. ''ನಾಭಿ ಹೃತ್ಕಂಠ ರಸನ ನಾಸಾದುಲ ಎಂತೋ ಶೋಬಿಲ್ಲು ಸಪ್ತಸ್ವರ ಸುಂದರುಲ ಭಜಿಂಪವೇ ಮನಸಾ...'' ಎಂದ ತ್ಯಾಗರಾಜರ ಕೀರ್ತನೆ ಇದನ್ನು ಪುಷ್ಟೀಕರಿಸುತ್ತದೆ. ನಾಭಿಯಿಂದ ಹೊರಡುವ ಉಸಿರು, ಹೃದಯದ ಮೂಲಕ ಕಂಠವನ್ನು ಹಾದು, ಬಾಯಿ, ನಾಲಿಗೆ, ಮೂಗು ಎಲ್ಲವುಗಳನ್ನು ಸ್ಪರ್ಶಿಸಿ ಹೊರಹೊಮ್ಮುತ್ತದೆ. ಶರೀರದ ನರನಾಡಿಗಳು ಸಚೇತನಗೊಳ್ಳುತ್ತವೆ. ಶ್ವಾಸಕೋಶ ಪೂರ್ಣ ಪ್ರಮಾಣದಲ್ಲಿ ಹಿಗ್ಗಿ ಕೆಲಸ ಮಾಡುತ್ತಾ, ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತದೆ.

ಒಬ್ಬರೇ ಇದ್ದಾಗಲೂ, ಏಕಾಂಗಿ ಅನ್ನುವ ಭಾವ ಹೋಗಿ, ಆ ಜಾಗದಲ್ಲಿ ಸಂಗೀತದ ಅನಂತ ಭಾವಲಹರಿಗಳು ಹರಡಿಕೊಂಡು, ಒಂಟಿತನವನ್ನು ಓಡಿಸಿಬಿಡುತ್ತವೆ. ಮನಸ್ಸು ಸಹಜ ಸ್ಥಿತಿಯಲ್ಲಿರುವಾಗ, ನಿದ್ರೆ, ಆಹಾರ ಎಲ್ಲವೂ ಸಹಜ ಸ್ಥಿತಿಗೆ ಬಂದುಬಿಡುತ್ತದೆ. ಗಾಳಿಗಿಂತಲೂ ವೇಗವಾಗಿರುವ ಮನಸ್ಸಿನ ಓಟಕ್ಕೆ, ನಿಧಾನ ಲಯದ ಸಂಗೀತ 'ಬ್ರೇಕ್' ಆಗಬಲ್ಲದು. ಸುಮಧುರ ಸಂಗೀತವು, ಮನಸ್ಸಿನ ಚಂಚಲತೆಯನ್ನು ಕಡಿಮೆ ಮಾಡಿ, ಮನಸ್ಸನ್ನು ಏಕಾಗ್ರಗೊಳಿಸುವ ದಿಕ್ಕಿನಲ್ಲಿ, ಅದ್ಭುತವಾಗಿ ಕೆಲಸ ಮಾಡುತ್ತದೆ. ಇದು ಮನಸ್ಸನ್ನು ಧ್ಯಾನಸ್ಥ ಸ್ಥಿತಿಗೆ ತಲುಪಿಸಿಬಿಡಬಲ್ಲದು.

'ಮೋಹನ' ರಾಗವು ಮನಸ್ಸಿಗೆ ಶಾಂತಿ ನೀಡಿದರೆ, 'ಕಲ್ಯಾಣಿ' ಆಶಾವಾದ ಮೂಡಿಸಿ, ಉತ್ಸಾಹ ತುಂಬುತ್ತದೆ. 'ಹಂಸಧ್ವನಿ' ಆತ್ಮಸ್ಥೈರ್ಯ ಹೆಚ್ಚಿಸುವ ನಿಟ್ಟಿನಲ್ಲಿ ನಡೆದರೆ, 'ಶಿವರಂಜಿನಿ' ಭಾವನಾತ್ಮಕ ಶುದ್ಧೀಕರಣಕ್ಕೆ ಸಹಾಯಮಾಡುತ್ತದೆ. ಹೀಗೆ ವಿಭಿನ್ನ ರಾಗಗಳು, ದಿನದ ಬೇರೆ ಬೇರೆ ಸಮಯಗಳಲ್ಲಿ, ಬೇರೆ ಬೇರೆ ರೀತಿಯಲ್ಲಿ ಒಳ್ಳೆಯ ಪರಿಣಾಮಗಳನ್ನು ಬೀರುತ್ತಾ, ಮನಸ್ಸನ್ನು ಆರೋಗ್ಯಕರವಾಗಿ ಇಡಬಲ್ಲವು. ಪ್ರತಿದಿನ, ಒಂದು ನಿಶ್ಚಿತ ಸಮಯದಲ್ಲಿ, ನಿರ್ದಿಷ್ಟ ರಾಗಗಳನ್ನು ಕೇಳುತ್ತಾ, ಕಣ್ಮುಚ್ಚಿ, ಆಳವಾದ ಉಸಿರಾಟದೊಂದಿಗೆ ಆ ಸಂಗೀತದಲ್ಲಿ ಲೀನವಾಗಬಹುದಾದರೆ, ಎಲ್ಲಾ ಅನಿಶ್ಚಿತತೆಗಳು ದೂರವಾದ ಭಾವ ಮೂಡಲು ಸಾಧ್ಯ. ಇಲ್ಲೆಲ್ಲಾ, ನಂಬಿಕೆ, ಶ್ರದ್ಧೆಗಳು ಮುಖ್ಯಪಾತ್ರ ನಿರ್ವಹಿಸುತ್ತವೆ. ಕೆಲವು ವರ್ಷಗಳ ಹಿಂದೆ, 67 ವರ್ಷದ ಒಬ್ಬಾಕೆ, ಅಪಘಾತವೊಂದರಲ್ಲಿ ತೀವ್ರ ಆಘಾತವಾಗಿ ತನ್ನ ಹೆಚ್ಚಿನದೆಲ್ಲವನ್ನು ಮರೆತಿದ್ದರು. ಎಲ್ಲ ಚಿಕಿತ್ಸೆಗಳು ಮುಗಿದ ನಂತರವೂ ಪೂರ್ಣ ನೆನಪು ಬಾರದೆ ಇದ್ದಾಗ, ಅವರನ್ನು Music Therapyಗೆ ಕರೆತರಲಾಯಿತು. ಆಕೆಯ ಸುಕೃತ ಎನ್ನುವಂತೆ ಅವರು ಮೊದಲೇ ಸಂಗೀತಾಭ್ಯಾಸಿಗಳಾಗಿದ್ದರು. ಕೆಲವು ದಿನಗಳ ಕಾಲ ಕ್ರಮಬದ್ಧವಾಗಿ ಸಂಗೀತವನ್ನು ಆಲಿಸಲು ಪ್ರಶಾಂತವಾದ ಸ್ಥಳದಲ್ಲಿ ಆಕೆಗೆ ಅನುವುಮಾಡಿಕೊಡಲಾಯಿತು. ಒಂದು ತಿಂಗಳಲ್ಲೇ ಆಕೆ ನೆನಪಿನ ಜಾಡು ಹಿಡಿಯಲಾರಂಭಿಸಿದರು. ನಾಲ್ಕು ತಿಂಗಳ ಹೊತ್ತಿಗೆ, ಅವರಿಗಾಗಿದ್ದ ಮಾತಿನ ತೊಡಕು ಸಹ ಹೋಗಿ, ತಾವೇ ಹಾಡಲಾರಂಭಿಸಿದರು. ಮತ್ತೆ ನಾಲ್ಕು ತಿಂಗಳ ನಿರಂತರ ಆಲಿಸುವಿಕೆ, ಅಭ್ಯಾಸಗಳಿಂದ ಕಛೇರಿ ಕೊಡುವಷ್ಟರ ಮಟ್ಟಿಗೆ ಸಿದ್ಧರಾಗಿಬಿಟ್ಟರು. ಇದೆಲ್ಲ ಸಾಧ್ಯವಾಗುವುದು ಮಧುರ ಸಂಗೀತದಿಂದ ಮಾತ್ರ. ಅದೇ ಸಂಗೀತ ಕರ್ಕಶ ಶಬ್ದವಾಗಿ ಮಾರ್ಪಟ್ಟರೆ, ಅಸ್ವಸ್ಥತೆಗೆ ಕಾರಣವಾಗಿಬಿಡುತ್ತದೆ. ಇತ್ತೀಚೆಗೆ, ಸಂಗೀತ ಎಂದರೆ ಅಬ್ಬರದ ಧ್ವನಿಯ ಕಿರುಚಾಟ ಎನ್ನುವಂತಾಗಿಬಿಟ್ಟಿದೆ. ಇದು ಮಾನಸಿಕವಾಗಿ, ದೈಹಿಕವಾಗಿ ವ್ಯತಿರಿಕ್ತ ಪರಿಣಾಮಗಳನ್ನೇ ಬೀರುತ್ತದೆ. ಆಸ್ಪತ್ರೆಯ ಮುಂದೆ 'ಸೈಲೆನ್ಸ್ ಪ್ಲೀಸ್' ಎನ್ನುವ ಫಲಕವಿತ್ತು. ಅದರ ಎದುರು ಗಾಡಿಯಲ್ಲಿ ಜೋರಾಗಿ, ಕರ್ಕಶವಾದ ಸಂಗೀತ ಅಬ್ಬರಿಸುತ್ತಿತ್ತು. ಆಗತಾನೆ ಹೃದಯ ಶಸ್ತ್ರಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಹೊರಬಂದ ರೋಗಿ, ಚಿಕಿತ್ಸೆ ಯಶಸ್ವಿಯಾಗಿದ್ದರೂ, ಸಂಗೀತದ ಅಬ್ಬರದಿಂದಾಗಿ ಹೃದಯಾಘಾತಕ್ಕೊಳಪಟ್ಟನಂತೆ. ಸಂಸ್ಕೃತಿಯ ದ್ಯೋತಕವಾದ ಸಂಗೀತ, ಮತ್ತೊಬ್ಬರ ಶಾಂತಿಯನ್ನು ಕದಡುವ ಮಟ್ಟಕ್ಕೆ ಇಳಿದರೆ, ಅದು ಕಲೆ ಅಲ್ಲ- ಮಾಲಿನ್ಯ. ಹಾಗಾಗದಂತೆ ಸೃಜನಶೀಲ ಸಂಗೀತವನ್ನು ಸವಿಯುವ ಸಂಸ್ಕಾರವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು.

ಜೋ ಜೋ ಲಾಲಿ ನಾ ಹಾಡುವೆ....

ಮಗುವು ನಿದ್ರೆಗೆ ಜಾರದೆ ರಚ್ಚೆ ಹಿಡಿದಿರುವಾಗ ಅಥವಾ ನಿದ್ರೆಯಿಂದ ಹಠಾತ್ತನೆ ಎಚ್ಚರಗೊಂಡು ಅಳತೊಡಗಿದಾಗ, ಅಮ್ಮನ ಜೋಗುಳ ಆರಂಭವಾದ ಕ್ಷಣದಲ್ಲಿ ಅದರ ಕಣ್ಣುಗಳು ನಿಧಾನವಾಗಿ ಮುಚ್ಚಿಕೊಳ್ಳುತ್ತವೆ. ಇದು ಭಾವನಾತ್ಮಕತೆಯೊಂದಿಗೆ, ಮಮತೆ, ನಾದ ಮತ್ತು ದೇಹಶಾಸ್ತ್ರ ಸಂಗಮವಾದುದರ ದ್ಯೋತಕ. ಜೋಗುಳದ ಲಯ ಇರುವುದು ಸಾಮಾನ್ಯವಾಗಿ ನಿಧಾನ ಗತಿಯಲ್ಲೇ. ಅಮ್ಮನ ಧ್ವನಿಯು ಮಗುವಿಗೆ ಗರ್ಭಾವಸ್ಥೆಯಿಂದಲೇ ಪರಿಚಿತವಾದ ಶಬ್ದ. ಹಾಗಾಗಿ ಜೋಗುಳದ ನಾದವು ಮಗುವಿಗೆ ಭದ್ರತೆಯ ಸಂಕೇತವನ್ನು ಕೊಟ್ಟುಬಿಡುತ್ತದೆ. ಮೃದು ಧ್ವನಿಗಳು ನರಮಂಡಲವನ್ನು ಶಾಂತಗೊಳಿಸಿ, ಉಸಿರಾಟವನ್ನು ಸಹಜಸ್ಥಿತಿಗೆ ತಂದು, ಮಗುವಿನ ಮಿದುಳಿನಲ್ಲಿ ನೆಮ್ಮದಿ ಮೂಡಿಸಿ, ನಿದ್ರೆಯ ಪ್ರಕ್ರಿಯೆ ಸಹಜವಾಗಿ ಆರಂಭವಾಗುತ್ತದೆ. ಮಗುವಿಗೆ ಪದಗಳ ಅರ್ಥ ಗೊತ್ತಿಲ್ಲದಿದ್ದರೂ, ಆ ನಾದದ ಅರಿವಾಗುತ್ತದೆ. ಆ ನಾದದಲ್ಲಿ 'ನೀನು ಸುರಕ್ಷಿತ' ಎಂಬ ಸಂದೇಶವು ಮಗುವಿನ ಸುಪ್ತ ಮನಸ್ಸನ್ನು ತಲುಪುತ್ತದೆ. ಇಲ್ಲಿ ಮಗುವಿಗೆ ಸಂಗೀತದೊಂದಿಗೆ ಅಮ್ಮನ ಸಂಬಂಧದ ಸ್ಪರ್ಶವೂ ಆಗುವುದು ವಿಶೇಷ. ಇಲ್ಲಿ ನಾದ, ಮಮತೆ, ಮನೋವಿಜ್ಞಾನ, ಶರೀರ ವಿಜ್ಞಾನ ಎಲ್ಲವೂ ಒಂದಾಗುವ ಅನನ್ಯ ಕ್ಷಣಗಳು ಸಾಕ್ಷೀಭೂತವಾಗಿ ಉಳಿಯುತ್ತವೆ. ಗದ್ದಲದ ಜಗತ್ತಿನಲ್ಲಿ ಮೃದುನಾದವು ಶಾಂತಿಯ ಸೇತುವೆ ಎನ್ನುವುದನ್ನು ಈ ದೃಶ್ಯ ನಮಗೆ ನೆನಪಿಸುತ್ತದೆ.

ಪ್ರಕೃತಿ ತತ್ವ

ಬೇರೆ ಬೇರೆ ಸ್ವರಗಳನ್ನು ವಿಭಿನ್ನವಾಗಿ ಸಂಯೋಜಿಸಿ, ಸಿದ್ಧಪಡಿಸಲಾದ ರಾಗಗಳು, ಮೊದಲಿಗೆ ಶ್ರೋತೃಗಳನ್ನು ತಲುಪುತ್ತವೆ. ವಾಕ್ಯಗಳ ಮೂಲಕ ಸಾಹಿತ್ಯ ಅರ್ಥವಾಗುವುದು ನಂತರದ ಪ್ರಕ್ರಿಯೆ. ವಾಕ್ಯಗಳಲ್ಲಿ ಪದಗಳು, ಪದಗಳಲ್ಲಿ ಅಕ್ಷರಗಳು, ಅಕ್ಷರಗಳಲ್ಲಿ ಸ್ವರಗಳು ಹೀಗೆ ಸಂಗೀತದ ಹರಹು ಆಳಕ್ಕೂ, ಅಗಲಕ್ಕೂ, ಎತ್ತರಕ್ಕೂ ವಿಸ್ತರಿಸುತ್ತಾ, ವಿಶಾಲವಾಗುತ್ತಾ ಸಾಗುತ್ತದೆ.

''ಸ್ವತೋ ರಂಜಯತಿ ಶ್ರೋತೃಚಿತ್ತಂ ಸ ಸ್ವರಮುಚ್ಯತೆ'' ಎಂದರೆ ತನ್ನಷ್ಟಕ್ಕೆ ತಾನೇ ಕೇಳುವವರ ಮನಸ್ಸಿಗೆ ರಂಜನೆಯನ್ನು ಉಂಟುಮಾಡುವ ಧ್ವನಿಗಳೇ ಸ್ವರಗಳು. ಧ್ವನಿಯ ವೈಶಿಷ್ಟ್ಯವೇನು ಕಡಿಮೆಯದ್ದಲ್ಲ. ಮಾತಿಗೊಂದು ಧ್ವನಿ, ವ್ಯಕ್ತಿಗೊಂದು ಧ್ವನಿ, ಸಮಾಜಕ್ಕೊಂದು ಧ್ವನಿ.. ಹೀಗೆ ಧ್ವನಿಸುತ್ತಾ, ಮಾರ್ದನಿಸುತ್ತಾ ಹೋಗುತ್ತದೆ. ಅಂದರೆ ಧ್ವನಿ (ಸ್ವರ) ಕೇವಲ ಗಾಯನಕ್ಕೆ ಸೀಮಿತವಲ್ಲ, ಬ್ರಹ್ಮಾಂಡದಲ್ಲೆಡೆ ಎಲ್ಲಕ್ಕೂ ಅದರದ್ದೇ ಆದ ಧ್ವನಿಗಳಿವೆ. ಈ ಧ್ವನಿಗಳನ್ನು ಬಾಧಿಸದೆ, ಅದರದ್ದೇ ಪ್ರಕೃತಿಗೆ ಘಾಸಿಯಾಗದಂತೆ ಕಾಳಜಿ ವಹಿಸುವವರು ಸ್ವರಾರಾಧಕರು. ಸ್ವರ ಪ್ರಭೇದಗಳಾದ ಪ್ರಕೃತಿ ಸ್ವರ, ವಿಕೃತಿ ಸ್ವರಗಳನ್ನೆಲ್ಲ ಶ್ರುತಿಬದ್ಧವಾಗಿ, ಕಂಠದಿಂದಲೂ, ವಾದ್ಯದಿಂದಲೂ ನುಡಿಸುವವರು ಸುರೀಲರು.

'ಪ್ರಕೃತಿ ಸ್ವರ' ಎನ್ನುವುದನ್ನು ಸಂಗೀತದ ಪಾರಿಭಾಷಿಕ ಶಬ್ದವಾಗಿ ನೋಡದೆ, ಸಾರ್ವತ್ರಿಕವಾಗಿ ನೋಡುವುದಾದರೆ, ಅದು ಪ್ರಕೃತಿಯದ್ದೇ ಆದ ಸ್ವರ. ಪ್ರಕೃತಿಯ ಮೂಲ ಪ್ರವೃತ್ತಿಯನ್ನು ಧ್ವನಿಸುವಂಥ ಪ್ರಕೃತಿಯ ಧ್ವನಿ. ಇದಕ್ಕೆ ಧಕ್ಕೆಯಾಗದಂತೆ ವರ್ತಿಸುವವರು, ಕಾಳಜಿ ವಹಿಸುವವರು ಸುರೀ ಪ್ರವೃತ್ತಿಯವರು. ಮತ್ತೆ ಸಂಗೀತದ ಪರಿಭಾಷೆಗೆ ಮರಳಿದರೆ ಸಂಗೀತದ ಸಪ್ತಸ್ವರಗಳಲ್ಲಿ 'ಪ್ರಕೃತಿ ಸ್ವರ'ಗಳೆಂದರೆ ಎರಡು ಮಾತ್ರ. ಅವು 'ಸ' ಮತ್ತು 'ಪ' ಮಾತ್ರ. ಪ್ರಕೃತಿ ಸ್ವರಗಳು ನಿರ್ದಿಷ್ಟವಾಗಿರುವ ಸ್ವರಗಳು. ಇವು ಎಲ್ಲ ರಾಗಗಳಲ್ಲಿಯೂ ಒಂದೇ ತೆರನಾಗಿದ್ದು, ಬದಲಾಗದೆ ಉಳಿಯುತ್ತವೆ. ಉಳಿದ ಐದು ಸ್ವರಗಳು 'ವಿಕೃತಿ ಸ್ವರ'ಗಳೆನಿಸಿಕೊಳ್ಳುತ್ತವೆ. ಇವುಗಳು ರಾಗದಿಂದ ರಾಗಕ್ಕೆ ಬದಲಾಗುತ್ತಾ ಹೋಗುತ್ತವೆ. ಪ್ರಕೃತಿ ಸ್ವರಗಳು ಮತ್ತು ವಿಕೃತಿ ಸ್ವರಗಳು ವಿರುದ್ಧ ಗುಣ ಸ್ವಭಾವಗಳನ್ನು ಹೊಂದಿದ್ದರೂ ಇವು ಯಾವುವೂ ವಿರುದ್ಧ ಧ್ವನಿಗಳಲ್ಲ, ಸ್ವರಗಳೆಲ್ಲವೂ ಪರಸ್ಪರ ಪೂರಕವೇ. ಎಲ್ಲವೂ ಒಂದಾಗಿ ರಾಗಕ್ಕೆ ಸಂಪನ್ನತೆಯನ್ನು ಕೊಟ್ಟು ಪೂರ್ಣವಾಗುವಂತೆ ಮಾಡುವ ಗುಣ ಎಲ್ಲ ಸ್ವರಗಳಿಗೂ ಇವೆ. ಹಾಗೆಯೇ ಬ್ರಹ್ಮಾಂಡದಲ್ಲಿನ, ಅಂದರೆ ಪ್ರಕೃತಿಯಲ್ಲಿನ ಎಲ್ಲ ಧ್ವನಿಗಳು ಒಂದಕ್ಕೊಂದು ಪೂರಕವೇ ಆಗಿವೆ. ಇಲ್ಲಿ ಯಾವುದೂ ವಿರುದ್ಧವಲ್ಲ. ಎಲ್ಲವೂ ಮೇಳೈಸಿದಾಗಲೇ ಸುಂದರ ಜಗತ್ತು. ಇದು ಪ್ರಕೃತಿ ಸಾರುವ ನೀತಿ. ಸಂಗೀತದ ಜೀವಾಳವೂ ಇದೇ ಆಗಿದೆ. ಸಕಲ ಚರಾಚರಗಳನ್ನು ಒಳಗೊಳ್ಳುವ ಜಗದ ದನಿಯೇ ನಾದ. ಸಂಗೀತಕ್ಕೆ ಭಾಷೆಯ ಚೌಕಟ್ಟಿಲ್ಲ. ನಾದ ತಾನೇ ಭಾಷೆಯಾಗಿ, ವಿಶ್ವದ ಹೃದಯಗಳನ್ನು ಬೆಸೆಯುತ್ತಾ, ಎಲ್ಲರನ್ನೂ, ಎಲ್ಲವನ್ನೂ ತನ್ನ ಅಂತರಂಗದೊಳಗೆ ಭಾವ ಬಂಧಿಗಳನ್ನಾಗಿಸಿಬಿಟ್ಟಿದೆ. 'ನಾದಾಧೀನಂ ಜಗತ್ ಸರ್ವಂ'..... 'ನಾದಮಯ ಈ ಲೋಕವೆಲ್ಲ...'

ಉಪನಿಷತ್ತಿನ ನಾದತತ್ವ ಮತ್ತು ರಾಗಗಳ ಅನುಭವ ಶಾಸ್ತ್ರ ಒಂದೇ ಆಂತರಿಕ ಚೇತನದ ಎರಡು ಮುಖಗಳು. ಇಲ್ಲಿ, 'ನಾದೋ ಬ್ರಹ್ಮ' (ನಾದವೇ ಬ್ರಹ್ಮ) ಎನ್ನುವುದರ ಮೂಲಕ, ನಾದವನ್ನು ಬ್ರಹ್ಮ ತತ್ವದ ಪ್ರಕಟಣೆಯೆಂದು ಕಾಣಲಾಗುತ್ತದೆ. 'ಓಂಕಾರ ಏತದಕ್ಷರಂ ಇದಂ ಸರ್ವಂ..' ಓಂಕಾರವೇ ಎಲ್ಲ ನಾದಗಳ ಮೂಲವೆಂದು ಉಪನಿಷತ್ತುಗಳು ಹೇಳುತ್ತವೆ. ರಾಗವು ಚಿತ್ತವೃತ್ತಿ ನಿಯಂತ್ರಣದ ಸಾಧನ. 'ಶಬ್ದಾತೀತಂ ಬ್ರಹ್ಮ' ಎನ್ನುವಂತೆ, ರಾಗವು ಸಾಧಕನನ್ನು ಶಬ್ದದಿಂದ ಶಬ್ದಾತೀತದವರೆಗೆ ಕರೆದೊಯ್ಯುತ್ತದೆ. ನಾದವು ಬ್ರಹ್ಮಾನುಭವಕ್ಕೆ ದಾರಿ. ರಾಗವು ಆ ದಾರಿಯಲ್ಲಿ ನಡೆಯುವ ಕ್ರಮ.

(ಲೇಖಕಿ ಕೋಲಾರ ಜಿಲ್ಲಾ ನ್ಯಾಯಾಲಯದ ಕಾನೂನು ಅರಿವು ಜಾಗೃತಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ)



ಹಾಲಿನ ಹನಿಗಳ ಹಿಂದೆ ಸಂಗೀತ ವಿಜ್ಞಾನ

ಕೃಷ್ಣ ಕಣ್ಮುಚ್ಚಿ ಕೊಳಲೂದುತ್ತಿದ್ದಾನೆ, ಅದುವರೆಗೂ ಮೇಯುತ್ತಿದ್ದ ಹಸುಗಳು ಅವನತ್ತ ಓಡಿಬರುತ್ತಿವೆ- ಇದು ನಮ್ಮ ಸ್ಮೃತಿಯಲ್ಲಿ ಮತ್ತೆ ಮತ್ತೆ ಮೂಡುವ ಸುಂದರ ದೃಶ್ಯ. ಇದು ಕೇವಲ ಪೌರಾಣಿಕ ಕಲ್ಪನೆ ಅಲ್ಲ. ಮಾನವ, ಪ್ರಕೃತಿ, ಸಂಗೀತ ಸಂಬಂಧದ ಆಳವಾದ ಸಂಕೇತ. ಸಂಗೀತಕ್ಕೆ ಜೀವಿಗಳನ್ನು ಆಕರ್ಷಿಸುವ ಶಕ್ತಿ ಇದೆ. ಕೃಷ್ಣನ ಕೊಳಲಿನ ದನಿ ಅವುಗಳಿಗೆ, ಮಮತೆ, ಭರವಸೆ. ಇಲ್ಲಿ ಸಂಗೀತ ಅವುಗಳಿಗೆ ಆಜ್ಞೆಯಲ್ಲ, ಆಮಂತ್ರಣದ ರೀತಿ ಕೆಲಸ ಮಾಡುತ್ತದೆ. ಮನಸ್ಸುಗಳನ್ನು ಗೆಲ್ಲಲು ಧಾರ್ಷ್ಟ್ಯ ಬೇಡ, ಮೃದುನಾದವೇ ಸಾಕು ಎನ್ನುವ ಸಂಕೇತ ಇಲ್ಲಿಯದು. ಹಸುಗಳು ಸಹ ಮಾನವರೊಟ್ಟಿಗೆ ಬದುಕುವ ಸಹಜೀವಿಗಳು. ಅವುಗಳಿಗೂ ಭಯ, ಒತ್ತಡ ಇವೆ. ಹಾಲು ಬಿಡುವಿಕೆಗಾಗಿ, ಆಕ್ಸಿಟೋಸಿನ್ ಎನ್ನುವ ಹಾರ್ಮೋನ್, ಶಾಂತ ಪರಿಸ್ಥಿತಿಯಲ್ಲಿಯಷ್ಟೇ ಚೆನ್ನಾಗಿ ಕೆಲಸ ಮಾಡುತ್ತದೆ. ಗದ್ದಲದ ವಾತಾವರಣದಲ್ಲಿ, ಒತ್ತಡ ಹೆಚ್ಚಾದಾಗ ಹಾಲನ್ನು ಬಿಡುವುದು ಹಸುಗಳಿಗೆ ಕಷ್ಟದ ಕೆಲಸ. ಮೃದು, ಮಧುರ ಸಂಗೀತವು ನರಮಂಡಲವನ್ನು ಸಮತೋಲನಗೊಳಿಸಿ, ಒತ್ತಡವನ್ನು ಕಡಿಮೆ ಮಾಡಿ, ಹಸುಗಳ ಹಾಲು ನೀಡುವ ಪ್ರಮಾಣ, ಗುಣಮಟ್ಟ ಎಲ್ಲವನ್ನು ಹೆಚ್ಚಿಸುತ್ತದೆ. ಹಸುಗಳ ಹಾಲಿನ ಹಿಂದೆ ಕೇವಲ ಆಹಾರವಲ್ಲ, ಸಂಗೀತದ ಪರಿಸರವೂ ವೈಜ್ಞಾನಿಕವಾಗಿ ಕೆಲಸ ಮಾಡುತ್ತದೆ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 283

ಸಮಾಚಾರ ಸಣ್ಣದಲ್ಲ

ವಿಜಯ್ ಟಿವಿಕೆ ರ್‍ಯಾಲಿಯಲ್ಲಿ ಮತ್ತೊಂದು ಸಾವು

ಚೆನ್ನೈ: ನಟ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ ರ್‍ಯಾಲಿಯಲ್ಲಿ ಭಾಗವ 'ಹಿಸಿದ್ದ 37 ವರ್ಷದ ವ್ಯಕ್ತಿಯೊಬ್ಬರು ಸ್ಥಳದಲ್ಲಿಯೇ ಕುಸಿದು ಬಿದ್ದು ಸಾವನ್ನಪ್ಪಿದ ಘಟನೆ ಸೇಲಂ ಜಿಲ್ಲೆಯಲ್ಲಿ ನಡೆದಿದೆ. ಮಹಾರಾಷ್ಟ್ರ ಮೂಲದ ಎಸ್.ಸೂರಜ್ (37) ಮೃತ ವ್ಯಕ್ತಿ. ಕಳೆದ 20 ವರ್ಷಗಳಿಂದ ಸೂರಜ್ ಸೇಲಂ ಜಿಲ್ಲೆಯ ಕೊಂಡಲಂಪಟ್ಟಿ ಬಳಿಯ ಅರಸಮರತು ಕಟ್ಟೂರಿನಲ್ಲಿ ತಮ್ಮ ಕುಟುಂಬದೊಂದಿಗೆ ವಾಸಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.ಸೂರಜ್ ಸೀಲನೈಕೆನ್ಪಟ್ಟಿಯಲ್ಲಿ ನಡೆದ ಟಿವಿಕೆ ಕಾರ್ಯಕರ್ತರ ಸಭೆಯಲ್ಲಿ ಇತರ ಕೆಲವು ಸ್ಥಳೀಯ ಟಿವಿಕೆ ಕಾರ್ಯಕರ್ತರೊಂದಿಗೆ ಭಾಗವಹಿ ಸಿದ್ದರು. ಎರಡು ಗಂಟೆಗಳಿಗೂ ಹೆಚ್ಚು ಕಾಲ ಸುಡುವ ಬಿಸಿಲಿನಲ್ಲಿ ರ್‍ಯಾಲಿಯಲ್ಲಿದ್ದಾಗ ಇದ್ದಕ್ಕಿದ್ದಂತೆ ಮೂರ್ಛೆ ಹೋಗಿ ಬಿದ್ದಿದ್ದಾರೆ. ಕೂಡಲೇ ಟಿವಿಕೆ ಕಾರ್ಯಕರ್ತರು ಸ್ಥಳದಲ್ಲಿದ್ದ ಆ್ಯಂಬುಲೆನ್ಸ್‌ನಲ್ಲಿ ಸ್ಥಳೀಯ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ ಆಸ್ಪತ್ರೆ ತಲುಪುವ ಮುನ್ನವೇ ಅವರು ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಸೂರಜ್ ಒಂದೂವರೆ ವರ್ಷಗಳ ಹಿಂದೆ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿ ದ್ದರು. ಕುಟುಂಬ ಸದಸ್ಯರಿಂದ ದೂರು ಬಂದ ನಂತರ ಅವರ ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಮೃತರು ಪತ್ನಿ ಪ್ರಿಯಾ (35), 11 ವರ್ಷದ ಮಗಳು ಮತ್ತು ಏಳು ವರ್ಷದ ಮಗನನ್ನು ಅಗಲಿದ್ದಾರೆ. ಸೆಪ್ಟೆಂಬರ್ 27ರಂದು ತಮಿಳುನಾಡಿನ ಕರೂರಿನಲ್ಲಿ ನಡೆದ ಕಾಲ್ತುಳಿತ ಸಂಭವಿಸಿತ್ತು. ಈ ದುರಂತದಲ್ಲಿ 41 ಮಂದಿ ಸಾವನ್ನಪ್ಪಿದ್ದರು.

ಫೆ.21ಕ್ಕೆ ಅಸ್ಸಾಮ್‌ಗೆ ಅಮಿತಾ ಶಾ ಭೇಟಿ

ದಿಸ್ಪುರ: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಫೆ.21ರಂದು ಅಸ್ಸಾಮ್‌ನ ಕಚಾರ್ ಜಿಲ್ಲೆಯಲ್ಲಿರುವ ಭಾರತ-ಬಾಂಗ್ಲಾದೇಶ ಅಂತಾರಾಷ್ಟ್ರೀಯ ಗಡಿಗೆ ಭೇಟಿ



ನೀಡಲಿದ್ದಾರೆ. ಅಮಿತ್ ಶಾ ಅವರು ಫೆ.20ರಂದು ಅಸ್ಸಾಮ್ ತಲುಪುವ ನಿರೀಕ್ಷೆಯಿದೆ. ಮಾರನೇ ದಿನ ಫೆ.21ರಂದು ಭಾರತ- ಬಾಂಗ್ಲಾ ಅಂತಾರಾಷ್ಟ್ರೀಯ ಗಡಿಯ ಬಳಿಯ ನಟನ್ಪುರ ಗ್ರಾಮಕ್ಕೆ ಭೇಟಿ ನೀಡಲಿದ್ದಾರೆ. ಈ ವೇಳೆ ವೈಬ್ರೆಂಟ್ ವಿಲೇಜಸ್ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಗೃಹ ಸಚಿವಾಲಯ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ, ಜೀವನೋಪಾಯ ಸೃಷ್ಟಿ, ಪ್ರವಾಸೋದ್ಯಮ ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರಚಾರ, ಕೌಶಲ್ಯ ಅಭಿವೃದ್ಧಿ ಮತ್ತು ಕೃಷಿ ಮತ್ತು ಸಂಬಂಧಿತ ವಲಯಗಳನ್ನು ಬಲಪಡಿಸುವತ್ತ ಗಮನಹರಿಸುತ್ತದೆ ಎಂದು ಮೂಲಗಳು ತಿಳಿಸಿವೆ. ಕಚಾರ್ ಜಿಲ್ಲೆಯ ಕಟಿಗೋರಾ ಪ್ರದೇಶದಲ್ಲಿರುವ ನಟನ್ಪುರದಲ್ಲಿ ಇತ್ತೀಚಿನ ವರ್ಷಗಳಲ್ಲಿ ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್ ಪ್ರಜೆಗಳು ಸೇರಿದಂತೆ 200ಕ್ಕೂ ಹೆಚ್ಚು ಅಕ್ರಮ ವಲಸಿಗರನ್ನು ಬಂಧಿಸಲಾಗಿದೆ.

ಬಾಂಧವ್ಯವೃದ್ಧಿಗಾಗಿ ಚೀನಾಕ್ಕೆ ಟಿಬೆಟ್ ಬಿಟ್ಟಿದ್ದ ನೆಹರು: ಸಿಡಿಎಸ್ ಅನಿಲ್

ಡೆಹ್ರಾಡೂನ್: ನೆರೆ ದೇಶವಾದ ಚೀನಾದೊಂದಿಗೆ ಉತ್ತಮ ಬಾಂಧವ್ಯವನ್ನು ಉಂಟು ಮಾಡುವ



ಉದ್ದೇಶದಿಂದ ಮಾಜಿ ಪ್ರಧಾನಿ ಜವಹರಲಾಲ್ ನೆಹರು ಅವರು, ಟಿಬೆಟ್ ಅನ್ನು ಚೀನಾದ ಭಾಗವೆಂದು ಗುರುತಿಸಿದ್ದರು ಎಂದು ಭಾರತದ ಮೂರೂ ಸೇನಾಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ವ್ಯಾಖ್ಯಾನಿಸಿದ್ದಾರೆ. ಶುಕ್ರವಾರ ಡೆಹ್ರಾಡೂನ್‌ನಲ್ಲಿ ನಡೆದ ಭಾರತ ಹಿಮಾಲಯನ್ ಸ್ಟ್ರಾಟಜಿ ಫೋರಂ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಭಾರತ ಮತ್ತು ಚೀನಾ ದೇಶದ ನಡುವೆ ನೆಹರೂ ಕಾಲದಲ್ಲಿ ನಡೆದ ಪಂಚಶೀಲ ಒಪ್ಪಂದವನ್ನು ಉಲ್ಲೇಖಿಸಿದ ಅವರು, ಭಾರತವನ್ನು ಬ್ರಿಟಿಷರು ತೊರೆದ ನಂತರದಲ್ಲಿ ಗಡಿಯನ್ನು ಗುರುತಿಸುವ ಜವಾಬ್ದಾರಿ ಭಾರತದ ಮೇಲಿತ್ತು. ಭಾರತ ಮತ್ತು ಚೀನಾ ಗಡಿ ಭಾಗದ ಪೂರ್ವದಲ್ಲಿ ಮೆಕ್ ಮೋಹನ್ ಲೇನ್ ಇತ್ತು. ಲಡಾಖ್ ಭಾಗದಲ್ಲಿ ಕೆಲವು ಪ್ರದೇಶಗಳು ಭಾರತಕ್ಕೆ ಒಳಪಡುವುದಾಗಿತ್ತು. ಈ ವಿಚಾರ ಮಾಜಿ ಪ್ರಧಾನಿ ಜವಹರಲಾಲ್ ನೆಹರೂ ಅವರಿಗೂ ತಿಳಿದಿತ್ತು. ಆದರೆ ಮಧ್ಯವಲಯದಲ್ಲಿ ಈ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಹಾಗಾಗಿ ನೆಹರುರವರು ಪಂಚಶೀಲ ಒಪ್ಪಂದಕ್ಕೆ ಮುಂದಾಗಿದ್ದರು. ಆದರೆ ಈ ಒಪ್ಪಂದ ಬರೀ ವ್ಯಾಪಾರಕ್ಕೆ ಮಾತ್ರ ಸೀಮಿತ ಎಂಬ ನಿಲುವು ತಾಳಿತು ಎಂದು ಹೇಳಿದರು.

ಅಮೆರಿಕದ ಮತ್ತೊಂದು ಯುದ್ಧನೌಕೆ ಇರಾನ್‌ನತ್ತ

ವಾಷಿಂಗ್ಟನ್: ಇರಾನ್ ವಿರುದ್ಧ ಮಿಲಿಟರಿ ಕ್ರಮ ಕೈಗೊಳ್ಳಲು ಮುಂದಾಗಿರುವ ನಡುವೆಯೇ, ಪಶ್ಚಿಮ ಏಷ್ಯಾದಲ್ಲಿ ಎರಡನೇ ಯುದ್ಧ ವಿಮಾನ ವಾಹಕ ನೌಕೆಯನ್ನು ನಿಯೋಜಿಸಲು ಅಮೆರಿಕ ತಯಾರಿ ನಡೆಸಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಇರಾನಿನ ಪರಮಾಣು ಯೋಜನೆ ಕುರಿತು ಅಮೆರಿಕ ಹಾಗೂ ಇರಾನ್ ಕಳೆದ ವಾರ ಮಾತುಕತೆ ಆರಂಭಿಸಿದ್ದವು. ಪರಮಾಣು ಒಪ್ಪಂದ'ವನ್ನು ಮಾಡಿಕೊಳ್ಳದೇ ಹೋದರೆ ಆಘಾತಕಾರಿ ಪರಿಣಾಮಗಳನ್ನು ಎದುರಿಸಬೇಕಾಗಬಹುದು ಎಂದು ಟ್ರಂಪ್, ಇರಾನ್‌ಗೆ ಗುರುವಾರ ಎಚ್ಚರಿಕೆ ನೀಡಿದ್ದಾರೆ. ಯುಎಸ್‌ಎಸ್ ಅಬ್ರಹಾಂ ಲಿಂಕನ್ ಯುದ್ಧ ವಿಮಾನ ವಾಹಕ ನೌಕೆ ಹಾಗೂ ಇತರ ಯುದ್ಧ ನೌಕೆಗಳನ್ನು ಅಮೆರಿಕವು ಕಳೆದ ತಿಂಗಳು ಪಶ್ಚಿಮ ಏಷ್ಯಾಕ್ಕೆ ಕಳುಹಿಸಿತ್ತು. ಇದೀಗ ಯುಎಸ್‌ಎಸ್ ಜೆರಾಲ್ಡ್ ಆರ್.ಫೋರ್ಡ್ ನೌಕೆಯನ್ನು ಕಳುಹಿಸಿದೆ.

ಮಾಜಿ ಪ್ರಧಾನಿ ಖಾಲಿದಾ ಜಿಯಾ ಪುತ್ರ ತಾರಿಖ್ ರೆಹಮಾನ್ ಪ್ರಧಾನಿಯಾಗುವುದು ಖಚಿತ | ಹಸೀನಾ ನಮಗೊಪ್ಪಿಸಿ: ರೆಹಮಾನ್ ಕ್ಯಾತೆ
ಅವಾಮಿ ಲೀಗ್‌ಗೆ ನಿಷೇಧ, ಏಕಪಕ್ಷೀಯ ಚುನಾವಣೆಯಲ್ಲಿ ಬಿಎನ್‌ಪಿಗೆ 212 ಸ್ಥಾನ | 11 ಪಕ್ಷಗಳ ಮೈತ್ರಿಕೂಟಕ್ಕೆ ಸೋಲು, ಬರೀ 77 ಸ್ಥಾನ

ಬಾಂಗ್ಲಾ: ಭಾರತ ವಿರೋಧಿ ಬಿಎನ್‌ಪಿಗೆ ಅಧಿಕಾರ

ಢಾಕಾ: ಬಾಂಗ್ಲಾ ಸಾರ್ವತ್ರಿಕ ಚುನಾವಣೆಯ ಫಲಿತಾಂಶ ಬಂದಿದ್ದು 212 ಸ್ಥಾನ ಗಳಿಸಿದ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಕ್ಷ (ಬಿಎನ್‌ಪಿ) ಅಧಿಕಾರಕ್ಕೇರುವುದು ಖಚಿತವಾಗಿದೆ. ಒಟ್ಟು 350 ಸ್ಥಾನಗಳಿಗೆ ಚುನಾವಣೆ ನಡೆದಿತ್ತು. 17 ವರ್ಷಗಳ ಕಾಲ ದೇಶಬಿಟ್ಟು ಓಡಿಹೋಗಿದ್ದ ಮಾಜಿ ಪ್ರಧಾನಿ ಖಾಲಿದಾ ಜಿಯಾ ಪುತ್ರ ತಾರಿಖ್ ರೆಹಮಾನ್ ಪ್ರಧಾನಿ ಸ್ಥಾನಕ್ಕೇರಲಿದ್ದಾರೆ. 2024ರಲ್ಲಿ ನಡೆದ ದಂಗೆಯ ಪರಿಣಾಮ ಬಾಂಗ್ಲಾ ಬಿಟ್ಟು ಭಾರತದಲ್ಲಿ ಆಶ್ರಯ ಪಡೆದಿರುವ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಅವಾಮಿ ಲೀಗ್‌ಗೆ ನಿಷೇಧ ಹೇರಲಾಗಿದೆ. ಹಾಗಾಗಿ ಈ ಚುನಾವಣೆ ಬಹುತೇಕ ಏಕಪಕ್ಷೀಯವಾಗಿ ನಡೆದಿತ್ತು. ಈಗಾಗಲೇ ಬಿಎನ್‌ಪಿ ಗೆಲ್ಲುವುದು ಖಚಿತವಾಗಿತ್ತು. ಬಿಎನ್‌ಪಿಗೆ ಎದುರಾಳಿಗಳಾಗಿ ಸ್ಪರ್ಧಿಸಿದ್ದ ಜಮಾತ್ ಎ ಇಸ್ಲಾಮಿ ನೇತೃತ್ವದ 11 ಪಕ್ಷಗಳ ಮೈತ್ರಿಕೂಟ ಸದ್ಯದ ಮಟ್ಟಿಗೆ 77 ಸ್ಥಾನಿಗಳಲ್ಲಿ ಜಯ ಸಾಧಿಸಿವೆ.

ಪೂರ್ಣ ಏಕಪಕ್ಷೀಯ ಚುನಾವಣೆಯಲ್ಲಿ ಗೆದ್ದಿರುವ ತಾರಿಖ್ ರೆಹಮಾನ್ ಪಕ್ಷಕ್ಕೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ. ಬಾಂಗ್ಲಾ ಅಭಿವೃದ್ಧಿಗೆ ಎಲ್ಲ ರೀತಿಯ ನೆರವು ನೀಡಲು ಸಿದ್ಧ ಎಂದು ತಿಳಿಸಿದ್ದಾರೆ. ಆದರೆ ಗೆಲ್ಲುತ್ತಿದ್ದಂತೆಯೇ ರೆಹಮಾನ್, ಶೇಖ್ ಹಸೀನಾರನ್ನು ನಮಗೊಪ್ಪಿಸಿ ಎಂದು ಭಾರತದೊಂದಿಗೆ ಕ್ಯಾತೆ ತೆಗೆದಿದ್ದಾರೆ. ಬಿಎನ್‌ಪಿ ಯಾವಾಗಲೂ ಭಾರತ ವಿರೋಧಿಯಾಗಿಯೇ ವರ್ತಿಸಿದೆ. ಈ ಬಾರಿಯಾದರೂ ಅದರ ನಿಲುವು ಬದಲಾಗಲಿದೆಯಾ ಎಂಬ ಪ್ರಶ್ನೆಗಳಿವೆ.

ಯೂನಸ್ ಸರ್ಕಾರದ ಅವಧಿಯಲ್ಲಿ ಭಾರತದ ಮುಂದಿಟ್ಟಿದ್ದ ಬೇಡಿಕೆಯನ್ನು ಈಗ ಗೆಲುವಿನ ನಂತರ ಬಿಎನ್ ಪಿಯೂ ಮುಂದುವರಿಸಿದೆ. ಪದಚ್ಯುತ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರನ್ನು ವಿಚಾರಣೆ ಎದುರಿಸಲು ಭಾರತದಿಂದ ಗಡಿಪಾರು ಮಾಡಬೇಕೆಂಬ ತನ್ನ ದೃಢ ನಿಲುವನ್ನು ಬಿಎನ್‌ಪಿ ಪುನರುಚ್ಚರಿಸಿದೆ.

ವಿದೇಶಾಂಗ ಸಚಿವರು ಈಗಾಗಲೇ ಅವರ ಹಸ್ತಾಂತರಕ್ಕಾಗಿ ಮನವೊಲಿಸಿದ್ದಾರೆ ಮತ್ತು ನಾವು ಸಹ ಅದನ್ನು ಬೆಂಬಲಿಸುತ್ತೇವೆ ಎಂದು ಬಿಎನ್‌ಪಿಯ ಹಿರಿಯ ನಾಯಕ ಸಲಾಹುದ್ದೀನ್ ಅಹ್ಮದ್ ಹೇಳಿದ್ದಾರೆ. ಕಾನೂನಿನ ಪ್ರಕಾರ ಅವರನ್ನು ಹಸ್ತಾಂತರಿಸಲು ನಾವು ಯಾವಾಗಲೂ ಒತ್ತಾಯಿಸುತ್ತೇವೆ. ಇದು ಎರಡು ದೇಶಗಳ ವಿದೇಶಾಂಗ ಸಚಿವಾಲಯಗಳ ನಡುವಿನ ಪ್ರಕ್ರಿಯೆಯಾಗಿದೆ. ಬಾಂಗ್ಲಾದೇಶದಲ್ಲಿ ವಿಚಾರಣೆ ಎದುರಿಸಲು ದಯವಿಟ್ಟು ಅವರನ್ನು ವಾಪಸ್ ಕಳುಹಿಸುವಂತೆ ನಾವು ಭಾರತ ಸರ್ಕಾರವನ್ನು ಕೇಳಿಕೊಂಡಿದ್ದೇವೆ ಎಂದು ಅವರು ಹೇಳಿದರು.

ಬಾಂಗ್ಲಾ ದೇಶದ ಸಂಸತ್ ಚುನಾವಣೆಯಲ್ಲಿ ಬಿಎನ್‌ಪಿಯನ್ನು ನಿರ್ಣಾಯಕ ಗೆಲುವಿನತ್ತ ಮುನ್ನಡೆಸಿದ್ದಕ್ಕಾಗಿ ತಾರಿಕ್ ರೆಹಮಾನ್ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ. ಭಾರತವು ಪ್ರಜಾಪ್ರಭುತ್ವ, ಪ್ರಗತಿಪರ ಮತ್ತು ಎಲ್ಲರನ್ನೂ ಒಳಗೊಂಡ ಬಾಂಗ್ಲಾದೇಶದ ಬೆಂಬಲದೊಂದಿಗೆ ಮುಂದುವರಿಯುತ್ತದೆ.

-ನರೇಂದ್ರ ಮೋದಿ, ಭಾರತದ ಪ್ರಧಾನಿ

ಹಿಂದೂ ನಾಯಕ ಗಯೇಶ್ವರ್ ಚಂದ್ರಗೆ ಜಯ

ಬಿಎನ್‌ಪಿ ಹಿರಿಯ ನಾಯಕ ಹಾಗೂ ಅಲ್ಪಸಂಖ್ಯಾತ ಹಿಂದೂ ಸಮಾಜದ ಮುಖಂಡರಾಗಿ ಗುರುತಿಸಿಕೊಂಡಿರುವ ಗಯೇಶ್ವರ್ ಚಂದ್ರ ರಾಯ್ ಅವರು ಬಾಂಗ್ಲಾದೇಶದ 13ನೇ ಸಾರ್ವತ್ರಿಕ ಚುನಾವಣೆಯಲ್ಲಿ ಢಾಕಾ-3 ಕ್ಷೇತ್ರದಿಂದ ಸ್ಪರ್ಧಿಸಿ, ಗೆಲುವು ಸಾಧಿಸಿದ್ದಾರೆ ಎಂದು ಶುಕ್ರವಾರ ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ. ಢಾಕಾ-3 ಕ್ಷೇತ್ರದಿಂದ ಸ್ಪರ್ಧಿಸಿದ್ದ ರಾಯ್ ತಮ್ಮ ಎದುರಾಳಿ ಜಮಾತ್-ಎ-ಇಸ್ಲಾಮಿ ಅಭ್ಯರ್ಥಿಯಾದ ಶಾಹಿನೂರ್ ಇಸ್ಲಾಂ ವಿರುದ್ಧ 99,163 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಮಾಜಿ ಸಚಿವರೂ ಆಗಿರುವ ಗಯೇಶ್ವರ್ ಚಂದ್ರ ರಾಯ್, ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ಹಿಂಸಾಚಾರದ ಘಟನೆಗಳ ನಡುವೆಯೂ ಗೆಲುವಿನ ನಗೆ ಬೀರಿದ್ದಾರೆ. ಕಳೆದ ಡಿಸೆಂಬರ್‌ನಲ್ಲಿ ಉಸ್ಮಾನ್ ಹಾದಿ ಹತ್ಯೆಯ ನಂತರ, ಬಾಂಗ್ಲಾದಲ್ಲಿ ಮತ್ತೊಮ್ಮೆ ಹಿಂಸಾಚಾರ ಭುಗಿಲೆದ್ದಿತ್ತು. ಅದರ ನಂತರ ಹಲವು ಹಿಂದೂಗಳನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು.

ಭಾರತಕ್ಕೇನು ಸಮಸ್ಯೆ?

ಭಾರತಕ್ಕೆ ಬಾಂಗ್ಲಾದೇಶಿಗರ ಅಕ್ರಮ ವಲಸೆ ಮತ್ತು ಶೇಖ್ ಹಸೀನಾ ಅವರ ಪತನದ ನಂತರ ಭುಗಿಲೆದ್ದ ಹಿಂದೂ ವಿರೋಧಿ ಭಾವನೆಗಳಂತಹ ಕಳವಳಗಳಿಂದ ಉದ್ಭವಿಸುವ ಗಡಿ ಮತ್ತು ಆಂತರಿಕ ಭದ್ರತಾ ಪರಿಣಾಮಗಳು ಸಹ ಇದರಲ್ಲಿ ಸೇರಿವೆ. ಹಾಗೆಯೇ ವ್ಯಾಪಾರವು ಪ್ರಮುಖ ಪಾತ್ರ ವಹಿಸುತ್ತದೆ. ಬಾಂಗ್ಲಾದೇಶದ ಸಿದ್ಧ ಉಡುಪು ಉದ್ಯಮಕ್ಕೆ 80 ಪ್ರತಿಶತಕ್ಕಿಂತ ಹೆಚ್ಚಿನ ಕಚ್ಚಾ ಹತ್ತಿಯನ್ನು ಭಾರತ ಪೂರೈಸುತ್ತಿದೆ, ಇದು ಅದರ ರಾಷ್ಟ್ರೀಯ ಆರ್ಥಿಕತೆಯ ಪ್ರಮುಖ ಚಾಲಕವಾಗಿದೆ. ಅಲ್ಲದೇ ಬಾಂಗ್ಲಾದೊಂದಿಗೆ ಭಾರತ ಗಡಿ ಹಂಚಿಕೊಂಡಿದೆ. ಇತ್ತೀಚೆಗೆ ಬಾಂಗ್ಲಾ ಪಾಕ್ ಸ್ನೇಹಿಯಾಗಲು ಬಿಎನ್‌ಪಿ ಪಾತ್ರ ದೊಡ್ಡದಿದೆ.

1947ರಿಂದ ಇದ್ದ ಕಟ್ಟಡದಿಂದ ಹೊಸ ಕಚೇರಿಗೆ ವರ್ಗ, ಹಲ ಸಚಿವಾಲಯ ಒಂದೇ ಕಡೆ
1,189 ಕೋಟಿ ರು. ವೆಚ್ಚ, ಅತ್ಯಾಧುನಿಕ ತಂತ್ರಜ್ಞಾನ | 'ನಾಗರಿಕ ದೇವೋಭವವೇ' ಮಂತ್ರ

ಸೇವಾತೀರ್ಥದಲ್ಲಿನ್ನು ಪ್ರಧಾನಿ, ಸಚಿವರ ಸೇವೆ

ದೆಹಲಿ: ಭಾರತದ ನೂತನ ಪ್ರಧಾನಮಂತ್ರಿ ಕಚೇರಿ ಸೇವಾ ತೀರ್ಥವನ್ನು ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಉದ್ಘಾಟನೆ ಮಾಡಿದ್ದಾರೆ. 1947ರ ಬಳಿಕ ಅಂದರೆ ಸ್ವತಂತ್ರ ಭಾರತದಲ್ಲಿ ಇದೇ ಮೊದಲ ಬಾರಿಗೆ ಪ್ರಧಾನಿಗಳ ಕಚೇರಿ ಬದಲಾವಣೆ ಮಾಡುತ್ತಿರುವುದು ಗಮನಾರ್ಹ. ಇದು ಭಾರತದ ಆಡಳಿತದ ವಾಸ್ತುಶಿಲ್ಪದಲ್ಲಿ ಪರಿವರ್ತನಾತ್ಮಕ ಮೈಲಿಗಲ್ಲು ಅಂತ ಸರ್ಕಾರ ಈ ಕಟ್ಟಡವನ್ನು ಬಣ್ಣಿಸಿದೆ. ಇದೇ ಕಾರ್ಯಕ್ರಮದ ಅಂಗವಾಗಿ ಪ್ರಧಾನಿ ಮೋದಿ ನೂರು ರುಪಾಯಿಯ ನಾಣ್ಯವನ್ನು ಬಿಡುಗಡೆ ಮಾಡಿದರು. 1,189 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಇದರ ಒಟ್ಟು ವಿಸ್ತೀರ್ಣ 2,26,203 ಚದರ ಅಡಿ ಇದೆ.

ಹೊಸ ಕಚೇರಿಗೆ ಶಿಫ್ಟ್ ಆಗುವ ಮೊದಲು ನರೇಂದ್ರ ಮೋದಿ ಸಚಿವರ ಜೊತೆ ಸೌತ್ ಬ್ಲಾಕ್ ಕಚೇರಿಯಲ್ಲಿ ಕೊನೆಯ ಸಂಪುಟ ಸಭೆ ನಡೆಸಿದರು. 1921ರಿಂದ ಉತ್ತರ ಮತ್ತು ದಕ್ಷಿಣ ಬ್ಲಾಕ್‌ಗಳು ದೇಶದಲ್ಲಿ ಅಧಿಕಾರದ ಕೇಂದ್ರಗಳಾಗಿದ್ದವು. ಇದಕ್ಕೂ ಮೊದಲು ಗೃಹ ಸಚಿವಾಲಯವು ಲ್ಯುಟೆನ್ಸ್ ದೆಹಲಿಯ ರೈಸಿನಾ ಹಿಲ್ಸ್‌ನಲ್ಲಿರುವ ಉತ್ತರ ಬ್ಲಾಕ್ ಸಂಕೀರ್ಣದಿಂದ ಸ್ಥಳಾಂತರಗೊಂಡಿತ್ತು.

ಸೇವಾ ತೀರ್ಥವೆಂಬ ಹೆಸರೇ ಯಾಕೆ?

ಪ್ರಧಾನಿಗಳ ಹೊಸ ಕಚೇರಿಗೆ ಸೇವೆ ಎಂಬ ವಸ್ತುವಿಷಯವನ್ನಾಧರಿಸಿ ಸೇವಾ ತೀರ್ಥ-1 ಎಂದು ನಾಮಕರಣ ಮಾಡಲಾಗಿದೆ. ಜೊತೆಗೆ ಸೇವೆಯ ಮಹತ್ವವನ್ನು ಬಿಂಬಿಸುವ ಆಧುನಿಕ ಕಾರ್ಯಕ್ಷೇತ್ರಗಳು ಹಾಗೂ ಭವ್ಯ ಸಮಾರಂಭ ಕೊಠಡಿಗಳನ್ನೂ ಒಳಗೊಂಡಿದೆ. ಇದರ ಧ್ಯೇಯವಾಕ್ಯವೇ ನಾಗರಿಕ ದೇವೋಭವ.

ಸ್ಥಳಾಂತರ ಯಾಕೆ?

ದಶಕಗಳಿಂದಲೂ ಸೆಂಟ್ರಲ್ ವಿಸ್ತಾದಲ್ಲಿರುವ ಬೇರೆ ಕಟ್ಟಡಗಳಲ್ಲಿ ಸಚಿವಾಲಯಗಳು ಕಾರ್ಯನಿರ್ವಹಿಸುತ್ತಿದ್ದವು. ಇದು ಸಮನ್ವಯ ಅಂತರ, ಸಾಗಣೆ ಅಡಚಣೆಗಳು ಮತ್ತು ಹೆಚ್ಚಿನ ನಿರ್ವಹಣಾ ವೆಚ್ಚಗಳಿಗೆ ಕಾರಣವಾಗಿತ್ತು. ಈಗ ಪ್ರಮುಖ ಸಚಿವಾಲಯಗಳು ಒಂದೇ ಕಟ್ಟಡದಲ್ಲಿ ಇರಲಿವೆ. ಇದರಿಂದ ವೆಚ್ಚ ಕಡಿಮೆಯಾಗಲಿದೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ ಎಂದು ಸರ್ಕಾರ ಹೇಳಿದೆ. ಸೇವಾ ತೀರ್ಥವು ಮೂರು ಪ್ರಮುಖ ಸಚಿವಾಲಯವನ್ನು ಹೊಂದಿದೆ. ಪ್ರಧಾನಮಂತ್ರಿ ಕಚೇರಿ (ಸೇವಾ ತೀರ್ಥ-1), ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯ (ಸೇವಾ ತೀರ್ಥ-2) ಮತ್ತು ಕ್ಯಾಬಿನೆಟ್ ಸಚಿವಾಲಯ (ಸೇವಾ ತೀರ್ಥ-3) ಕಾರ್ಯ ನಿರ್ವಹಿಸಲಿವೆ. ಕರ್ತವ್ಯ ಭವನ-1 ಮತ್ತು 2 ಹಣಕಾಸು, ರಕ್ಷಣೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕಾರ್ಪೊರೇಟ್ ವ್ಯವಹಾರಗಳು, ಶಿಕ್ಷಣ, ಸಂಸ್ಕೃತಿ, ಕಾನೂನು ಮತ್ತು ನ್ಯಾಯ, ಮಾಹಿತಿ ಮತ್ತು ಪ್ರಸಾರ, ಕೃಷಿ ಮತ್ತು ರೈತರ ಕಲ್ಯಾಣ, ರಾಸಾಯನಿಕಗಳು ಮತ್ತು ರಸಗೊಬ್ಬರಗಳು ಮತ್ತು ಬುಡಕಟ್ಟು ವ್ಯವಹಾರಗಳು ಸೇರಿದಂತೆ ಪ್ರಮುಖ ಸಚಿವಾಲಯಗಳನ್ನು ಒಳಗೊಂಡಿದೆ.

ಡಿಜಿಟಲ್ ಏಕೀಕರಣ, ನಾಗರಿಕ-ಕೇಂದ್ರಿತ

ಹೊಸ ಸಂಕೀರ್ಣಗಳು ಡಿಜಿಟಲ್ ಸಂಯೋಜಿತ ಕಚೇರಿಗಳು, ರಚನಾತ್ಮಕ ಸಾರ್ವಜನಿಕ ಇಂಟರ್ಫೇಸ್ ವಲಯಗಳು ಮತ್ತು ಕೇಂದ್ರೀಕೃತ ಸ್ವಾಗತ ಸೌಲಭ್ಯಗಳನ್ನು ಒಳಗೊಂಡಿದೆ. 4 ನಕ್ಷತ್ರ ಗೃಹ ಮಾನದಂಡಗಳಿಗೆ ಅನುಗುಣವಾಗಿ ನಿರ್ಮಿಸಲಾದ ಈ ಸಂಕೀರ್ಣಗಳು ನವೀಕರಿಸಬಹುದಾದ ಇಂಧನ ವ್ಯವಸ್ಥೆಗಳು, ಜಲ ಸಂರಕ್ಷಣಾ ಕ್ರಮಗಳು, ತ್ಯಾಜ್ಯ ನಿರ್ವಹಣಾ ವ್ಯವಸ್ಥೆ ಮತ್ತು ಇಂಧನ-ಸಮರ್ಥ ಕಟ್ಟಡ ವಿನ್ಯಾಸವನ್ನು ಒಳಗೊಂಡಿವೆ. ಸೌಲಭ್ಯಗಳು ಸ್ಮಾರ್ಟ್ ಪ್ರವೇಶ ನಿಯಂತ್ರಣಗಳೊಂದಿಗೆ ಸಜ್ಜುಗೊಂಡಿವೆ.

ಪ್ರಧಾನಿಗಳ ಹಳೇ ಕಚೇರಿ ಇನ್ನು ಭಾರತ ಸಂಗ್ರಹಾಲಯ

ಪ್ರಧಾನಮಂತ್ರಿಗಳು ಹೊಸ ಕಚೇರಿಗೆ ಸ್ಥಳಾಂತರಗೊಳ್ಳುತ್ತಿದ್ದಂತೆ ದಕ್ಷಿಣ ಮತ್ತು ಉತ್ತರ ಬ್ಲಾಕ್‌ಗಳಲ್ಲಿರುವ ಕಚೇರಿಗಳನ್ನು ವಿಶ್ವದ ಅತಿ ದೊಡ್ಡ ವಸ್ತು ಸಂಗ್ರಹಾಲಯಗಳನ್ನಾಗಿ ನಿರ್ಮಾಣ ಮಾಡಲಾಗುತ್ತದೆ. ಯುಗೆ ಯುಗೀನ್ ಭಾರತ್ ಸಂಗ್ರಹಾಲಯ ಹೆಸರಿನಲ್ಲಿ ಸಾರ್ವಜನಿಕ ವಸ್ತುಸಂಗ್ರಹಾಲಯವಾಗಿ ಪರಿವರ್ತಿಸಲಾಗುತ್ತದೆ. ಯೋಜಿತ ವಸ್ತು ಸಂಗ್ರಹಾಲಯದ ಅಭಿವೃದ್ಧಿಗಾಗಿ 2024ರ ಡಿಸೆಂಬರ್ 19ರಂದು ಫ್ರಾನ್ಸ್‌ನ ಮ್ಯೂಸಿಯಂ ಅಭಿವೃದ್ಧಿ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ರಾಷ್ಟ್ರೀಯ ವಸ್ತುಸಂಗ್ರಹಾಲಯದಲ್ಲಿ 5,000 ವರ್ಷಗಳ ಭಾರತೀಯ ನಾಗರಿಕತೆಯ ಇತಿಹಾಸ ದಾಖಲಾಗುವಂತೆ ವಿನ್ಯಾಸ ಮಾಡಲಾಗುತ್ತದೆ. 1.55 ಲಕ್ಷ ಚದರ ಮೀಟರ್‌ಗಳಷ್ಟು ವಿಸ್ತೀರ್ಣವನ್ನು ಹೊಂದಿರುವ ಇದು ಬ್ರಿಟಿಷ್ ವಸ್ತುಸಂಗ್ರಹಾಲಯ ಮತ್ತು ಲೌವ್ರೆಯನ್ನು ಮೀರಿಸುವಂತೆ ನಿರ್ಮಾಣ ಮಾಡುವ ಗುರಿಯನ್ನು ಹಾಕಲಾಗಿದೆ.

11ನೇ ತರಗತಿ ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ
ಮಧ್ಯಪ್ರದೇಶದ ಭೋಪಾಲ್ ಘಟನೆಗೆ ಮಹತ್ವದ ತಿರುವು

ಅತ್ಯಾಚಾರ ಮಾಡಿ ಇಸ್ಲಾಮ್‌ಗೆ ಮತಾಂತರಿಸಲು ಯತ್ನ

ಭೋಪಾಲ್: 11ನೇ ತರಗತಿ ವಿದ್ಯಾರ್ಥಿನಿಯ ಮೇಲೆ ನಾಲ್ಕು ಕಾರುಗಳಲ್ಲಿ ಅತ್ಯಾಚಾರ ಎಸಗಿ, ಹಣ ಸುಲಿಗೆ ಮಾಡಿ ಇಸ್ಲಾಮ್‌ಗೆ ಮತಾಂತರಗೊಳ್ಳಲು ಯತ್ನಿಸಿದ ಆರೋಪದ ಮೇಲೆ ಇಬ್ಬರನ್ನು ಬಂಧಿಸಲಾಗಿದೆ. ಶಹಪುರ ಪ್ರದೇಶದ ಪ್ರತಿಷ್ಠಿತ ಶಾಲೆಯಲ್ಲಿ ಓದುತ್ತಿರುವ ಬಾಲಕಿ, ಸ್ನೇಹಿತನ ಮೂಲಕ ಔಸಾಫ್ ಅಲಿ ಖಾನ್ ಎಂಬ ವ್ಯಕ್ತಿಯೊಂದಿಗೆ ಪರಿಚಯವಾದಳು ಎಂದು ಪೊಲೀಸರು ತಿಳಿಸಿದ್ದಾರೆ. ಇಬ್ಬರ ಸ್ನೇಹ ಬೆಳೆದಂತೆ, ಔಸಾಫ್ ಆಕೆಯನ್ನು ತನ್ನೊಂದಿಗೆ ಡ್ರೈವ್‌ಗೆ ಕರೆದುಕೊಂಡು ಹೋಗುತ್ತೇನೆಂದು ಖಾನುಗಾಂವ್‌ನ ನಿರ್ಜನ ಪ್ರದೇಶಕ್ಕೆ ಕರೆದೊಯ್ದು, ಅಲ್ಲಿ ಕಾರಿನೊಳಗೆ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ.

ಜಿಮ್ ಮಾಲೀಕನಾಗಿರುವ ಔಸಾಫ್‌ನ ಸ್ನೇಹಿತ ಮಾಜ್ ಖಾನ್ ಕೃತ್ಯವನ್ನು ಚಿತ್ರೀಕರಿಸಿದ್ದಾನೆ. ಇಬ್ಬರೂ ಸೇರಿಕೊಂಡು ವಿದ್ಯಾರ್ಥಿನಿಯನ್ನು ಬ್ಲ್ಯಾಕ್‌ಮೇಲ್ ಮಾಡಲು ವಿಡಿಯೋವನ್ನು ಬಳಸಿಕೊಂಡರು. ಆಕೆ ಅವರಿಗೆ 1 ಲಕ್ಷ ರು. ನೀಡದಿದ್ದರೆ ವಿಡಿಯೋ ವೈರಲ್ ಮಾಡುವುದಾಗಿ ಹೆದರಿಸಿದ್ದರು. ಆಘಾತಕ್ಕೊಳಗಾದ ಅಪ್ರಾಪ್ತ ವಯಸ್ಕ ಯುವತಿ, ಹೇಗೋ ಅವರಿಗೆ 40,000 ರು. ನೀಡಿದ್ದಾಳೆ. ಆದರೆ ಆರೋಪಿಗಳು ಲೈಂಗಿಕ ದೌರ್ಜನ್ಯ ಮತ್ತು ಬ್ಲ್ಯಾಕ್‌ಮೇಲ್ ಮಾಡುವುದನ್ನು ಮುಂದುವರಿಸಿದ್ದರು.

ಎರಡು ಸೆಡಾನ್ ಮತ್ತು ಒಂದು ಮಹೀಂದ್ರಾ ಥಾರ್ ಸೇರಿದಂತೆ ನಾಲ್ಕು ಕಾರುಗಳಲ್ಲಿ ಬಂದ ಆ ಆರೋಪಿಗಳು ಆಕೆಯ ಮೇಲೆ ಹಲ್ಲೆ ನಡೆಸಿ ಅತ್ಯಾಚಾರ ಎಸಗಿದ್ದಾರೆ. ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳನ್ನು ಬಂಧಿಸಿದ್ದು, ಪ್ರಕರಣದ ತನಿಖೆಗಾಗಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಹಾಯಕ ಪೊಲೀಸ್ ಆಯುಕ್ತರ ನೇತೃತ್ವದ ಎಸ್‌ಐಟಿ, ಆರೋಪಿಗಳು ಬೇರೆ ಮಹಿಳೆಯರನ್ನು ಗುರಿಯಾಗಿಸಿಕೊಂಡಿದ್ದಾರೆಯೇ ಎಂಬುದರ ಬಗ್ಗೆಯೂ ತನಿಖೆ ನಡೆಸಲಿದೆ.

ಚುನಾವಣೆ ಸನಿಹವಿರುವಂತೆಯೇ 1.31 ಕೋಟಿ ಮಹಿಳೆಯರಿಗೆ ಡಿಎಂಕೆ ಸರಕಾರದಿಂದ ಹಣ

ತಮಿಳುನಾಡು ಮಹಿಳೆಯರ ಖಾತೆಗೆ 5000 ರು.!

ಚೆನ್ನೈ: ತಮಿಳುನಾಡು ಚುನಾವಣೆಗೆ ಮೊದಲೇ ಡಿಎಂಕೆ ಸರ್ಕಾರ ಮಹಿಳೆಯರ ಖಾತೆಗೆ 5 ಸಾವಿರ ರು. ಹಣವನ್ನು ಜಮೆ ಮಾಡಿದೆ. ಕಲೈಗ್ನಾರ್ ಮಗಲಿರ್ ಉರಿಮೈ ತೊಗೈ ಯೋಜನೆಯಡಿ 1.31 ಕೋಟಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ತಲಾ 5 ಸಾವಿರ ರು. ಜಮೆಯಾಗಿದೆ. ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳ ಹಣದ ಜೊತೆ ಬೇಸಿಗೆ ಸಮಯದಲ್ಲಿ ನೆರವಾಗಲು 2 ಸಾವಿರ ರು. ಹಣವನ್ನೂ ಹಾಕಲಾಗಿದೆ. ಈ ವರ್ಷ ಏಪ್ರಿಲ್, ಮೇಗೆ ತಮಿಳುನಾಡಿನಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ!

ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಪಕ್ಷ ಮತ್ತೆ ಅಧಿಕಾರಕ್ಕೆ ಏರಿದರೆ ದ್ರಾವಿಡ 2.0 ಸರ್ಕಾರದ ಅಡಿಯಲ್ಲಿ

ಫಲಾನುಭವಿಗಳಿಗೆ ನೀಡಲಾಗುವ ತಿಂಗಳ ಮೊತ್ತವನ್ನು 2 ಸಾವಿರ ರು.ಗೆ ಏರಿಸಲಾಗುವುದು ಎಂದು ಮುಖ್ಯಮಂತ್ರಿ ಸ್ಟಾಲಿನ್ ಭರವಸೆ ನೀಡಿದ್ದಾರೆ. ಕಲೈಗ್ನಾರ್ ಮಗಲಿರ್ ಉರಿಮೈ ತೊಗೈ ಯೋಜನೆಯನ್ನು ಸೆಪ್ಟೆಂಬರ್ 2023ರಲ್ಲಿ ಪ್ರಾರಂಭಿಸಲಾಗಿತ್ತು. ಆರಂಭದಲ್ಲಿ 1.13 ಕೋಟಿ ಮಹಿಳೆಯರಿಗೆ 1 ಸಾವಿರ ರು. ನೀಡಲಾಗಿತ್ತು. ಈಗ ರಾಜ್ಯಾದ್ಯಂತ 1.31 ಕೋಟಿ ಮಹಿಳೆಯರಿಗೆ ಈ ಯೋಜನೆಯನ್ನು ವಿಸ್ತರಿಸಲಾಗಿದೆ.

ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಕಳೆದ ತಿಂಗಳು ತಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯ ಮೊದಲ ಪಟ್ಟಿಯಲ್ಲಿ ಇದೇ ರೀತಿಯ ಭರವಸೆಯನ್ನು ನೀಡಿದ್ದರು.

ಮೋದಿ ರಾಜಕೀಯ ಜೀವನ ನಾಶ ಮಾಡಲು ಬಯಸಲ್ಲ: ಟ್ರಂಪ್ ಹೇಳಿಕೆ ಈಗ ವೈರಲ್

ಟ್ರಂಪ್ ಮೋದಿಯನ್ನು ನಿಂದಿಸಿದ್ದರೆ ಕ್ರಮ: ಭಾರತ

ದೆಹಲಿ: ಭಾರತದೊಂದಿಗೆ ಸುಂಕಸಮರ ನಡೆಸಿ ಇದೀಗ ಮೆತ್ತಗಾಗಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಕಳೆದ ವರ್ಷ ಅ.18ರಂದು ನೀಡಿದ್ದರೆನ್ನಲಾದ ಹೇಳಿಕೆಯೊಂದು ಸಾಮಾಜಿಕ ತಾಣಗಳಲ್ಲಿ ಭಾರೀ ವಿರೋಧ ಕೆರಳಿಸಿದೆ. ಶ್ವೇತಭವನದಲ್ಲಿ ಮಾತನಾಡಿದ್ದ ಅವರು ಮೋದಿ ಅದ್ಭುತ ವ್ಯಕ್ತಿ, ಅವರ ರಾಜಕೀಯ ಜೀವನ ಹಾಳು ಮಾಡಲು ಬಯಸಲ್ಲ ಎಂದಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಭಾರತೀಯ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ರಣಧೀರ್ ಜೈಸ್ವಾಲ್, ಒಂದು ವೇಳೆ ಟ್ರಂಪ್ ಹೇಳಿದ್ದು ಹೌದಾದರೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ. ಆದರೆ ಯಾವ ರೀತಿಯಲ್ಲಿ ಕ್ರಮ ಕೈಗೊಳ್ಳಲು ಸಾಧ್ಯ ಎಂಬ ಮಾಹಿತಿಯನ್ನು ಅವರು ನೀಡಿಲ್ಲ.

ವಿದೇಶಾಂಗ ಇಲಾಖೆಯ ಸಾಪ್ತಾಹಿಕ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ವಕ್ತಾರ ರಣಧೀರ್ ಜೈಸ್ವಾಲ್, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ರಾಜಕೀಯ ಜೀವನ ನಾಶ ಮಾಡಲು ಬಯಸುವುದಿಲ್ಲ ಎಂದು



ಹೇಳಿರುವ ವಿಡಿಯೋವನ್ನು ನಾನು ನೋಡಿಲ್ಲ. ಆದರೆ ಅದರಲ್ಲಿ ಸತ್ಯಾಂಶ ಇದ್ದರೆ ನಾವು ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.

ಏತನ್ಮಧ್ಯೆ ಭಾರತ-ಅಮೆರಿಕ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಶ್ವೇತಭವನ ಬಿಡುಗಡೆ ಮಾಡಿರುವ ವಸ್ತುಸ್ಥಿತಿ ಮಾಹಿತಿಯ ಬಗ್ಗೆ ಪ್ರತಿಕ್ರಿಯೆ ನೀಡಿದ ರಣಧೀರ್, ಮಧ್ಯಂತರ ಒಪ್ಪಂದದ ಚೌಕಟ್ಟಿನ ಕುರಿತಾದ ಜಂಟಿ ಹೇಳಿಕೆಯು, ಎರಡೂ ಕಡೆಯವರ ನಡುವಿನ ಪರಸ್ಪರ ತಿಳುವಳಿಕೆಯ ಆಧಾರವಾಗಿ ಉಳಿದುಕೊಂಡಿದೆ. ಎರಡೂ ಕಡೆಯವರು ಈಗ ಈ ಚೌಕಟ್ಟನ್ನು ಕಾರ್ಯ ಗತಗೊಳಿಸಲು ಮತ್ತು ಮಧ್ಯಂತರ ಒಪ್ಪಂದ ಅಂತಿಮಗೊಳಿಸಲು ಕೆಲಸ ಆರಂಭಿಸಲಿದ್ದಾರೆ ಎಂದು ತಿಳಿಸಿದರು.

ಟ್ರಂಪ್ ತಮಾಷೆ ಮಾಡಿದ್ದೇ ಗಂಭೀರವಾಯ್ತಾ?

ಡೊನಾಲ್ಡ್ ಟ್ರಂಪ್ ಅವರು ಈ ಹಿಂದೆ ಎಫ್‌ಬಿಐ ನಿರ್ದೇಶಕರೊಂದಿಗೆ ನಡೆಸಿದ ಜಂಟಿ ಪತ್ರಿಕಾಗೋಷ್ಠಿಯಲ್ಲಿ, ಭಾರತದ ಪ್ರಧಾನಿ ನರೇಂದ್ರ ಮೋದಿ ಒಬ್ಬ ಮಹಾನ್ ವ್ಯಕ್ತಿ. ಅವರು ನನ್ನನ್ನು ತುಂಬಾ ಪ್ರೀತಿಸುತ್ತಾರೆ. ಆದರೆ ಪ್ರೀತಿ ಎಂಬ ಪದದ ಅರ್ಥವನ್ನು ನೀವು ಬೇರೆ ರೀತಿಯಲ್ಲಿ ಕಲ್ಪಿಸಿಕೊಳ್ಳಬೇಡಿ, ನಾನು ಮೋದಿ ಅವರ ರಾಜಕೀಯ ಜೀವನವನ್ನು ಹಾಳು ಮಾಡಲು ಬಯಸುವುದಿಲ್ಲ ಎಂದು ಹೇಳಿದ್ದರು. ಆಗ ಅವರು ತಮಾಷೆಯಾಗಿ ಆಡಿದ್ದ ಮಾತನ್ನು ಈಗ ಗಂಭೀರವಾಗಿ ತೆಗೆದುಕೊಳ್ಳಲಾಗಿದೆ ಎಂಬ ಅಂಶ ಟ್ರಂಪ್‌ರದ್ದು ಎನ್ನಲಾದ ವಿಡಿಯೋ ಹೇಳಿಕೆ ಮೂಲಕ ತಿಳಿದುಬರುತ್ತದೆ.

ಸರಕಾರಿ, ಶಾಲಾ ಕಾರ್ಯಕ್ರಮಗಳಲ್ಲಿ ಗೀತೆಯ ಎಲ್ಲ 6 ಚರಣ ಆಡಲು ಆದೇಶ
ಮಾತರಂ ಮುಸ್ಲಿಮ್ ನಂಬಿಕೆಗಳಿಗೆ ವಿರುದ್ಧ: ಎಐಎಂಪಿಎಲ್‌ಬಿ, ಜಮಿಯತ್ ಕಿಡಿ

ವಂದೇ ಮಾತರಂ ಹಾಡಲ್ಲ: ಕೋರ್ಟ್‌ಗೆ ಮುಸ್ಲಿಮ್ ಸಂಘಗಳು

ದೆಹಲಿ: ಕೇಂದ್ರ ಸರ್ಕಾರವು ಇತ್ತೀಚಿಗೆ ವಂದೇ ಮಾತರಂ ಗೀತೆಗೆ ಸಂಬಂಧಿಸಿದಂತೆ ಹೊಸ ಮಾರ್ಗಸೂಚಿ ಬಿಡುಗಡೆ ಮಾಡಿದ್ದು, ಸರ್ಕಾರಿ ಕಾರ್ಯಕ್ರಮಗಳಲ್ಲಿ ಮತ್ತು ಶಾಲೆಗಳಲ್ಲಿ ಎಲ್ಲಾ 6 ಚರಣಗಳನ್ನು ಹಾಡುವುದನ್ನು



ಕಡ್ಡಾಯಗೊಳಿಸಿದೆ. ಅಲ್ಲದೇ ವಂದೇ ಮಾತರಂ ಗೀತೆ ಹಾಡುವಾಗ ಎದ್ದು ನಿಲ್ಲುವುದನ್ನು ಕಡ್ಡಾಯಗೊಳಿಸಿದೆ. ಆದರೆ ವಂದೇ ಮಾತರಂ ಗೀತೆಯ ಎಲ್ಲಾ 6 ಚರಣಗಳನ್ನು ಹಾಡುವ ಕೇಂದ್ರದ ಅಧಿಸೂಚನೆಯನ್ನು, ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ತೀವ್ರವಾಗಿ ವಿರೋಧಿಸಿದೆ. ಈ ನಿಯಮ ಸಂವಿಧಾನದ ಜಾತ್ಯತೀತ ಆಶಯಗಳಿಗೆ ವಿರುದ್ಧವಾಗಿದೆ ಎಂದು ಎಐಎಂಪಿಎಲ್‌ಬಿ ಮತ್ತು ಇತರೆ ಮುಸ್ಲಿಮ್ ಸಂಘಟನೆಗಳು ಆರೋಪಿಸಿವೆ.

ಈ ಕುರಿತು ಅಧಿಕೃತ ಪ್ರಕಟಣೆ ಹೊರಡಿಸಿರುವ ಎಐಎಂಪಿಎಲ್‌ಬಿ, 3 ನಿಮಿಷ 10 ಸೆಕೆಂಡ್‌ಗಳ ಅವಧಿಯಲ್ಲಿ ವಂದೇ ಮಾತರಂ ಗೀತೆಯ ಎಲ್ಲಾ ಆರು ಚರಣಗಳನ್ನು ಹಾಡಬೇಕೆಂದು ಕೇಂದ್ರ ಕಡ್ಡಾಯಗೊಳಿಸಿದೆ. ಕೇಂದ್ರದ ಈ ನಡೆ ದೇಶದ ಸಂವಿಧಾನದ ಆಶಯಗಳಿಗೆ, ನಮ್ಮ ಜಾತ್ಯತೀತ ಮೌಲ್ಯಗಳಿಗೆ, ಧಾರ್ಮಿಕ ಸ್ವಾತಂತ್ರ್ಯಕ್ಕೆ ಮತ್ತು ಸುಪ್ರೀಮ್ ಕೋರ್ಟ್ ತೀರ್ಪಿಗೆ ವಿರುದ್ಧವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ವಂದೇ ಮಾತರಂನಲ್ಲಿ ದುರ್ಗಾ ಮತ್ತು ಇತರ ದೇವತೆಗಳ ಉಲ್ಲೇಖವಿದೆ. ಇದು ಮುಸ್ಲಿಮರ ನಂಬಿಕೆಗಳಿಗೆ ವಿರುದ್ಧವಾಗಿದ್ದು, ಗೀತೆಯನ್ನು ಸಂಪೂರ್ಣವಾಗಿ ಸ್ವೀಕರಿಸಲು ಸಾಧ್ಯವಿಲ್ಲ. ಮುಸ್ಲಿಮರು ಒಬ್ಬ ದೇವರನ್ನು ಮಾತ್ರ ಪೂಜಿಸುತ್ತಾರೆ. ಬಹುಸಂಖ್ಯಾತ ಸಮುದಾಯ ಸ್ವಯಿಚ್ಛೆಯಿಂದ ಬೇಕಾದರೆ ಹಾಡಲಿ. ಆದರೆ ಇದನ್ನು ಶಾಲಾ ಮಕ್ಕಳಿಗೂ ಹಾಡಬೇಕೆಂದು ಕಡ್ಡಾಯ ಮಾಡಿರುವುದರಿಂದ, ಮುಸ್ಲಿಮರ ಹಕ್ಕುಗಳನ್ನು ಕಿತ್ತುಕೊಂಡಂತಾಗುತ್ತದೆ ಎಂದು ಹೇಳಲಾಗಿದೆ.

ವಂದೇ ಮಾತರಂ ಹಾಡಿನ ಹಲವು ಸಾಲುಗಳು ದೇಶದ ಜಾತ್ಯತೀತ ಮೌಲ್ಯಗಳಿಗೆ ಹೊಂದಿಕೆಯಾಗುವುದಿಲ್ಲ. ಅವುಗಳ ಪಠಣಕ್ಕೆ ನಿರ್ಬಂಧ ವಿಧಿಸಿ ಭಾರತೀಯ ನ್ಯಾಯಾಲಯಗಳು ಕೂಡ ಆದೇಶ ಹೊರಡಿಸಿವೆ. ಆದ್ದರಿಂದ ಕೇಂದ್ರ ಸರ್ಕಾರವು ಈ ಅಧಿಸೂಚನೆಯನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯು ಈ ನಿರ್ಧಾರವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ.

ವಂದೇ ಮಾತರಂ ಹಾಡುವುದು ಕಡ್ಡಾಯ ಮಾಡಿದ್ದ ಕೇಂದ್ರ

ವಂದೇ ಮಾತರಂ ಗೀತೆಯ 150ನೇ ವರ್ಷಾಚರಣೆ ಹಿನ್ನೆಲೆಯಲ್ಲಿ, ವಂದೇ ಮಾತರಂ ಗೀತೆಗೆ ರಾಷ್ಟ್ರಗೀತೆ ಸ್ಥಾನಮಾನ ನೀಡುವ ನಿಟ್ಟಿನಲ್ಲಿ, ಕೇಂದ್ರ ಸರ್ಕಾರವು ಇತ್ತೀಚಿಗೆ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಹೊಸ ಮಾರ್ಗಸೂಚಿಗಳನ್ವಯ ಎಲ್ಲಾ ಅಧಿಕೃತ ಸರ್ಕಾರಿ ಕಾರ್ಯಕ್ರಮಗಳಲ್ಲಿ ಮತ್ತು ಶಾಲೆಗಳಲ್ಲಿ, ರಾಷ್ಟ್ರಗೀತೆಗೂ ಮೊದಲು ವಂದೇ ಮಾತರಂ ಗೀತೆಯ ಎಲ್ಲಾ 6 ಚರಣಗಳನ್ನು ಕಡ್ಡಾಯವಾಗಿ ಹಾಡಬೇಕು. ಅಲ್ಲದೇ ಗೀತೆಯ ಪಠಣ ಸಂದರ್ಭದಲ್ಲಿ ಎಲ್ಲರೂ ಕಡ್ಡಾಯವಾಗಿ ಎದ್ದು ನಿಲ್ಲಬೇಕು. ವಂದೇ ಮಾತರಂ ಗೀತೆಗೆ ಸಂಬಂಧಿಸಿದ ಕೇಂದ್ರ ಸರ್ಕಾರದ ಆದೇಶವನ್ನು ಎಲ್ಲಾ ಎಡಪಕ್ಷಗಳು, ಮಮತಾ ಬ್ಯಾನರ್ಜಿ ಅವರ ಟಿಎಂಸಿ, ಅಸಾದುದ್ದೀನ್ ಓವೈಸಿ ಅವರ ಎಐಎಂಐಎಂ ಸೇರಿದಂತೆ ಇನ್ನೂ ಅನೇಕ ವಿರೋಧ ಪಕ್ಷಗಳು ಖಂಡಿಸಿವೆ. ವಂದೇ ಮಾತರಂ ಗೀತೆಯ 150ನೇ ವರ್ಷಾಚರಣೆ ಹಿನ್ನೆಲೆಯಲ್ಲಿ ಸಂಸತ್ತಿನಲ್ಲಿ ನಡೆದ ಚರ್ಚೆಯಲ್ಲಿ, ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ನಡುವೆ ತೀವ್ರ ಜಟಾಪಟಿ ಏರ್ಪಟ್ಟಿತ್ತು.

ಸಮಾಚಾರ ಸಣ್ಣದಲ್ಲ

ಶ್ರೀ ಸಿದ್ದರಾಮೇಶ್ವರ ಜಯಂತ್ಯುತ್ಸವ 16ಕ್ಕೆ

ಮಸ್ಕಿ: ಪಟ್ಟಣದಲ್ಲಿ ಶ್ರೀ ಸಿದ್ದ ರಾಮೇಶ್ವರ ಹಾಗೂ ಬೆಳವಡಿ ವಡ್ಡರ್‌ಯಲ್ಲಣ್ಣ ಅವರ ಜಯಂತ್ಯೋತ್ಸವ ಫೆ. 16 ರಂದು ಜಂಟಿ ಯಾಗಿ ಆಚರಿಸಲು ನಿರ್ಧರಿಸ ಲಾಗಿದೆ ಎಂದು ಭೋವಿ (ವಡ್ಡರ್) ಸಮಾಜದ ಮುಖಂಡ ಆನಂದ್ ಬನಗಲ್ ಹೇಳಿದರು. ಇಲ್ಲಿಯ ಪತ್ರಿಕಾ ಭವನದಲ್ಲಿ ಜಯತುತ್ತುವ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದರು. ಪಿಡಬ್ಲ್ಯುಡಿ ಕ್ಯಾಂಪ್ ಬಳಿಯ ಸಿದ್ದರಾಮೇಶ್ವರ ವೃತ್ತದಿಂದ ಸಿದ್ದ ರಾಮೇಶ್ವರ ಅವರ ಅಲಂಕೃತ ಭಾವ ಚಿತ್ರದ ಮೆರವಣಿಗೆಗೆ ಮಠಾಧೀಶರು ಚಾಲನೆ ನೀಡಲಿದ್ದಾರೆ ಎಂದರು. ಮುಖ್ಯ ವೃತ್ತಗಳ ಮೂಲಕ ಮೆರವಣಿಗೆ ಭ್ರಮರಾಂಬ ಕಲ್ಯಾಣ ಮಂಟಪ ಬಳಿಯ ಸಿದ್ದ ರಾಮೇಶ್ವರ ದೇವಸ್ಥಾನ ತಲುಪಲಿದ್ದು, ಧಾರ್ಮಿಕ ಕಾರ್ಯಕ್ರಮಗಳ ನಂತರ ಅನ್ನ ಸಂತರ್ಪಣೆ ನಡೆಯಲಿದೆ ಎಂದರು. ಈ ಸಂದರ್ಭದಲ್ಲಿ ಸಮಾಜದ ಮುಖಂಡ ಸಾರಪ್ಪ ಬಂಗಾಲಿ, ಪುರಸಭೆ ಸದಸ್ಯ ರಮೇಶ ಗುಡಸಲಿ, ದುರ್ಗಪ್ಪ ಗೋನ್ವಾರ, ಶಿವರಾಜ ಬುಕ್ಕಣ್ಣ, ಮಲ್ಲಯ್ಯ ಚಾವಣಿ, ಜಿಎಸ್, ಆನಂದ್, ವಿರೇಶ ಬಡಗಿ ಇದ್ದರು.

ಇಂದು ನಗರದಲ್ಲಿ ಮ್ಯಾರಾಥಾನ್ ಓಟ

ಬಳ್ಳಾರಿ: ಬಳ್ಳಾರಿ ಮಹಾನಗರ ಪಾಲಿಕೆ ವತಿಯಿಂದ 2025-26 ನೇ ಸಾಲಿಗೆ 'ನಮ್ಮ ಬಳ್ಳಾರಿ-ಸ್ವಚ್ಛ ಬಳ್ಳಾರಿ' ಅಂಗವಾಗಿ ಫೆ.14 ರಂದು ಬೆಳಗ್ಗೆ 6.30 ಗಂಟೆಗೆ ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಲ್ಲಿ ಮ್ಯಾರಾಥಾನ್ ಓಟ ಹಮ್ಮಿಕೊಳ್ಳಲಾಗಿದೆ.

ಮಾರ್ಗ: ಮ್ಯಾರಾಥಾನ್ ಓಟವು ಡಾ.ರಾಜ್ ಕುಮಾರ್‌ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದಿಂದ ಆರಂಭಗೊಳ್ಳಲಿದ್ದು, ಗಡಿಗಿ ಚೆನ್ನಪ್ಪ ವೃತ್ತ, ಹೆಚ್.ಆರ್.ಗವಿಯಪ್ಪ ವೃತ್ತ, ವಾಲ್ಮೀಕಿ ವೃತ್ತ, ದುರ್ಗಮ್ಮ ದೇವಸ್ಥಾನ ವೃತ್ತದ ಮಾರ್ಗವಾಗಿ ಗಡಿಗಿ ಚೆನ್ನಪ್ಪ ವೃತ್ತದಿಂದ ಮರಳಿ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನಕ್ಕೆ ತಲುಪಿ ಅಂತ್ಯಗೊಳ್ಳಲಿದೆ. ಸ್ವಚ್ಛತೆ ಕುರಿತಾಗಿ ಅರಿವು ಮೂಡಿಸಲು ನಗರದ ಶಾಲಾ-ಕಾಲೇಜು ವಿದ್ಯಾರ್ಥಿ, ಸಾರ್ವಜನಿಕರಿಗೆ ಆಯೋಜಿಸಲಾಗಿದ್ದು, ಆಸಕ್ತರು ಭಾಗವಹಿಸಬಹುದಾಗಿದೆ ಎಂದು ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ.

ಕನ್ನಾಪೂರ ಹಟ್ಟಿಯಲ್ಲಿ ಟಗರಿನ ಕಾಳಗ

ಮುದಗಲ್: ಪಟ್ಟಣ ಸಮೀಪದ ಕನ್ನಾಪೂರ ಹಟ್ಟಿ ಗ್ರಾಮದಲ್ಲಿ ಶ್ರೀಪರಮಾನಂದ ಹಾಗೂ ಶ್ರೀ ಅಮೋಘಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ. ಕನ್ನಾಪೂರ ಹಟ್ಟಿ ಗೆಳೆಯರ ಬಳಗ ವತಿಯಿಂದ ಶ್ರೀ ಪರಮಾನಂದ ದೇವಸ್ಥಾನದ ಹತ್ತಿರದ ಮೈದಾನದಲ್ಲಿ ಟಗರಿನ ಕಾಳಗ ನಡೆಯಿತು. 4 ತಿಂಗಳ ಮರಿ, ಹಾಲ ಹಲ್ಲು, ಎರಡು ಹಲ್ಲು, ನಾಲ್ಕು ಹಲ್ಲಿನ ವಿಭಾಗದಲ್ಲಿ ನಡೆದ ಕಾಳಗದಲ್ಲಿ ವಿವಿಧ ಭಾಗಗಳಿಂದ ಆಗಮಿಸಿದ ಟಗರುಗಳು ಪಾಲ್ಗೊಂಡಿದ್ದವು ಟಗರುಗಳು ಒಂದಕ್ಕೊಂದು ಗುದ್ದುವುದರ ಮೂಲಕ ಕಾಳಗ ನಡೆಸಿ ಜನರಲ್ಲಿ ರೋಮಾಂಚನ ಮೂಡಿಸಿದವು. ಪ್ರೇಕ್ಷಕರು ಟಗರು ಕಣದೊಳಗೆ ಬಾರದಂತೆ ಕಬ್ಬಿಣದ ಬ್ಯಾರಿಕೇಡ್ಗಳನ್ನು ಹಾಕಲಾಗಿತ್ತು. ಸ್ಪರ್ಧೆಗೆ ಕೆಡಿಪಿ ಸದಸ್ಯ ಪರಮೇಶ್ ಗೊರ್ ಚಾಲನೆ ನೀಡಿದರು. ದೇವಪ್ಪ ಚೇರ್ಮನ್ ಬಿಜೆಪಿ ಯುವ ಮುಖಂಡ, ಶಿವಶಂಕರಯ್ಯ ಎಸ್ ಒಡೆಯರ್, ಅಮರೇಶ ಬಿಸನಾಳ, ಪರಮಣ್ಣ ಜಾಲಿಹಾಳ್, ಅಮರೇಶ ಮೇಗೂರು, ಶ್ರೀನಿವಾಸ್ ಮೇಗೂರು, ಲಕ್ಷ್ಮಣ ಕಾಂಜಿ, ಮುತ್ತಪ್ಪ ಭಜಂತ್ರಿ, ಗದ್ದೆಪ್ಪ ಬೆಂಡೋಣಿ, ಶಿವನಗೌಡ ಮಾಲಿ ಪಟೇಲ್, ಪರಮಯ್ಯ ಒಡೆಯರ್‌ಹನುಮಯ್ಯ ಒಡೆಯರ್ ಹನುಮೇಶ್ ಜಾಲಿಹಾಳ ಜಾಲಿಹಾಳ, ರಾಮಣ್ಣ ಕುರಿ, ಪರಮಣ್ಣ ಬಿಸನಾಳ, ಬಸವರಾಜ್ ಮೇಗೂರು,

ಫೆ.20ಕ್ಕೆ ಸಾರಿಗೆ ಅದಾಲತ್

ಹೊಸಪೇಟೆ: ಪ್ರಾದೇಶಿಕ ಸಾರಿಗೆ ಇಲಾಖೆ ಕಚೇರಿ ವತಿಯಿಂದ ಫೆ.20 ರಂದು ಸಂಜೆ 4ಕ್ಕೆ ಪ್ರಾದೇಶಿಕ ಸಾರಿಗೆ ಇಲಾಖೆ ಕಚೇರಿಯಲ್ಲಿ ಸಾರಿಗೆ ಅದಾಲತ್ ಏರ್ಪಡಿಸಲಾಗಿದೆ. ಈ ಸಂಬಂಧ ಸಾರ್ವಜನಿಕರು ಅದಾಲತ್ನಲ್ಲಿ ಭಾಗವಹಿಸಿ ಯಾವುದೇ ರೀತಿಯ ಅಹವಾಲು, ಸಮಸ್ಯೆಗಳಿದ್ದಲ್ಲಿ ಸಾರಿಗೆ ಇಲಾಖೆಗೆ ಅವಗಾಹನೆಗೆ ತರಬಹುದು ಎಂದು ಪ್ರಾದೇಶೀಕ ಸಾರಿಗೆ ಅಧಿಕಾರಿ ದಾಮೋದರ್‌ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಆರ್.ಅಶೋಕ್} ವಿಪಕ್ಷ ನಾಯಕ

ಈ ರಾಜ್ಯದಲ್ಲಿ ಜನವಿರೋಧಿ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿದೆ. ಸಿಎಂ ಸಿದ್ದರಾಮಯ್ಯರಿಂದ ಮುಡಾ ಹಗರಣ ನಡೆದಿದೆ. ಮುಡಾ ಹಗರಣದ ಮೂಲ ಪುರುಷ ಸಿದ್ದರಾಮಯ್ಯ ಆಗಿದ್ದು, ವಾಲ್ಮೀಕಿ ನಿಗಮದಲ್ಲಿ 187 ಕೋಟಿ ರು. ಹಣ ನುಂಗಿದ್ದಾರೆ. ಈ ವೇಳೆ ಸಚಿವರಾಗಿದ್ದ ನಾಗೇಂದ್ರ, ರಾಜೀನಾಮೆ ಸಲ್ಲಿಸಿ, ಜೈಲಿಗೆ ಹೋಗಿದ್ದರು.

ಹಂಪಿ ಉತ್ಸವದಲ್ಲಿ ಗಮನ ಸೆಳೆದ ಕೃಷಿ ವಸ್ತುಗಳ, ಎತ್ತುಗಳ ಪ್ರದರ್ಶನ | ಮಾತಂಗ ಪರ್ವತ ಮೈದಾನದಲ್ಲಿ ಫಲಪುಷ್ಪ ಲೋಕ

ಸುಗ್ಗಿ ಸಂಭ್ರಮ, ರೈತರ ಬದುಕಿನ ಅನಾವರಣ



ಹಂಪಿ: ಉತ್ಸವದ ಅಂಗವಾಗಿ ಮಾತಂಗ ಪರ್ವತ ಮೈದಾನದಲ್ಲಿ ಆಯೋಜಿಸಲಾದ ಸುಗ್ಗಿ ಸಂಭ್ರಮ, ಕೃಷಿ ವಸ್ತುಗಳ ಪ್ರದರ್ಶನ ನಾಡಿನ ರೈತರ ಬದುಕನ್ನು ಅನಾವರಣಗೊಳಿಸಿತು.

ಪಾರಂಪರಿಕ ಹಾಗೂ ಆಧುನಿಕ ಕೃಷಿ ಪದ್ಧತಿಗಳ ಸಂಯೋಗದೊಂದಿಗೆ ಸುಸ್ಥಿರ ಕೃಷಿ ಅಭಿವೃದ್ಧಿಯನ್ನು ಸಾಧ್ಯತೆಯನ್ನು ವಸ್ತುಪ್ರದರ್ಶನ ಸಾರುತ್ತಿದೆ.

ಸುಗ್ಗಿ ಸಂಭ್ರಮದಲ್ಲಿ ಸಂಕ್ರಾಂತಿ ಹಬ್ಬ, ರಾಶಿಪೂಜೆ, ಬೀಜಗಳ ಒಕ್ಕಣೆ ಮಾಡುತ್ತಾ ಹಾಗೂ ಒಳಕಲ್ಲಿನಲ್ಲಿ ಧಾನ್ಯ ಬೀಸುತ್ತಾ ಜನಪದ ಗೀತೆ ಹಾಡುವ ಗ್ರಾಮೀಣ ಮಹಿಳೆಯರು, ಎತ್ತಿನ ಬಂಡಿ ಹಳ್ಳಿ ಸೊಗಡನ್ನು ಚಿತ್ರಣವನ್ನು ನೋಡುಗರ ಕಣ್ಣಿಗೆ ಕಟ್ಟಿಕೊಡುತ್ತಿವೆ.

ಕೃಷಿ ವಸ್ತು ಪ್ರದರ್ಶನದಲ್ಲಿ ದೇಶಿ ಪಾರಂಪರಿಕ ಕೃಷಿ ಉತ್ಪನ್ನಗಳು ರೈತರ ಜೀವನ ತೆರೆದಿಡುತ್ತಿವೆ. ಕುಲಾಂತರಿ ಹಾಗೂ ವಿದೇಶಿ ಬೀಜಗಳ ನಡುವೆಯೂ ಜವಾರಿ ಹಾಗೂ ನಾಟಿ ಬೀಜ ಸಂಪತ್ತು, ಜೀವ ಹಾಗೂ ಸಸ್ಯ ವೈವಿಧ್ಯತೆ ಕಾಪಾಡುವ ಮಹತ್ವ ಸಾರುತ್ತಿವೆ.

ಸಿರಿಧಾನ್ಯಗಳಲ್ಲಿ ಮೂಡಿಬಂದ ಗಣಪತಿ, ಕೆ.ಎಸ್.ಡಿ.ಎ ಲಾಂಛನ ಹಾಗೂ ನಂದಿ ಜನರನ್ನು ಸೆಳೆಯುತ್ತಿವೆ. ಇದರೊಂದಿಗೆ ಕೃಷಿಯಲ್ಲಿ ಡ್ರೋಣಗಳ ಬಳಕೆ, ಟ್ರಾಕ್ಟರ್ ,ಪಶುಪಾಲನೆಯೊಂದಿಗೆ ಸಮಗ್ರ ಕೃಷಿ ಪದ್ಧತಿ ಬಗ್ಗೆ ತಿಳಿಸುವ ಕೃಷಿ ಬ್ರಹ್ಮಾಂಡ, ರೇಷ್ಮೆ ಕೃಷಿ, ಸಿರಿಧಾನ್ಯಗಳ ಖಾದ್ಯಗಳ ಹಾಗೂ ಸಾವಯವ ಕೃಷಿ ಉತ್ಪನ್ನ ಮಾರಾಟ ಈ ಬಾರಿಯ ಕೃಷಿ ಪ್ರದರ್ಶನದಲ್ಲಿ ಪ್ರಮುಖ ಎನಿಸಿವೆ.

ಈ ವೇಳೆ ಕೃಷಿ ಜಂಟಿ ನಿರ್ದೇಶಕ ಬಿ.ಟಿ.ಮಂಜುನಾಥ, ಉಪನಿರ್ದೇಶಕ ಡಾ.ನಹೀಂಪಾಷ, ಸಹಾಯಕ ನಿರ್ದೇಶಕ ಮನೋಜ್ ಗೌಡ, ಎಸ್.ಪಿ.ಪಾಟೀಲ್, ವಿ.ಸಿ.ಉಮೇಶ್ ಸೇರಿದಂತೆ ಕೃಷಿ ಅಧಿಕಾರಿಗಳು ಉಪಸ್ಥಿತರಿದ್ದರು.

ಉತ್ಸವದಲ್ಲಿ ವಿವಿಧ ತಳಿಯ 180 ಜೋಡೆತ್ತು ಭಾಗಿ

ಹಂಪಿ ಉತ್ಸವ ನಿಮಿತ್ತ ಜಿಲ್ಲಾಡಳಿತ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಕಮಲಾಪುರದ ಹಂಪಿ ವಿಶ್ವ ಪಾರಂಪರಿಕ ತಾಣ ನಿರ್ವಹಣಾ ಪ್ರಾಧಿಕಾರದ ಕಚೇರಿ ಹಿಂಭಾಗದಲ್ಲಿ ಶುಕ್ರವಾರ ಎತ್ತುಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು.

ಜೋಡೆತ್ತುಗಳಿಗೆ ಪೂಜೆ ಸಲ್ಲಿಸುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಪ್ರದರ್ಶನ ಉದ್ಘಾಟಿಸಿದರು.

ತಮ್ಮ ಎತ್ತುಗಳನ್ನು ಸಿಂಗರಿಸಿ ರೈತರು ಹಂಪಿ ಉತ್ಸವದ ಜೋಡೆತ್ತುಗಳ ಸ್ಪರ್ಧೆಗೆ ಆಗಮಿಸಿದ್ದರು. ಸಂಘಟಕರ ನಿರೀಕ್ಷೆಗೂ ಮೀರಿ ಜೋಡೆತ್ತುಗಳ ಸ್ಪರ್ಧೆಗೆ ಸ್ಪಂದನೆ ದೊರೆತಿದ್ದು, 180 ಅಧಿಕ ಜೋಡೆತ್ತುಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು.

ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಹೊಸಪೇಟೆ ರೈತ ಮಂಜುನಾಥ್.ಆರ್ ಅವರ ಹಳ್ಳಿಕಾರ ತಳಿಯ ಜೋಡೆತ್ತುಗಳು ರು.10,000 ಹಾಗೂ ಪ್ರಮಾಣ ಪತ್ರ ಪಡೆದು ಚಾಂಪಿಯನ್ ಪಟ್ಟ ಮುಡಿಗೇರಿಸಿಕೊಂಡವು. ಗಾದಿನಗನೂರು ಗ್ರಾಮದ ಬಿ.ಬಸವ ಅವರ ಜೋಡು ಎತ್ತುಗಳು ದ್ವಿತೀಯ ಸ್ಥಾನ ಗಳಿಸುವ ಮೂಲಕ ರು.7,500 ಹಾಗೂ ಪ್ರಮಾಣ ಪತ್ರ ಪಡೆದುಕೊಂಡವು. ಬಾಳಾಪುರದ ರೈತ ಶಂಕರಪ್ಪನವರ ಎತ್ತುಗಳು ತೃತೀಯ ಸ್ಥಾನ ಪಡೆದು, ರು.5,500 ಹಾಗೂ ಪ್ರಮಾಣ ಪತ್ರ ಗಿಟ್ಟಿಸಿಕೊಂಡವು. ಹೊಸಪೇಟೆ ಮಹಮದ್ ಹುಸೇನ್ ಅವರ ಜೋಡೆತ್ತುಗಳು ರು.2500 ಪಡೆದುಕೊಂಡು ನಾಲ್ಕನೇ ಸ್ಥಾನ ಪಡೆದುಕೊಂಡವು.

ಸಚಿವ ಜಮೀರ್‌ಅಹ್ಮದ್ ಖಾನ್ ಪ್ರಶಸ್ತಿಗೆ ಭಾಜನವಾದ ನಾಲ್ಕು ಜತೆ ಜೊಡೆತ್ತುಗಳಿಗೆ ವೈಯುಕ್ತಿಕವಾಗಿ ರು.2 ಲಕ್ಷ ನಗದು ಬಹುಮಾನವನ್ನು ನೀಡಿದರು.

ಕಲಮಾಪುರ, ಹೊಸಪೇಟೆ ಸೇರಿದಂತೆ ಜಿಲ್ಲೆಯ ವಿವಿಧ ಕಡೆಗಳಿಂದ 180ಕ್ಕೂ ಹೆಚ್ಚಿನ ಜೋಡೆತ್ತುಗಳು ಉತ್ಸವದಲ್ಲಿ ಭಾಗವಹಿಸಿವೆ. ಹಳ್ಳಿಕಾರ್,ಮಲೆನಾಡ ಗಿಡ್ಡ, ಓಂಗೋಲ್, ಅಮೃತ್ಮಹಲ್, ಕಿಲಾರಿ ಜಾತಿ ವಿವಿಧ ದೇಶಿ ಹಾಗೂ ವಿದೇಶಿ ತಳಿಯ ಜೋಡೆತ್ತುಗಳು ತಮ್ಮ ಗಾಂಭೀರ್ಯದಿಂದ ನೋಡುಗರನ್ನು ಚಕಿತಗೊಳಿಸಿದವು.

ಬೀದರ್ ಪಶುವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಡಾ.ಕೊಟ್ರೇಶ್ ಬಸವರಾಜ್ ಹಾಗೂ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಪಶು ವೈದ್ಯರ ತಂಡ ಜೋಡೆತ್ತುಗಳ ಸ್ಪರ್ಧೆಯಲ್ಲಿ ತೀರ್ಪುಗಾರರಾಗಿ ಕೆಲಸ ನಿರ್ವಹಿಸಿದರು. ಪ್ರದರ್ಶನದಲ್ಲಿ ಎತ್ತುಗಳ ಮೂಲತಳಿ, ದೇಹದಾರ್ಢ್ಯತೆ, ಚುರುಕುತನ, ಅವುಗಳ ಚಲನವಲನಗಳ, ಹೊಳೆಯುವ ಚರ್ಮ,ಕಣ್ಣು, ವಯಸ್ಸು, ಹಲ್ಲು ಸೇರಿದಂತೆ ರೈತರಿಂದ ಅವುಗಳ ಪೋಷಣೆ ಕ್ರಮವನ್ನು ಪರಿಗಣಿಸಿ ತೀರ್ಪುಗಾರರು ಬಹುಮಾನ ಘೋಷಿಸುವರು. ನಿವೃತ್ತ ಸಹಾಯಕ ನಿರ್ದೇಶಕ ಡಾ. ಬಸವರಾಜ ಬೆಣ್ಣಿ ರೈತರೊಂದಿಗೆ ಸಂವಾದ ನಡೆಸುವ ಮೂಲಕ ನಿರೂಪಣೆ ಕಾರ್ಯ ನಡೆಸಿದರು.

5 ಸಾವಿರ ಹೂವಿನಿಂದ ಅರಳಿದ ಗಣಪ

ಹಂಪಿ ಉತ್ಸವದ ಅಂಗವಾಗಿ ಹಂಪಿಯ ಮಾತಂಗ ಪರ್ವತ ಮೈದಾನದಲ್ಲಿ ಆಯೋಜಿಸಲಾಗಿರುವ ಫಲಪುಷ್ಪ ಪ್ರದರ್ಶನ ಜನಮನ ಸೂರೆಗೊಳ್ಳುತ್ತಿದೆ. ಪುಷ್ಪಲೋಕದಲ್ಲಿ ಅರಳಿದ ಬೃಹತ್ ಬಡವಿ ಶಿವಲಿಂಗ, ಸಾಸಿವೆಕಾಳು ಗಣಪತಿ ಪ್ರಮುಖ ಆಕರ್ಷಣೆ ಎನಿಸಿವೆ. ಬಿಳಿ, ಕೆಂಪು, ನೇರಳೆ, ಹಳದಿ ಬಣ್ಣದ ಸೇವಂತಿ, ಗುಲಾಬಿ, ಚಂಡು ಹೂಗಳಿಂದ ಬಡವಿ ಶಿವಲಿಂಗ ಹಾಗೂ ಸಾಸಿವೆ ಕಾಳು ಗಣಪ ನಿರ್ಮಿಸಲಾಗಿದೆ. ಬಡವಿ ಶಿವಲಿಂಗ ನಿರ್ಮಾಣಕ್ಕೆ 10 ಸಾವಿರ ಹಾಗೂ ಸಾಸಿವೆ ಕಾಳು ಗಣಪತಿ ನಿರ್ಮಾಣಕ್ಕೆ 5 ಸಾವಿರ ಹೂವುಗಳು ಬಳಕೆಯಾಗಿವೆ. ಎರಡು ಕಲಾಕೃತಿಗಳು ಹೊಸಪೇಟೆ ಕಲಾವಿದ ಜಗದೀಶ್ ಕೈಚಳದಲ್ಲಿ ಮೂಡಿಬಂದಿದೆ. ಇದರೊಂದಿಗೆ ವಿಜಯನಗರ ಸಾಮ್ರಾಜ್ಯದ ಸುವರ್ಣಯುಗ ನೆನಪಿಸುವ ಮುತ್ತು,ವಜ್ರ,ವೈಡೂರ್ಯ, ಸ್ವರ್ಣಗಳ ಮಾರಾಟ ರಾಜಬೀದಿ ನಾಡಿನ ಗತವೈಭವ ಸಾರುತ್ತಿವೆ. ಹೂಗಳಿಂದ ನಿರ್ಮಿತವಾದ ರಾಯರರಾಯ, ಯವನರಾಜ್ಯ ಪ್ರತಿಷ್ಠಾಪನಾಚಾರ್ಯ ಕೃಷ್ಣದೇವರಾಯರ ಪ್ರತಿಮೆ ಗಾಂಭೀರ್ಯ ಮೆಚ್ಚುವಂತಿದೆ. ಸಿರಿಧಾನ್ಯಗಳಲ್ಲಿ ಮೂಡಿಬಂದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ವಿನೀತಳಾಗಿ ಕೈಮುಗಿದು ನಿಂತ ಪ್ರತಿಮೆ, ಪರಿಸರ ರಕ್ಷಣೆ ನೋಡುಗರನ್ನು ಪ್ರೇರೆಪಿಸುತ್ತದೆ. ಕುಬ್ಜಮರಗಳ ಬೆಳಸುವ ಬೋನ್ಸಾಯ್ ಕಲೆ, ಜಿಲ್ಲೆಯ ತೋಟಗಾರಿಕೆ ಬೆಳೆಗಳ ಪರಿಚಯ ಪಲಪುಷ್ಪ ಪ್ರದರ್ಶನ ದೊರೆಯುತ್ತಿದೆ.

ಬೇಸಿಗೆ ನಿರ್ವಹಣೆಗೆ ಕ್ರಿಯಾ ಯೋಜನೆ ಸಿದ್ಧಪಡಿಸಿ

ರಾಯಚೂರು: ಬೇಸಿಗೆಯ ಅವಧಿಯಲ್ಲಿ ರಾಯಚೂರು ಗ್ರಾಮೀಣ ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಸರಿಯಾದ ರೀತಿಯಲ್ಲಿ ಕುಡಿಯುವ ನೀರು ಪೂರೈಕೆಗೆ ಅಗತ್ಯ ವ್ಯವಸ್ಥೆಯಾಗುವುದು ಸೇರಿದಂತೆ ಫೆಬ್ರವರಿ, ಮಾರ್ಚ್,ಏಪ್ರಿಲ್, ಮೇ ಹಾಗೂ ಜೂನ್ ಅವಧಿವರೆಗೆ ಬೇಸಿಗೆ ನಿರ್ವಹಣೆಗೆ ಕ್ರಿಯಾಯೋಜನೆ ಸಿದ್ಧಪಡಿಸಬೇಕು ಎಂದು ರಾಯಚೂರು ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ತಾಲೂಕು ಪಂಚಾಯತ್ ಕಚೇರಿ ಸಭಾಂಗಣದಲ್ಲಿ ನಡೆದ ಟಾಸ್ಕ್‌ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬೇಸಿಗೆಯ ಅವಧಿಯಲ್ಲಿ ತುರ್ತು ಸಂದರ್ಭದಲ್ಲಿ ನೀರು ಪೂರೈಕೆಗೆ ಅನುಕೂಲವಾಗುವಂತೆ ಅಗತ್ಯ ಏರ್ಪಾಡನ್ನು ಈಗಿನಿಂದಲೇ ಮಾಡಿಕೊಳ್ಳಬೇಕು. ಮುಖ್ಯ ಜಲ ಸಂಗ್ರಹಗಾರಗಳಾದ ಕೆರೆಗಳಲ್ಲಿ ಲಭ್ಯವಿರುವ ಗರಿಷ್ಠ ಮತ್ತು ಕನಿಷ್ಠ ನೀರಿನ ಸಂಗ್ರಹದ ಬಗ್ಗೆ ಗಮನ ಹರಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಯಚೂರು ಗ್ರಾಮೀಣ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸಬಹುದಾದ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು? ಗ್ರಾಮಗಳ ಸಂಖ್ಯೆ ಎಷ್ಟು? ಯಾವ ಯಾವ ಕಡೆಗಳಲ್ಲಿ ನೀರಿನ ಸಮಸ್ಯೆಯಾಗಬಹುದು? ನೀರು ಸರಬರಾಜು ಮೂಲಗಳಾದ ನದಿ ಹಳ್ಳ ಬೋರವೆಲ್‌ಗಳ ಸಂಖ್ಯೆ ಎಷ್ಟು? ಬೇಕಾಗುವ ಅನುದಾನ ಎಷ್ಟು? ಇದುವರೆಗೆ ಬಾಡಿಗೆ ಪಡೆದಿರುವ ಖಾಸಗಿ ಬೋರವೆಲ್‌ಗಳ ಸಂಖ್ಯೆ? ಖಾಸಗಿ ಬೋರವೆಲ್ ಮೂಲಕ ನೀರು ಸರಬರಾಜು ಮಾಡಿದ ಗ್ರಾಮಗಳ ಸಂಖ್ಯೆ? ಈ ರೀತಿಯ ನಾನಾ ಅಂಶಗಳ ಬಗ್ಗೆ ಕೂಡಲೇ ಅಧಿಕಾರಿಗಳು ಕಾಳಜಿಯಿಂದ ಕ್ರಿಯಾಯೋಜನೆ ಸಿದ್ಧಪಡಿಸಿ ಕಾರ್ಯನುಷ್ಠಾನ ಮಾಡಬೇಕು ಎಂದು ಸೂಚನೆ ನೀಡಿದರು.

ನಗರದ ತಾಲೂಕು ಪಂಚಾಯತ್ ಕಚೇರಿ ಸಭಾಂಗಣದಲ್ಲಿ ನಡೆದ ಟಾಸ್ಕ್‌ಫೋರ್ಸ್ ಸಭೆಯ ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಮಾತನಾಡಿದರು.

ವಾರದ ಗಡುವು: ನೀವು ನಿಯಮಿತವಾಗಿ ಗ್ರಾಮಗಳಿಗೆ ಭೇಟಿ ನೀಡುತ್ತಿದ್ದೀರಾ? ಆಯಾ ಗ್ರಾಮಗಳಲ್ಲಿ ನೀರಿನ ಪರಿಸ್ಥಿತಿ ಏನಿದೆ ಎಂಬುದು ತಿಳಿದಿದೆಯಾ? ಎಂದು ಸಭೆಯಲ್ಲಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳಿಗೆ ಶಾಸಕರು ಪ್ರಶ್ನಿಸಿದರು. ಗ್ರಾಮೀಣ ಕ್ಷೇತ್ರದ ಎಲ್ಲ ಗ್ರಾಮಗಳಿಗೆ ಭೇಟಿ ನೀಡಿ ಅಲ್ಲಿನ ಕೆರೆಗಳ ಸ್ಥಿತಿ, ಕುಡಿವ ನೀರಿನ ಪರಿಸ್ಥಿತಿ ಸೇರಿದಂತೆ ಸಮಗ್ರ ಮಾಹಿತಿಯನ್ನು ನೀಡುವಂತೆ ಆರ್ಡಬ್ಲೂಎಸ್ ಅಧಿಕಾರಿಗಳಿಗೆ ಶಾಸಕರು ವಾರದ ಗಡುವು ವಿಧಿಸಿದರು.

ಸಭೆಯಲ್ಲಿ ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನಗೌಡ ತಲಮಾರಿ, ತಹಸೀಲ್ದಾರ ಸುರೇಶ ವರ್ಮಾ,ತಾಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿ ಚಂದ್ರಶೇಖರ ಪವಾರ, ಅರಣ್ಯ ಸಂರಕ್ಷಣಾಧಿಕಾರಿ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು, ವಿವಿಧ ಗ್ರಾಮ ಪಂಚಾಯತಗಳ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಭಾಗಿಯಾಗಿದ್ದರು.

ಹಂಪಿ ಉತ್ಸವದ ಪ್ರಯುಕ್ತ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಹಯೋಗದಲ್ಲಿ ಶ್ರೀ ವಿರೂಪಾಕ್ಷ ದೇವಸ್ಥಾನದ ಮುಂಭಾಗದಲ್ಲಿ ರಂಗೋಲಿ ಸ್ಪರ್ಧೆ ನಡೆಯಿತು. ಸಾಮಾಜಿಕ ಜಾಗೃತಿ ಮೂಡಿಸುವ ಮೂಲಕ ಗಮನ ಸೆಳೆಯಿತು. 'ಹೆಣ್ಣು ಭ್ರೂಣ ಉಳಿಸಿ' ಎಂಬ ರಂಗವಲ್ಲಿ ಪ್ರಸವ ಪೂರ್ವ ಲಿಂಗಪತ್ತೆ ಹಾಗೂ ಭ್ರೂಣಹತ್ಯೆ ತಡೆಯುವ ಸಂದೇಶ ಸಾರಿತು. ರಂಗೋಲಿ ಸ್ಪರ್ಧೆಯಲ್ಲಿ ಒಟ್ಟು 41 ಮಹಿಳಾ ಸ್ಪರ್ದಿಗಳು ಭಾಗವಹಿಸಿದ್ದರು. ಬಗೆ-ಬಗೆಯ ರಂಗೋಲಿ ಚಿತ್ತಾರಗಳು ಹಬ್ಬದ ವಾತಾವರಣವನ್ನು ಸೃಷ್ಟಿಸಿ ಹಂಪಿ ಉತ್ಸವಕ್ಕೆ ಕಳೆ ತಂದವು.

ಕೆಲವೇ ಕೈಗಳ ಹಿಡಿತ ತಪ್ಪಿಸಿ ಬ್ಯಾಂಕ್ ಚುನಾವಣೆ

ಲಿಂಗಸೂಗೂರು: ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿರುದ್ಧಿ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆಯನ್ನು ಪ್ರತಿಯೊಬ್ಬ ರೈತರಿಗೆ ತಿಳಿಯುವಂತೆ ಮಾಡಿ ಒಂದು ವರ್ಗಕ್ಕೆ ಸೀಮಿತವಾಗಿದ್ದ ಪಿಎಲ್‌ಡಿ ಬ್ಯಾಂಕ್ ಸಿದ್ಧಾಂತವನ್ನು ಭೇದಿಸಿದ್ದೇವೆ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದ ನಾಯಕ ಹೇಳಿದರು.

ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾ ಭಿರುದ್ಧಿ ಬ್ಯಾಂಕ್ ಆಡಳಿತ ಮಂಡಳಿ ಚುನಾವಣೆ ಯಾರಿಗೂ ತಿಳಿಯದ ಹಾಗೆ ತಮಗೆ ಬೇಕಿದವರು ಮಾತ್ರ ತಮ್ಮ ತಮ್ಮಲೇ ಮಾತಾಡಿಕೊಂಡು ಸೀಮಿತ ಕುಟುಂಬಗಳು ಮಾತ್ರ ಅಧಿಕಾರ ಪಡೆದು ಉಳಿದ ಬೇರೆ ಸದಸ್ಯರಿಗೆ ಚುನಾವಣೆ ಬಗ್ಗೆ ಮಾಹಿತಿ ಕೊಡದೆ ಇಷ್ಟು ದಿನಗಳು ನಡೆದುಕೊಂಡು ಬಂದಿದ್ದು. ಪ್ರತಿಯೊಬ್ಬ ಶೇರುದಾರನು ಚುನಾವಣೆ ಬಗ್ಗೆ ತಿಳಿಯಬೇಕು ಎಂಬ ಉದ್ದೇಶದಿಂದ ಪ್ರತಿ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಿ ಡಿ. ಎಸ್. ಹುಲಗೇರಿ ಬೆಂಬಲಿತ ಅಭ್ಯರ್ಥಿಗಳು ಹೆಚ್ಚು ಸ್ಥಾನ ಗೆಲ್ಲುವ ಮೂಲಕ ಮೇಲುಗೈ ಸಾಧಿಸಲಾಗಿದೆ ಎಂದು ಹೇಳಿದರು. ಕೋಠ ಸಾಲಗಾರರ ಸಾಮಾನ್ಯ ಕ್ಷೇತ್ರದಿಂದ ಚನ್ನಬಸಪ್ಪ, ನಿಲೋಗಲ್ ಸಾಲಗಾರ ಸಾಮಾನ್ಯ ಕ್ಷೇತ್ರದಿಂದ ಶಿವನಗೌಡ, ಗುರುಗುಂಟ ಸಾಲಗಾರ ಪರಿಶಿಷ್ಟ ಪಂಗಡ ಕ್ಷೇತ್ರದಿಂದ ಭೀಮರಾಯ, ಲಿಂಗಸೂಗೂರು ಗ್ರಾಮೀಣ ಸಾಲಗಾರ ಮಹಿಳಾ ಕ್ಷೇತ್ರದಿಂದ ಯಂಕಮ್ಮ, ನಾಗಲಾಪುರ್‌ಸಾಲಗಾರ ಸಾಮನ್ಯ ಕ್ಷೇತ್ರದಿಂದ ಸಿದ್ದನಗಗೌಡ ಇವರುಗಳ ಗೆಲುವಿಗೆ ಸಹಕರಿಸಿದ ಮತದಾರ ಬಂದುಗಳಿಗೆ ಕೃತಜ್ಞತೆ ಸಲ್ಲಿಸಿದರು.

ಪ್ರತಿ ಬಾರಿಯು ಒಳಗೊಳಗೇ ನಡೆಯುವ ಚನಾವಣೆ ಇದಾಗಿದ್ದು ಈ ಬಾರಿಯ ಜಿದ್ದಾ ಜಿದ್ದಿನ ಚುನಾವಣೆಯಲ್ಲಿ ಮಾಜಿ ಸಚಿವರು ಕೂಡ ಮತಚಲಾವಣೆ ಮಾಡಿದ್ದಾರೆ ಎಂದರೆ ಮತದಾನದ ಮಹತ್ವ ಎಂತಹದು ಎಂಬುದು ತಾಲೂಕಿನ ಜನಕ್ಕೆ ತಿಳಿಸಿಕೊಟ್ಟಂತಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮುದುಕಪ್ಪ, ಎಂ ಡಿ ರಫಿ, ಉಮೇಶ್, ಅಮರೇಶ ಹೆಸರೂರು,ಸಂತೋಷ್ ಸೊಪ್ಪಿಮಠ, ವೆಂಕಟೇಶ್, ಸಂಗಮೇಶ ಉಪಸ್ಥಿತರಿದ್ದರು.

ವಿಮಾನ ನಿಲ್ದಾಣ ಕಾಮಗಾರಿ ಪರಿಶೀಲನೆ

ರಾಯಚೂರು: ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್ .ಜಿ.ನಂಜಯ್ಯನಮಠ ಫೆ.13 ರ ದಂದು ರಾಯಚೂರಿನ ಯರಮರಸ್ ಬಳಿಯ ವಿಮಾನ ನಿಲ್ದಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಟ್ಟಾರೆ 322 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ವಿಮಾನ ನಿಲ್ದಾಣ ಕಾಮಗಾರಿ ನಡೆಯುತ್ತಿದೆ. ಕಾಮಗಾರಿಯು ಈಗಾಗಲೇ ಶೇ.31ರಷ್ಟು ಪೂರ್ಣವಾಗಿದೆ. ಬರುವ ಎರಡೂವರೆ ತಿಂಗಳಲ್ಲಿ ರನ್ ವೇ ಕಾಮಗಾರಿಯು ಪೂರ್ಣವಾಗಲಿದೆ. ಈ ವರ್ಷದಲ್ಲಿ ಮಳೆ ನಿರಂತರವಾಗಿ ಸುರಿದ ಕಾರಣ ರನ್ ವೇ ಕಾಮಗಾರಿಯು ಮಂದಗತಿಯಲ್ಲಿ ಸಾಗಿತ್ತು ಎಂದು ತಿಳಿಸಿದರು.

ಒಟ್ಟಾರೆ ಮುಂದಿನ ಒಂದೂವರೆ ವರ್ಷದ ಕಾಲಾವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿ ಹೊಂದಿದ್ದೇವೆ ಎಂದು ತಿಳಿಸಿದರು.



ರಾಯಚೂರಿನ ಯರಮರಸ್ ಬಳಿಯ ವಿಮಾನ ನಿಲ್ದಾಣ ಕಾಮಗಾರಿ ಸ್ಥಳಕ್ಕೆ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಏಗನೂರು ಗ್ರಾಮದಲ್ಲಿ 30 ಮನೆಗಳು ಬೇರೆಡೆಗೆ ಶಿಫ್ಟ್ ಮಾಡಲು ಮೂರು ಎಕರೆ ಜಮೀನು ಹಾಗೂ ದಂಡ ಗ್ರಾಮದಲ್ಲಿನ 108 ಮನೆಗಳು ಶಿಫ್ಟ್ ಮಾಡಲು ಆರು ಎಕರೆ ಜಮೀನಿನಲ್ಲಿ ಲೇಔಟ್ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದರು. ವಿಮಾನ ನಿಲ್ದಾಣ ಕಾಮಗಾರಿಯೂ ಸಂಬಂಧ ಬೇರೆಡೆಗೆ ಸ್ಥಳಾಂತರ ವಾಗುವ ಎರಡು ಗ್ರಾಮಗಳಲ್ಲಿನ ಗ್ರಾಮಸ್ಥರಿಗೆ ಅವರ ಮನೆಯ ಕಿಮ್ಮತ್ತಿನ ಪರಿಹಾರವನ್ನು ನೀಡಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ರಾಜು ಬಂಡಿಕೇರಿ, ರಾಜು ಹರಿಳಯ್ಯಮಠ, ಲೋಕೋಪಯೋಗಿ ಇಲಾಖೆ ಅಭಿಯಂತರಾದ ಮಹೇಶ್ ಇದ್ದರು.

ಶಿವರಾತ್ರಿ ಉತ್ಸವದಲ್ಲಿ ಭಾಗವಹಿಸಿ: ಸಂಸದ ಹಿಟ್ನಾಳ

ಕೊಪ್ಪಳ: ಹುಲಿಕೆರೆ ಸಮೀಪದ ಶಿವರಾತ್ರೇಶ್ವರ ದೇವಸ್ಥಾನದಲ್ಲಿ ಫೆ.15ರಂದು ಸಂಜೆ 6ಕ್ಕೆ ಶಿವರಾತ್ರಿ ಉತ್ಸವ ಆಯೋಜಿಸಲಾಗಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಶಿವರಾತ್ರಿ ಹಬ್ಬದಲ್ಲಿ ಪಾಲ್ಗೊಳ್ಳಬೇಕು ಎಂದು ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್ ಅಧ್ಯಕ್ಷ ಹಾಗೂ ಸಂಸದ ಕೆ.ರಾಜಶೇಖರ ಹಿಟ್ನಾಳ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಶಿವರಾತ್ರೇಶ್ವರ ದೇವಸ್ಥಾನ ಸಮಿತಿ ಮತ್ತು ಜಿಲ್ಲಾ ಅಥ್ಲೆಟಿಕ್ಸ್ ಅಸೋಸಿಯೇಷನ್ ಜಂಟಿಯಾಗಿ ಕಾರ್ಯಕ್ರಮ ಆಯೋಜಿಸಲಾಗಿದೆ. ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಆಶೀರ್ವಚನ ನೀಡುವರು ಎಂದು ಮಾಹಿತಿ ನೀಡಿದರು.

ಸಾಂಸ್ಕೃತಿಕ ಕಾರ್ಯಕ್ರಮ:

ಹಿನ್ನೆಲೆ ಗಾಯಕಿ ನಾಗರಾಜ್ ಮತ್ತು ತಂಡ, ಸರಿಗಮಪ ಖ್ಯಾತಿಯ ಮನೋಜ್, ದರ್ಶನ್ ಕಾರ್ಯಕ್ರಮ ನೀಡುವರು. ನಿರೂಪಕಿ ಹೇಮಲತಾ ಕಾರ್ಯಕ್ರಮ ನಿರೂಪಿಸುವರು. ಶ್ರೀರಾಮ್ ಕಾಸರ್‌ಮತ್ತು ನಯನಾ ನಾಗರಾಜ್ ತಂಡದವರು ಮತ್ತು ಗಾಯಕ ಮಂಜುನಾಥ ಅವರೂ ಕಾರ್ಯಕ್ರಮ ನೀಡುವರು. ಗೌರಿ ನಿರೂಪಿಸುವರು.

ಡಿಕೆಡಿ ಡ್ಯಾನ್ಸ್ ಕಾರ್ಯಕ್ರಮ ವಿಜೇತ ಬೃಂದಾ ಮತ್ತು ದರ್ಶನ ತಂಡದಿಂದ ನೃತ್ಯ ಕಾರ್ಯಕ್ರಮ ಇರಲಿದ್ದು, ನವಲಗುಂದದ ಶರಣು ನಾಗನೂರ ಹಾಸ್ಯ ಕಾರ್ಯಕ್ರಮ ಆಯೋಜಿಸಲಾಗಿದೆ. ಹೊಸಪೇಟೆಯ ಅಂಜಲಿ ತಂಡದಿಂದ ಭರತ ನಾಟ್ಯ ಹಾಗೂ ಮದ್ದು ಸುಡುವ ಕಾರ್ಯಕ್ರಮವೂ ಜರುಗಲಿದೆ. ಮಿಟ್ಟಿಕೇರಿಯ ಶ್ರೀಮಾರುತೇಶ್ವರ ಭಜನಾ ಹಾಗೂ ನಾಂಸ್ಕೃತಿಕ ಸೇವಾ ಸಂಘದಿಂದ ಭಜನಾ ಕಾರ್ಯಕ್ರಮ ನಡೆಯಲಿದೆ ಎಂದರು.

ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್ ಅಧ್ಯಕ್ಷ ಹಾಗೂ ಸಂಸದ ಕೆ. ರಾಜಶೇಖರ ಹಿಟ್ನಾಳ ಮಾತನಾಡಿದರು.

ಶಿವನ ಆರಾಧನಾ ಮಹೋತ್ಸವ, ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಲಿವೆ. ಭಕ್ತಾಧಿಗಳಿಗೆ ಮತ್ತು ಸಾರ್ವಜನಿಕರಿಗೆ ಫಲಹಾರ ಮತ್ತು ಅಲ್ಪೋಪಹಾರದ ವ್ಯವಸ್ಥೆ ಇರಲಿದೆ. ಶಿವರಾತ್ರಿ ನಿಮಿತ್ತ ಶಿವರಾತ್ರೇಶ್ವರ ದೇವಸ್ಥಾನದ ಹಿಂಭಾಗದ ಬೆಟ್ಟಕ್ಕೆ ವಿದ್ಯುತ್ ದೀಪಾಲಂಕಾರ ಮಾಡಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆ ಇದೆ. ಅಲ್ಲದೇ ಶಿವರಾತ್ರೇಶ್ವರ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಗೆ ಅನುದಾನ ಮೀಡಲಿಡಲಾಗಿದೆ. ಪಕ್ಕದ ಹುಲಿಕೆರೆ ಅಭಿವೃದ್ಧಿಗೂ ನಗರಾಭಿವೃದ್ಧಿ ಪ್ರಾಧಿಕಾರದಿಂದ 4 ಕೋಟಿ ರೂ. ಅನುದಾನ ಮೀಸಲಾಗಿದೆ ಎಂದರು.

ಅಥ್ಲೆಟಿಕ್ ಅಸೋಸಿಯೇಷನ್ ಉಪಾಧ್ಯಕ್ಷ ಶ್ರೀನಿವಾಸ ಗುಪ್ತಾ, ಶಿವರಾತ್ರೇಶ್ವರ ದೇವಸ್ಥಾನ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಅನಿಲ ನಾಲ್ವಾಡ್, ವೀರಣ್ಣ ಸೊಂಡೂರು, ಮಾರುತಿ ಆಪ್ಟೆ ಇದ್ದರು.

ಫೆ.24ಕ್ಕೆ ಕೊಪ್ಪಳ-ಭಾಗ್ಯ ನಗರ ಬಂದ್

ಕೊಪ್ಪಳ: ನಗರದ ಮಹಾಂತಯ್ಯನ ಮಠ ಕಲ್ಯಾಣ ಮಂಟಪದಲ್ಲಿ, ಕೊಪ್ಪಳ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಜಂಟಿ ಕ್ರಿಯಾ ವೇದಿಕೆಯಿಂದ ಫೆ.24ರ ನಡೆಯುವ ಬಂದ್ ಪೂರ್ವಭಾವಿ ಸಭೆ ನಡೆಯಿತು.

ಫೆ. 24 ರಂದು ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂ. ವರೆಗೆ ಕೊಪ್ಪಳ- ಭಾಗ್ಯನಗರ ಸಂಪೂರ್ಣ ಬಂದ್ ಮಾಡಲು ಸಭೆ ನಿರ್ಣಯ ಕೈಗೊಳ್ಳಲಾಯಿತು. ಆ ದಿನ ಅಗತ್ಯ ಸೇವೆ, ಪರೀಕ್ಷೆ ವಿದ್ಯಾರ್ಥಿಗಳು ಹೊರತುಪಡಿಸಿ ಉಳಿದೆಲ್ಲ ವಾಣಿಜ್ಯ ಚಟುವಟಿಕೆ ಬಂದ್ ಮಾಡಿ ಹಾನಿಕಾರದ ಕಾರ್ಖಾನೆ ವಿಸ್ತರಣೆ ಮಾಡದಂತೆ ಹೋರಾಟ ಮಾಡಲು ನಿರ್ಧಾರ ಮಾಡಲಾಯಿತು. ಬಸಾಪುರ ಕೆರೆ ಬಲ್ಡೋಟ ಅತಿಕ್ರಮಣದಿಂದ ಮುಕ್ತಗೊಳಿಸಬೇಕು. ತುಂಗಭದ್ರ ವಿಷಗೊಳಿಸುವ ಕಾರ್ಖಾನೆ ಮುಚ್ಚಬೇಕು. ಬಾಧಿತ ಹಳ್ಳಿಗಳಿಗೆ ಮುಖ್ಯಮಂತ್ರಿ ಭೇಟಿ ಕೊಡಬೇಕು ಎಂದು ಹೋರಾಟದಲ್ಲಿ ಆಗ್ರಹಿಸಿಸಬೇಕು ಎಂದು ತೀರ್ಮಾನಿಸಿದರು.

ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಅಮರೇಗೌಡ ಪಾಟೀಲ್ ಬಯ್ಯಾಪೂರ, ನಗರಕ್ಕೆ ಮಾರಕವಾಗಿರುವ ಕಾರ್ಖಾನೆಗಳ ವಿರುದ್ಧ ಕಳೆದ 100 ದಿನದಿಂದ ಹೋರಾಟ ನಡೆಯುತ್ತಿರುವುದನ್ನು ಗಮನಿಸುತ್ತಿದ್ದೇನೆ. ಪ್ರಮುಖರಾದ ಈಶ್ವರಪ್ಪ ಕೊರ್ಲಹಳ್ಳಿ, ಎ.ವಿ. ಕಣವಿ ವಕೀಲರು, ಡಿ.ಎಚ್. ಪೂಜಾರ, ಮಾನವ ಬಂಧುತ್ವ ವೇದಿಕೆ ಮುಖಂಡರಾದ ಟಿ. ರತ್ನಾಕರ, ಮಂಜುನಾಥ ಜಿ. ಗೊಂಡಬಾಳ, ಹಿರಿಯ ಸಾಹಿತಿ ಎಚ್.ಎಸ್. ಪಾಟೀಲ್, ಭಾಗ್ಯನಗರದ ದಾನಪ್ಪ ಕವಲೂರು, ಪ್ರಕಾಶಕ ಡಿ.ಎಂ. ಬಡಿಗೇರ, ಮಲ್ಲನಗೌಡ ಕೋನನಗೌಡ್ರ, ಬಿ.ಕೆ.ಪಟ್ಟಣಶೆಟ್ಟಿ, ಸಂತೋಷ ದೇಶಪಾಂಡೆ, ಶಿವಕುಮಾರ ಕುಕನೂರು, ವಿದ್ಯಾ ನಾಲವಾಡ , ಅಶ್ವಿನಿ ಕೊಪ್ಪದ, ಸವಿತಾ ಜೆ. ಹ್ಯಾಟಿ, ದ್ಯಾಮಣ್ಣ ಚಿಲುವಾಡಗಿ, ಪೀರಾ ಹುಸೇನ್ ಹೊಸಳ್ಳಿ ವಕೀಲರು, ವಿಶ್ವನಾಥ ಮಹಾಂತಯ್ಯನ ಮಠ, ಯಮನೂರಪ್ಪ ಹಳ್ಳಿಕೇರಿ,

ಜಿ.ಬಿ.ಪಾಟೀಲ್, ಯಲ್ಲಪ್ಪ ಬಂಡಿ, ನಟರಾಜ ಸವಡಿ, ಜಿ.ಎಸ್.ಕಡೇಮನಿ, ಸಂಗಪ್ಪ ವಾರದ, ಎಸ್.ಎಂ.ಕಂಬಾಳಿಮಠ, ಶಾಂತಯ್ಯ ಅಂಗಡಿ, ಸಿ.ವಿ.ಜಡಿಯವರ, ಸುರೇಶ ಪೂಜಾರ, ಮಹಾಂತೇಶ ಮಲ್ಲನಗೌಡರ, ನಾಗರಾಜ ಕುಷ್ಟಗಿ ಇದ್ದರು.

ಕೊಪ್ಪಳದ ಮಹಾಂತಯ್ಯನ ಮಠ ಕಲ್ಯಾಣ ಮಂಟಪದಲ್ಲಿ, ಫೆ.24ರ ನಡೆಯುವ ಬಂದ್ ಪೂರ್ವಭಾವಿ ಸಭೆ ನಡೆಯಿತು.

ಟಿ-20 ಮಹೋತ್ಸವ ವಿಶ್ವಕಪ್ 2026

ಭಾರತ ಶ್ರೀಲಂಕಾ ಫೆಬ್ರವರಿ 7ರಿಂದ ಮಾರ್ಚ್ 8

ICC MEN'S T20 WORLD CUP INDIA & SRI LANKA 2026

ಒಂದ್ ಕಪ್ ಮಾತು

ಅಭಿಷೇಕ್ ಬಗ್ಗೆ ಪಾಕ್‌ನ ಆಮಿರ್ ಅಚ್ಚರಿ ಹೇಳಿಕೆ

ದೆಹಲಿ: ಭಾರತ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮಾ ಬಗ್ಗೆ ಪಾಕಿಸ್ತಾನ ಮಾಜಿ ವೇಗದ ಬೌಲರ್ ಮೊಹಮ್ಮದ್ ಆಮಿರ್



ಅಚ್ಚರಿ ಹೇಳಿಕೆಯನ್ನು ನೀಡಿದ್ದಾರೆ. ಅಭಿಷೇಕ್ ಕೇವಲ ಸ್ಲಾಗರ್ ಅಷ್ಟೇ, ಅವರನ್ನು ಸರಳವಾದ ಯೋಜನೆಗಳ ಮೂಲಕ ಔಟ್ ಮಾಡಬಹುದು' ಎಂದು ವ್ಯಂಗ್ಯವಾಡಿದ್ದಾರೆ. ಟಿ20 ವಿಶ್ವಕಪ್ ಟೂರ್ನಿಯ ನಿಮಿತ್ತ ಪಾಕಿಸ್ತಾನದ ಟಿ.ವಿ ಕಾರ್ಯಕ್ರಮವೊಂದರಲ್ಲಿ ಆಮಿರ್ ಈ ವಿವಾದಾತ್ಮಕ ಮಾತನ್ನು ಹೇಳಿದ್ದಾರೆ. 'ಅಭಿಷೇಕ್ ಪ್ರತಿಯೊಂದು ಬಾಲ್‌ನ್ನೂ ಹೊಡೆಯಲು ಯತ್ನಿಸುತ್ತಾರೆ. ಆತನ ಬ್ಯಾಟ್‌ಗೆ ಚೆಂಡು ಸಿಕ್ಕರೆ ಚೆನ್ನಾಗಿರುತ್ತದೆ, ಇಲ್ಲವಾದರೆ ವಿಫಲವಾಗುವ ಸಾಧ್ಯತೆ ಹೆಚ್ಚು. ಎಂಟು ಇನಿಂಗ್ಸ್ ಆಡಿದರೆ ಒಂದರಲ್ಲಿ ಮಾತ್ರ ರನ್ ಗಳಿಸುತ್ತಾರೆ. ತಾಂತ್ರಿಕವಾಗಿ ಅವರು ಇನ್ನೂ ಹೆಚ್ಚಿನ ಪರಿಪಕ್ವತೆಯನ್ನು ಸಾಧಿಸಿಲ್ಲ, ಇದು ನನ್ನ ಪ್ರಾಮಾಣಿಕ ಅಭಿಪ್ರಾಯ' ಎಂದು ಮೊಹಮ್ಮದ್ ಆಮಿರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರಿಯಾನ್ ಪರಾಗ್ ರಾಜಸ್ಥಾನ್ ತಂಡದ ನೂತನ ನಾಯಕ

ದೆಹಲಿ: ಸಂಜು ಸ್ಯಾಮ್ಸನ್ ಚೆನ್ನೈ ಸೂಪರ್ ಕಿಂಗ್ಸ್‌ಗೆ ಸೇರಿದ ಬಳಿಕ ರಾಜಸ್ಥಾನ್ ರಾಯಲ್ಸ್ ತಂಡವು ಹೊಸ ಅಧ್ಯಾಯವನ್ನು ಆರಂಭಿಸಿದೆ. ಯುವ

ಬ್ಯಾಟ್ಸ್‌ಮನ್ ರಿಯಾನ್ ಪರಾಗ್ ಅವರಿಗೆ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕತ್ವವನ್ನು ನೀಡಲಾಗಿದೆ. 2019ರಲ್ಲಿ ಐಪಿಎಲ್ ವೃತ್ತಿ ಜೀವನಕ್ಕೆ ಪದಾರ್ಪಣೆ ಮಾಡಿದ್ದ ಪರಾಗ್, ಅಂದಿನಿಂದ ಇಲ್ಲಿಯವರೆಗೂ ರಾಜಸ್ಥಾನ್ ರಾಯಲ್ಸ್ ತಂಡದಲ್ಲಿ ಪ್ರಮುಖ ಆಟಗಾರನಾಗಿ ಆಡುತ್ತಾ ಬಂದಿದ್ದಾರೆ. ಆರ್.ಆರ್ ತಂಡದ ಪರ ದೀರ್ಘಾವಧಿ ಆಡಿದ ಆಟಗಾರರ ಪೈಕಿ ರಿಯಾನ್ ಪರಾಗ್ ಕೂಡ ಒಬ್ಬರು. ಇವರ ನಾಯಕತ್ವದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡ ಮುಂದಿನ ಸೀಸನ್‌ನಲ್ಲಿ ಕಣಕ್ಕೆ ಇಳಿಯಲಿದೆ. 24ರ ವಯಸ್ಸಿನ ಪರಾಗ್, ಸಂಜು ಸ್ಯಾಮ್ಸನ್ ಗಾಯದಿಂದ ಕೆಲ ಪಂದ್ಯಗಳಿಗೆ ಅಲಭ್ಯರಾಗಿದ್ದ ವೇಳೆ ನಾಯಕತ್ವವನ್ನು ವಹಿಸಿದ್ದರು. ಆರು ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದರು.

ಸೂಪರ್-8: ಇನ್ನು ಆಸೀಸ್‌ಗೆ ಹಾದಿ ಕಠಿಣ

ಕೊಲಂಬೊ: ಶುಕ್ರವಾರದ ಪಂದ್ಯದಲ್ಲಿ ಜಿಂಬಾಬ್ವೆ ವಿರುದ್ಧ ಸೋತಿರುವ ಟ್ರಾವಿಸ್ ಹೆಡ್ ನಾಯಕತ್ವದ ಆಸ್ಟ್ರೇಲಿಯಾ ಇದೀಗ 2 ಪಂದ್ಯಗಳಿಂದ 2



ಅಂಕಗಳನ್ನಷ್ಟೇ ಗಳಿಸಿದ್ದು, ತನ್ನ ಗ್ರೂಪ್‌ನಲ್ಲಿ 3ನೇ ಸ್ಥಾನದಲ್ಲಿದೆ. ತನ್ನ ಮುಂದಿನ ಎರಡು ಪಂದ್ಯಗಳಲ್ಲಿ ಶ್ರೀಲಂಕಾ ಮತ್ತು ಒಮಾನ್ ವಿರುದ್ಧ ಆಸೀಸ್ ಆಡಲಿದೆ. ಈ ಎರಡು ಪಂದ್ಯಗಳನ್ನೂ ಉತ್ತಮ ರನ್‌ರೇಟ್‌ನೊಂದಿಗೆ ಗೆದ್ದರೆ ಮಾತ್ರ ಆಸ್ಟ್ರೇಲಿಯನ್ನರು ಸೂಪರ್-8 ಹಂತ ತಲುಪಬಹುದು, ಇಲ್ಲದಿದ್ದರೆ ಜಿಂಬಾಬ್ವೆ ಮತ್ತು ಶ್ರೀಲಂಕಾ ತಮ್ಮ ಕೊನೆಯ ಎರಡು ಪಂದ್ಯಗಳಲ್ಲಿ ಕನಿಷ್ಠ ಒಂದು ಪಂದ್ಯವನ್ನು ಗೆದ್ದರೆ ಸೂಪರ್ 8 ಪ್ರವೇಶಿಸಲಿದೆ.

ಉಸ್ಮಾನ್ ಬೌಲಿಂಗ್ ಬಗ್ಗೆ ಆತಂಕ ಬೇಡ: ಅಶ್ವಿನ್ ಕಿವಿಮಾತು

ದೆಹಲಿ: ಭಾರತದ ಮಾಜಿ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್, ಪಾಕ್ ಸ್ಪಿನ್ನರ್ ಉಸ್ಮಾನ್ ತಾರಿಖ್ ಅವರ ಬಗ್ಗೆ ಟೀಮ್ ಇಂಡಿಯಾಗೆ ಮಹತ್ವದ ಸಲಹೆ ನೀಡಿ



ದ್ದಾರೆ. ಉಸ್ಮಾನ್ ಅವರು ಚೆಂಡನ್ನು ಎಸೆಯುವುದಕ್ಕೂ ಮುನ್ನ ತೆಗೆದುಕೊಳ್ಳುವ ವಿರಾಮವನ್ನು ಗಮನಿಸಿ, ಅದನ್ನೇ ಅವರ ವಿರುದ್ಧ ಪ್ರಮುಖ ಅಸ್ತ್ರವನ್ನಾಗಿ ಉಪಯೋಗಿಸಬಹುದು ಎಂದು ಭಾರತ ತಂಡದ ಬ್ಯಾಟ್ಸ್‌ಮನ್‌ಗಳಿಗೆ ಸೂಚನೆ ನೀಡಿದ್ದಾರೆ.

ಜಿಂಬಾಬ್ವೆ ಪರ ಮುಜರಬಾನಿ ಮಾರಕ ಬೌಲಿಂಗ್.

ಆಸ್ಟ್ರೇಲಿಯಾವನ್ನು ಸೋಲಿಸಿದ ಸಂತಸದಲ್ಲಿ ಜಿಂಬಾಬ್ವೆ ಆಟಗಾರರು.

ಬ್ಲೆಸಿಂಗ್ ಮುಜರಬಾನಿ ಮಾರಕ ಬೌಲಿಂಗ್ ದಾಳಿ | ಕಾಂಗರೂಗಳಿಗೆ ಆಘಾತಕಾರಿ ಸೋಲು

ಜಿಂಬಾಬ್ವೆಯಿಂದ ಆಸೀಸ್ ಗರ್ವಭಂಗ

ಕೊಲಂಬೊ: ಐಸಿಸಿ ಟೂರ್ನಿಗಳಲ್ಲಿ ರಾಜನಂತೆ ಮೆರೆಯುತ್ತಿದ್ದ ಆಸ್ಟ್ರೇಲಿಯಾಗೆ ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ ಜಿಂಬಾಬ್ವೆ ತಂಡ ಆಘಾತಕಾರಿ ಸೋಲಿನ ಏಟನ್ನು ನೀಡಿದೆ. ಶುಕ್ರವಾರ ಇಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಜಿಂಬಾಬ್ವೆಯು 23 ರನ್ ಅಂತರದ ಅಮೋಘ ಗೆಲುವು ಸಾಧಿಸಿತು.

ಟಿ20 ವಿಶ್ವಕಪ್‌ನಲ್ಲಿ ಜಿಂಬಾಬ್ವೆ ವಿರುದ್ಧ ಆಸೀಸ್‌ಗೆ ಎದುರಾದ ಎರಡನೇ ಸೋಲು ಇದಾಗಿದೆ. ಇದಕ್ಕೂ ಮುನ್ನ 2007ರ ಆವೃತ್ತಿಯಲ್ಲಿ ಆಸ್ಟ್ರೇಲಿಯಾ 5 ವಿಕೆಟ್‌ಗಳ ಸೋಲು ಕಂಡಿತ್ತು.

ಟಾಸ್ ಸೋತು ಬ್ಯಾಟಿಂಗ್ ಆಹ್ವಾನ ಪಡೆದ ಜಿಂಬಾಬ್ವೆ 20 ಓವರ್‌ಗಳಲ್ಲಿ 2 ವಿಕೆಟ್‌ಗೆ 169 ರನ್ ಬಾರಿಸಿತು. ಆ ಗುರಿ ಬೆಂಬತ್ತಿದ ಆಸ್ಟ್ರೇಲಿಯಾ ತಂಡವು ವೇಗಿ ಬ್ಲೆಸಿಂಗ್ ಮುಜರಬಾನಿ ದಾಳಿಗೆ ನಲುಗಿ 19.3 ಓವರ್‌ಗಳಲ್ಲಿ 146 ರನ್‌ಗೆ ಸರ್ವಪತನ ಕಂಡಿತು. 17 ರನ್ ನೀಡಿ 4 ವಿಕೆಟ್ ಕಿತ್ತ ಮುಜರಬಾನಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಗುರಿ ಬೆನ್ನಟ್ಟಲು ಬ್ಯಾಟಿಂಗ್ ಆರಂಭಿಸಿದ ಆಸ್ಟ್ರೇಲಿಯಾ ತಂಡ ಆಘಾತವನ್ನು ಎದುರಿಸಿತು. ಯುವ ವೇಗಿ ಮುಜರಬಾನಿಯ ಮಾರಕ ಬೌಲಿಂಗ್ ದಾಳಿಗೆ ತಡೆಯೊಡ್ಡಲು ವಿಫಲರಾಗಿ, ತಂಡದ ಮೊತ್ತ 29 ರನ್ ಗಳಿಸುವಷ್ಟರಲ್ಲಿ ಅಗ್ರಕ್ರಮಾಂಕದ ನಾಲ್ವರು ಬ್ಯಾಟರ್‌ಗಳು ಪೆವಿಲಿಯನ್ ಸೇರಿದ್ದರು. ಜೋಶ್ ಇಂಗ್ಲಿಶ್ 8 ರನ್ ಗಳಿಸಿದರೆ, ಕ್ಯಾಮರೋನ್ ಗ್ರೀನ್ ಹಾಗೂ ಟಿಮ್ ಡೇವಿಡ್ ಖಾತೆ ತೆರೆಯುವ ಮುನ್ನವೇ ಪೆವಿಲಿಯನ್ ಹಾದಿ ಹಿಡಿದರು. ಹಂಗಾಮಿ ನಾಯಕ ಟ್ರಾವಿಸ್ ಹೆಡ್ 17 ರನ್‌ಗಳಿಸಿ ನಿರಾಸೆ ಮೂಡಿಸಿದರು. ಮುಜರಬಾನಿ ನಾಲ್ಕು ಓವರ್‌ಗಳಲ್ಲಿ ಕೇವಲ 17 ರನ್ ಬಿಟ್ಟುಕೊಟ್ಟು 4 ಪ್ರಮುಖ ವಿಕೆಟ್ ಪಡೆದರು. ಇದೇ ವೇಳೆ ಟಿ20ಯಲ್ಲಿ 100 ವಿಕೆಟ್ ಪೂರ್ತಿಗೊಳಿಸಿದ ಮೈಲುಗಲ್ಲನ್ನೂ ತಲುಪಿದರು. ಮುಜರಬಾನಿಗೆ ಮತ್ತೊಂದು ತುದಿಯಲ್ಲಿ ಸಾಥ್ ನೀಡಿದ ಬ್ರಾಡ್ ಇವಾನ್ಸ್ 23 ರನ್ ನೀಡಿ 3 ವಿಕೆಟ್ ಪಡೆದರು.

ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಆಸೀಸ್ ತಂಡದ ಗೆಲುವಿಗಾಗಿ ಟೊಂಕ ಕಟ್ಟಿ ನಿಂತ ಮ್ಯಾಟ್ ರೆನ್ಶಾ ಅರ್ಧಶತಕ ಬಾರಿಸಿದರು, ಆದರೆ 65 ರನ್ ಗಳಿಸಿದ್ದ ವೇಳೆ ವಿಕೆಟ್ ಕಳೆದುಕೊಂಡರು. ಅವರ ವಿಕೆಟ್ ಪತನಗೊಳ್ಳುತ್ತಿದ್ದಂತೆ ಆಸೀಸ್ ಸೋಲು ಕೂಡ ಖಚಿತವಾಯಿತು. ಉಳಿದಂತೆ ಗ್ಲೆನ್ ಮ್ಯಾಕ್ಸ್‌ವೆಲ್ 31 ರನ್ ಗಳಿಸಿದರು.

ಇದಕ್ಕೂ ಮುನ್ನ ಬ್ಯಾಟಿಂಗ್ ನಡೆಸಿದ ಜಿಂಬಾಬ್ವೆ ಆರಂಭದಿಂದಲೇ ಉತ್ತಮ ರನ್ ಕಲೆ ಹಾಕಿತು. ಆರಂಭಿಕ ಬ್ಯಾಟರ್ ಬ್ರಿಯಾನ್ ಬೆನೆಟ್ ಅಜೇಯ ಅರ್ಧಶತಕ ಬಾರಿಸಿದರೆ, ತದಿವನಾಶೆ ಮರುಮಾನಿ(35) ಮತ್ತು ರಯಾನ್ ಬರ್ಲ್(35) ಉತ್ತಮ ಜತೆ ನೀಡಿದರು. ನಾಯಕ ಸಿಕಂದರ್ ರಾಜಾ 13 ಎಸೆತಗಳಿಂದ ಅಜೇಯ 25 ರನ್ ಬಾರಿಸಿದರು. ಬ್ರಿಯಾನ್ ಬೆನೆಟ್ 7 ಬೌಂಡರಿ ನೆರವಿನಿಂದ 65 ರನ್ (ಅಜೇಯ) ಗಳಿಸಿದರು.

ಆಸ್ಟ್ರೇಲಿಯಾ ಪರ ಪ್ಯಾಟ್ ಕಮಿನ್ಸ್, ಜೋಶ್ ಹ್ಯಾಜಲ್‌ವುಡ್ ಅವರ ಅನುಪಸ್ಥಿತಿ ಜಿಂಬಾಬ್ವೆ ವಿರುದ್ಧದ ಆಸ್ಟ್ರೇಲಿಯಾದ ಪಂದ್ಯದಲ್ಲಿ ಕಂಡುಬಂತು.

ಇಂದು ನ್ಯೂಜಿಲೆಂಡ್ ದ.ಆಫ್ರಿಕಾ ಹಣಾಹಣಿ

ಅಹಮದಾಬಾದ್: ಇಲ್ಲಿನ ಮೋದಿ ಸ್ಟೇಡಿಯಂನಲ್ಲಿ ಶನಿವಾರ ನಡೆಯಲಿರುವ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು ದ.ಆಫ್ರಿಕಾವನ್ನು ಎದುರಿಸಲಿದೆ. ಈಗಾಗಲೇ ಈ ವಿಶ್ವಕಪ್‌ನಲ್ಲಿ 2 ಪಂದ್ಯಗಳನ್ನು ಆಡಿರುವ ನ್ಯೂಜಿಲೆಂಡ್ ತಂಡವು ಎರಡರಲ್ಲೂ ಗೆದ್ದು ನಾಲ್ಕು ಅಂಕಗಳನ್ನು ಸಂಪಾದಿಸಿದೆ. ಅದೇ ರೀತಿ ಎರಡು ಪಂದ್ಯಗಳನ್ನು ಆಡಿರುವ ದ. ಆಫ್ರಿಕಾ ತಂಡ ಕೂಡಾ ಎರಡು ಪಂದ್ಯಗಳನ್ನೂ ಗೆದ್ದು ಬೀಗಿದೆ.

ಮಿಚೆಲ್ ಸ್ಯಾಂಟ್ನರ್ ನಾಯಕತ್ವದ ಕಿವೀಸ್ ತಂಡದಲ್ಲಿ ಟಿಮ್ ಸೀಫರ್ಟ್, ಡೆರಿಲ್ ಮಿಚೆಲ್, ಜೇಕಬ್ ಡಫಿ ಸೇರಿದಂತೆ ಬಹುತೇಕ ಬ್ಯಾಟ್ಸ್‌ಮ್ಯಾನ್‌ಗಳು ಉತ್ತಮ ಫಾರ್ಮ್‌ನಲ್ಲಿದ್ದಾರೆ. ಹಾಗೆಯೇ ಬೌಲರ್‌ಗಳಾದ ಗ್ಲೆನ್ ಫಿಲಿಪ್ಸ್, ಲಾಕಿ ಫರ್ಗುಸನ್ ಸೇರಿದಂತೆ ಹಲವರು ಬೌಲರ್‌ಗಳೂ ಉತ್ತಮ ಫಾರ್ಮ್‌ನಲ್ಲಿದ್ದಾರೆ. ದ.ಆಫ್ರಿಕಾ ತಂಡವನ್ನು ಐಡೆನ್ ಮಾರ್ಕ್‌ರಮ್ ಮುನ್ನಡೆಸುತ್ತಿದ್ದು ಕ್ವಿಂಟನ್ ಡಿ ಕಾಕ್, ಜೇಷನ್ ಸ್ಮಿತ್, ರಿಯಾನ್ ರಿಕೆಲ್ಟನ್ ಮುಂತಾದ ಬ್ಯಾಟ್ಸ್‌ಮ್ಯಾನ್‌ಗಳು ಮತ್ತು ಮಾರ್ಕೋ ಜಾನ್ಸೆನ್, ಲುಂಗಿ ಎನ್ಗಿಡಿ ಮುಂತಾದ ಬೌಲರ್‌ಗಳೂ ಉತ್ತಮ ಫಾರ್ಮ್‌ನಲ್ಲಿದ್ದಾರೆ.

ಇಂದಿನ ಪಂದ್ಯ

ಐರ್ಲೆಂಡ್	vs	ಒಮಾನ್
ಬೆ.11	▶▶	ಕೊಲಂಬೊ
ಇಂಗ್ಲೆಂಡ್	vs	ಸ್ಕಾಟ್ಲೆಂಡ್
ಮ.3	▶▶	ಕೋಲ್ಕತ್ತಾ
ನ್ಯೂಜಿಲೆಂಡ್	vs	ದ.ಆಫ್ರಿಕಾ
ರಾ.7	▶▶	ಅಹಮದಾಬಾದ್

ಆರ್ಯನ್ಶ್ ಶರ್ಮಾ ಅಜೇಯ ಅರ್ಧ ಶತಕ | ಜುನೈದ್ ಸಿದ್ಧಿಕಿಗೆ 5 ವಿಕೆಟ್

ಕೆನಡಾ ವಿರುದ್ಧ ಗೆದ್ದ ಯುಎಇ

ದೆಹಲಿ: ಇಲ್ಲಿ ಶುಕ್ರವಾರ ನಡೆದ ಟಿ20 ವಿಶ್ವಕಪ್ ಪಂದ್ಯದಲ್ಲಿ ಯುಎಇ ತಂಡವು ಕೆನಡಾ ನೀಡಿದ್ದ 151 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿ ಪಂದ್ಯವನ್ನು ಗೆದ್ದಿದೆ.

ಟಾಸ್ ಗೆದ್ದ ಕೆನಡಾ ಬ್ಯಾಟಿಂಗ್ ಆಯ್ದುಕೊಂಡಿತು. ಯುವರಾಜ್ ಸಮ್ರಾ ಮತ್ತು ದಿಲ್‌ಪ್ರೀತ್ ಬಾಜ್ವಾ ಕೆನಡಾ ಪರ ಆರಂಭಿಕರಾಗಿ ಬ್ಯಾಟಿಂಗ್‌ಗೆ ಮೈದಾನಕ್ಕಿಳಿದರು. ಆದರೆ ತಂಡದ ಮೊತ್ತ 14 ರನ್ ಆಗಿದ್ದಾಗ 5 ರನ್ ಗಳಿಸಿದ್ದ ಯುವರಾಜ್ ಸಮ್ರಾ ಜುನೈದ್ ಸಿದ್ಧಿಕಿ ಬೌಲಿಂಗ್‌ನಲ್ಲಿ ಆಲಿಶಾನ್ ಶರಾಫು ಅವರಿಗೆ ಕ್ಯಾಚ್ ನೀಡಿ ಔಟ್ ಆದರು. ಆ ಬಳಿಕ ದಿಲ್‌ಪ್ರೀತ್ ಬಾಜ್ವಾ ಮತ್ತು ನವನೀತ್ ಧಲಿವಾಲ್ ಮಧ್ಯೆ ಸ್ವಲ್ಪ ಹೊತ್ತು ಜತೆಯಾಟ ಸಾಗಿತು. ಬಾಜ್ವಾ 11 ಬಾಲ್‌ಗಳನ್ನು ಎದುರಿಸಿ 11 ರನ್ ಗಳಿಸಿದ್ದ ವೇಳೆ ಜುನೈದ್ ಸಿದ್ಧಿಕಿ ಅವರ ಬೌಲಿಂಗ್‌ನಲ್ಲಿ ವಸೀಮ್ ಮುಹಮ್ಮದ್ ಅವರಿಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು. ಆ ನಂತರ ಕ್ರೀಸ್‌ಗೆ ಬಂದ ನಿಕೋಲಸ್ ಕರ್ಟನ್ 6 ಬಾಲ್ ಎದುರಿಸಿ ಕೇವಲ 4 ರನ್ ಗಳಿಸಿ ಔಟ್ ಆದರು.

ತಂಡದ ಮೊತ್ತ 96 ರನ್ ಆಗಿದ್ದ ವೇಳೆ 28 ಬಾಲ್‌ಗಳಿಂದ 34 ರನ್ ಗಳಿಸಿದ್ದ ನವನೀತ್ ಧಲಿವಾಲ್ ರನೌಟ್ ಆಗಿ ಪೆವಿಲಿಯನ್ ಸೇರಿದರು. ಆದರೆ ಆ ಬಳಿಕ ಕ್ರೀಸ್‌ಗೆ ಬಂದ ಹರ್ಷ್ ಠಾಕೂರ್, ಯುಎಇ ಬೌಲರ್‌ಗಳ ವಿರುದ್ಧ ಉತ್ತಮವಾಗಿ ಬ್ಯಾಟಿಂಗ್ ಮಾಡಿದರು. 41 ಬಾಲ್‌ಗಳಲ್ಲಿ ಅವರು 50 ರನ್ ಗಳಿಸಿದ್ದ ವೇಳೆ ಜುನೈದ್ ಸಿದ್ಧಿಕಿ ಬೌಲಿಂಗ್‌ನಲ್ಲಿ ಮಯಾಂಕ್ ರಾಜೇಶ್ ಅವರಿಗೆ ಕ್ಯಾಚ್ ನೀಡಿ ತಮ್ಮ ವಿಕೆಟ್ ಕಳೆದುಕೊಂಡರು. ಬಳಿಕ ಕ್ರೀಸ್‌ಗೆ ಬಂದ ವಿಕೆಟ್ ಕೀಪರ್ ಶ್ರೇಯಸ್ ಮೊವ್ವ 21 ಬಾಲ್‌ನಲ್ಲಿ 21 ರನ್ ಗಳಿಸಿ ಔಟ್ ಆದರು. ಸಾದ್‌ಬಿನ್ ಜಾಫರ್ 3 ಬಾಲ್‌ಗಳಲ್ಲಿ 5 ರನ್ ಗಳಿಸಿದರು. ಜಸ್ಕರನ್ ಸಿಂಗ್ 4 ರನ್ ಮತ್ತು ದಿಲ್ಲನ್ ಹೇಲಿಗರ್ 6 ರನ್ ಗಳಿಸಿ ಅಜೇಯರಾಗಿ ಉಳಿದರು.

ಆರ್ಯನ್ಶ್ ಶರ್ಮಾ ಬಿರುಸಿನ ಬ್ಯಾಟಿಂಗ್.

5 ವಿಕೆಟ್ ಪಡೆದ ಜುನೈದ್ ಸಿದ್ಧಿಕಿ.

151 ರನ್‌ಗಳ ಗುರಿ ಬೆಂಬತ್ತಿದ ಯುಎಇ ಕೇವಲ 12 ರನ್ ಆಗಿದ್ದಾಗ 4 ರನ್ ಗಳಿಸಿದ್ದ ಮುಹಮ್ಮದ್ ವಸೀಮ್ ಅವರ ವಿಕೆಟ್ ಕಳೆದುಕೊಂಡಿತು. ಆ ಬಳಿಕ ಕ್ರೀಸ್‌ಗೆ ಬಂದ ಅಲಿಶನ್ ಶರಾಫು ಕೇವಲ 5 ರನ್ ಗಳಿಸಿ ಔಟ್ ಆದರು. ಬಳಿಕ ಬ್ಯಾಟಿಂಗ್‌ಗೆ ಬಂದ ಮಯಾಂಕ್ ರಾಜೇಶ್ ಕುಮಾರ್ 6 ಬಾಲ್ ಎದುರಿಸಿ 4 ರನ್ ಮಾಡಿದರು. ಆ ನಂತರ ಹರ್ಷಿತ್ ಕೌಶಿಕ್ 5 ರನ್ ಗಳಿಸಿ ಔಟ್ ಆದರು. ಬಳಿಕ ತಂಡದ ಆರಂಭಿಕ ಆಟಗಾರ ಆರ್ಯನ್ಶ್ ಶರ್ಮಾ ಮತ್ತು ಸೊಹೈಬ್ ಖಾನ್ ಮಧ್ಯೆ ಉತ್ತಮ ಜತೆಯಾಟ ಮೂಡಿಬಂತು. ಸೊಹೈಬ್ ಖಾನ್ 29 ಬಾಲ್‌ಗಳನ್ನು ಎದುರಿಸಿ 51 ರನ್ ಗಳಿಸಿದರು. ಆರ್ಯನ್ಶ್ ಶರ್ಮಾ 53 ಬಾಲ್‌ಗಳಲ್ಲಿ 74 ರನ್ ಗಳಿಸಿ ಅಜೇಯರಾಗುಳಿದರೆ, ಮೊಹಮ್ಮದ್ ಅರ್ಫಾನ್ 1 ರನ್ ಗಳಿಸಿ ಅಜೇಯರಾಗುಳಿದರು.

ಕೆನಡಾ ಪರ ಸಾದ್‌ಬಿನ್ ಜಾಫರ್ 3 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರೆ, ಕಲೀಮ್ ಸನಾ ಮತ್ತು ಜಸ್ಕರನ್ ಸಿಂಗ್ ತಲಾ ಒಂದು ವಿಕೆಟ್ ಪಡೆದರು.

ಸಾಯಿತೇಜಾ ಆಕರ್ಷಕ ಬ್ಯಾಟಿಂಗ್ | ನೆದರ್ಲೆಂಡ್‌ನ ಬಾಸ್ ಡಿ ಲೀಡೆಗೆ 3 ವಿಕೆಟ್

ನೆದರ್ಲೆಂಡ್‌ಗೆ 197 ರನ್‌ಗಳ ಗುರಿ

ಚೆನ್ನೈ: ಶುಕ್ರವಾರ ಇಲ್ಲಿ ನಡೆದ ವಿಶ್ವಕಪ್ ಪಂದ್ಯದಲ್ಲಿ ಅಮೆರಿಕ ತಂಡವು ಸಾಯಿತೇಜಾ ರೆಡ್ಡಿ ಮುಕ್ಕಮಲ್ಲ (51 ಬಾಲ್, 79 ರನ್) ಅವರ ಆಕರ್ಷಕ ಬ್ಯಾಟಿಂಗ್ ನೆರವಿನಿಂದ 6 ವಿಕೆಟ್‌ಗೆ 196 ರನ್ ಗಳಿಸಿದ್ದು, ನೆದರ್ಲೆಂಡ್‌ಗೆ 197 ರನ್‌ಗಳ ಗೆಲುವಿನ ಗುರಿ ನೀಡಿದೆ.

ಟಾಸ್ ಗೆದ್ದ ನೆದರ್ಲೆಂಡ್ ಮೊದಲು ಫೀಲ್ಡಿಂಗ್ ಆಯ್ದುಕೊಂಡಿತು. ಮೊದಲು ಬ್ಯಾಟಿಂಗ್‌ಗೆ ಮೈದಾನಕ್ಕೆ ಇಳಿದ ಅಮೆರಿಕದ ಆರಂಭಿಕ ಆಟಗಾರರಾದ ನಾಯಕ ಮೊನಾಂಕ್ ಪಟೇಲ್ ಮತ್ತು ಶಯನ್ ಜಹಾಂಗೀರ್ ತಂಡಕ್ಕೆ ಉತ್ತಮ ಅಡಿಪಾಯ ಹಾಕುವಲ್ಲಿ ವಿಫಲರಾದರು. 14 ಬಾಲ್‌ಗಳನ್ನು ಎದುರಿಸಿದ ಜಹಾಂಗೀರ್ 20 ರನ್ ಗಳಿಸಿ ತಂಡದ ಮೊತ್ತ 27 ಆದಾಗ ಕೈಲ್ ಕ್ಲೀನ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು.

ಆ ಬಳಿಕ ಮೊನಾಂಕ್ ಪಟೇಲ್ ಜತೆ ಸೇರಿದ ಸಾಯಿತೇಜ ರೆಡ್ಡಿ ಮುಕ್ಕಮಲ್ಲ, ಮೂರನೇ ವಿಕೆಟ್‌ಗೆ 55 ರನ್‌ಗಳ ಜತೆಯಾಟ ಪ್ರದರ್ಶಿಸಿದರು. 22 ಬಾಲ್‌ಗಳಲ್ಲಿ 36 ರನ್ ಗಳಿಸಿದ ಮೊನಾಂಕ್ ಪಟೇಲ್ ಬಾಸ್ ಡಿ ಲೀಡೆ ಅವರ ಬೌಲಿಂಗ್‌ನಲ್ಲಿ ಸ್ಕಾಟ್ ಎಡ್ವರ್ಡ್‌ಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು.

3 ವಿಕೆಟ್ ಪಡೆದ ನೆದರ್ಲೆಂಡ್‌ನ ಬಾಸ್ ಡಿ ಲೀಡೆ.

ಆ ಬಳಿಕ ಬ್ಯಾಟಿಂಗ್‌ಗೆ ಬಂದ ಸಂಜಯ್ ಕೃಷ್ಣಮೂರ್ತಿ ಕೇವಲ 2 ಬಾಲ್‌ಗಳನ್ನು ಎದುರಿಸಿ 1 ರನ್ ಗಳಿಸಿ, ಫ್ರೆಡ್ ಕ್ಲಾಸೆನ್ ಬಾಲ್‌ನಲ್ಲಿ ಬೌಲ್ಡ್ ಆಗಿ ಅವರು ಪೆವಿಲಿಯನ್ ಸೇರಿದರು. ನಂತರ ಸಾಯಿತೇಜ ಮತ್ತು ಶುಭಮ್ ರಂಜನೆ ಮಧ್ಯೆ ಉತ್ತಮ ಜತೆಯಾಟ ಮೂಡಿ ಬಂತು. 51 ಬಾಲ್‌ಗಳಲ್ಲಿ 79 ರನ್ ಗಳಿಸಿದ ಸಾಯಿತೇಜ ಅವರು ಬಾಸ್ ಡಿ ಲೇಡ್ ಬೌಲಿಂಗ್‌ನಲ್ಲಿ ಕಾಲಿನ್ ಅಕೆರ್ಮನ್ ಅವರಿಗೆ ಕ್ಯಾಚ್ ನೀಡಿ ತಮ್ಮ ವಿಕೆಟ್ ಕಳೆದುಕೊಂಡರು. ಅವರ ಇನ್ನಿಂಗ್ಸ್‌ನಲ್ಲಿ 5 ಬೌಂಡರಿ ಮತ್ತು 4 ಸಿಕ್ಸರ್ ಇದ್ದವು.

ಎಂ. ಕುಮಾರ್ 4 ಬಾಲ್‌ಗಳನ್ನು ಎದುರಿಸಿ 3 ರನ್ ಗಳಿಸಲಷ್ಟೇ ಶಕ್ತರಾದರು. ಹರ್ಮೀತ್ ಸಿಂಗ್ 2 ಬಾಲ್‌ಗಳನ್ನು ಎದುರಿಸಿ ಕೇವಲ 1 ರನ್ ಗಳಿಸಿದರು. ಶುಭಮ್ ರಂಜನೆ 24 ಬಾಲ್‌ಗಳನ್ನು ಎದುರಿಸಿ 48 ರನ್ ಗಳಿಸಿ ಅಜೇಯರಾಗಿ ಉಳಿದರೆ, ಮೊಹಮ್ಮದ್ ಮೊಹ್ಸಿನ್ ಕೇವಲ 1 ಬಾಲ್ ಎದುರಿಸಿ 1 ರನ್ ಗಳಿಸಿ ಅಜೇಯರಾಗುಳಿದರು.

ನೆದರ್ಲೆಂಡ್ ಪರ ಬಾಸ್ ಡಿ ಲೀಡೆ 37 ರನ್ ನೀಡಿ 3 ವಿಕೆಟ್ ಪಡೆದು ತಂಡದ ಪರ ಯಶಸ್ವಿ ಬೌಲರ್ ಎನಿಸಿದರು. ವ್ಯಾನ್‌ಬೀಕ್, ಕೈಲ್ ಕ್ಲೀನ್ ಮತ್ತು ಫ್ರೆಡ್ ಕ್ಲಾಸೆನ್ ತಲಾ ಒಂದು ವಿಕೆಟ್ ಪಡೆದರು.

10 ಲಕ್ಷ ಪಾವತಿಸಲು ಧೋನಿಗೆ ಹೈಕೋರ್ಟ್ ಸೂಚನೆ

ದೆಹಲಿ: 2013ರ ಐಪಿಎಲ್ ಸ್ಪಾಟ್ ಫಿಕ್ಸಿಂಗ್ ಮತ್ತು ಬೆಟ್ಟಿಂಗ್ ಹಗರಣಕ್ಕೆ ಸಂಬಂಧಿಸಿದಂತೆ ದೀರ್ಘಕಾಲದ ಮಾನನಷ್ಟ ಮೊಕದ್ದಮೆಯಲ್ಲಿ ಭಾರತದ ಮಾಜಿ ನಾಯಕ ಹಾಗೂ ಆಟಗಾರ ಎಂ.ಎಸ್ ಧೋನಿಗೆ ಮೊಕದ್ದಮೆಯನ್ನು ಭಾಷಾಂತರಿಸುವುದಕ್ಕಾಗಿ 10 ಲಕ್ಷ ಪಾವತಿಸುವಂತೆ ಮದ್ರಾಸ್ ಹೈಕೋರ್ಟ್ ಆದೇಶಿಸಿದೆ. ಧೋನಿ ಸ್ಪಾಟ್ ಫಿಕ್ಸಿಂಗ್ ಹಾಗೂ ಬೆಟ್ಟಿಂಗ್‌ನಲ್ಲಿ ಭಾಗಿಯಾಗಿದ್ದಾರೆ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಜಿ. ಸಂಪತ್ ಕುಮಾರ್ ಆರೋಪಿಸಿದ್ದರು. ಅದನ್ನು ಟೀಕಿಸಿದ್ದ ಧೋನಿ, ತಮ್ಮ ವಿರುದ್ಧ ದುರುದ್ದೇಶದ ಆರೋಪ ಮಾಡಲಾಗುತ್ತಿದೆ ಎಂದು 100 ಕೋಟಿ ಮಾನನಷ್ಟ ಮೊಕದ್ದಮೆ ಹೂಡಿದ್ದರು. ಪ್ರಕರಣದ ವಿಚಾರಣೆ ನಡೆಸಿರುವ ನ್ಯಾ. ಆರ್.ಎನ್. ಮಂಜುಳಾ ಅವರು ಮಧ್ಯಂತರ ಆದೇಶ ಹೊರಡಿಸಿದ್ದು, 2025ರ ಅಕ್ಟೋಬರ್ 28ರಂದು ನೀಡಿದ್ದ ಆದೇಶದ ಅನುಸಾರ, ಸಂಬಂಧಿತ ಸಿ.ಡಿ.ಗಳ ಅನುವಾದಕ್ಕಾಗಿ ರು.10 ಲಕ್ಷ ಪಾವತಿಸುವಂತೆ ಧೋನಿಗೆ ಸೂಚಿಸಿದ್ದಾರೆ. ಸಿ.ಡಿ.ಗಳ ಅನುವಾದಕ್ಕೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಅದಕ್ಕಾಗಿ ಒಬ್ಬ ಅನುವಾದಕ ಹಾಗೂ ಒಬ್ಬ ಬೆರಳಚ್ಚುಗಾರ ಮೂರು-ನಾಲ್ಕು ತಿಂಗಳು ಸಂಪೂರ್ಣವಾಗಿ ತೊಡಗಿಕೊಳ್ಳಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಈ ಆದೇಶ ನೀಡಿರುವುದಾಗಿ ಕೋರ್ಟ್ ಹೇಳಿದೆ.

ಕಾಲ್ತುಳಿತ ಪ್ರಕರಣ: 1 ವರ್ಷದಲ್ಲಿ ಕ್ರೀಡಾಂಗಣದಿಂದ ಕೈತಪ್ಪಿದ ಪ್ರಮುಖ ಅನೇಕ ಪಂದ್ಯಗಳು | ಆರ್‌ಸಿಬಿಯ ಅದೃಷ್ಟದ ತವರು ಮೈದಾನ

ಚಿನ್ನಸ್ವಾಮಿ ಕ್ರಿಕೆಟ್ ಕಲರವಕ್ಕಾಗಿ ಅಭಿಮಾನಿಗಳ ತವಕ

ಬೆಂಗಳೂರು: ಕಳೆದ ವರ್ಷದ ಐಪಿಎಲ್ ಚಾಂಪಿಯನ್ ಆಗಿದ್ದ ಆರ್‌ಸಿಬಿ ತಂಡದ ಆಟಗಾರರ ಸಂಭ್ರಮಾಚರಣೆ ವೀಕ್ಷಿಸುವ ಆತುರದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಜನ ಅಭಿಮಾನಿಗಳು ಸಾವನ್ನಪ್ಪಿದ ಬಳಿಕ ಕ್ರಿಕೆಟ್ ಪಂದ್ಯಗಳ ಆಯೋಜನೆಯ ಅವಕಾಶದಿಂದ ವಂಚಿತವಾಗಿದ್ದ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಸದ್ಯ ಜೀವಕಳೆ ಬಂದಂತಾಗಿದೆ.

ಆರ್‌ಸಿಬಿ ತಂಡ ಐಪಿಎಲ್‌ನಲ್ಲಿ ತನ್ನ ತವರಿನ ಪಂದ್ಯಗಳನ್ನು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಲು ಕರ್ನಾಟಕ ಸರಕಾರ ಗುರುವಾರ ಷರತ್ತುಬದ್ಧ ಅನುಮತಿ ನೀಡಿದೆ. ಆ ಮೂಲಕ ಸಾಲು ಸಾಲು ಪಂದ್ಯಗಳ ಆಯೋಜನೆಯ ಆತಿಥ್ಯ ಕಳೆದುಕೊಂಡಿದ್ದ ಬೆಂಗಳೂರಿನಲ್ಲಿ ಮತ್ತೆ ಕ್ರಿಕೆಟ್ ಕಲರವ ಏರ್ಪಡುವುದು ಖಚಿತವಾದಂತಾಗಿದೆ.

ದುರಂತ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಳೆದ ವರ್ಷ ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಿಗದಿಯಾಗಿದ್ದ ಮೂರು

ಏಕದಿನ ಪಂದ್ಯಗಳನ್ನು ಸೌರಾಷ್ಟ್ರದ ರಾಜ್‌ಕೋಟ್ ಕ್ರೀಡಾಂಗಣಕ್ಕೆ ಸ್ಥಳಾಂತರಗೊಳಿಸಿತ್ತು. ದಕ್ಷಿಣ ಆಫ್ರಿಕಾ-ಎ ಹಾಗೂ ಭಾರತ-ಎ ತಂಡಗಳ ನಡುವೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಬೇಕಿದ್ದ ಪಂದ್ಯಗಳು ರಾಜ್‌ಕೋಟ್ ಪಾಲಾಗಿದ್ದವು ಹಾಗೂ 2 ಬಹುದಿನಗಳ ಟೆಸ್ಟ್ ಪಂದ್ಯಗಳನ್ನು ಬೆಂಗಳೂರಿನ ಬಿಸಿಸಿಐ ಸೆಂಟರ್ ಆಫ್ ಎಕ್ಸ್‌ಲೆನ್ಸ್‌ಗೆ ಸ್ಥಳಾಂತರಿಸಲಾಗಿತ್ತು.

ಮಹಿಳಾ ವಿಶ್ವಕಪ್‌ನ ಪಂದ್ಯಗಳೂ ಶಿಫ್ಟ್: 2025ರ ಐಸಿಸಿ ಮಹಿಳಾ ಏಕದಿನ ಪಂದ್ಯಗಳಿಗೆ ಬೆಂಗಳೂರು ಸೇರಿದಂತೆ ಭಾರತದ 4 ನಗರಗಳನ್ನು ಅಂತಿಮಗೊಳಿಸಲಾಗಿತ್ತು. ಟೂರ್ನಿಯ ಆರಂಭಿಕ ಹಾಗೂ ಎರಡನೇ ಸೆಮಿಫೈನಲ್ ಪಂದ್ಯಗಳು ಬೆಂಗಳೂರಿನಲ್ಲಿ ನಿಗದಿಯಾಗಿದ್ದವು. ಫೈನಲ್ ಪಂದ್ಯಕ್ಕೆ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣ ಅಥವಾ ಶ್ರೀಲಂಕಾದ ಕೊಲಂಬೊದ ಆರ್. ಪ್ರೇಮದಾಸ ಕ್ರೀಡಾಂಗಣ ಆತಿಥ್ಯ ವಹಿಸುವುದಾಗಿ ಐಸಿಸಿ ಸಹ ಘೋಷಿಸಿತ್ತು. ಆದರೆ ಕಾಲ್ತುಳಿತ ಪ್ರಕರಣದ ಬಳಿಕ ಬೆಂಗಳೂರಿನ ಪಂದ್ಯಗಳು ನವಿ ಮುಂಬೈಗೆ ಸ್ಥಳಾಂತರಗೊಂಡಿದ್ದವು.

ಕಳೆದ ಆವೃತ್ತಿಯ ಮಹಾರಾಜ ಟ್ರೋಫಿ ಟಿ-20 ಟೂರ್ನಿಯ ಪಂದ್ಯಗಳೂ ಸಹ ಬೆಂಗಳೂರಿಂದ ಕೈತಪ್ಪಿದ್ದವು. ಪ್ರೇಕ್ಷಕರಿಲ್ಲದೆ ಟೂರ್ನಿ ಆಯೋಜನೆಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅನುಮತಿ ಕೇಳಿತ್ತಾದರೂ, ಸುರಕ್ಷತಾ ಅಪಾಯಗಳನ್ನು ಉಲ್ಲೇಖಿಸಿ, ರಾಜ್ಯ ಸರಕಾರ ಹಾಗೂ ಪೊಲೀಸ್ ಇಲಾಖೆ ಅನುಮತಿ ನಿರಾಕರಿಸಿದ್ದವು, ಬಳಿಕ ಪಂದ್ಯಗಳನ್ನು ಮೈಸೂರಿಗೆ ಸ್ಥಳಾಂತರ ಮಾಡಲಾಗಿತ್ತು.

ವಿಜಯ್ ಹಜಾರೆ ಏಕದಿನ ಟೂರ್ನಿಯಲ್ಲಿ ದೆಹಲಿ ಹಾಗೂ ಆಂಧ್ರಪ್ರದೇಶ ನಡುವಿನ ಪಂದ್ಯಕ್ಕೆ ಕಳೆದ ಡಿಸೆಂಬರ್‌ನಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣ ವೇದಿಕೆಯಾಗಬೇಕಿತ್ತು. 15 ವರ್ಷಗಳ ಬಳಿಕ ವಿಜಯ್ ಹಜಾರೆ ಟೂರ್ನಿಯಲ್ಲಿ ವಿರಾಟ್ ಕೊಹ್ಲಿ ಕಣಕ್ಕಿಳಿಯಲು ಬೆಂಗಳೂರಿಗೆ ಆಗಮಿಸಿದ್ದರು, ಆದರೆ ಅಂತಿಮ ಕ್ಷಣದಲ್ಲಿ ಅನುಮತಿ ನಿರಾಕರಣೆಯಾದ ಬಳಿಕ ಬೆಂಗಳೂರಿನ ಹೊರವಲಯದಲ್ಲಿರುವ ಬಿಸಿಸಿಐ ಸೆಂಟರ್ ಆಫ್ ಎಕ್ಸ್‌ಲೆನ್ಸ್‌ನಲ್ಲಿ ಪಂದ್ಯ ಆಯೋಜಿಸಲಾಗಿತ್ತು. ಇದಲ್ಲದೇ ರಣಜಿ ಟ್ರೋಫಿಯ ಪಂದ್ಯಗಳು ಸಹ ಆಲೂರು ಹಾಗೂ ಬಿಸಿಸಿಐ ಸೆಂಟರ್ ಆಫ್ ಎಕ್ಸ್‌ಲೆನ್ಸ್ ಪಾಲಾಗಿದ್ದವು.

ಆರ್‌ಸಿಬಿ ಫ್ರಾಂಚೈಸಿ ಸಹ ಪರ್ಯಾಯ ಮೈದಾನಗಳ ಹುಡುಕಾಟ ಆರಂಭಿಸಿತ್ತು. ರಾಯಪುರ, ಪುಣೆ, ಇಂದೋರ್ ಮೈದಾನಗಳು ಆರ್‌ಸಿಬಿಯ ತವರಿನ ಪಂದ್ಯಗಳ ಆಯೋಜನೆಗೆ ಉತ್ಸಾಹ ತೋರಿದ್ದವು, ಆದರೆ ರಾಜ್ಯ ಸರಕಾರದ ಅನುಮತಿ ದೊರೆತಿರುವುದರಿಂದ ಸಾಂಪ್ರದಾಯಿಕವಾಗಿ ಚಾಂಪಿಯನ್ ತಂಡದ ತವರಿನಲ್ಲಿ ನಡೆಯುವ ಮುಂದಿನ ಐಪಿಎಲ್ ಉದ್ಘಾಟನಾ ಪಂದ್ಯಕ್ಕೆ ಆತಿಥ್ಯ ವಹಿಸುವ ಅವಕಾಶವನ್ನು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬಿಸಿಸಿಐ ನೀಡಲಿದೆಯೇ ಎಂಬುವುದು ಕೂಡಾ ನಿಜಕ್ಕೂ ಕುತೂಹಲಕಾರಿ.

ಮೂರು ಸ್ಟ್ಯಾಂಡ್‌ಗಳು ಅನಾವರಣ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೊದಲ ಅಂತಾರಾಷ್ಟ್ರೀಯ ಟೆಸ್ಟ್ ಪಂದ್ಯ ಆಯೋಜನೆಯಾದ ಸವಿ ನೆನಪಿಗಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಸುವರ್ಣ ಮಹೋತ್ಸವ ಸಂಭ್ರಮಾಚರಣೆ ಪ್ರಯುಕ್ತ ಶುಕ್ರವಾರ ಸಂಜೆ ಚಿನ್ನಸ್ವಾಮಿ ಮೈದಾನದಲ್ಲಿ ವಿಶಿಷ್ಟ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿತ್ತು. ಭಾರತವನ್ನು ಪ್ರತಿನಿಧಿಸಿದ ಕರ್ನಾಟಕದ ಮೂವರು ಕ್ರಿಕೆಟ್ ದಿಗ್ಗಜರಾದ ರಾಹುಲ್ ದ್ರಾವಿಡ್, ಶಾಂತ ರಂಗಸ್ವಾಮಿ ಮತ್ತು ಅನಿಲ್ ಕುಂಬ್ಳೆ ಅವರ ಹೆಸರುಗಳ ಸ್ಟ್ಯಾಂಡ್ ಅನ್ನು ಅನಾವರಣಗೊಳಿಸಲಾಯಿತು.

1,500 ಕೋಟಿ ವೆಚ್ಚದಲ್ಲಿ 58 ಅಣೆಕಟ್ಟುಗಳ ಪುನರುಜ್ಜೀವನ: ಸಿಎಂ ಸಿದ್ದರಾಮಯ್ಯ

ಅಣೆಕಟ್ಟುಗಳ ಸುರಕ್ಷತೆ ದೇಶದ ತುರ್ತು ಅಗತ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಣೆಕಟ್ಟು ಸುರಕ್ಷತೆ ಇದೀಗ ಕೇವಲ ತಾಂತ್ರಿಕ ವಿಷಯವಲ್ಲ, ಅದು ರಾಷ್ಟ್ರೀಯ ಭದ್ರತೆಯ ಅನಿವಾರ್ಯ ಅಂಶವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮ್ಮೇಳನದಲ್ಲಿ ಮಾತನಾಡಿದ ಅವರು, ಬೆಂಗಳೂರು ನಗರವು ನಾವೀನ್ಯತೆ, ತಂತ್ರಜ್ಞಾನ ಮತ್ತು ಸಂಶೋಧನೆಯ ಕೇಂದ್ರವಾಗಿದ್ದು, ಅಣೆಕಟ್ಟು ಸುರಕ್ಷತೆ ಹಾಗೂ ಸುಸ್ಥಿರ ಜಲ ನಿರ್ವಹಣೆ ಕುರಿತ ಚರ್ಚೆಗೆ ಅತ್ಯಂತ ಸೂಕ್ತ ವೇದಿಕೆಯಾಗಿದೆ. ಕರ್ನಾಟಕ ದೇಶದಲ್ಲೇ ಅತಿ ಹೆಚ್ಚು ಅಣೆಕಟ್ಟುಗಳನ್ನು ಹೊಂದಿರುವ ರಾಜ್ಯಗಳಲ್ಲಿ ಒಂದಾಗಿದ್ದು, ಸುರಕ್ಷತೆ ವಿಷಯದಲ್ಲಿ ಅನುಭವ ಮತ್ತು ಜವಾಬ್ದಾರಿ ಎರಡನ್ನೂ ಹೊಂದಿದೆ ಎಂದರು.

ಸುರಕ್ಷಿತ ಮತ್ತು ಸುಭದ್ರ ಅಣೆಕಟ್ಟುಗಳು ಎಂಬ ವಿಷಯವು ತುರ್ತುಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಅಣೆಕಟ್ಟು ಸುರಕ್ಷತೆ ಇನ್ಮುಂದೆ ತಾಂತ್ರಿಕ ನಂತರದ ಚಿಂತನೆಯಲ್ಲ. ಅದು ರಾಷ್ಟ್ರೀಯ ಜವಾಬ್ದಾರಿಯಾಗಿದೆ. ಭಾರತದ ಸುಮಾರು 70 ಪ್ರತಿಶತ ಅಣೆಕಟ್ಟುಗಳು 25 ವರ್ಷಗಳಿಗಿಂತ ಹಳೆಯವು. ಸಮ್ಮೇಳನವು ವ್ಯವಸ್ಥಿತ ಪರಿಶೀಲನೆ, ಆಧುನೀಕರಣ ಮತ್ತು ಅಪಾಯ ಸೇರಿದಂತೆ ಇನ್ನಿತರ ಮಾಹಿತಿ ಕಾರ್ಯಾಚರಣೆಗಳ ಅಗತ್ಯವನ್ನು ಒತ್ತಿಹೇಳುತ್ತದೆ ಎಂದರು.

ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಅಣೆಕಟ್ಟುಗಳನ್ನು ಆಧುನಿಕ ಭಾರತದ ದೇವಾಲಯಗಳು ಎಂದು ಬಣ್ಣಿಸಿದ್ದರು. ಕೃಷಿ ಬೆಳವಣಿಗೆ, ಕುಡಿಯುವ ನೀರು ಸರಬರಾಜು ಮತ್ತು ವಿದ್ಯುತ್ ಉತ್ಪಾದನೆಗೆ ಅಣೆಕಟ್ಟುಗಳು ಕೇಂದ್ರಬಿಂದುವಾಗಿವೆ. ಆದರೆ ಹವಾಮಾನ-ಪ್ರವಾಹಗಳು, ಕೆಸರು, ಭೂಕಂಪನ ಅಪಾಯಗಳು ಮತ್ತು ಸೈಬರ್ ಬೆದರಿಕೆಗಳಿಗೆ ಸಮಗ್ರ ಪ್ರತಿಕ್ರಿಯೆಯ ಅಗತ್ಯವಿದೆ. ಕೇಂದ್ರ, ರಾಜ್ಯ ಸರಕಾರಗಳು ನಿಯಮಿತ ತಪಾಸಣೆ, ಸುರಕ್ಷತಾ ಲೆಕ್ಕಪರಿಶೋಧನೆ ಮತ್ತು ತುರ್ತು ಕ್ರಿಯಾ ಯೋಜನೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು ಅಗತ್ಯ. ನಿಯಂತ್ರಣಾ ಸಂಸ್ಥೆಗಳು ನೈಜ ಸಮಯದ ಮಾಹಿತಿ ಆಧಾರಿತ ನಿರ್ಧಾರ ವ್ಯವಸ್ಥೆಗಳನ್ನು ರೂಪಿಸಬೇಕು. ಶೈಕ್ಷಣಿಕ ಸಂಸ್ಥೆಗಳು ಹವಾಮಾನ ವೈಪರೀತ್ಯ ಮತ್ತು ಹಳೆಯ ಮೂಲಸೌಕರ್ಯದ ಅಪಾಯಗಳನ್ನು ಮುಂಚಿತವಾಗಿ ಗುರುತಿಸುವ ಸಂಶೋಧನೆಗೆ ಒತ್ತು ನೀಡಬೇಕು ಎಂದರು.

ಈ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಹವಾಮಾನ ಬದಲಾವಣೆ ಮತ್ತು ಹಳೆಯ ಅಣೆಕಟ್ಟುಗಳ ಮೇಲೆ ಗಮನ ಹರಿಸಲಾಗಿದೆ. ಈ ಸಮ್ಮೇಳನವು ನಿರ್ಣಾಯಕ ಸಮಯದಲ್ಲಿ ನಡೆಯುತ್ತಿದೆ. ನಮ್ಮ ಪ್ರಮುಖ ಅಣೆಕಟ್ಟುಗಳಲ್ಲಿ ಹಲವು 60 ರಿಂದ 70 ವರ್ಷ ಹಳೆಯವು. ಸಿದ್ಧತೆ ಐಚ್ಛಿಕವಲ್ಲ, ಅದು ಅತ್ಯಗತ್ಯ ಎಂದರು. ಕರ್ನಾಟಕವು ಅಣೆಕಟ್ಟು ಪುನರುಜ್ಜೀವನ ಮತ್ತು ಸುಧಾರಣಾ ಕಾರ್ಯಕ್ರಮದ ಎರಡನೇ ಮತ್ತು ಮೂರನೇ ಹಂತಗಳನ್ನು ಅನುಷ್ಠಾನಗೊಳಿಸುತ್ತಿದ್ದು, 58 ಅಣೆಕಟ್ಟುಗಳಿಗೆ 1,500 ಕೋಟಿ ವೆಚ್ಚದಲ್ಲಿ ಪುನರುಜ್ಜೀವನ ಮಾಡಲಾಗುತ್ತಿದೆ. ವಿಶ್ವ ಬ್ಯಾಂಕ್ ಮತ್ತು ಏಷ್ಯನ್ ಮೂಲಸೌಕರ್ಯ ಹೂಡಿಕೆ ಬ್ಯಾಂಕ್‌ನಿಂದ ಬೆಂಬಲಿತವಾದ ದೊಡ್ಡ ಡಿಆರ್‌ಐಪಿ ಉಪಕ್ರಮವು 19 ರಾಜ್ಯಗಳಲ್ಲಿ ಒಟ್ಟು 10,211 ಕೋಟಿ ರು. ವೆಚ್ಚದಲ್ಲಿ 736 ಅಣೆಕಟ್ಟುಗಳನ್ನು ಪುನರುಜ್ಜೀವನ ಮಾಡುವ ಗುರಿಯನ್ನು ಹೊಂದಿದೆ ಎಂದರು.

ಅಣೆಕಟ್ಟಿನ ನಿಜವಾದ ಬಲವು ಅದನ್ನು ಹೇಗೆ ನಿರ್ಮಿಸಲಾಗಿದೆ ಎಂಬುದರಲ್ಲಿ ಮಾತ್ರವಲ್ಲ, ಅದನ್ನು ಎಷ್ಟು ಚೆನ್ನಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ ಮತ್ತು ನಿರ್ವಹಿಸಲಾಗುತ್ತದೆ ಎಂಬುದರಲ್ಲೂ ಇದೆ. ಆಧುನಿಕ ಉಪಕರಣಗಳು, ದೂರಸ್ಥ ಸಂವೇದನೆ ಮತ್ತು ನೈಜ-ಸಮಯದ ದತ್ತಾಂಶ ವ್ಯವಸ್ಥೆಗಳ ಬಳಕೆ ಮಾಡಬೇಕು. ಸಂಶೋಧನೆ, ತಂತ್ರಜ್ಞಾನ ಮತ್ತು ಕ್ಷೇತ್ರ ಭೇಟಿ ಈ ಸಮ್ಮೇಳನವು ರಚನಾತ್ಮಕ ಮೌಲ್ಯಮಾಪನ, ಭೂಕಂಪನ ಸುರಕ್ಷತೆ ಮತ್ತು ಸುಧಾರಿತ ಮೇಲ್ವಿಚಾರಣಾ ತಂತ್ರಜ್ಞಾನಗಳ ಕುರಿತು 46 ಸಂಶೋಧನಾ ಪ್ರಬಂಧ ಪ್ರಸ್ತುತಿಗಳನ್ನು ಒಳಗೊಂಡಿದೆ. ಭೂಕಂಪನ ಅಪಾಯಗಳು ಮತ್ತು ಕೆಸರು ನಿರ್ವಹಣೆಯ ಮೇಲೆ ಕೇಂದ್ರೀಕರಿಸಲು ಬೆಂಗಳೂರಿನ ಐಐಎಸ್‌ಸಿ ಮತ್ತು ಐಐಟಿ ರೂರ್ಕಿಯಲ್ಲಿ ಅಣೆಕ ಟ್ಟುಗಳಿಗಾಗಿ ಅಂತಾರಾಷ್ಟ್ರೀಯ ಶ್ರೇಷ್ಠತಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದರು.

ಸಮ್ಮೇಳನದ ಜತೆಗೆ ಅಣೆಕಟ್ಟು ಉಪಕರಣಗಳು ಮತ್ತು ಪುನರುಜ್ಜೀವನ ಸಾಮಗ್ರಿಗಳಲ್ಲಿನ ನಾವೀನ್ಯತೆಗಳನ್ನು ಪ್ರದರ್ಶಿಸುವ ಪ್ರದರ್ಶನವೂ ಇದೆ. ಕೇಂದ್ರ ಜಲ ಆಯೋಗ, ವಿಶ್ವ ಬ್ಯಾಂಕ್ ಮತ್ತು ಅಂತಾರಾಷ್ಟ್ರೀಯ ಅಣೆಕಟ್ಟು ಸಂಸ್ಥೆಗಳ ಪ್ರತಿನಿಧಿಗಳು ಚರ್ಚೆಗಳಲ್ಲಿ ಭಾಗವಹಿಸಿದ್ದಾರೆ. ಈ ಕಾರ್ಯಕ್ರಮವು ಫೆ. 15 ರಂದು ಕೆಆರ್‌ಎಸ್ ಡ್ಯಾಂಗೆ ತಾಂತ್ರಿಕ ಕ್ಷೇತ್ರ ಭೇಟಿಯೊಂದಿಗೆ ಮುಕ್ತಾಯಗೊಳ್ಳಲಿದೆ. ಅಲ್ಲಿ ಪ್ರತಿನಿಧಿಗಳು ಶತಮಾನದಷ್ಟು ಹಳೆಯದಾದ ಗೇಟ್‌ಗಳ ಬದಲಾವಣೆಯನ್ನು ಪರಿಶೀಲಿಸಲಾಗುವುದು ಎಂದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮ್ಮೇಳನದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಕಾಂಗ್ರೆಸ್‌ನ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಮತ್ತಿತರರು ಇದ್ದರು.

ನಾವು ಎಷ್ಟು ಎತ್ತರದ ಅಣೆಕಟ್ಟುಗಳನ್ನು ನಿರ್ಮಿಸಿದ್ದೇವೆ ಎಂಬುದಲ್ಲ, ಅವನ್ನು ಎಷ್ಟು ಸುರಕ್ಷಿತವಾಗಿ ಉಳಿಸಿಕೊಂಡಿದ್ದೇವೆ ಎಂಬುದೇ ಅಭಿವೃದ್ಧಿಯ ಅಳತೆ. ಭಾರತದಲ್ಲಿ ಪ್ರಸ್ತುತ 6,628 ನಿರ್ದಿಷ್ಟ ಅಣೆಕಟ್ಟುಗಳಿದ್ದು, ವಿಶ್ವದಲ್ಲಿ ಮೂರನೇ ಅತಿ ದೊಡ್ಡ ಅಣೆಕಟ್ಟುಗಳ ರಾಷ್ಟ್ರವಾಗಿದೆ. ಕರ್ನಾಟಕದಲ್ಲಿ 231 ಅಣೆಕಟ್ಟುಗಳಿದ್ದು, ದೇಶದಲ್ಲಿ ಆರನೇ ಸ್ಥಾನದಲ್ಲಿದೆ

-ಸಿದ್ದರಾಮಯ್ಯ, ಸಿಎಂ

ನಾವೆಲ್ಲರೂ ಇಂದು ನೀರಿನ ನಿರ್ವಹಣೆ, ಅಣೆಕಟ್ಟುಗಳ ಸುರಕ್ಷತೆ ಬಗ್ಗೆ ಚರ್ಚೆ ಮಾಡಲು ಸೇರಿದ್ದೇವೆ. ನೀರಿನ ನಿರ್ವಹಣೆಯಲ್ಲಿ ಕರ್ನಾಟಕ ತನ್ನದೇಯಾದ ಪರಂಪರೆ ಹೊಂದಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಪಂಡಿತ್ ಜವಾಹರಲಾಲ್ ನೆಹರು ಅವರ ದೂರದೃಷ್ಟಿಯ ಪರಿಣಾಮವಾಗಿ ಸಾವಿರಾರು ಅಣೆಕಟ್ಟುಗಳನ್ನು ನಿರ್ಮಿಸಲಾಯಿತು.

-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಕೇಂದ್ರ ಅನುಮತಿಸಿದರೆ ಮೇಕೆದಾಟು, ಯುಕೆಪಿ

ಕಾರ್ಯಕ್ರಮದಲ್ಲಿ ಡಿ.ಕೆ.ಶಿವಕುಮಾರ್ ಮಾತನಾಡುತ್ತಾ, ಕೇಂದ್ರ ಸರಕಾರ ಅಗತ್ಯ ಅನುಮತಿ ನೀಡಿದರೆ ಕರ್ನಾಟಕ ಸರಕಾ ರವು ಮೇಕೆದಾಟು ಹಾಗೂ ಕೃಷ್ಣಾ ಮೇಲ್ದಂಡೆ ಬಾಕಿ ಯೋಜನೆ ಗಳನ್ನು ಜಾರಿ ಮಾಡಲಿದೆ. ಕೇಂದ್ರ ಸರಕಾರ ನಮಗೆ ಸಹಕಾರ ನೀಡುವ ಭರವಸೆಯಿದೆ ಎಂದರು. ನೀವೆಲ್ಲರೂ ಬೆಂಗಳೂರಿನಲ್ಲಿದ್ದೀರಿ. ಇಲ್ಲಿ 1.50 ಕೋಟಿ ಜನಸಂಖ್ಯೆ ಇದ್ದು, ವಿಶ್ವದಾದ್ಯಂತ ಕೈಗಾರಿಕೋದ್ಯಮಿಗಳು ಬೆಂಗಳೂರಿನತ್ತ ಮುಖ ಮಾಡಿದ್ದಾರೆ. ಇಡೀ ವಿಶ್ವ ಭಾರತವನ್ನು ಬೆಂಗಳೂರು ಮೂಲಕ ನೋಡುತ್ತಿದೆ. ಇಲ್ಲಿರುವ ಹವಾಮಾನ ಹಾಗೂ ಸಂಸ್ಕೃತಿ ಎಲ್ಲರ ಆಕರ್ಷಣೆಯಾಗಿದೆ. ಎಲ್ಲರೂ ಬೆಂಗಳೂರಿಗೆ ಬರಲು ಇಚ್ಛಿಸುತ್ತಿದ್ದಾರೆ. ಹೀಗಾಗಿ ಎಲ್ಲರಿಗೂ ನೀರು ಪೂರೈಸುವ ಜವಾಬ್ದಾರಿ ನಮ್ಮ ಮೇಲಿದೆ. ಹೀಗಾಗಿ ನಾವು ಸಮತೋಲಿದ ಅಣೆಕಟ್ಟು ನಿರ್ಮಾಣಕ್ಕೆ ಮುಂದಾಗಿದ್ದು, ಇತ್ತೀಚೆಗೆ ಸುಪ್ರೀಂಕೋರ್ಟ್ ಈ ಯೋಜನೆ ಪರವಾಗಿ ತೀರ್ಪು ನೀಡಿದೆ. ಆ ಮೂಲಕ ನಾವು ಈ ಯೋಜನೆ ಜಾರಿ ಮಾಡಲಿದ್ದು, ಕೇಂದ್ರ ಸರಕಾರದ ಅನುಮತಿಗೆ ಕಾಯುತ್ತಿದ್ದೇವೆ. ಈ ಯೋಜನೆಯಿಂದ ಬೆಂಗಳೂರು ಸೇರಿ ಈ ಭಾಗದ ಪ್ರದೇಶಗಳಿಗೆ ಕುಡಿಯುವ ನೀರು ಹಾಗೂ 400 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆಗೆ ಸಹಕಾರಿಯಾಗಲಿದೆ ಎಂದು ವಿವರಿಸಿದರು.

ಇನ್ನು ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ನಾವು ಪಾರದರ್ಶಕ ನೀತಿ ತರಲಾಗಿದ್ದು, ಭೂಮಿ ಕಳೆದುಕೊಳ್ಳುವ ರೈತರಿಗೆ 2013ರ ಕಾಯ್ದೆ ಅನುಸಾರ ಉತ್ತಮ ಪರಿಹಾರ ನೀಡಲು ತೀರ್ಮಾನಿಸಲಾಗಿದೆ. 2025ರ ಡಿಸೆಂಬರ್ ವೇಳೆಗೆ ನಮ್ಮಲ್ಲಿ 1.72 ಲಕ್ಷ ಎಕರೆಯಷ್ಟು ಕೃಷಿ ಭೂಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಇನ್ನು ಅಣೆಕಟ್ಟು ಸುರಕ್ಷತಾ ಮಾರ್ಗಸೂಚಿಯಲ್ಲಿ ಅಣೆಕಟ್ಟಿನ ಸುತ್ತ 500 ಮೀಟರ್ ವರೆಗೂ ವಿಧಿಸಲಾಗಿರುವ ನಿಬಂಧನೆಯನ್ನು ಸಡಿಲಗೊಳಿಸಬೇಕು. ಆ ಮೂಲಕ ಅಣೆಕಟ್ಟುಗಳ ಬಳಿ ಪ್ರವಾಸೋದ್ಯಮಕ್ಕೆ ಅವಕಾಶ ಕಲ್ಪಿಸಿ ಸ್ಥಳೀಯ ಆರ್ಥಿಕತೆಗೆ ನೆರವಾಗಬೇಕು ಎಂದು ಕರ್ನಾಟಕ ಸರ್ಕಾರದ ಪರವಾಗಿ ಮನವಿ ಮಾಡುತ್ತೇನೆ ಎಂದು ಕೋರಿದರು.

ಸುದರ್ಶನ ಬಲ ವೃದ್ಧಿ

ರಷ್ಯಾದಿಂದ 10000 ಕೋಟಿ ರು. ವೆಚ್ಚದ 288 ಎಸ್-400 ಕ್ಷಿಪಣೆ ಖರೀದಿಗೆ ಒಪ್ಪಿಗೆ

ನವದೆಹಲಿ: ಫ್ರಾನ್ಸ್‌ನಿಂದ 114 ರಫೇಲ್ ಯುದ್ಧ ವಿಮಾನ ಖರೀದಿ ಡೀಲ್ ಬೆನ್ನಲ್ಲೇ ಭಾರತ ಸರ್ಕಾರ ರಷ್ಯಾದಿಂದ ರಕ್ಷಣಾ ಖರೀದಿಗೆ ಸಜ್ಜಾಗಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯ ರಕ್ಷಣಾ ಸ್ವಾಧೀನ ಮಂಡಳಿ ರಷ್ಯಾದಿಂದ 10,000 ಕೋಟಿ ರು. ಅಂದಾಜು ವೆಚ್ಚದಲ್ಲಿ 288 ಹೆಚ್ಚುವರಿ ಎಸ್-400 ನೆಲದಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ ಖರೀದಿಸಲು ಅನುಮೋದನೆ ನೀಡಿದೆ. ಸಭೆ 120 ಅಲ್ಪ-ಶ್ರೇಣಿಯ ಕ್ಷಿಪಣಿಗಳು ಮತ್ತು 168 ದೀರ್ಘ-ಶ್ರೇಣಿಯ ಕ್ಷಿಪಣಿ ಖರೀದಿಗೆ ಒಪ್ಪಿಗೆ ಸಿಕ್ಕಿದೆ.

2018ರಲ್ಲಿ ಭಾರತ ರಷ್ಯಾದೊಂದಿಗೆ 5 ಎಸ್-400 ಟ್ರಯಂಫ್ ವಾಯುರಕ್ಷಣಾ ವ್ಯವಸ್ಥೆ ಖರೀದಿಸಲು 5.43 ಬಿಲಿಯನ್ ಡಾಲರ್ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದದ ಅನ್ವಯ 3 ಈಗಾಗಲೇ ಭಾರತದ ಬತ್ತಳಿಕೆಗೆ ಬಂದಿದ್ದರೆ ಜೂನ್ ಮತ್ತು ನವೆಂಬರ್‌ನಲ್ಲಿ ಇನ್ನೆರಡು ಸೇರ್ಪಡೆಯಾಗಲಿದೆ.

ಎಸ್-400 ವಾಯು ರಕ್ಷಣಾ ವ್ಯವಸ್ಥೆಯನ್ನು ಭಾರತ ಸುದರ್ಶನ ಚಕ್ರ ಎಂದು ಕರೆದಿದೆ. ಇದು 400 ಕಿಮೀ ವ್ಯಾಪ್ತಿಯಲ್ಲಿ ಶತ್ರುಗಳ ಕ್ಷಿಪಣಿ, ಡ್ರೋನ್ ಮತ್ತು ವಿಮಾನಗಳನ್ನು ಪತ್ತೆಹಚ್ಚಿ ನಾಶಪಡಿಸುವ ಸಾಮರ್ಥ್ಯ ಹೊಂದಿದೆ. ಆಪರೇಷನ್ ಸಿಂದೂರ ಕಾರ್ಯಾಚರಣೆಯ ಸಂದರ್ಭದಲ್ಲಿ ಎಸ್-400 ಶಕ್ತಿ ಅನಾವರಣಗೊಂಡಿತ್ತು. ಪಾಕ್ ಹಾರಿಸಿದ ಕ್ಷಿಪಣಿಗಳನ್ನು ಆಗಸದಲ್ಲೇ ಎಸ್-400ನಿಂದ ಹಾರಿಸಿದ್ದ ಕ್ಷಿಪಣಿಗಳು ಧ್ವಂಸ ಮಾಡಿದ್ದವು.

ಪಾಕ್ ವಿರುದ್ಧದ ಹೋರಾಟದಲ್ಲಿ ಅದ್ಭುತ ಪ್ರದರ್ಶನ ನೀಡಿದ್ದಕ್ಕೆ ವಾಯುಸೇನೆ ಇನ್ನು 5 ಎಸ್-400 ಮತ್ತು ಪ್ಯಾಂಟ್ಸಿರ್ ಅಲ್ಪ-ಶ್ರೇಣಿಯ ವಾಯು ರಕ್ಷಣಾ ವ್ಯವಸ್ಥೆಗೆ ಬೇಡಿಕೆ ಇಟ್ಟಿದೆ. ಕಾಮಿಕೇಜ್ ಡ್ರೋನ್‌ಗಳನ್ನು ಎದುರಿಸಲು ಪ್ಯಾಂಟ್ಸಿರ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ. ಎಸ್-400 ಮತ್ತು ಪ್ಯಾಂಟ್ಸಿರ್‌ಗಳನ್ನು ನಿಯೋಜಿಸಿದರೆ, ಗಡಿಯಾಚೆಗಿನ ಎಲ್ಲಾ ಬೆದರಿಕೆಗಳನ್ನು ತಟಸ್ಥಗೊಳಿಸಬಹುದಾಗಿದೆ. ಭಾರತವು ಎಸ್-400 ದೀರ್ಘ-ಶ್ರೇಣಿಯ ಕ್ಷಿಪಣಿಯನ್ನು ಬಳಸಿಕೊಂಡು ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿದ್ದ ಯುದ್ಧವ್ಯವಸ್ಥೆಯೊಂದನ್ನು ಹೊಡೆದು ಹಾಕಿತ್ತು. 314 ಕಿ.ಮೀ ದೂರದಲ್ಲಿ ಜಾಗಕ್ಕೆ ಕ್ಷಿಪಣಿ ದಾಳಿ ಮಾಡಿ ವಿಮಾನವನ್ನು ಹೊಡೆದು ಹಾಕಿದ್ದರಿಂದ ಪಾಕಿಗೆ ಭಾರೀ ನಷ್ಟವಾಗಿತ್ತು. ಆಪರೇಷನ್ ಸಿಂದೂರದಿಂದ ಪೆಟ್ಟು ತಿಂದ ಪಾಕಿಸ್ತಾನ ಈಗ ತನ್ನ ಕಾರ್ಯಾಚರಣೆಯ ವಿಮಾನಗಳನ್ನು ಅಫ್ಘಾನಿಸ್ತಾನ ಮತ್ತು ಇರಾನ್ ಬಳಿಯ ಪಶ್ಚಿಮ ವಲಯದಲ್ಲಿರುವ ವಾಯುನೆಲೆಗಳಿಗೆ ಮರುಸ್ಥಾಪಿಸಿದೆ ಎಂದು ವರದಿಯಾಗಿದೆ.

ಕೇಂದ್ರ ಕಾನೂನು ಸಚಿವ ಮೇಘವಾಲ್‌ರಿಂದ ಲೋಕಸಭೆಗೆ ಮಾಹಿತಿ

ಜಡ್ಜ್‌ಗಳ ವಿರುದ್ಧ ಭ್ರಷ್ಟಾಚಾರ, ಲೈಂಗಿಕ ದೌರ್ಜನ್ಯ ವಿರೋಧಿ ದೂರು

ನ್ಯಾಯಾಧೀಶರ ವಿರುದ್ಧ 8,630 ದೂರು

ನವದೆಹಲಿ: ಸುಪ್ರೀಮ್ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಕಚೇರಿಗೆ ಕಳೆದೊಂದು ದಶಕದಲ್ಲಿ (2016ರಿಂದ 2025ರವರೆಗೆ) ಸೇವೆಯಲ್ಲಿರುವ ನ್ಯಾಯಾಧೀಶರ ವಿರುದ್ಧ ಒಟ್ಟು 8,630 ದೂರುಗಳು ದಾಖಲಾಗಿವೆ ಎಂದು ಕೇಂದ್ರ ಕಾನೂನು ಸಚಿವಾಲಯ ಲೋಕಸಭೆಯಲ್ಲಿ ತಿಳಿಸಿದೆ. ಡಿಎಂಕೆ ಪಕ್ಷದ ಸಂಸದ ವಿ.ಎಸ್. ಮಥೇಸ್ವರನ್ ಅವರು ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಕಾನೂನು ಮತ್ತು ನ್ಯಾಯ ಸಚಿವಾಲಯದ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು, ಸುಪ್ರೀಮ್ ಕೋರ್ಟ್‌ನಿಂದ ಪಡೆದ ಮಾಹಿತಿಯ ಆಧಾರದಲ್ಲಿ ಈ ಸಂಖ್ಯೆಯನ್ನು ಬಹಿರಂಗಪಡಿಸಿದ್ದಾರೆ

ಈ ದೂರುಗಳು ಭ್ರಷ್ಟಾಚಾರ, ಲೈಂಗಿಕ ದೌರ್ಜನ್ಯ ಅಥವಾ ಇತರ ಗಂಭೀರ ಅನೈತಿಕತೆ ಸಂಬಂಧಿಸಿದ್ದಾಗಿರಬಹುದು ಎಂದು ಪ್ರಶ್ನೆಯಲ್ಲಿ ಉಲ್ಲೇಖಿಸಲಾಗಿತ್ತು. ಸರ್ಕಾರದ ಪ್ರಕಾರ, ಉನ್ನತ ನ್ಯಾಯಾಂಗದ ವಿರುದ್ಧ ಬರುವ ದೂರುಗಳನ್ನು ಇನ್-ಹೌಸ್ ಪ್ರಕ್ರಿಯೆಯಡಿ ನಿರ್ವಹಿಸಲಾಗುತ್ತದೆ. ಮುಖ್ಯ ನ್ಯಾಯಮೂರ್ತಿಗಳು ಸುಪ್ರೀಮ್ ಕೋರ್ಟ್ ನ್ಯಾಯಮೂರ್ತಿಗಳ ವಿರುದ್ಧದ ದೂರುಗಳನ್ನು ಸ್ವೀಕರಿಸಲು ಸಬಲರಾಗಿದ್ದು, ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳು ತಮ್ಮ ಕೋರ್ಟ್‌ನ ನ್ಯಾಯಾಧೀಶರ ವಿರುದ್ಧದ ದೂರುಗಳನ್ನು ಪರಿಶೀಲಿಸುತ್ತಾರೆ.

ಸಿಪಿಜಿಆರ್‌ಎಎಂಎಸ್ (ಕೇಂದ್ರೀಕೃತ ಸಾರ್ವಜನಿಕ ದೂರು ನಿವಾರಣೆ ಮತ್ತು ಮೇಲ್ವಿಚಾರಣಾ ವ್ಯವಸ್ಥೆ) ಅಥವಾ ಇತರ ಮೂಲಗಳ ಮೂಲಕ ಬರುವ ದೂರುಗಳನ್ನು ಸಂಬಂಧಪಟ್ಟ ಮುಖ್ಯ ನ್ಯಾಯಮೂರ್ತಿಗಳಿಗೆ ರವಾನಿಸಲಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ. ಆದರೆ, ಈ ದೂರುಗಳ ಪಟ್ಟಿ ಅವುಗಳ ವಿವರಗಳು ಅಥವಾ ಅದರ ಮೇಲೆ ತೆಗೆದುಕೊಂಡ ಕ್ರಮಗಳ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ. ದೂರುಗಳ ದಾಖಲಾತಿ, ಮೇಲ್ವಿಚಾರಣೆ ಮತ್ತು ಜವಾಬ್ದಾರಿಗಳಿಗೆ ಸಂಬಂಧಿಸಿದಂತೆ ವ್ಯವಸ್ಥಿತ ಮಾರ್ಗಸೂಚಿಗಳನ್ನು ರೂಪಿಸುವ ಬಗ್ಗೆಯೂ ಉತ್ತರದಲ್ಲಿ ಯಾವುದೇ ಮಾಹಿತಿ ಇಲ್ಲ.

ವಿಟಾಕೀಸ್

ಜೈ ಹನುಮಾನ್‌ಗೆ ರೆಡಿಯಾದ ರಿಷಬ್

ಚಂದನವನಕ್ಕೆ ಕಾಂತಾರದಂತಹ ದಂತಕಥೆಯನ್ನು ನೀಡಿದ ರಿಷಬ್ ಶೆಟ್ಟಿ ಈಗ ಮತ್ತೊಂದು ಹೊಸ ಚಿತ್ರಕ್ಕೆ ಸಿದ್ಧವಾಗುತ್ತಿದ್ದಾರೆ. ಕಾಂತಾರ ಸಿನಿಮಾದ ಚಿತ್ರೀಕರಣದ ಸಂದರ್ಭದಲ್ಲಿಯೇ ರಿಷಬ್ ತೆಲುಗಿನ ಜೈ ಹನುಮಾನ್ ಸಿನಿಮಾದಲ್ಲಿ ನಟಿಸಲು ಸಮ್ಮತಿಸಿದ್ದರು. ಆಗಲೇ ಚಿತ್ರದ ಫಸ್ಟ್ ಲುಕ್ ಕೂಡ ಬಿಡುಗಡೆಯಾಗಿತ್ತು. ಇದನ್ನು ನೋಡಿ ಸಂತಸಗೊಂಡಿದ್ದ ಸಿನಿಪ್ರಿಯರು ಸಿನಿಮಾ ಯಾವಾಗ ಸೆಟ್ಟೇರಲಿದೆ ಎಂದು ಕಾತರರಾಗಿದ್ದರು. ಅಂತೂ ಈಗ ಸಿನಿಮಾತಂಡ ಚಿತ್ರೀಕರಣಕ್ಕೆ ಅಣಿಯಾಗಿದೆ. ಇದೇ 22 ರಂದು ಕರುನಾಡಿನ ಹಂಪಿಯಲ್ಲಿ ಸಿನಿಮಾದ ಮುಹೂರ್ತ ನೆರವೇರಲಿದೆ. ಹಂಪಿ ಹನುಮನ ಜನ್ಮಸ್ಥಳ ಎಂಬ ಉಲ್ಲೇಖವಿದೆ. ಹಾಗಾಗಿ ಹಂಪಿಯಲ್ಲಿಯೇ ಚಿತ್ರತಂಡ ಸಡಗರದಿಂದ ಮುಹೂರ್ತ ನೆರವೇರಿಸಲಿದೆ.

ಪ್ರಶಾಂತ್ ವರ್ಮ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಕಲಿಯುಗದಲ್ಲಿ ಹನುಮಾನ ಆಗಮನವಾದರೆ ಹೇಗಿರುತ್ತದೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಲಾಗುತ್ತಿದೆ. ಜೈ ಹನುಮಾನ್ ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು ತೆಲುಗು, ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಮೂಡಿಬರಲಿದೆ. ಇದು ಅದ್ದೂರಿ ವೆಚ್ಚದ ಚಿತ್ರವಾಗಿದ್ದು ಮೈತ್ರಿ ಮೂವಿ ಮೇಕರ್ಸ್ ನಲ್ಲಿ ನಿರ್ಮಾಣವಾಗುತ್ತಿದೆ.

ಮಾರ್ಚ್‌ನಲ್ಲಿ ಶೇಷ

ಬಹುದಿನಗಳ ಬಳಿಕ ತೆರೆಯಲ್ಲಿ ಮತ್ತೊಂದು ಪೊಲೀಸ್ ಸ್ಟೋರಿ ಬರಲಿದೆ. ಪೊಲೀಸ್ ಇಲಾಖೆಯಲ್ಲಿರುವಂತಹ ಭ್ರಷ್ಟ ಹಾಗೂ ಪ್ರಾಮಾಣಿಕತೆಯ ಸಂಘರ್ಷದ ನಡುವೆ ಸಾಗುವ ಕುತೂಹಲಕಾರಿ ಕಥೆ ಇಲ್ಲಿದೆ. ಮರಡಿಗುಡ್ಡ ಎಂಟರ್‌ಟೇನ್‌ಮೆಂಟ್ಸ್‌ನಲ್ಲಿ ಉಮೇಶ್ ಗೌಡ, ಮಂಜುವಾಣಿ ಹಾಗೂ ವೀಣಾ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಪ್ರದೀಪ್ ಅರಸೀಕೆರೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ವಿಶೇಷ ಎಂದರೆ ಶೇಷ ಬಿಡುಗಡೆಗೂ ಮೊದಲೇ ಒಟಿಟಿ ರೈಟ್ಸ್ ಸೇಲ್ ಆಗಿದ್ದು ಚಿತ್ರತಂಡಕ್ಕೆ ಖುಷಿ ಕೊಟ್ಟಿದೆ. ಪ್ರಮೋದ್ ಶೆಟ್ಟಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದು, ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ.

ಒಳ್ಳೆಯದು ಮತ್ತು ಕೆಟ್ಟದರ ನಡುವೆ ನಡೆಯುವ ಸಂಘರ್ಷದಲ್ಲಿ ಕೊನೆಗೆ ಉಳಿಯುವುದೇ ಶೇಷ. 2016ರ ಕಾಲದ ಘಟ್ಟದಲ್ಲಿ ಕರ್ನಾಟಕ ಹಾಗೂ ಕೇರಳ ಬಾರ್ಡರ್‌ನಲ್ಲಿ ನಡೆಯುವಂತಹ ಕಾಲ್ಪನಿಕ ಘಟನೆಗಳ ಸುತ್ತ ಬೆಸೆದುಕೊಂಡು ಕಥೆ ಇಲ್ಲಿದೆ. ಪೊಲೀಸ್ ಇಲಾಖೆಯಲ್ಲಿ ಕೆಲವು ಅಧಿಕಾರಿಗಳು ನಡೆಸುತ್ತಿರುವ ಭ್ರಷ್ಟಾಚಾರದ ಬಗ್ಗೆ ಈ ಚಿತ್ರ ಮಾಡಿದ್ದೇನೆ. ಸಾಮಾನ್ಯವಾಗಿ ನಾವು ಗಮನಿಸಿದರೆ ಎಲ್ಲದಕ್ಕೂ ಒಂದೊಂದು ಪರ್ಯಾಯ ವ್ಯವಸ್ಥೆ ಇದ್ದೆ ಇರುತ್ತದೆ. ಸರಕಾರಿ ಆಸ್ಪತ್ರೆ ಇಲ್ಲದಿದ್ದರೆ ಖಾಸಗಿ ಆಸ್ಪತ್ರೆ ಇರುತ್ತದೆ. ಸರಕಾರಿ ಶಾಲೆ ಇಲ್ಲದಿದ್ದರೆ ಖಾಸಗಿ ಶಾಲೆ ಇರುತ್ತದೆ. ಆದರೆ ಪೊಲೀಸ್ ಇಲಾಖೆಯಲ್ಲಿ ಬದಲಿ ವ್ಯವಸ್ಥೆ ಇಲ್ಲ. ಇಂಥ ಇಲಾಖೆಯಲ್ಲಿ ನಡೆಯುವ ಭ್ರಷ್ಟಾಚಾರದಿಂದ ಜನರು ಹೇಗೆ ಸಮಸ್ಯೆಗಳನ್ನು ಎದಿರಿಸುತ್ತಿದ್ದಾರೆ. ಯಾವೆಲ್ಲಾ ಕಷ್ಟ, ಕಾರ್ಪಣ್ಯಗಳು ಎದಿರಾಗುತ್ತವೆ ಎಂಬ ಸೂಕ್ಷ್ಮ ವಿಚಾರವನ್ನು ಈ ಚಿತ್ರದ ಮೂಲಕ ಹೇಳುವ ಪ್ರಯತ್ನ ಮಾಡಿದ್ದೇನೆ. ಈ ಚಿತ್ರವನ್ನು ಕನ್ನಡ ಹಾಗೂ ಮಲೆಯಾಳಂನಲ್ಲಿ ಏಕಕಾಲಕ್ಕೆ ಬಿಡುಗಡೆ ಮಾಡುತ್ತಿದ್ದೇವೆ ಎಂದು ನಿರ್ದೇಶಕ ಪ್ರದೀಪ್ ಹೇಳಿದರು. ನಮ್ಮ ಚಿತ್ರದ ಒಟಿಟಿ ಹಕ್ಕನ್ನು ಅಮೇಜಾನ್ ಪ್ರೈಮ್ ಪಡದು ಕೊಂಡಿದೆ. ಇದು ನಮ್ಮ ಚಿತ್ರತಂಡಕ್ಕೆ ಖುಷಿಕೊಟ್ಟಿದೆ. ಹುಬ್ಬಳ್ಳಿಯಲ್ಲಿ ಆಡಿಯೊ ಬಿಡುಗಡೆ ಕಾರ್ಯಕ್ರಮ ಸೇರಿದಂತೆ ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರಚಾರ ಕಾರ್ಯ ಮಾಡುತ್ತೇವೆ. ಅದೇ ರೀತಿ ಕೇರಳದ ವೈನಾಡು ಸೇರಿದಂತೆ ಹಲವು ಭಾಗಗಳಲ್ಲೂ ಕೂಡ ಪ್ರಚಾರದ ಕೆಲಸ ನಡೆಸಿ ಮಾರ್ಚ್ 06ರಂದು ಬಿಡುಗಡೆ ಮಾಡುವ ಯೋಜನೆ ಹಾಕಿಕೊಂಡಿದ್ದೇವೆ ಎಂದು ನಿರ್ಮಾಪಕ ಉಮೇಶ್ ಗೌಡ ತಿಳಿಸಿದರು.

ಚಿತ್ರೀಕರಣ ಮುಗಿಸಿದ ಚೀತಾ

ಪ್ರಜ್ವಲ್ ದೇವರಾಜ್ ಚೀತಾ ಮೂಲಕ ಹೊಸ ಅವತಾರದಲ್ಲಿ ತೆರೆಗೆ ಬರುತ್ತಿದ್ದಾರೆ. ನೃತ್ಯ ನಿರ್ದೇಶಕ ರಾಜಾ ಕಲೈ ಕುಮಾರ್ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದು, ಈ ಚಿತ್ರದ ಮೂಲಕ ನಿರ್ದೇಶಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ಪ್ರಜ್ವಲ್ ಜತೆಯಾಗಿ ಮೇಘಾ ಶೆಟ್ಟಿ ಬಣ್ಣಹಚ್ಚಿದ್ದಾರೆ. ಉಳಿದಂತೆ ರಂಗಾಯಣ ರಘು, ಶ್ರುತಿ ಹರಿಹರನ್, ಚಿನ್ನಿ ಪ್ರಕಾಶ್, ಗುರು ಜಗ್ಗೇಶ್, ಶಿವರಾಜ್ ಕೆ.ಆರ್ ಪೇಟೆ, ಸುನೀಲ್, ಶ್ರೀಧರ್, ಟೆನ್ನಿಸ್ ಕೃಷ್ಣ ಸೇರಿದಂತೆ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ. ರಾಕ್ಲೈನ್ ಸ್ಟುಡಿಯೊದಲ್ಲಿ ನಿರ್ಮಿಸಲಾಗಿದ್ದ ಅದ್ದೂರಿ ಸೆಟ್‌ನಲ್ಲಿ ಮೂಡಿಬಂದ ಯುಗಳಗೀತೆಯೊಂದರ ಚಿತ್ರೀಕರಣದೊಂದಿಗೆ ಚೀತಾ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ.

ನಾನು ಚಿತ್ರರಂಗಕ್ಕೆ ಬಂದು ಇಪ್ಪತ್ತೈದು ವರ್ಷಗಳಾದವು. ಇದುವರೆಗೆ ನೃತ್ಯ ಕಲಾವಿದನಾಗಿ, ನೃತ್ಯ ನಿರ್ದೇಶಕನಾಗಿ ಕಾರ್ಯ ನಿರ್ವಹಿಸಿದ್ದೇನೆ. ಇದು ನನ್ನ ನಿರ್ದೇಶನದ ಮೊದಲ ಚಿತ್ರ. ಚೀತಾ ಮಾರ್ಕೆಟ್‌ನಲ್ಲಿ ನಡೆಯುವ ಕಥೆ, ಮಾರುಕಟ್ಟೆಯಲ್ಲಿ ಹುಟ್ಟಿಬೆಳೆದ ಯುವಕನ ಕಥೆ ಇದಾಗಿದೆ. ಆ ಯುವಕನ ಪಾತ್ರದಲ್ಲಿ ಪ್ರಜ್ವಲ್ ಅಭಿನಯಿಸಿದ್ದು, ಮಾರುಕಟ್ಟೆಯಲ್ಲಿ ನಡೆಯುವ ಅವ್ಯವಹಾರಗಳ ವಿರುದ್ಧ ಹೋರಾಡುವ ಹೋರಾಟಗಾರನ ಪಾತ್ರದಲ್ಲಿ ಪ್ರಜ್ವಲ್ ಅಬ್ಬರಿಸಿದ್ದಾರೆ. ಚಿತ್ರದಲ್ಲಿ ಲವ್, ಸೆಂಟಿಮೆಂಟ್, ಆ್ಯಕ್ಷನ್ ಎಲ್ಲವೂ ಬೆರೆತಿದೆ. ರಾಮನಗರ, ಕೋಲಾರದಲ್ಲೂ ಚಿತ್ರೀಕರಣ ನಡೆಸಲಾಗಿದೆ. ಚಿತ್ರದಲ್ಲಿ ಐದು ಹಾಡುಗಳಿದ್ದು, ಆರು ಸಾಹಸ ಸನ್ನಿವೇಶಗಳಿವೆ ಎಂದು ನಿರ್ದೇಶಕ ರಾಜಾ ಕಲೈ ಕುಮಾರ್ ಹೇಳಿದರು.

ಈ ಚಿತ್ರದಲ್ಲಿ ನಾನು ಮಾರ್ಕೆಟ್‌ನಲ್ಲಿಯೇ ಬೆಳೆದ ಅನಾಥ ಹುಡುಗನ ಪಾತ್ರದಲ್ಲಿ ನಟಿಸಿದ್ದೇನೆ. ಅಲ್ಲಿರುವ ಪ್ರತಿಯೊಬ್ಬರು ಜಾತಿಮತ ಭೇದವಿಲ್ಲದೆ ನನ್ನನ್ನು ಪ್ರೀತಿಸುತ್ತಿರುತ್ತಾರೆ. ನನಗೂ ಅವರನ್ನು ಕಂಡರೆ ಅಷ್ಟೇ ಪ್ರೀತಿ. ಅಲ್ಲಿ ನಡೆಯುವ ಕೆಮಿಕಲ್ ಮಾಫಿಯಾ ಸೇರಿದಂತೆ ಅನೇಕ ಅವ್ಯವಹಾರಗಳ ವಿರುದ್ಧ ಹೋರಾಡುತ್ತೇನೆ. ಈ ಸಿನಿಮಾಗೆ ಚೀತಾ ಎಂಬ ಶೀರ್ಷಿಕೆಯನ್ನು ಆಯ್ಕೆ ಮಾಡಿಕೊಂಡಿದ್ದು ಯಾಕೆ ಎಂಬುದು ಸಿನಿಮಾ ನೋಡಿದ ಮೇಲೆ ತಿಳಿಯುತ್ತದೆ ಎಂದು ಪ್ರಜ್ವಲ್ ದೇವರಾಜ್ ತಿಳಿಸಿದರು. ಇದುವರೆಗೂ ನಾನು ನಿರ್ವಹಿಸದ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ನನ್ನದು ಚಿತ್ರದಲ್ಲಿ ಪವರ್ ಫುಲ್ ಪಾತ್ರ ಎಂದು ಮೇಘಾ ಶೆಟ್ಟಿ ಸಂತಸದಿಂದ ನುಡಿದರು. ರಾಜಲಕ್ಷ್ಮಿ ಎಂಟರ್‌ಟೇನ್‌ಮೆಂಟ್ ಲಾಂಛನದಲ್ಲಿ ಪ್ರತಿಭಾ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಸದ್ಯ ಶೂಟಿಂಗ್ ಮುಗಿಸಿರುವ ಚೀತಾ ಚಿತ್ರತಂಡ ಪೋಸ್ಟ್ ಪ್ರೊಡಕ್ಷನ್‌ನಲ್ಲಿ ಬ್ಯುಸಿಯಾಗಿದ್ದು, ಶೀಘ್ರದಲ್ಲಿಯೇ ಚಿತ್ರವನ್ನು ತೆರೆಗೆ ತರುವ ಯೋಜನೆ ಹಾಕಿಕೊಂಡಿದೆ.

ಸೆಟ್ಟೇರಿದ ಡೈರೆಕ್ಟರ್ಸ್ ಕಟ್

ರಾಜೇಶ್ವರಿ ಎಂಟರ್ ಪ್ರೈಸಸ್ ಲಾಂಛನದಲ್ಲಿ ಬಿ.ಎಸ್. ಹೇಮಲತಾ ನಿರ್ಮಿಸುತ್ತಿರುವ ಡೈರೆಕ್ಟರ್ಸ್ ಕಟ್ ಚಿತ್ರದ ಮೂಹೂರ್ತ ಸಮಾರಂಭ ಕೆಂಗೇರಿಯ ವಿಶ್ವವಿದ್ಯಾ ಗಣಪತಿ ದೇವಸ್ಥಾನದಲ್ಲಿ ನೆರವೇರಿತು. ಈ ಹಿಂದೆ ಖೇಲಾ ಚಿತ್ರವನ್ನು ನಿರ್ದೇಶಿಸಿದ್ದ ಎ.ಜೆ. ಭರತ್ ಈಗ ಈ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಈ ಚಿತ್ರದಲ್ಲಿ ಸೂರಜ್ ಗೌಡ ನಾಯಕನಾಗಿ ನಟಿಸುತ್ತಿದ್ದು, ರಾಧಾ ಭಾಗಿ ಮತ್ತು ದಿವ್ಯಾ ಜೈನ್ ನಾಯಕಿಯರಾಗಿ ಅಭಿನಯಿಸುತ್ತಿದ್ದಾರೆ.

ಇದೊಂದು ಸಿನಿಮಾದೊಳಗಿನ ಸಿನಿಮಾ ಇರುವ ಕಥೆ. ಕನ್ನಡದ ನಿರ್ದೇಶಕನೊಬ್ಬ ಸಿನಿಮಾಗಾಗಿ ಉತ್ತರಾಖಂಡಕ್ಕೆ ಹೋದಾಗ ಅಲ್ಲಿ ಏನೆಲ್ಲಾ ಆಗುತ್ತದೆ ಎಂಬುದೇ ಕಥಾ ಸಾರಾಂಶ. ಸೂರಜ್ ಗೌಡ ನಿರ್ದೇಶಕನ ಪಾತ್ರದಲ್ಲಿ ಹಾಗೂ ರಾಧಾ ಎಸ್ ಭಾಗಿ ದಕ್ಷಿಣ ಭಾರತದ ನಾಯಕಿಯ ಪಾತ್ರದಲ್ಲಿ, ದಿವ್ಯಾ ಜೈನ್ ಉತ್ತರ ಭಾರತದ ನಾಯಕಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಉತ್ತರಾಖಂಡದಲ್ಲಿ ಚಿತ್ರೀಕರಣ ನಡೆಯಲಿದೆ ಎಂದು ನಿರ್ದೇಶಕರು ತಿಳಿಸಿದರು. ಸಿನಿಮಾದೊಳಗೆ ಸಿನಿಮಾ ನಡೆಯುವ ಕಥೆ. ಈ ಚಿತ್ರದಲ್ಲಿ ನನ್ನದು ನಿರ್ದೇಶಕನ ಪಾತ್ರ. ಕನ್ನಡದ ನಿರ್ದೇಶಕನೊಬ್ಬ ಉತ್ತರಾಖಂಡ ಕ್ಕೆ ತನ್ನ ಸಿನಿಮಾ ಚಿತ್ರೀಕರಣಕ್ಕಾಗಿ ಹೋದಾಗ ಅಲ್ಲಿ ಏನೆಲ್ಲಾ ಆಗುತ್ತದೆ ಎನ್ನುವ ಕಥಾಹಂದರ ಈ ಚಿತ್ರದಲ್ಲಿದೆ. ನಾನು ಕೂಡ ಒಂದು ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದೇನೆ. ಆ ಸಿನಿಮಾಗೆ ಡೈರೆಕ್ಟರ್ಸ್ ಕಟ್ ಸಹಾಯವಾಗಲಿದೆ ಎಂದು ನಟ ಸೂರಜ್ ಗೌಡ ಹೇಳಿದರು. ಪ್ರಮೋದ್ ಗೌಡ ಛಾಯಾಗ್ರಹಣ ಹಾಗೂ ಕಲ್ಯಾಣ್ ಮಂಜುನಾಥ್ ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದ್ದು, ಇದೇ 25 ರಿಂದ ಚಿತ್ರೀಕರಣ ಆರಂಭವಾಗಲಿದೆ.

ಅಲಂಕಾರಿಕ ಮತ್ಸ್ಯಗಳ ಮೇಳ

ಹಂಪಿ: ಹಂಪಿ ಉತ್ಸವದ ಅಂಗವಾಗಿ ಮಾತಂಗ ಪರ್ವತ ಮೈದಾನದಲ್ಲಿ ಮೀನುಗಾರಿಕೆ ಇಲಾಖೆ ಆಯೋಜಿಸಿರುವ ಮತ್ಸ್ಯ ಮೇಳವು ಸಾರ್ವಜನಿಕರ ಗಮನ ಸೆಳೆಯುತ್ತಿದೆ. ಸಾಗರದ ಆಳದಲ್ಲಿನ ಮತ್ಸ್ಯ ಸಂಪತ್ತಿನ ವೈವಿಧ್ಯತೆಯನ್ನು ಪರಿಚಯಿಸುವ ಉದ್ದೇಶದಿಂದ ಏರ್ಪಡಿಸಿರುವ ಪ್ರದರ್ಶನದಲ್ಲಿ ದೇಶಿ ಹಾಗೂ ವಿದೇಶಿ ಮೂಲದ 50ಕ್ಕೂ ಹೆಚ್ಚು ತಳಿಯ ಅಲಂಕಾರಿಕ ಮೀನುಗಳಿವೆ.

ವಿಂಡೋಸ್ ಏಂಜಲ್, ಫ್ಲೋರಾ, ಕ್ಯಾಟ್ ಫಿಶ್, ಕೋಯಿ ರ್ಪ್, ಟೈಗರ್ ಆಸ್ಕರ್, ರೆಡ್ ಕ್ಯಾಪ್ ಗೋಲ್ಡ್, ಲಯನ್ ಹೆಡ್, ಫೈಟರ್, ರೆಡ್ ಸ್ಪಾಟ್ ಸ್ಪೋರಮ್, ಚಿಚ್ಲಿಡ್ಸ್, ಮಲಾಬಾರ್ ಗೊರಾಮಿ, ಸೇರಿದಂತೆ ಹಲವು ವರ್ಣರಂಜಿತ ಮೀನುಗಳು ಮೇಳದಲ್ಲಿ ಗಮನ ಸೆಳೆಯುತ್ತಿವೆ. ಬಣ್ಣಬಣ್ಣದ ರೂಪ, ವಿಶಿಷ್ಟ ಚಲನವಲನ ಮತ್ತು ರ್ಷಕ ಆಕಾರಗಳಿಂದ ಈ ಮೀನುಗಳು ಮಕ್ಕಳಿಂದ ಹಿಡಿದು ಹಿರಿಯರ ತನಕ ಎಲ್ಲರಲ್ಲೂ ಕುತೂಹಲ ಹುಟ್ಟಿಸುತ್ತಿವೆ.

ಅಲಂಕಾರಿಕ ಮೀನು ಸಾಕಾಣಿಕೆ ಉದ್ಯಮವು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸ್ವಯಂ ಉದ್ಯೋಗಕ್ಕೆ ಉತ್ತಮ ಅವಕಾಶಗಳನ್ನು ಒದಗಿಸುತ್ತಿದೆ. ಕಡಿಮೆ ಜಾಗದಲ್ಲಿ, ಕಡಿಮೆ ಹೂಡಿಕೆಯಲ್ಲಿ ಆರಂಭಿಸಬಹುದಾದ ಈ ಉದ್ಯಮಕ್ಕೆ ಸರಕಾರದ ವಿವಿಧ ಯೋಜನೆಗಳ ಮೂಲಕ ಪ್ರೋತ್ಸಾಹ ನೀಡಲಾಗುತ್ತಿದೆ. ಒಳನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಮೀನು ಸಂಪತ್ತಿನ ವೃದ್ಧಿಗೆ ಜಾರಿಗೆ ತಂದಿರುವ ಯೋಜನೆಗಳ ಕುರಿತು ಬಿತ್ತಿಚಿತ್ರಗಳು ಹಾಗೂ ಮಾಹಿತಿ ಫಲಕಗಳ ಮೂಲಕ ತಿಳಿಸಲಾಗುತ್ತಿದೆ. ಆಹಾರಕ್ಕಾಗಿ ಬಳಸುವ ವಿವಿಧ ಮೀನುಗಳ ಪೋಷಕಾಂಶಗಳ ಮಹತ್ವವನ್ನೂ ವಿವರಿಸಲಾಗಿದೆ.

ಈ ಬಾರಿ ಮೇಳದ ಪ್ರಮುಖ ಆಕರ್ಷಣೆಯಾಗಿ ಜಿಲ್ಲೆಯ ಮತ್ಸ್ಯ ಸಂಪತ್ತಿನ ಆಕರವಾದ ತುಂಗಭದ್ರಾ ಜಲಾಶಯದ ಪ್ರತಿಕೃತಿಯನ್ನು ನಿರ್ಮಿಸಲಾಗಿದೆ. ಜಲಾಶಯದ ವಿಹಂಗಮ ನೋಟವನ್ನು ರೂಪಕವಾಗಿ ಪ್ರದರ್ಶಿಸಿರುವುದು ನೋಡುಗರ ಮೆಚ್ಚುಗೆಗೆ ಪಾತ್ರವಾಗಿದೆ. ಜಲಾಶಯದಲ್ಲಿ ದೊರೆಯುವ ಮೀನುಗಳ ವೈವಿಧ್ಯತೆ ಹಾಗೂ ಮೀನುಗಾರರ ಜೀವನೋಪಾಯದಲ್ಲಿ ಅದರ ಪಾತ್ರದ ಕುರಿತು ವಿವರಿಸಲಾಗುತ್ತಿದೆ.

ಹಂಪಿ ಉತ್ಸವ ವಸ್ತು ಪ್ರದರ್ಶನ ಮಳಿಗೆಗಳಿಗೆ ಜಿಲ್ಲಾಧಿಕಾರಿ ಚಾಲನೆ

ಹಂಪಿ: ಹಂಪಿ ಉತ್ಸವ -2026 ಅಂಗವಾಗಿ ಹಂಪಿ ಗ್ರಾಮದ ಮಾತಂಗ ಪರ್ವತ ಮೈದಾನದಲ್ಲಿ ಆಯೋಜಿಸಲಾಗಿರುವ ತೋಟಗಾರಿಕೆ ಮತ್ತು ಫಲಪುಷ್ಪ, ಕೃಷಿ, ಅರಣ್ಯ, ಮತ್ಸ್ಯ ಹಾಗೂ ವ್ಯಾಪಾರ ಮಳಿಗೆಗಳಿಗೆ ಶುಕ್ರವಾರ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಉದ್ಘಾಟಿಸಿ, ವಸ್ತು ಪ್ರದರ್ಶನಗಳಿಗೆ ಚಾಲನೆ ನೀಡಿದರು.

ಪುಷ್ಪಲೋಕದಲ್ಲಿ ಅರಳಿದ ಬಡವಿ ಶಿವಲಿಂಗ, ಸಾಸಿವೆಕಾಳು ಗಣಪ: ಫಲಪುಷ್ಪ ಪ್ರದರ್ಶನ ಜನಮನ ಸೂರೆಗೊಳ್ಳುತ್ತಿದೆ. ಪುಷ್ಪಲೋಕದಲ್ಲಿ ಅರಳಿದ ಬೃಹತ್ ಬಡವಿ ಶಿವಲಿಂಗ, ಸಾಸಿವೆಕಾಳು ಗಣಪತಿ ಪ್ರಮುಖ ಆಕರ್ಷಣೆ ಎನಿಸಿವೆ. ಬಿಳಿ,ಕೆಂಪು,ನೇರಳೆ, ಹಳದಿ ಬಣ್ಣದ ಸೇವಂತಿ, ಗುಲಾಬಿ, ಚೆಂಡು ಹೂಗಳಿಂದ ಬಡವಿ ಶಿವಲಿಂಗ ಹಾಗೂ ಸಾಸಿವೆ ಕಾಳು ಗಣಪ ನಿರ್ಮಿಸಲಾಗಿದೆ. ಬಡವಿ ಶಿವಲಿಂಗ ನಿರ್ಮಾಣಕ್ಕೆ 10 ಸಾವಿರ ಹಾಗೂ ಸಾಸಿವೆ ಕಾಳು ಗಣಪತಿ ನಿರ್ಮಾಣಕ್ಕೆ 5 ಸಾವಿರ ಹೂಗಳು ಬಳಕೆಯಾಗಿವೆ. ಎರಡು ಕಲಾಕೃತಿಗಳು ಹೊಸಪೇಟೆ ಕಲಾವಿದ ಜಗದೀಶ್ ಕೈಚಳದಲ್ಲಿ ಮೂಡಿಬಂದಿದೆ.

ಸುವರ್ಣಯುಗದ ರಾಜಬೀದಿ ವೈಭವ ಅನಾವರಣ: ವಿಜಯನಗರ ಸಾಮ್ರಾಜ್ಯದ ಸುವರ್ಣಯುಗ ನೆನಪಿಸುವ ಮುತ್ತು,ವಜ್ರ, ವೈಡೂರ್ಯ,ಸ್ವರ್ಣಗಳ ಮಾರಾಟ ರಾಜಬೀದಿ ನಾಡಿನ ಗತವೈಭವ ಸಾರುತ್ತಿವೆ. ಹೂಗಳಿಂದ ನಿರ್ಮಿತವಾದ ರಾಯರರಾಯ, ಯವನರಾಜ್ಯಪ್ರತಿಷ್ಠಾಪನಾಚಾರ್ಯ ಕೃಷ್ಣದೇವರಾಯರ ಪ್ರತಿಮೆ ಗಾಂಭೀರ್ಯ ಮೆಚ್ಚುವಂತಿದೆ. ಸಿರಿಧಾನ್ಯಗಳಲ್ಲಿ ಮೂಡಿಬಂದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ವಿನೀತಳಾಗಿ ಕೈಮುಗಿದು ನಿಂತ ಪ್ರತಿಮೆ, ಪರಿಸರ ರಕ್ಷಣೆ ನೋಡುಗರನ್ನು ಪ್ರೇರೆಪಿಸುತ್ತದೆ. ಕುಬ್ಜಮರಗಳ ಬೆಳಸುವ ಬೋನ್ಸಾಯ್ ಕಲೆ, ಜಿಲ್ಲೆಯ ತೋಟಗಾರಿಕೆ ಬೆಳೆಗಳ ಪರಿಚಯ ಫಲಪುಷ್ಪ ಪ್ರದರ್ಶನ ದೊರೆಯುತ್ತಿದೆ.

ಹಂಪಿ ಉತ್ಸವದಲ್ಲಿ ಸುಗ್ಗಿ ಸಂಭ್ರಮ : ಸುಗ್ಗಿ ಸಂಭ್ರಮ, ಕೃಷಿ ವಸ್ತುಗಳ ಪ್ರದರ್ಶನ ನಾಡಿನ ರೈತರ ಬದುಕನ್ನು ಅನಾವರಣಗೊಳಿಸಿತು. ಪಾರಂಪರಿಕ ಹಾಗೂ ಆಧುನಿಕ ಕೃಷಿ ಪದ್ಧತಿಗಳ ಸಂಯೋಗದೊಂದಿಗೆ ಸುಸ್ಥಿರ ಕೃಷಿ ಅಭಿವೃದ್ಧಿಯನ್ನು ಸಾಧ್ಯತೆಯನ್ನು ವಸ್ತುಪ್ರದರ್ಶನ ಸಾರುತ್ತಿದೆ. ಸುಗ್ಗಿ ಸಂಭ್ರಮಕ್ಕೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ದವಸ ಧಾನ್ಯಗಳ ರಾಶಿ ಪೂಜೆ ನೆರವೇರಿಸಿದರು. ಸುಗ್ಗಿ ಸಂಭ್ರಮದಲ್ಲಿ ಸಂಕ್ರಾಂತಿ ಹಬ್ಬ, ರಾಶಿಪೂಜೆ, ಬೀಜಗಳ ಒಕ್ಕಣೆ ಮಾಡುತ್ತಾ ಹಾಗೂ ಒಳಕಲ್ಲಿನಲ್ಲಿ ಧಾನ್ಯ ಬೀಸುತ್ತಾ ಜನಪದ ಗೀತೆ ಹಾಡುವ ಗ್ರಾಮೀಣ ಮಹಿಳೆಯರು, ಎತ್ತಿನ ಬಂಡಿ ಹಳ್ಳಿ ಸೊಗಡನ್ನು ಚಿತ್ರಣ ನೋಡುಗರ ಕಣ್ಣಿಗೆ ಕಟ್ಟಿಕೊಡುತ್ತಿವೆ. ಕೃಷಿ ವಸ್ತು ಪ್ರದರ್ಶನದಲ್ಲಿ ದೇಶಿ ಪಾರಂಪರಿಕ ಕೃಷಿ ಉತ್ಪನ್ನಗಳು ರೈತರ ಜೀವನ ತರೆದಿಡುತ್ತಿವೆ. ಕುಲಾಂತರಿ ಹಾಗೂ ವಿದೇಶಿ ಬೀಜಗಳ ನಡುವೆಯೂ ಜವಾರಿ ಹಾಗೂ ನಾಟಿ ಬೀಜ ಸಂಪತ್ತು, ಜೀವ ಹಾಗೂ ಸಸ್ಯ ವೈವಿಧ್ಯತೆ ಕಾಪಾಡುವ ಮಹತ್ವ ಸಾರುತ್ತಿವೆ.

ಮಾತಂಗ ಬೆಟ್ಟದ ತಪ್ಪಲಲ್ಲಿ 'ದರೋಜಿ ಕರಡಿ ಲೋಕ': ಐತಿಹಾಸಿಕ ಹಂಪಿ ಉತ್ಸವದ ಸಂಭ್ರಮದ ನಡುವೆ, ವಿಜಯನಗರ ಜಿಲ್ಲೆಯ ಸಮೃದ್ಧ ಜೀವ ವೈವಿಧ್ಯತೆಯನ್ನು ಪರಿಚಯಿಸುವ ಅರಣ್ಯ ಇಲಾಖೆಯ ವಸ್ತು ಪ್ರದರ್ಶನ ಮಳಿಗೆಯು ಪ್ರವಾಸಿಗರ ಮನಗೆಲ್ಲುತ್ತಿದೆ. ಮಾತಂಗ ಪರ್ವತದ ತಪ್ಪಲಿನ ಬಯಲಿನಲ್ಲಿ ನಿರ್ಮಿಸಲಾಗಿರುವ ಈ ಮಳಿಗೆಯು ಸದ್ಯ ಉತ್ಸವದ ಪ್ರಮುಖ ಆಕರ್ಷಣಾ ಕೇಂದ್ರವಾಗಿ ಹೊರಹೊಮ್ಮಿದೆ.

ಕರಡಿ ಧಾಮದ ಮರುಸೃಷ್ಟಿ

ಏಷ್ಯಾದಲ್ಲೇ ಮೊದಲನೆಯದು ಎನ್ನಲಾದ ಜಿಲ್ಲೆಯ ಹೆಮ್ಮೆಯ 'ದರೋಜಿ ಕರಡಿ ಧಾಮ'ವನ್ನು ಹಂಪಿಯ ಅಂಗಳದಲ್ಲಿ ಅರಣ್ಯ ಇಲಾಖೆ ಅತ್ಯಂತ ನೈಜವಾಗಿ ಮರುಸೃಷ್ಟಿಸಿದೆ. ಬೆಟ್ಟಗುಡ್ಡಗಳ ಸಾಲು, ಕಲ್ಲುಗಳ ನಡುವಿನ ಗುಹೆಗಳು ಮತ್ತು ಹಸಿರಿನ ಹೊದಿಕೆಯನ್ನು ಕಂಡು ಪ್ರವಾಸಿಗರು ಅಕ್ಷರಶಃ ಅಚ್ಚರಿ ವ್ಯಕ್ತಪಡಿಸುತ್ತಿದ್ದಾರೆ. ಕರಡಿಧಾಮಕ್ಕೆ ಭೇಟಿ ನೀಡಲು ಸಾಧ್ಯವಾಗದವರಿಗೆ, ಈ ಮಳಿಗೆಯು ಅದರ ಸಂಪೂರ್ಣ ಚಿತ್ರಣವನ್ನು ಕಣ್ಣಮುಂದೆ ತರುತ್ತಿದೆ.

ಡ್ರೋನ್ ಮೂಲಕ ವಿಜಯನಗರ ವೈಭವ ಮರುಸೃಷ್ಟಿ

ಹಂಪಿ: ಹಂಪಿ ಉತ್ಸವದ ಉದ್ಘಾಟನಾ ಸಮಾರಂಭದ ಅಂಗವಾಗಿ ಆಯೋಜಿಸಲಾಗಿದ್ದ ಅತ್ಯಾಧುನಿಕ ಡ್ರೋನ್ ಶೋ, ವಿಜಯನಗರದ ಗತವೈಭವವನ್ನು ಬಾನಂಗಳದಲ್ಲಿ ಅನಾವರಣಗೊಳಿಸಿತು.

ಆಧುನಿಕ ತಂತ್ರಜ್ಞಾನ ಮತ್ತು ಸಾಂಸ್ಕೃತಿಕ ಪರಂಪರೆಯ ಈ ಅಪೂರ್ವ ಸಂಗಮವು ನೆರೆದಿದ್ದ ಸಹಸ್ರಾರು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು. ನೂರಾರು ಡ್ರೋನ್‌ಗಳು ಆಕಾಶದಲ್ಲಿ ಹಂಪಿಯ ಪ್ರಸಿದ್ಧ ಕಲ್ಲಿನ ರಥ, ಭವ್ಯವಾದ ವಿರೂಪಾಕ್ಷ ದೇವಾಲಯ ಮತ್ತು ರೌದ್ರಾವತಾರದಲ್ಲಿರುವ ಉಗ್ರ ನರಸಿಂಹನ ಮೂರ್ತಿಗಳನ್ನು ಕಲಾತ್ಮಕವಾಗಿ ಬಿಂಬಿಸಿದವು. ವಿಜಯನಗರ ಸಾಮ್ರಾಜ್ಯವನ್ನು ಜಗತ್ತಿಗೆ ಪರಿಚಯಿಸಿದ ಅಪ್ರತಿಮ ವೀರ, ಕನ್ನಡಿಗರ ಹೆಮ್ಮೆಯ ಸಾಮ್ರಾಟ ಶ್ರೀ ಕೃಷ್ಣದೇವರಾಯರ ಭಾವಚಿತ್ರವು ಆಕಾಶದಲ್ಲಿ ಮೂಡಿಬಂದಾಗ ಜನರಿಂದ ಹರ್ಷೋದ್ಗಾರ ವ್ಯಕ್ತವಾಯಿತು. ಇದರೊಂದಿಗೆ ಪ್ರವಾಸಿಗರ ಆಕರ್ಷಣೀಯ ಕೇಂದ್ರವಾಗಿರುವ ಹಂಪಿಯ ದರೋಜಿ ಕರಡಿ ಧಾಮ ಮತ್ತು ಬಡವಿ ಲಿಂಗದ ಚಿತ್ರಣಗಳು ಪ್ರದರ್ಶನದ ಮೆರುಗನ್ನು ಹೆಚ್ಚಿಸಿದವು.

ಪ್ರದರ್ಶನವು ಕೇವಲ ಇತಿಹಾಸಕ್ಕೆ ಸೀಮಿತವಾಗದೆ, ರಾಜ್ಯ ಸರಕಾರದ ಜನಪ್ರಿಯ ಗ್ಯಾರಂಟಿ ಯೋಜನೆಗಳಾದ ಶಕ್ತಿ ಮತ್ತು ಅನ್ನಭಾಗ್ಯ ಸೇರಿದಂತೆ ಪಂಚ ಯೋಜನೆಗಳ ಕುರಿತು ಮಾಹಿತಿಯನ್ನು ಸ್ಫುಟವಾಗಿ ಪ್ರದರ್ಶಿಸಿತು. ಕೊನೆಯಲ್ಲಿ ಬಡವರ ಮತ್ತು ಕಲಾವಿದರ ಆಶಾಕಿರಣವೆಂದು ಬಣ್ಣಿಸಲಾದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಭಾವಚಿತ್ರವನ್ನು ಡ್ರೋನ್ ಮೂಲಕ ಬಾನಂಗಳದಲ್ಲಿ ಚಿತ್ರಿಸಿ ಗೌರವ ಸಲ್ಲಿಸಲಾಯಿತು.

ಇದರೊಂದಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಎಚ್.ಕೆ.ಪಾಟೀಲ್, ಸಚಿವ ಶಿವರಾಜ ತಂಗಡಿ, ಜಮೀರ್ ಅಹಮ್ಮದ್ ಖಾನ್, ಶಾಸಕ ಎಚ್.ಆರ್.ಗವಿಯಪ್ಪ, ನಟ ದಿವಂಗತ ಪುನೀತ್ ರಾಜ್ ಕುಮಾರ್ ಚಿತ್ರಗಳು ಡ್ರೋನ್ ಸಂಯೋಜನೆಯಲ್ಲಿ ಮೂಡಿಬಂದವು. ಈ ವರ್ಣರಂಜಿತ ಡ್ರೋನ್ ಶೋ ಪ್ರದರ್ಶನವು ಹಂಪಿಯ ಸಾಂಸ್ಕೃತಿಕ ಹಿರಿಮೆಗೆ ಹೊಸ ಆಯಾಮವನ್ನು ನೀಡುವಲ್ಲಿ ಯಶಸ್ವಿಯಾಯಿತು. ಎ.ಐ.ಆರ್. ಪಿಕ್ಸೆಲ್ ಕಂಪನಿಯ ತಂತ್ರಜ್ಞರು ಡ್ರೋನ್ ಗಳ ಸಂಯೋಜನೆಯ ನಿರ್ವಹಣೆ ಮಾಡಿದರು. ಉತ್ಸವ 3 ದಿನಗಳ ಕಾಲವೂ ಡ್ರೋನ್ ಶೋ ನಡೆಯಲಿದೆ.

ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ, ಸ್ಮರಣ ಸಂಚಿಕೆ ಬಿಡುಗಡೆ | ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ ನಾಯ್ಕ್

ಮಕ್ಕಳಿಗೆ ಪಠ್ಯದ ಜತೆ ಉತ್ತಮ ಮೌಲ್ಯ ರೂಢಿಸಿ

ಬನವಾಸಿ: ವಿದ್ಯಾರ್ಥಿಗಳು ಶಿಸ್ತು, ಸಂಯಮ, ಸಂಸ್ಕಾರದಂತಹ ಉತ್ತಮ ಮೌಲ್ಯ ರೂಢಿಸಿಕೊಂಡು ಸಮಾಜದಲ್ಲಿ ಉತ್ತಮ ಪ್ರಜೆಗಳಾಗಬೇಕು. ಮಕ್ಕಳ ಅಭಿವೃದ್ಧಿಗೆ ಸರಕಾರಿ ಶಾಲೆಗಳೇ ಕಾರಣವಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ ನಾಯ್ಕ್ ಹೇಳಿದರು.

ಇಲ್ಲಿಯ ಪಿ.ಎಂ.ಶ್ರೀ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಮತ್ತು ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಜ್ಞಾನಾರ್ಜನೆ ದೊರಕುವುದು ಸರಕಾರಿ ಶಾಲೆಯಲ್ಲಿ ಮಾತ್ರ. ಇತ್ತೀಚಿನ ದಿನಗಳಲ್ಲಿ ಪೋಷಕರು ಖಾಸಗಿ ಶಾಲೆಗಳ ಮೇಲೆ ವ್ಯಾಮೋಹ ಹೆಚ್ಚಾಗಿದೆ. ಸರಕಾರಿ ಶಾಲೆಯಲ್ಲಿ ಕಲಿಕೆಯಿಲ್ಲ ಎಂಬ ಕೀಳರಿಮೆ ಎಲ್ಲರನ್ನೂ ಕಾಡುತ್ತಿದೆ. ಈ ಮನಸ್ಥಿತಿಯಿಂದ ಪೋಷಕರಲ್ಲಿ ಬದಲಾಗಬೇಕಾಗಿದೆ.

ಕಳೆದ ವರ್ಷ ತಾಲೂಕಿನ 22 ಸರಕಾರಿ ಶಾಲೆಗಳು ರ್‍ಯಾಂಕ್ ಪಡೆದುಕೊಂಡಿವೆ. ಪ್ರತಿಯೊಬ್ಬ ಪಾಲಕರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಯಲ್ಲಿ ದಾಖಲಾತಿ ಮಾಡಿಕೊಳ್ಳುವಂತೆ ಮನವಿ ಮಾಡಿದರು.

ಬನವಾಸಿ ಪೊಲೀಸ್ ಠಾಣೆಯ ಪಿಎಸ್‌ಐ ಮಾಂತೇಶ ಕುಂಬಾರ ಮಾತನಾಡಿ, ಸರಕಾರಿ ಶಾಲೆಯಲ್ಲಿ ಕಲಿಯುವಾಗ ಸಿಗುವ ಮಧುರ ಕ್ಷಣ ಎಲ್ಲಿಯೂ ಸಿಗುವುದಿಲ್ಲ. ಸರಕಾರಿ ಶಾಲೆಗಳ ಬಗ್ಗೆ ಕೀಳರಿಮೆ ಬೇಡ. ಜೀವನದ ಪಾಠವನ್ನು ಸರಕಾರಿ ಶಾಲೆಗಳಲ್ಲಿ ಮಾತ್ರ ಕಲಿಯಬಹುದಾಗಿದೆ. ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಹೊಂದುವಲ್ಲಿ ಪೋಷಕರ ಪಾತ್ರ ಮುಖ್ಯ. ಪೋಷಕರು ಮನೆಯಲ್ಲಿ ಮಕ್ಕಳ ಚಟುವಟಿಕೆಗಳ ಬಗ್ಗೆ ಗಮನಹರಿಸುತ್ತಿರಬೇಕು. ವಿದ್ಯಾರ್ಥಿಗಳು ತಮಗೆ ಯಾವುದೇ ರೀತಿಯ ತೊಂದರೆ ಯಾಗುತ್ತಿದ್ದರೆ ಪೊಲೀಸ್ ಇಲಾಖೆಯ ಸಹಾಯವಾಣಿಗೆ ಕರೆ ಮಾಡಬಹುದು ಎಂದರು.

ಪಿ.ಎಂ.ಶ್ರೀ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಮತ್ತು ಸ್ಮರಣ ಸಂಚಿಕೆ ಬಿಡುಗಡೆಗೊಳಿಸಲಾಯಿತು.

ಶಾಲಾ ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಶಿವಾಜಿ ಕಾಳೇರಮನೆ ಮಾತನಾಡಿ, ಶಾಸಕರ, ಸಾರ್ವಜನಿಕರ, ಹಳೆ ವಿದ್ಯಾರ್ಥಿಗಳ, ಪೋಷಕರ ಸಹಕಾರದಿಂದ ವಿದ್ಯಾಸಂಸ್ಥೆಯು ಉತ್ತಮ ಹಾದಿಯಲ್ಲಿ ಸಾಗುತ್ತಿದೆ.

ಹಲವು ವರ್ಷಗಳಿಂದ ಶಾಲೆಯು ಸಮಾಜಕ್ಕೆ ಉತ್ತಮ ವಿದ್ಯಾರ್ಥಿಗಳನ್ನು ನೀಡುತ್ತಿದೆ. ಈಗಾಗಲೇ ಸಹಸ್ರಾರು ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಪಡೆದು ಉನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಇದು ಶಾಲೆಗೆ ಹೆಮ್ಮೆಯ ವಿಚಾರ. ಶಾಲೆ ಇನ್ನಷ್ಟು ಅಭಿವೃದ್ಧಿ ಹೊಂದಬೇಕಿದೆ. ಎಲ್ಲರ ಸಹಕಾರ ಅತ್ಯಗತ್ಯವಾಗಿದೆ ಎಂದರು.

ಅಧ್ಯಕ್ಷತೆವಹಿಸಿದ್ದ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಸುರೇಶ ಕಬ್ಬೇರ, ಪದವಿ ಪೂರ್ವ ಕಾಲೇಜಿನ ಉಪಾಧ್ಯಕ್ಷ ಸಿದ್ದಲಿಂಗೇಶ ಉಗ್ರಾಣದ, ಪತ್ರಕರ್ತ ಉದಯಕುಮಾರ್ ಕಾನಳ್ಳಿ ಮಾತನಾಡಿದರು.

ಈ ಸಂದರ್ಭದಲ್ಲಿ ಶಾಲಾ ಅಭಿವೃದ್ಧಿ ಸಮಿತಿಯ ವತಿಯಿಂದ ಸಾಧಕರನ್ನು ಸತ್ಕರಿಸಲಾಯಿತು.

ಕಾರ್ಯಕ್ರಮದಲ್ಲಿ ಸಿ.ಆರ್.ಪಿ ಸುರೇಶ ಕಮ್ಮಾರ, ವ್ಯವಸಾಯ ಸೇವಾ ಸಹಕಾರಿ ಸಂಘದ ಉಪಾಧ್ಯಕ್ಷ ಸುಭಾಷ್ ಕಾಟೇನಳ್ಳಿ, ಶಶಿಕಲಾ, ನಿಕಟಪೂರ್ವ ಸಿಆರ್‌ಪಿ ದಿವ್ಯಾಶ್ರೀ ಕಾನಳ್ಳಿ, ಸಂಪನ್ಮೂಲ ವ್ಯಕ್ತಿ ದೀಪಕ್, ಈರಣ್ಣ ಕಬ್ಬೂರ, ಅಕ್ಷಯ ಶೆಟ್ಟಿ, ಗಿರೀಶ್ ಬೆಲ್ಲದ ಹಾಗೂ ಶಾಲಾ ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳು, ಶಾಲಾ ಶತಮಾನೋತ್ಸವ ಸಮಿತಿಯ ಪದಾಧಿಕಾರಿಗಳು, ಪೋಷಕರು, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಶಾಲಾ ಮಕ್ಕಳಿಂದ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮ ಜನಮನ ಸೆಳೆಯಿತು.

ಕಾರ್ಯಕ್ರಮವನ್ನು ಶಿಕ್ಷಕರಾದ ನರಸಿಂಹ ಹರಿಕಾಂತ ನಿರೂಪಿಸಿದರು. ಮುಖ್ಯೋಪಾಧ್ಯಾಯಿನಿ ಶೋಭ ಕಾನಡೆ ಸ್ವಾಗತಿಸಿದರು. ಪ್ರಶಾಂತ ಕಬ್ಬೇರ ವರದಿವಾಚಿಸಿದರು. ಮಂಜುಳ ಉಪ್ಪಾರ ವಂದಿಸಿದರು.

> **ಖಾಸಗಿ ಶಾಲೆಗಳಿಗೆ ಹೋಲಿಸಿದರೆ ನಮ್ಮ ಸರಕಾರಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ. ಖಾಸಗಿ ಶಾಲೆಗಳಿಗಿಂತ ಉತ್ತಮ ಗುಣಮಟ್ಟದ ಶಿಕ್ಷಕವರ್ಗ ಸರಕಾರಿ ಶಾಲೆಯಲ್ಲಿದೆ. ಪಿ.ಎಮ್.ಶ್ರೀ ಶಾಲೆಯು ಸಕಲ ಸೌಲಭ್ಯಗಳನ್ನು ಹೊಂದಿದ್ದು ಎಲ್.ಕೆ.ಜಿ ಯುಕೆಜಿಯಿಂದ ಪ್ರಾರಂಭವಾಗಿ ಮುಂದಿನ ದಿನಗಳಲ್ಲಿ ಪಿಯುಸಿ ತನಕ ಮುಂದುವರಿಯಲಿದೆ. ಗುಣಮಟ್ಟದ ಶಿಕ್ಷಣವನ್ನು ಸರಕಾರಿ ಶಾಲೆಗಳು ನೀಡುತ್ತಿವೆ.**
> **- ನಾಗರಾಜ ನಾಯ್ಕ್,** ಕ್ಷೇತ್ರ ಶಿಕ್ಷಣಾಧಿಕಾರಿ

ಬನಹಟ್ಟಿ ಅಂಗನವಾಡಿಯಲ್ಲಿ ನರ್ಸರಿ ಶಿಕ್ಷಣ ಆರಂಭ

ನರಗುಂದ: ಕರ್ನಾಟಕ ಸರಕಾರದ ನಿರ್ದೇಶನದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ದಿ ಯೋಜನೆ ಅಡಿಯಲ್ಲಿ ತಾಲೂಕಿನ ಬನಹಟ್ಟಿ ಗ್ರಾಮದ 115 ನೇ ಅಂಗನವಾಡಿ ಕೇಂದ್ರದಲ್ಲಿ ಎಲ್ಕೆಜಿ, ಯುಕೆಜಿ ಪ್ರಾರಂಭೋತ್ಸವ ಜರುಗಿತು.

ಗ್ರಾ.ಪಂ ಮಾಜಿ ಅಧ್ಯಕ್ಷ ಸಿ.ವಿ.ಜಾಧವ ಅವರ ಅಧ್ಯಕ್ಷತೆಯಲ್ಲಿ ಸರಸ್ವತಿ ಪೂಜೆ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು. ಪ್ರಾಸ್ತಾವಿಕವಾಗಿ ಮೇಲ್ವಿಚಾರಕಿ ಶಕುಂತಲಾ ಗಣಿ ಮಾತನಾಡಿ, ಅಂಗನವಾಡಿ ಕೇಂದ್ರಗಳಲ್ಲಿ ಎಲ್.ಕೆ.ಜಿ ಯು.ಕೆ.ಜಿ ಆರಂಭವು ಮಕ್ಕಳಲ್ಲಿ ನವಚೈತನ್ಯ ಮೂಡಿಸುವಂತಿದೆ, ಮಕ್ಕಳಿಗೆ ಶಿಸ್ತು ಮೂಡಿಸುವ ಸಮವಸ್ತ್ರ, ಕಲಿಕಾ ಪುಸ್ತಕ, ವಾಟರ್‌ಬಾಟಲ್, ಸ್ಕೂಲ್ ಬ್ಯಾಗ ಇವುಗಳ ಸಮೇತ ಟಿವಿ ಮೂಲಕ ಮಕ್ಕಳಿಗೆ ಮನರಂಜನೆ, ಶಿಕ್ಷಣ ನೀಡುವದು ವಿಶಿಷ್ಠವಾಗಿದೆ ಎಂದರು.

ಗ್ರಾ ಪಂಯಿಂದ ಮಕ್ಕಳಿಗೆ ಕುರ್ಚಿ ಹಾಗೂ ಆಟಿಕೆ ಸಾಮಾನುಗಳ ವಿತರಣೆ ನಡೆಯಿತು. ಕಳಕಪ್ಪ ಕೊಪ್ಪದ, ರುದ್ರಪ್ಪ ಹಂಡಿ ಮಕ್ಕಳಿಗೆ ಸ್ಕೂಲ್ ಬ್ಯಾಗ ವಿತರಿಸಿದರು. ಶ್ರೀಕಾಂತ ಕಲ್ಲಾಪೂರ ಪುಸ್ತಕ ಸಂಗ್ರಹಿಸುವ ರ್‍ಯಾಕ್ ಕೊಡುಗೆಯಾಗಿ ನೀಡಿದರು.

ಮುಖ್ಯ ಅತಿಥಿಗಳಾಗಿ ಮಾಜಿ ಗ್ರಾಪಂ ಸದಸ್ಯರಾದ ಪಾರವ್ವ ಗೌಡಪ್ಪಗೌಡ್ರ, ಬಿ.ಸಿ.ಸಂಶಿ, ಗ್ರಾಪಂ ಕಾರ್ಯದರ್ಶಿ ಎಮ್.ಎಮ್.ಪೂಜಾರ, ಪೋಷಣ್ ಕಾರ್ಯಕ್ರಮ ಸಂಯೋಜಕ ಮಂಜುನಾಥ ಗುಗ್ಗರಿ, ಕಾರ್ಯಕರ್ತೆ ಯರಾದ ಎಮ್.ವಿ. ಪ್ರಭುಗೌಡ್ರ, ಬಿ.ಬಿ.ಮಾದರ, ಬಿ.ಎಚ್. ಕ್ಯಾರಕೊಪ್ಪ, ಉಮಾ ಪೂಜಾರ, ಮಕ್ಕಳ ಪಾಲಕರು ಭಾಗವಹಿಸಿದ್ದರು. ಬಿ.ಎಸ್. ಕೊಡ್ಲಿವಾಡ ಕಾರ್ಯಕ್ರಮ ನಿರೂಪಿಸಿದರು.

ಕರಾವಳಿಯ ಅಭಿವೃದ್ಧಿಗೆ ಒತ್ತು

ಮೂರು ಜಿಲ್ಲೆಗಳ ಜನಪ್ರತಿನಿಧಿಗಳಿಂದ ಸರಕಾರಕ್ಕೆ ಆಗ್ರಹ

ಕಾರವಾರ: ಜಿಲ್ಲೆಗಳ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯ ಅನುದಾನವನ್ನು ಮುಂದಿನ ಬಜೆಟನಲ್ಲಿ ನೀಡಬೇಕೆಂದು ಮೂರು ಜಿಲ್ಲೆಗಳ ಜನಪ್ರತಿನಿಧಿಗಳು ಆಗ್ರಹಿಸಿದ್ದಾರೆ.

ಸ್ಪೀಕರ್‌ಯು.ಟಿ.ಖಾದರ್‌ಅವರ ಅಧ್ಯಕ್ಷತೆಯಲ್ಲಿ ಮಂಗಳೂರು ಜಿಲ್ಲಾಧಿಕಾರಿ ಕಚೇರಿ 'ಪ್ರಜಾ ಸೌಧ'ದಲ್ಲಿ ನಡೆದ ಕರಾವಳಿ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಸಚಿವರು, ಶಾಸಕರು ಭಾಗವಹಿಸಿ, ಕರಾವಳಿಯ ಅಭಿವೃದ್ಧಿಯನ್ನು ಸಮಗ್ರವಾಗಿ ಪರಿಗಣಿಸಿ, ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರಬೇಕೆಂದು ತಿಳಿಸಿದರು.

ಸ್ಪೀಕರ್‌ಯು.ಟಿ.ಖಾದರ್‌ಮಾತನಾಡಿ, ಕಡಲಕೊರತೆ ನಿಯಂತ್ರಣಕ್ಕೆ ತೀರ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ರಸ್ತೆಗಳನ್ನು ಎತ್ತರದಲ್ಲಿ ನಿರ್ಮಿಸಿದರೆ, ಕೊರೆತ ತಡೆಯುವುದರೊಂದಿಗೆ, ಸಂಚಾರ ವ್ಯವಸ್ಥೆ ಸುಧಾರಣೆಗೂ ಸಹಕಾರಿಯಾಗಲಿದೆ. ಇದು ಇಲ್ಲಿನ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಗೂ ಸಹಕಾರಿಯಾಗಲಿದೆ ಎಂದು ಹೇಳಿದರು. ಪಶ್ಚಿಮ ವಾಹಿನಿ ಯೋಜನೆಗೆ ಇನ್ನಷ್ಟು ಅನುದಾನ ಅಗತ್ಯವಿದೆ. ಉಳ್ಳಾಲ ಕೋಟೆಪುರ ಜೆಟ್ಟಿ ನಿರ್ಮಾಣದಿಂದ ಮಂಗಳೂರು ಬಂದರಿನ ಮೇಳೆ ಒತ್ತಡ ಕಡಿಮೆಯಾಗಲಿದೆ ಎಂದರು.

ಮೂಡಬಿದ್ರೆ ಶಾಸಕ ಉಮಾನಾಥ ಕೋಟ್ಯಾನ್ ಮಾತನಾಡಿ, ಕಡಲಕೊರೆತಕ್ಕೆ ಶಾಶ್ವತ ಪರಿಹಾರ ಒದಗಿಸಲು ಒತ್ತು ನೀಡಬೇಕು. ಪ್ರವಾಸೋದ್ಯಮ ಉತ್ತೇಜನಕ್ಕೆ ವಾಟರ್‌ಮೆಟ್ರೋ ಯೋಜನೆಯನ್ನು ಜಾರಿಗೆ ತರಬೇಕು. ಪ್ರಮುಖ ಪ್ರವಾಸಿ ತಾಣಗಳ ಅಬಿವೃದ್ಧಿಗೆ ಅನುದಾನ ಇಡಬೇಕು ಎಂದು ಹೇಳಿದರು.

ಪ್ರಜಾ ಸೌಧ'ದಲ್ಲಿ ನಡೆದ ಕರಾವಳಿ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಮೂರು ಜಿಲ್ಲೆಗಳ ಸಚಿವರು, ಶಾಸಕರು ಭಾಗವಹಿಸಿ ಮಾತನಾಡಿದರು.

> **ಕರಾವಳಿಯ 3 ಜಿಲ್ಲೆಗಳ 13 ಮೀನುಗಾರಿಕೆ ಬಂದರುಗಳ ವ್ಯಾಪ್ತಿಯಲ್ಲಿ 70 ಕೋಟಿ ರು. ವೆಚ್ಚದಲ್ಲಿ ಹೂಳೆತ್ತಲು ನಿರ್ಧರಿಸಲಾಗಿದೆ. ಈ ಬಗ್ಗೆ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿದ್ದು, ಅನುದಾನ ಸಿಗುವ ನಿರೀಕ್ಷೆ ಇದೆ. ಕರಾವಳಿ ಅಭಿವೃದ್ಧಿ ಪ್ರಾಧಿಕಾರದಿಂದ ವಿವಿಧ ಸ್ಥಳಗಳಲ್ಲಿ ಮೀನು ಮಾರುಕಟ್ಟೆ ನಿರ್ಮಾಣ ಕೈಗೆತ್ತಿಕೊಳ್ಳಬೇಕು.**
> **- ಮಂಕಾಳ ಎಸ್.ವೈದ್ಯ,** ಸಚಿವ

> ### ಅಳಿವೆಗಳ ಹೂಳೆತ್ತಲು ಡ್ರೆಜ್ಜಿಂಗ್
> **ಮಾಡಲು ಗುತ್ತಿಗೆ ಪ್ರಕ್ರಿಯೆ ವಿಳಂಭವಾಗುತ್ತಿದೆ. ಡ್ರೆಜ್ಜಿಂಗ್ ಗುತ್ತಿಗೆ ನೀಡುವ ಬದಲು ರಾಜ್ಯ ಸರಕಾರವೇ ಡ್ರೆಜ್ಜಿಂಗ್ ಯಂತ್ರ ಖರೀದಿಸಬೇಕು. ದೇಶದ ಪಶ್ಚಿಮ ಕರಾವಳಿಯಲ್ಲಿ ಸಮಾನ ಮೀನುಗಾರಿಕಾ ನೀತಿ ಜಾರಿಯಾಗಬೇಕು. ಪ್ರಸ್ತುತ ಮೀನುಗಾರಿಕೆ ರಜೆ ಸೇರಿದಂತೆ ಒಂದೊಂದು ರಾಜ್ಯದಲ್ಲಿ ವಿಭಿನ್ನ ನೀತಿಗಳಿದ್ದು, ಕರ್ನಾಟಕದ ಮೀನುಗಾರರಿಗೆ ತೀವ್ರ ತೊಂದರೆಯಾಗುತ್ತಿದೆ.**

ಕುಂದಾಪುರ ಶಾಸಕ ಕಿರಣ್ ಕೊಡ್ಗಿ ಮಾತನಾಡಿ, ಕರಾವಳಿ ನಿಯಂತ್ರಣ ವಲಯ (ಸಿಆರ್‌ಝಡ್) ಕಚೇರಿಯನ್ನು ಬೆಂಗಳೂರಿನಿಂದ ಸ್ಥಳಾಂತರಿಸಿ, ಮಂಗಳೂರು ಅಥವಾ ಉಡುಪಿಯಲ್ಲಿ ಸ್ಥಾಪಿಸಬೇಕು. ಇದರಿಂದ ವಿವಿಧ ಸಿಆರ್‌ಝಡ್ ಸಂಬಂಧಿತ ಅನುಮತಿಗಳಿಗೆ ದೀರ್ಘಕಾಲ ಕಾಯುವುದು ತಪ್ಪಲಿದೆ. ಕರಾವಳಿಯಲ್ಲಿ ಕೃಷಿ ವಿಶ್ವವಿದ್ಯಾನಿಲಯ ಅಗತ್ಯವಿದ್ದು, ಬ್ರಹ್ಮಾವರದಲ್ಲಿರುವ ಕೃಷಿ ವಿಜ್ಞಾನ ಕಾಲೇಜನ್ನು ವಿಶ್ವವಿದ್ಯಾನಿಲಯವಾಗಿ ಮೇಲ್ದರ್ಜೆಗೇರಿಸಬಹುದಾಗಿದೆ ಎಂದು ಹೇಳಿದರು.

ಉಡುಪಿ ಶಾಸಕ ಯಶಪಾಲ್ ಸುವರ್ಣ ಮಾತನಾಡಿ, ಮೀನುಗಾರಿಕೆ ಮತ್ತು ಬಂದರು ಇಲಾಖೆಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸುತ್ತಿದ್ದು, ಇದರಿಂದ ಮೀನುಗಾರಿಕಾ ಬಂದರುಗಳ ಅಭಿವೃದ್ಧಿಗೆ ತೊಡಕಾಗುತ್ತಿದೆ. ಈ ಎರಡೂ ಇಲಾಖೆಗಳನ್ನು ವಿಲೀನಗೊಳಿಸಿ, ಎಂಜಿನಿಯರಿಂಗ್ ವಿಭಾಗವನ್ನು ಪ್ರಾರಂಭಿಸಬೇಕು. ಇದರಿಂದ ಬಂದರುಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಯನ್ನು ತ್ವರಿತಗೊಳಿಸಬಹುದು ಎಂದರು.

ವಿಧಾನಪರಿಷತ್ ಸದಸ್ಯ ಡಾ.ಧನಂಜಯ ಸರ್ಜಿ ಮಾತನಾಡಿ, ಕ್ಯಾನ್ಸರ್‌ಮತ್ತು ಹೃದ್ರೋಗಕ್ಕೆ ಸಂಬಂಧಿಸಿದ ಉನ್ನತ ಸರಕಾರಿ ಆಸ್ಪತ್ರೆ ಕರಾವಳಿಯಲ್ಲಿ ಅಗತ್ಯವಿದೆ. ಇದರಿಂದ ಮಿತದರದಲ್ಲಿ ಸಾರ್ವಜನಿಕರಿಗೆ ಉನ್ನತ ಚಿಕಿತ್ಸೆ ದೊರಕಲಿದೆ ಎಂದರು. ರಾಜ್ಯದ ವಿವಿಧ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕರಾವಳಿಗೆ ಬರುತ್ತಿರುವುದರಿಂದ ಹಾಸ್ಟೆಲ್ಗಳನ್ನು ಹೆಚ್ಚು ಸ್ಥಾಪಿಸಬೇಕು ಎಂದು ಅವರು ಹೇಳಿದರು.

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಮಾತನಾಡಿ, ಅಡಿಕೆ ಬೆಳೆಗಾರರಿಗೆ ವಿಶೇಷ ಪ್ಯಾಕೇಜನ್ನು ಮುಂದಿನ ಬಜೆಟ್ನಲ್ಲಿ ಪ್ರಕಟಿಸಬೇಕು. ರಬ್ಬರ್‌ಬೆಳೆಗೆ ನಿರ್ದಿಷ್ಟ ಸ್ಥಾನಮಾನ ನೀಡಬೇಕು. ಕಡವ ತಾ. ಕೊಲ್ಯದಲ್ಲಿ ನಿಮಿಸಿರುವ ಪಶುಸಂಗೋಪನಾ ಕಾಲೇಜಿಗೆ ಬೋಧಕ ಹುದ್ದೆಗಳನ್ನು ಮಂಜೂರುಗೊಳಿಸಬೇಕು ಎಂದರು.

ಮಂಗಳೂರು ಉತ್ತರ ಶಾಸಕ ಭರತ್ ಶೆಟ್ಟಿ ಮಾತನಾಡಿ, ನಗರದಲ್ಲಿ ರಾಜಾ ಕಾಲುವೆಗಳು ನದಿ ಸೇರುವ ಸ್ಥಳಗಳಲ್ಲಿ ಡ್ರೆಜ್ಜಿಂಗ್ ಆಗದೇ, ಮಳೆಗಾಲದಲ್ಲಿ ನೆರೆ ಉಂಟಾಗುತ್ತಿದೆ. ಕಳೆದ ಕೆಲವು ವರ್ಷಗಳಿಂದ ಇದು ಸಂಭವಿಸುತ್ತಿದ್ದು, ಇದಕ್ಕೆ ಪರಿಹಾರ ಕಲ್ಪಿಸಬೇಕು ಎಂದು ಹೇಳಿದರು.

ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ.ಗಫೂರ್‌ಮಾತನಾಡಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ ಉಪಸ್ಥಿತರಿದ್ದರು. ಮಂಡಳಿಯ ಕಾರ್ಯದರ್ಶಿ ಪ್ರದೀಪ್ ಡಿಸೋಜ, ಮಂಡಳಿಯ ಅಧಿಕಾರಿಗಳಾದ ಮಂಜುನಾಥ ಶೆಟ್ಟಿ, ಶ್ರೀಧರ್‌ಟಿ.ಡಿ.ಮುಹಮ್ಮದ್ ತೌಸೀಫ್, ಹರಿಹರ ವಿ ಹರಿಕಾಂತ್, ಪವನ್ ಕುಮಾರ್‌ಉಪಸ್ಥಿತರಿದ್ದರು.

ಶ್ರೀ ಕದಂಬೇಶ್ವರ ಲಕ್ಷ ದೀಪೋತ್ಸವ

ಶಿರಸಿ: ಮಹಾಶಿವರಾತ್ರಿ ಉತ್ಸವದ ನಿಮಿತ್ತ ತಾಲೂಕಿನ ಕಡಬಾಳದ ಶ್ರೀ ಕದಂಬೇಶ್ವರ ದೇವಾಲಯದಲ್ಲಿ ಲಕ್ಷದೀಪೋತ್ಸವ ಹಾಗೂ ರುದ್ರಾಭಿಮಂತ್ರಿತ ಕಲಾಶಾಭಿಷೇಕ ಕಾರ್ಯಕ್ರಮ ಭಾನುವಾರ ನಡೆಯಲಿದೆ ಎಂದು ದೇವಸ್ಥಾನ ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

ಬನವಾಸಿಯ ಶ್ರೀ ಮಧುಕೇಶ್ವರ ದೇವರ ಪ್ರತಿಬಿಂಬದಂತೆ ಇರುವ ಉತ್ತರಕನ್ನಡ ಜಿಲ್ಲೆಯ ಎರಡನೇ ಅತಿದೊಡ್ಡ ಶಿವಲಿಂಗವೆಂಬ ಹೆಗ್ಗಳಿಕೆಯ ಕಡಬಾಳದ ಶ್ರೀ ಕದಂಬೇಶ್ವರ ದೇವರ ಸನ್ನಿಧಿಯಲ್ಲಿ ಶಿವರಾತ್ರಿಯಂದು ಮುಂಜಾನೆ 6 ಗಂಟೆಯಿಂದ ಮರುದಿನ ಮುಂಜಾನೆ 6 ಗಂಟೆಯವರೆಗೆ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಜಾಗರಣೆ ಕಾರ್ಯಕ್ರಮಗಳು ಜರುಗಲಿವೆ.

ಸಾವಿರಾರು ವರ್ಷಗಳ ಐತಿಹ್ಯ ಹೊಂದಿದ ಶ್ರೀ ಕದಂಬೇಶ್ವರ ದೇವಸ್ಥಾನವು ಕದಂಬ ಸಾಮ್ರಾಜ್ಯದ ಶ್ರದ್ಧಾಕೇಂದ್ರ ಎಂಬುದಕ್ಕೆ ಇಲ್ಲಿಯ ಶಿಲಾಶಾಸನ, ವೀರಗಲ್ಲು, ಕೋಟೆಯ ಭಗ್ನಾವಶೇಷಗಳೆ ಸಾಕ್ಷಿಯಾಗಿವೆ. ಕದಂಬರ ಕಾಲದಲ್ಲಿ ದೇವಾಲಯ ಜೀರ್ಣೋದ್ಧಾರಗೊಂಡು ಪ್ರಮುಖ ಪುಣ್ಯಕ್ಷೇತ್ರವಾಗಿತ್ತು. ಕಾಲಾನುನಂತರದಲ್ಲಿ ಬಾಲಾಲಯದಲ್ಲಿ ಪ್ರತಿಷ್ಠಾಪನೆಗೊಂಡಿದ್ದ ಶ್ರೀ ಕದಂಬೇಶ್ವರ ದೇವರನ್ನು ನೂತನ ಆಲಯದಲ್ಲಿ ವಿಜೃಂಭಣೆಯಿಂದ ಈ ಬಾರಿ ಪ್ರತಿಷ್ಠಾಪಿಸಲಾಗಿದೆ.

ಲಕ್ಷದೀಪೋತ್ಸವ: ಶ್ರೀ ಕದಂಬೇಶ್ವರನ ಸನ್ನಿಧಾನದಲ್ಲಿ ಬೆಳಗಿಸಲಾಗುವ ಪ್ರತಿಯೊಂದು ಹಣತೆಯಿಂದ ಭಜಕರ ಜೀವನದ ಅಂಧಕಾರ ಗಳೆಲ್ಲವೂ ಮರೆಯಾಗಿ ಮುಂದಿನ ಜೀವನವೆಲ್ಲ ಬೆಳಕಿನೆಡೆಗೆ ಸಾಗಲಿ ಎಂದು ಸಂಕಲ್ಪಿಸಿ ದೀಪೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಸಾಯಂಕಾಲ 6 ಗಂಟೆಯ ನಂತರದಲ್ಲಿ ಎರಡು ಹಂತದಲ್ಲಿ ಲಕ್ಷದೀಪವನ್ನು ಬೆಳಗಿಸಲಾಗುತ್ತದೆ.

ಈ ಕುರಿತು ಕಳೆದ ಹದಿನೈದು ದಿನಗಳಿಂದ ಗ್ರಾಮಸ್ಥರು ತಯಾರಿ ನಡೆಸುತ್ತಿದ್ದು ಸುಮಾರು ಅರ್ಧ ಎಕರೆಗೂ ಅಧಿಕ ಸ್ಥಳದಲ್ಲಿ 10 ಅಡಿ ಉದ್ದದ 2000ಕ್ಕೂ ಅಧಿಕ ಅಡಿಕೆ ದಬ್ಬೆಗಳಿಂದ ತಳಿಗಳನ್ನು ನಿರ್ಮಿಸಲಾಗಿದೆ. ತಳಿಗಳ ಮಧ್ಯೆ ಬೃಹತ್ ಶಿವಲಿಂಗ ಆಕೃತಿಯ ರಂಗೋಲಿಯಲ್ಲಿಯೂ ದೀಪ ಬೆಳಗಿಸಲಾಗುತ್ತಿದೆ.

ಸೋಷಿಯಲಿಸ್ಟ್ ಮನೆತನದ ಹಿನ್ನೆಲೆ, ತಂದೆ ಎಂ.ಪಿ.ಪ್ರಕಾಶರ ರಾಜಕೀಯ ಗರಡಿ ನೆಲೆ । ಪ್ರಥಮ ಸ್ಪರ್ಧೆಯಲ್ಲೇ ಪಕ್ಷೇತರರಾಗಿ ಗೆದ್ದು ವಿಧಾನಸಭೆಗೆ ಪ್ರವೇಶಿಸಿದ ಜನಪ್ರಿಯ ಶಾಸಕಿ

ಜನ ಮನ ಗೆದ್ದ ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್

ಹರಪನಹಳ್ಳಿ ವಿಧಾನ ಸಭಾ ಕ್ಷೇತ್ರದ ಜನಪ್ರಿಯ ಶಾಸಕಿಯಾದ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರು ಕರ್ನಾಟಕದ ಒಬ್ಬ ಪ್ರಬುದ್ಧ ಮಹಿಳಾ ರಾಜಕಾರಣಿ. ಅವರು ವಿಜಯನಗರ ಜಿಲ್ಲೆ ಹರಪನಹಳ್ಳಿ ವಿಧಾನ ಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಮೂಲಕ 2023 ರ ಕರ್ನಾಟಕ ವಿಧಾನಸಭೆಗೆ ಚುನಾಯಿತ ಸದಸ್ಯರಾಗಿದ್ದಾರೆ. ಅವರು 2023 ರ ವಿಧಾನಸಭೆ ಚುನಾವಣೆಯಲ್ಲಿ ಪಕ್ಷೇತರರಾಗಿ ಅಂದರೆ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದರು, ನಂತರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು.

ಸಮಾಜವಾದಿ ಮನೆತನ

ಎಂ.ಪಿ.ಲತಾ ಮಲ್ಲಿಕಾರ್ಜುನ್ ಅವರು ದಿವಂಗತ ಜನನಾಯಕ, ಮಾಜಿ ಉಪಮುಖ್ಯಮಂತ್ರಿ ಎಂ.ಪಿ. ಪ್ರಕಾಶ್ ಅವರ ಹಿರಿಯ ಪುತ್ರಿ. ಇವರು ತಮ್ಮ ತಂದೆಯ ಮತ್ತು ಅವರ ಸಹೋದರ ದಿ. ಎಂ.ಪಿ.ರವೀಂದ್ರ ಅವರ ರಾಜಕೀಯ ಪರಂಪರೆಯನ್ನು ಮುಂದುವರೆಸುತ್ತಿದ್ದು, ಹರಪನಹಳ್ಳಿ ಕ್ಷೇತ್ರದ ರಾಜಕಾರಣದಲ್ಲಿ ಸಕ್ರಿಯರಾಗಿದ್ದಾರೆ.

ಪ್ರಚಂಡ ಜಯಭೇರಿ

ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರು ಹರಪನಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದರು. ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಜಿ. ಕರುಣಕರ ರೆಡ್ಡಿ ಅವರನ್ನುಸೋಲಿಸಿ 13,845 ಮತಗಳ ಅಂತರದಿಂದ ಗೆದ್ದರು. ಒಟ್ಟು70, 184 ಮತಗಳನ್ನು ಗಳಿಸಿ ಪ್ರಚಂಡ ಜಯಬೇರಿ ಬಾರಿಸಿದರು. ಇಲ್ಲಿಯವರಿಗೂ ಕಾಲಿಗೆ ಚಕ್ರವನ್ನು ಕಟ್ಟಿಕೊಂಡಿರುವ ರೀತಿಯಲ್ಲಿ ತಾಲೂಕಿನ ಪ್ರತಿಯೊಂದು ಹಳ್ಳಿಗಳಿಗೆ ಭೇಟಿ ನೀಡಿದ್ದಾರೆ. ಹಾಗೇ ಕಳೆದ ಎರಡೂವರೆ ವರ್ಷದಿಂದ ಅಭಿವೃದ್ಧಿ ಕಾರ್ಯ ಮಾಡುವುದರಲ್ಲಿಕೂಡ ಎತ್ತಿದ ಕೈ ಎಂದು ಕ್ಷೇತ್ರದ ಜನರ ಪ್ರೀತಿ ಗಳಿಸಿದ್ದಾರೆ. ವಿಜಯನಗರ ಜಿಲ್ಲೆಯ ಏಕೈಕ ಮಹಿಳಾ ರಾಜಕಾರಣಿಯಾಗಿ ಎಂ.ಪಿ ಲತಾ ಮಲ್ಲಿಕಾರ್ಜುನ್ ಅವರು ಜನಪ್ರಿಯತೆ ಗಳಿಸಿದ್ದಾರೆ.

ಸಾಂಸ್ಕೃತಿಕ ರಾಯಭಾರಿ ಎಂ.ಪಿ. ಪ್ರಕಾಶ್ ಕನಸು

ಮಾಜಿ ಉಪ ಮುಖ್ಯ ಮಂತ್ರಿ ದಿ. ಎಂ. ಪ್ರಕಾಶ್ ಅವರು ಹಂಪಿ ಉತ್ಸವವನ್ನು ಅಂತಾರಾಷ್ಟ್ರೀಯ ಸಾಂಸ್ಕೃತಿಕ ಉತ್ಸವವನ್ನಾಗಿಸಲು ಸಾಂಸ್ಕೃತಿಕ ರಾಯಭಾರಿ ಎಂ.ಪಿ. ಪ್ರಕಾಶ್ ಅವರು ಕನಸು ಕಂಡಿದ್ದರು. ವಿಶ್ವ ವಿಖ್ಯಾತ ಮೈಸೂರು ದಸರಾಕ್ಕೆ ಪರ್ಯಾಯವಾಗಿ ಕರ್ನಾಟಕದ ಜನೋತ್ಸವವನ್ನಾಗಿಸಲು ಅದಮ್ಯ ಹಂಬಲ ಅವರದ್ದಾಗಿತ್ತು. ಕಲ್ಯಾಣ ಕರ್ನಾಟಕ ಭಾಗದ ಈ ವೈಭವದ ಉತ್ಸವ ಜನಮನದಲ್ಲಿ ಉಳಿಯಬೇಕು ಎಂಬ ಮಹದಾಸೆ ಕ್ರಿಯಾಶೀಲ ರಾಜಕಾರಣಿ ಎಂ.ಪಿ. ಪ್ರಕಾಶ್ ಅವರದಾಗಿತ್ತು. ತಂದೆಯವರ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರಿಸಬೇಕೆಂಬ ಸಂಕಲ್ಪ ಹೊತ್ತಿರುವ ಹರಪನಹಳ್ಳಿ ಕ್ಷೇತ್ರದ ಜನಪ್ರಿಯ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಕೂಡ ಅದೇ ಹಾದಿಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ.

ತಂದೆಯ ದಟ್ಟ ಪ್ರಭಾವ

ವಿವಿಧ ಪ್ರಭಾವೀ ಖಾತೆಗಳ ಸಚಿವರೂ, ಉಪ ಮುಖ್ಯಮಂತ್ರಿಯೂ ಆಗಿದ್ದ ದಿವಂಗತ ಎಂ.ಪಿ. ಪ್ರಕಾಶ್ ಅವರು ನಾಡಿನ ಜನಪ್ರಿಯ ಜನನಾಯಕರೂ, ವಾಗ್ಮಿಗಳೂ, ಕಾನೂನು ಪಂಡಿತರೂ ಆಗಿದ್ದರು. ಕಾನೂನು, ಸಾಹಿತ್ಯ, ರಂಗಭೂಮಿ, ಸಂಗೀತ, ನಾಡಿನ ಸಾಂಸ್ಕೃತಿಕ ಕಲೆಗಳ ಬಗ್ಗೆ ಅಪಾರ ಆಸಕ್ತಿ ಮತ್ತು ಜ್ಞಾನ ಹೊಂದಿದ್ದರು. ಈ ಕಾರಣಕ್ಕೆ ತಂದೆ ಪ್ರಕಾಶ್ ಅವರು ಕನ್ನಡದ ಬೌದ್ಧಿಕ ವಲಯದ ಬುದ್ಧಿಜೀವಿಗಳ ವಲಯದಲ್ಲೂ ಒಬ್ಬ ವಿಶಿಷ್ಟ ರಾಜಕಾರಣಿಯಾಗಿ, ಸಾಹಿತಿಗಳ ಒಡನಾಡಿಯಾಗಿ ಸಾರ್ಥಕ ಬದುಕನ್ನು ಬದುಕಿದ್ದವರು ಎಂ.ಪಿ.ಪ್ರಕಾಶ್.

ರಾಜಕೀಯ ಪ್ರವೇಶ

ತಂದೆ ಎಂ.ಪಿ.ಪ್ರಕಾಶ್ ಹಾಗೂ ಸಹೋದರ ಎಂ.ಪಿ. ರವೀಂದ್ರ ಅವರ ಆಶಯದಂತೆ ಜನಸೇವೆ ಮಾಡಲು ರಾಜಕೀಯಕ್ಕೆ ಬಂದವರು ಶಾಸಕಿ ಎಂ.ಪಿ. ಲತಾ ಮಲ್ಲಿಕಾರ್ಜುನ್. ಹರಪನಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ 700 ಕೋಟಿ ರು.ಗಳಿಗೂ ಅಧಿಕ ಮೊತ್ತದ ಅನುದಾನ ತಂದವರು. ತಾಲೂಕಿನ ಪ್ರತಿಯೊಂದು ಗ್ರಾಮೀಣ ಪ್ರದೇಶದ ಜನರಿಗೆ ಬೇಕಾಗುವ ಸಾರ್ವಜನಿಕರ ರಸ್ತೆ ಡಾಂಬರೀಕಾರಣ, ಆಧುನಿಕ ಬೀದಿ ದ್ವೀಪಗಳು, ಸೇರಿದಂತೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ, ಎಸ್ಸಿ ಎಸ್ಟಿ ಕಾಲೋನಿಗಳಲ್ಲಿ ನೂರಾರು ಕೋಟಿ ರೂಪಾಯಿಗಳ ಸಿಸಿ ರಸ್ತೆಗಳನ್ನು ಮಾಡಿಸಿದ ಕೀರ್ತಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಅವರಿಗೆ ಸಲ್ಲುತ್ತದೆ. ಗ್ರಾಮೀಣ ಪ್ರದೇಶಗಲ್ಲಿ ಜನಪರ ಕೆಲಸಗಳನ್ನು ಮಾಡುತ್ತಿದ್ದಾರೆ.

ಸರಳ ಸಜ್ಜನ ನಡೆ

ತಂದೆಯಷ್ಟು ಮಗಳು ಇಡೀ ಕರುನಾಡಿನ ಜನಮನದವರೆಗೆ ಜನಪ್ರಿಯತೆ ಗಳಿಸದಿದ್ದರೂ ಸದ್ಯ ಮಾತ್ರ ಜಿಲ್ಲೆಗಳಾದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಮಟ್ಟಿಗೆ ಒಬ್ಬ ಶಾಸಕಿಯಾಗಿ ಅಪಾರ ಜನಪ್ರೀತಿ ಮತ್ತು ಜನಪ್ರಿಯತೆ ಗಳಿಸಿದವರು ಎಂ.ಪಿ. ಲತಾ ಮಲ್ಲಿಕಾರ್ಜುನ್. ತಂದೆಯ ಮತ್ತು ಸೋದರನ ರಾಜಕೀಯ ಪರಂಪರೆಯನ್ನು ಲತಾ ಮೇಡಂ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇಂಥ ಒಬ್ಬ ಸರಳ ಸಜ್ಜನ ನಡೆ ನುಡಿಯ ರಾಜಕಾರಣಿಯನ್ನು ಕಂಡ ತಾಲೂಕಿನ ಜನತೆ ಧನ್ಯರು.

ಅಭಿವೃದ್ಧಿಯ ಪರ್ವ

ಹರಪನಹಳ್ಳಿ ಪಟ್ಟಣದ ಪುರಸಭೆಯನ್ನು ನಗರ ಸಭೆಯನ್ನಾಗಿ ಮಾಡಿ, ನಗರಸಭೆಯ ಜನರಿಗೆ ಅನುಕೂಲವಾಗುವಂತಹ ಕೆಲಸವನ್ನು ಮಾಡುತ್ತಿದ್ದಾರೆ ನಗರ ಸಭೆ ವ್ಯಾಪ್ತಿಯ ನಗರದ ಪ್ರವಾಸಿಮಂದಿರ ವೃತ್ತದ ಬಳಿ ಇರುವ ಲಂಡನ್ ಹಳ್ಳವನ್ನು ಅಭಿವೃದ್ಧಿ ಪಡಿಸಲು ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸುತ್ತಿದ್ದಾರೆ. ನಗರದ ಕೊಟ್ಟೂರು ರಸ್ತೆಯಲ್ಲಿರುವ ವೃತ್ತದಲ್ಲಿ ಅಪಘಾತ ತಡೆಯುವ ಉದ್ದೇಶದಿಂದ ಬೃಹತ್ತಾದ ವೃತ್ತವನ್ನು ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಇಂತಹ ಜನಪರ ಯೋಜನೆಗಳಿಂದ ನಗರದ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಸತತ ಪ್ರಯತ್ನ ಮಾಡುತ್ತಿದ್ದಾರೆ. ಈ ಹಿಂದೆ ಚುನಾವಣೆಯಲ್ಲಿ ನೀಡಿದ ಭರವಸೆಯನ್ನು ಎರಡೂವರೆ ವರ್ಷಗಳಲ್ಲಿ ಪ್ರಾಮಾಣಿವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಟೀಕೆಗಳಿಗೆ ನಿರುತ್ತರ:

ಶಾಸಕರ ಅಭಿವೃದ್ಧಿಕಾರ್ಯವನ್ನು ತಾಲೂಕಿನ ಮತದಾರರು ಹರ್ಷ ವ್ಯಕ್ತಪಡಿಸುತ್ತಿದ್ದಾರೆ. ಶಾಸಕರು ವಿರೋಧ ಪಕ್ಷಗಳ ಯಾವುದೇ ರಾಜಕೀಯ ಕೇಂದ್ರಿತ ಟೀಕೆಗಳಿಗೆ ಕ್ಯಾರೇ ಎನ್ನದೇ ತಮ್ಮ ಪಾಡಿಗೆ ತಾವು ಕ್ಷೇತ್ರದ ಅಭಿವೃದ್ಧಿ ಕಡೆ ಮಾತ್ರ ಗಮನ ಕೊಟ್ಟು ಜನ ಸೇವೆಯಲ್ಲಿ ಮುನ್ನಡೆಯುತ್ತಿದ್ದಾರೆ. ಇನ್ನು ಮುಂಬರುವ ದಿನಗಳಲ್ಲಿ ಅನೇಕ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡುವ ಕನಸು ಹೊತ್ತಿದ್ದಾರೆ. ಆಡಳಿತ ರೂಢ ಪಕ್ಷದ ಶಾಸಕರಾಗಿರುವ ಎಂ.ಪಿ.ಲತಾ ಮಲ್ಲಿಕಾರ್ಜುನ್ ಸರಕಾರದಿಂದ ಅತ್ಯಧಿಕ ಅನುದಾನ ತಂದು ಹರಪನಹಳ್ಳಿ ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿ ಪ್ರಗತಿ ಕಡೆ ಕೊಂಡೊಯ್ಯುವ ಸಂಕಲ್ಪ ಕೈಗೊಂಡಿದ್ದಾರೆ.

ಹಂಪಿ ಉತ್ಸವದ ಪ್ರಮುಖ ರೂವಾರಿ ಮಾಜಿ ಡಿಸಿಎಂ ಎಂ.ಪಿ. ಪ್ರಕಾಶ್

ಮಾಜಿ ಉಪಮುಖ್ಯಮಂತ್ರಿ ಎಂ.ಪಿ. ಪ್ರಕಾಶ್ ಅವರು ಹಂಪಿ ಉತ್ಸವದ ಪ್ರಮುಖ ರೂವಾರಿ ಮತ್ತು ಸಾಂಸ್ಕೃತಿಕ ರಾಯಭಾರಿ ಎಂದು ಪರಿಚಿತರಾಗಿದ್ದಾರೆ. ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಮರುಕಳಿಸುವಂತೆ ಮಾಡಲು ಅವರು 1980ರ ದಶಕದಲ್ಲಿ ಹಂಪಿ ಉತ್ಸವವನ್ನು ಆರಂಭಿಸಿದರು. 2026ರ ಹಂಪಿ ಉತ್ಸವದ ವೇದಿಕೆಗೆ ಅವರ ಹೆಸರನ್ನು ಇಡಲಾಗಿದೆ. ಹಂಪಿ ಉತ್ಸವವನ್ನು ಕೇವಲ ಸಾಂಸ್ಕೃತಿಕ ಕಾರ್ಯಕ್ರಮವಾಗಿಸದೆ, ಜನೋತ್ಸವವನ್ನಾಗಿಸುವ ಕನಸು ಅವರದ್ದಾಗಿತ್ತು. ಸ್ಥಳೀಯ ಕಲಾವಿದರು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕಲಾವಿದರಿಗೆ ಸಮಾನ ಅವಕಾಶ ನೀಡಲು ಅವರು ಕಾಳಜಿ ವಹಿಸಿದ್ದರು. ಹಂಪಿ ಉತ್ಸವದ ವೇದಿಕೆಗೆ ''ಎಂ.ಪಿ. ಪ್ರಕಾಶ್ ವೇದಿಕೆ'' ಎಂದು ಹೆಸರಿಡಲಾಗಿದೆ. ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರಾಗಿದ್ದಾಗ ಹಂಪಿಯ ಪ್ರತಿ ಬಂಡೆಗಳಲ್ಲಿನ ಇತಿಹಾಸವನ್ನು ಜಗತ್ತಿಗೆ ಪರಿಚಯಿಸಲು ಅವರು ಉತ್ಸವವನ್ನು ಬಳಸಿಕೊಂಡರು. ಮೈಸೂರು ದಸರಾದಂತೆ ಹಂಪಿ ಉತ್ಸವವನ್ನು ಹಂಪಿ ವಿರೂಪಾಕ್ಷನ ಉತ್ಸವ ಎಂದು ಬಿಂಬಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ದಿವಂಗತ ಎಂ.ಪಿ. ಪ್ರಕಾಶ್ ಅವರನ್ನು ಹಂಪಿ ಉತ್ಸವದ ಪಿತಾಮಹ ಎಂದೇ ಪರಿಗಣಿಸಲಾಗುತ್ತದೆ. ಹಂಪಿ ಉತ್ಸವದ ರೂವಾರಿ ಎಂ.ಪಿ. ಪ್ರಕಾಶ ಅವರು ಉತ್ಸವದಲ್ಲಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಮತ್ತು ಸ್ಥಳೀಯ ಕಲಾವಿದರಿಗೆ ಉತ್ಸವದಲ್ಲಿ ಸಮಾನ ಅವಕಾಶ ದೊರೆಯಬೇಕೆಂಬ ಕಾಳಜಿ ಹೊಂದಿದ್ದರು. ಜತೆಗೆ ನಾಡಿನ ಸಂಸ್ಕೃತಿ ಉತ್ಸವದಲ್ಲಿ ಅನಾವರಣಗೊಳ್ಳಬೇಕೆಂಬ ಬಯಕೆ ಹೊಂದಿದ್ದರು. ಹಂಪಿ ಉತ್ಸವ ಬರೀ ಉತ್ಸವ ಆಗಿರದೇ ಇಡೀ ದಕ್ಷಿಣ ಭಾರತಕ್ಕೆ ರಾಜಧಾನಿಯಾಗಿದ್ದ ವಿಜಯನಗರದ ನೆಲದ ಗತ ವೈಭವ ಮರುಕಳಿಸುವ ಕಾರ್ಯವೂ ಆಗಲಿದೆ. ಈ ಉತ್ಸವಕ್ಕೆ ಮೂರು ದಿನಗಳವರೆಗೆ ಲಕ್ಷಾಂತರ ಜನರು ಹರಿದು ಬರಲಿದ್ದಾರೆ.



ವಿಶ್ವವಾಣಿ

ವಿಜಯನಗರ ವೈಭವ

ಕಲೆ-ಧರ್ಮ-ಸಂಸ್ಕೃತಿಗಳ ಸಮ್ಮಿಲನ

ಕರ್ನಾಟಕದ ವರ್ಣರಂಜಿತ ಪ್ರತಿಷ್ಠಿತ ದಿವ್ಯ ಉತ್ಸವ

ಕನ್ನಡ ನಾಡು ನುಡಿ ಸಂಸ್ಕೃತಿ ಪರಂಪರೆಯ ಬಿಂಬ
ಶಿಲ್ಪ ಕಲಾಕೃತಿಗಳ ಕಲ್ಲು ಕಂಬಗಳಲ್ಲಿ ನಾದಗಳ ಝೇಂಕಾರ
ಪ್ರವಾಸೋದ್ಯಮದ ಆಕರ್ಷಣೆಗೆ ಭವ್ಯ ಸಾಂಸ್ಕೃತಿಕ ಪರಿಷೆ

ಅನಂತ ಪದ್ಮನಾಭ ರಾವ್, ಹೊಸಪೇಟೆ

ನೀವು ಎಂದಾದರೂ ಪ್ರಾಚೀನ ಕೋಟೆ ಕೊತ್ತಲಗಳು, ಅವಶೇಷಗಳು, ಪುರಾತನ ನಾಗರೀಕತೆಯನ್ನು ಪರಿಚಯಿಸುವ ರಚನೆಗಳಿಗೆ ಭೇಟಿ ನೀಡಿದ್ದರೆ ಖಂಡಿತವಾಗಿಯೂ ನಿಮ್ಮ ಮನದಲ್ಲಿ ಒಂದು ವಿಚಿತ್ರ ಭಾವನೆ, ಕುತೂಹಲ, ತರಹೇವಾರಿ ಯೋಚನೆಗಳು ಮೂಡೆ ಮೂಡಿರುತ್ತವೆ. ಹೌದು, ಏಕೆಂದರೆ ಇವು ಗತ ಕಾಲದ ತಮ್ಮ ಇತಿಹಾಸವನ್ನು ಹೇಳಲು ಪ್ರಯತ್ನಿಸುತ್ತಿರುತ್ತವೆ ಎಂದು ಹೇಳಬಹುದು.

ಇಂತಹ ಐತಿಹಾಸಿಕ ಪ್ರಾಮುಖ್ಯತೆಯುಳ್ಳ ಅದೆಷ್ಟೊ ರಚನೆಗಳು, ಸ್ಥಳಗಳು ಭಾರತದಾದ್ಯಂತ ಕಾಣಬಹುದು. ಅವುಗಳಲ್ಲಿಯೂ ಸಹ ಕೆಲವು ಅತ್ಯಂತ ಶ್ರೀಮಂತ ವಾಸ್ತುಕಲೆ, ಇತಿಹಾಸ, ಪ್ರಾಚೀನ ಕಾಲದಲ್ಲಿಯೆ ಉನ್ನತ ಮಟ್ಟದ ಜೀವನಶೈಲಿಗಾಗಿ ವಿಶ್ವ ವಿಖ್ಯಾತಿಯನ್ನೆ ಪಡೆದಿವೆ. ಅಂತಹ ಕೆಲವು ಅದ್ಬುತ ಸ್ಥಳಗಳ ಪೈಕಿ ಒಂದಾಗಿದೆ ಕರ್ನಾಟಕದ ಹೆಮ್ಮೆಯ ಹಂಪಿ ಅಥವಾ ಹಂಪೆ.

ಶ್ರೀಮಂತ ಸಾಮ್ರಾಜ್ಯ: ಭಾರತ ಕಂಡ ಅತ್ಯದ್ಬುತ ರಾಜಸಾಮ್ರಾಜ್ಯಗಳ ಪೈಕಿ ವಿಜಯನಗರ ಸಾಮ್ರಾಜ್ಯವೂ ಸಹ ಒಂದು. ಕೃಷ್ಣದೇವರಾಯನ ಕಾಲದಲ್ಲಿ ಅತ್ಯಂತ ಉಚ್ರಾಯ ಸ್ಥಿತಿಯಲ್ಲಿದ್ದ ಈ ಸಾಮ್ರಾಜ್ಯ ಶ್ರೀಮಂತ ಸಾಮ್ರಾಜ್ಯವೆಂದರೂ ತಪ್ಪಾಗಲಾರದು. ಬೀದಿ ಬದಿಗಳಲ್ಲೆ ರತ್ನ,

ವೈಢೂರ್ಯ, ವಜ್ರಗಳ ವ್ಯಾಪಾರ ನಡೆಯುತ್ತಿತ್ತೆಂದರೆ ನೀವೆ ಊಹಿಸಬಹುದು ವಿಜಯನಗರದ ವೈಭೋಗವನ್ನ.

ಶಿಲ್ಪಕಲಾ ವೈಭವ: ಹೀಗೆ ಆರ್ಥಿಕ ಶ್ರೀಮಂತಿಕೆ ಒಂದೆಡೆಯಾದರೆ, ಶಿಲ್ಪಕಲೆ ದೃಷ್ಟಿಯಿಂದ ಇನ್ನಷ್ಟು ಹೆಚ್ಚಾಗಿ ವಿಕಸಿತಗೊಂಡಿದ್ದು ಹೊರಗಿನವರೂ ಒಂದೊಮ್ಮೆಯಾದರೂ ಹೊಟ್ಟೆಕಿಚ್ಚು ಪಡುವಂತೆ ನಳನಳಿಸುತ್ತಿದ್ದವು. ಇಲ್ಲಿನ ಶಿಲೆಯಲ್ಲಿ ಮೂಡಿದ ಶಿಲ್ಪಕಲಾಕೃತಿಗಳು. ಈ ಸಾಮ್ರಾಜ್ಯದ ಒಂದೊಂದೂ ಮೂಲೆಗಳಲ್ಲೂ ನಿಪುಣ ಶಿಲ್ಪಕಲಾಕಾರರ ಅದ್ಬುತ ರಚನೆಗಳು ಸುಂದರವಾಗಿ ರೂಪಗೊಂಡಿದ್ದವು.

ಶತ್ರುಗಳಿಂದ ದಾಳಿ: ಕಾಲ ಕ್ರಮೇಣ ವಿಜಯನಗರದ ವರ್ಚಸ್ಸು ಕಡಿಮೆಯಾದಂತೆ ಹಲವಾರು ಬಾರಿ ಶತ್ರುಗಳಿಂದ ದಾಳಿಗೆ ಒಳಗಾಗಿ, ಕಾಲದ ಹಿಡಿತಕ್ಕೆ ಒಳಗಾಗಿ, ಕೆಲ ರಚನೆಗಳು ಭಗ್ನಗೊಂಡರೂ ಹಂಪಿಯು ತನ್ನ ನಡಿಗೆಯನ್ನು ನಡೆದುಕೊಂಡು ಬಂದಿತಾದರೂ ತನ್ನ ವೈಭವತೆಯನ್ನು ಸಾರುವ ಇನ್ನೂ ಎಷ್ಟೊ ರಚನೆಗಳನ್ನು ಉಳಿಸಿಕೊಂಡೂ ಸಹ ಬಂದಿತು. ಇಂತಹ ಅಪರೂಪದ, ಗತಕಾಲದ ವೈಭವ ಸಾರುವ ಹಂಪಿಯನ್ನು ಮುಂಬರುವ ಸಮಯದಲ್ಲೂ ಸಹ ಜೀವಂತವಾಗಿರಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರದಿಂದ ಆರಂಭಿಸಲಾದ ಉತ್ಸವವೆ ಹಂಪಿ ಉತ್ಸವ.

ಪ್ರತಿಷ್ಠಿತ ಉತ್ಸವ: ಕರ್ನಾಟಕ ಪ್ರವಾಸೋದ್ಯಮದ ದೃಷ್ಟಿಯಿಂದ ಹಂಪಿ ಉತ್ಸವ ಕರ್ನಾಟಕದ ಪ್ರತಿಷ್ಠಿತ ಉತ್ಸವವಾಗಿದೆ. ವಿಶೇಷವಾಗಿ ವಿದೇಶಿ ಪ್ರವಾಸಿಗರಲ್ಲಿ ಇದು ಹೆಚ್ಚು ಜನಪ್ರಿಯತೆಗಳಿಸಿದೆ. ನಮ್ಮ ನಾಡ ನುಡಿಯ ವೈಭವ ಸಾರುವ ಸದುದ್ದೇಶದಿಂದ ಈ ಉತ್ಸವಕ್ಕೆ ನಮ್ಮ ಜನರಿಂದಲೇ ಹೆಚ್ಚಿನ ಪ್ರೋತ್ಸಾಹ ಬೇಕಾಗಿದೆ ಎಂತಲೆ ಹೇಳಬಹುದು.

ಮೂರು ದಿನ ಜನಜಾತ್ರೆ: ಹೀಗಾಗಿ ಪ್ರವಾಸಿ ಪ್ರಿಯರು ನೀವು ನಿಮ್ಮ ಸ್ನೇಹಿತರೊಂದಿಗೋ ಅಥವಾ ಕುಟುಂಬದವರೊಂದಿಗೋ ಒಟ್ಟುಗೂಡಿ ಪ್ರತಿ ವರ್ಷ ಜನವರಿ/ಫೆಬ್ರವರಿ ಮಾಸದಲ್ಲಿ ಮೂರು ದಿನ ಆಯೋಜಿಸಲಾಗುವ ಈ ಉತ್ಸವದಲ್ಲಿ ಭಾಗಿಯಾಗಲು ಪ್ರಯತ್ನಿಸಿ ಹಾಗೂ ನಿಮ್ಮ ಮಕ್ಕಳಿಗೆ ಹಾಗೂ ನಂಟರಿಗೆ ಹಂಪಿಯ ವೈಭವವನ್ನು ಸವಿಯಲು ನೆರವಾಗಿ.

ವರ್ಣರಂಜಿತ : ವಿಜಯ ಉತ್ಸವ ಎಂತಲೂ ಕರೆಯಲ್ಪಡುವ ಹಂಪಿ ಉತ್ಸವ ಕರ್ನಾಟಕದ ವರ್ಣರಂಜಿತ ಉತ್ಸವಗಳ ಪೈಕಿ ಒಂದಾಗಿದೆ. ರಾಜ್ಯವಲ್ಲದೆ ದೇಶದ ಹಲವು ಭಾಗಗಳಿಂದಲೂ ಸಹ ಜನರು, ಪ್ರವಾಸಿಗರು ಹಾಗೂ ಮುಖ್ಯವಾಗಿ ವಿವಿಧ ಕಲಾವಿದರು ಈ ಉತ್ಸವದಲ್ಲಿ ಪಾಲ್ಗೊಂಡು ಕಳೆ ತರುತ್ತಾರೆ. ಹಲವಾರು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಉತ್ಸವದ ಪ್ರಮುಖ ಆಕರ್ಷಣೆ. ಬೊಂಬೆಗಳಾಟ, ಭಾರ ಎತ್ತುವಿಕೆ, ನಾಟಕ, ಸಂಗೀತ, ನೃತ್ಯ ಮುಂತಾದ ವಿವಿಧ ಕಾರ್ಯಕ್ರಮಗಳು ಅತ್ಯಂತ ಸಡಗರದಿಂದ ಈ ಉತ್ಸವದಲ್ಲಿ ನಡೆಯುತ್ತವೆ.

ಸರಕಾರದ ಪ್ರಾಯೋಜಕತ್ವ : ಹಲವಾರು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಉತ್ಸವದ ಪ್ರಮುಖ ಆಕರ್ಷಣೆ. ಬೊಂಬೆಗಳಾಟ, ಭಾರ ಎತ್ತುವಿಕೆ, ನಾಟಕ, ಸಂಗೀತ, ನೃತ್ಯ , ವಿವಿಧ ಕಾರ್ಯಕ್ರಮ ಅತ್ಯಂತ ಸಡಗರದಿಂದ ನಡೆಯುತ್ತವೆ. ಕಲೆ, ಸಂಸ್ಕೃತಿಗಳಲ್ಲಿ ಆಸಕ್ತಿ ಇರುವವರು ಈ ಉತ್ಸವವನ್ನು ಎದುರು ನೋಡುತ್ತಿರುತ್ತಾರೆ. ರಾಜ್ಯ ಸರಕಾರದ ವತಿಯಿಂದ ಶಿಸ್ತು ಬದ್ಧವಾಗಿ ಆಯೋಜಿಸಲಾಗುತ್ತದೆ. ಸಾಕಷ್ಟು ಪ್ರವಾಸಿಗರು ಇಲ್ಲಿಗೆ ಆಗಮಿಸುವುದರಿಂದ ಸಾಕಷ್ಟು ಮುಂಚೆ ಪೂರ್ವ ತಯಾರಿ ಮಾಡಿಕೊಳ್ಳಲಾಗುತ್ತದೆ.

ಸಂಸ್ಕೃತಿ ಪರಿಚಯ: ಕರ್ನಾಟಕದ ನಾಡು ನುಡಿ ಸಂಸ್ಕೃತಿಗಳ ಪರಿಚಯ ನಿಮಗಾಗಬೇಕೆಂದಿದ್ದಲ್ಲಿ ಮೂರು ದಿನಗಳ ಕಾಲ ನಿಮ್ಮ ಎಲ್ಲ ಕೆಲಸ ಕಾರ್ಯ ಮುಂದಡಿ, ಒತ್ತಡ ಮರೆತು ಸಂತಸದಿಂದ ಈ ಉತ್ಸವದಲ್ಲಿ ಪಾಲ್ಗೊಳ್ಳಿ. ಅಷ್ಟೆ ದೇಶದ ಪ್ರಮುಖ ಕಲಾವಿದರಿಂದ ಸಂಗೀತ, ಗಾಯನ ಮುಂತಾದ ಕಾರ್ಯಕ್ರಮಗಳು ನಿಮ್ಮನ್ನು ಮಂತ್ರಮುಗ್ಧಗೊಳಿಸುತ್ತವೆ.

ನಾದ ಹೊಮ್ಮಿಸುವ ಕಂಬಗಳಾಗಲಿ, ಬಡವಿ ಲಿಂಗವಾಗಲಿ, ಸಾಸಿವೆ ಗಣೇಶನಾಗಲಿ, ಕಲ್ಲಿನ ರಥವಾಗಲಿ, ವಿರೂಪಾಕ್ಷ ದೇವಸ್ಥಾನ ಗೋಪುರವಾಗಲಿ, ಉಗ್ರನರಸಿಂಹನ ಸುಂದರ ಶಿಲಾ ವಿಗ್ರಹವಾಗಲಿ ಎಲ್ಲವೂ ಒಂದಕ್ಕಿಂತ ಒಂದು ವಿಶಿಷ್ಟ ಕಲಾ ರಚನೆಗಳಾಗಿದ್ದು ಅಂದಿನ ಕಲಾ ನೈಪುಣ್ಯತೆಯನ್ನು ನೀವು ಹಾಡಿ ಹೊಗಳುವಂತೆ ಮಾಡುತ್ತವೆ.

ಪುಸ್ತಕಗಳ ಸಂತೆ : ಅಷ್ಟೆ ಅಲ್ಲ, ಇಲ್ಲಿ ಪುಸ್ತಕ ಮಳಿಗೆಗಳು ಇತರೆ ಹಲವಾರಿ ಸ್ಟಾಲುಗಳನ್ನೂ ಸಹ ಉತ್ಸವದ ಸಂದರ್ಭದಲ್ಲಿ ಹಾಕಿರಲಾಗುತ್ತದೆ. ಸರಿ ಇನ್ನೇಕೆ ತಡ.. ಈ ಉತ್ಸವದಲ್ಲಿ ಪಾಲ್ಗೊಳ್ಳಲು ನೀವು ಸನ್ನದ್ಧರಾಗಿ ಹಾಗೂ ಪ್ರತಿ ವರ್ಷ ಜರುಗುವ ಈ ಉತ್ಸವಕ್ಕೆ ನಿಮ್ಮ ಭೇಟಿ ನೀಡಿ, ಕರ್ನಾಟಕ ಸಂಸ್ಕೃತಿಯ ಪತಾಕೆಯನ್ನು ಇನ್ನಷ್ಟು ಎತ್ತರಕ್ಕೆ ಹಾರಿಸುವಂತೆ ಮಾಡುವಲ್ಲಿ ನೆರವಾಗಿ.

ವಿವಿಧ ತಳಿಗಳ ಎತ್ತುಗಳ ಪ್ರದರ್ಶನ, ರಂಗೋಲಿ ಸ್ಪರ್ಧೆ, ಫಲಪುಷ್ಪ ಪ್ರದರ್ಶನ, ಮತ್ಸ್ಯ ಮೇಳ, ಬೋಟಿಂಗ್, ಹಂಪಿ ವಿಚಾರ ಕುರಿತು ವಿಚಾರ ಸಂಕಿರಣ ಹಾಗೂ ಆಹಾರ ಮೇಳ ಆಯೋಜಿಸಲಾಗಿದೆ. ಗ್ರಾಮೀಣ ಕ್ರೀಡೆ, ಸಾಹಸ ಕ್ರೀಡೆಗಳು, ವಿವಿಧ ಕಾರ್ಯಕ್ರಮ ನಡೆಯಲಿವೆ. ಮುಖ್ಯ ವೇದಿಕೆಯಾದ ಎಂ.ಪಿ.ಪ್ರಕಾಶ್ ವೇದಿಕೆಯಲ್ಲಿ ಗಣ್ಯರೊಂದಿಗೆ ಚಿತ್ರನಟ ಶಿವರಾಜಕುಮಾರ್, ಅಶ್ವಿನಿ ಪುನೀತ್ ರಾಜಕುಮಾರ್, ರುಕ್ಮಿಣಿ ವಸಂತ್ ವೇದಿಕೆ ಹಂಚಿಕೊಳ್ಳಲಿದ್ದಾರೆ.

-**ಜಮೀರ್ ಅಹ್ಮದ್ ಖಾನ್,** ಜಿಲ್ಲಾ ಉಸ್ತುವಾರಿ ಸಚಿವರು, ವಿಜಯನಗರ.

ಹಂಪಿ ಉತ್ಸವಕ್ಕೆ ಮೂರು ದಿನ 50 ವಿಶೇಷ ಬಸ್

ಪ್ರತಿ ವರ್ಷದಂತೆ ಈ ಬಾರಿಯೂ ಫೆಬ್ರವರಿ 13 ರಿಂದ 15ರವರೆಗೆ ಹಂಪಿ ಉತ್ಸವ ಜರುಗಲಿದ್ದು ಸಾರ್ವಜನಿಕರಿಗೆ ಉಪಯುಕ್ತವಾಗುವಂತೆ ಫೆಬ್ರವರಿ 13 ರಿಂದ 15 ರವರೆಗೆ 3 ದಿನಗಳ ಕಾಲ ಹೊಸಪೇಟೆಯಿಂದ ಹಂಪಿಗೆ 50 ವಿಶೇಷ ಉಚಿತ ಬಸ್ ಸೇವೆ ಒದಗಿಸಲಾಗುತ್ತದೆ. ಅದಲ್ಲದೇ ಜಿಲ್ಲೆಯ ಎಲ್ಲಾ ತಾಲೂಕಿಗೆ 168 ವಿಶೇಷ ಬಸ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬಹುದು.

ಪ್ರತಿ ವರ್ಷದಂತೆ ಈ ಬಾರಿಯೂ ವಿಜಯ ನಗರ ಸಾಮ್ರಾಜ್ಯದ ಗತವೈಭವ, ಸುವರ್ಣ ಯುಗದ ವಿಜೃಂಭಣೆಯಿಂದ ಆಚರಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಸಕಲ ರೀತಿಯಲ್ಲೂ ಸನ್ನದ್ಧವಾಗಿದೆ

-**ಕವಿತಾ ಮನ್ನಿಕೇರಿ,** ಜಿಲ್ಲಾಧಿಕಾರಿಗಳು. ವಿಜಯನಗರ.

ಸಾಸುವೆ ಕಾಳು ಗಣಪತಿ ವೇದಿಕೆಯಲ್ಲಿ ಸಾಂಸ್ಕೃತಿಕ ವೈಭವ

ಹಂಪಿ: ವಿಶ್ವವಿಖ್ಯಾತ ಹಂಪಿಯ ಸಾಸುವೆ ಕಾಳು ಗಣಪತಿ ವೇದಿಕೆಯಲ್ಲಿ ವಿಜಯನಗರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವೈಭವದ ಸಾಂಸ್ಕೃತಿಕ ಕಾರ್ಯಕ್ರಮಗಳು ಅದ್ದೂರಿಯಾಗಿ ನಡೆದವು. ಕಾರ್ಯಕ್ರಮಕ್ಕೆ ಹರಪನಹಳ್ಳಿ ತಹಸೀಲ್ದಾರ್ ಗಿರೀಶ್ ಬಾಬು ಅವರು ಜ್ಯೋತಿ ಬೆಳಗುವ ಮುಖಾಂತರ ಚಾಲನೆ ನೀಡಿದರು.

ಈ ಬಾರಿಯ ವೇದಿಕೆಯಲ್ಲಿ ಒಟ್ಟು 39 ಕಲಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ನೆರೆದಿದ್ದ ಪ್ರೇಕ್ಷಕರಿಗೆ ಕಲೆಯ ರಸದೌತಣವನ್ನು ಉಣಬಡಿಸಿದ ಪ್ರಮುಖ ಕಾರ್ಯಕ್ರಮಗಳೆಂದರೆ, ವಚನ ಗಾಯನ, ರಂಗಗೀತೆಗಳ ಗಾಯನ, ಜಾನಪದ ಗೀತೆ, ಹಿಂದೂಸ್ತಾನ ಗಾಯನ, ಭರತನಾಟ್ಯ, ಸುಗಮ ಸಂಗೀತ, ತಬಲಾ ವಾದನ, ಶಾಸ್ತ್ರೀಯ ನೃತ್ಯ, ನೃತ್ಯ ರೂಪಕ, ಬಯಲಾಟ ಪದಗಳು, ತತ್ವಪದ ಗಾಯನ, ವಿಶು ಕಲೆ ಪ್ರದರ್ಶನ, ಮಿಮಿಕ್ರಿ, ದಾಸರ ಪದಗಳ ಗಾಯನ, ಸಾಮೂಹ ನೃತ್ಯ ರೂಪಕ, ವಚನ ಸಂಗೀತ, ಚೌಡ್ಕಿ ಪದಗಳ ಗಾಯನ, ಇನ್ನೂ ಹಲವಾರು ತಂಡಗಳಿಂದ ಬಗೆ ಬಗೆಯ ಕಾರ್ಯಕ್ರಮಗಳ ನಡೆದವು.

ಸಮಾಜ ಕಲ್ಯಾಣ ಇಲಾಖೆ ಯೋಜನೆಗಳ ಸಂಕ್ಷಿಪ್ತ ವಿವರ

ಕ್ರ.ಸಂ	ವಿಷಯ	ವರದಿ		
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳ ನಿರ್ವಹಣೆ	ರೂ.1650 ನೀಡಲಾಗುವುದು		
2	ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳ ನಿರ್ವಹಣೆ	ರೂ.1850 ನೀಡಲಾಗುವುದು		
3	ಅಂತರ್ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹ ಧನ	ಹುಡುಗಿ ಪ.ಜಾತಿಯಾಗಿದ್ದರೆ ರೂ.3,00,000/- ಹುಡುಗ ಪ.ಜಾತಿಯಾಗಿದ್ದರೆ ರೂ.2,50,000/-		
4	ದೇವದಾಸಿ ಮಕ್ಕಳ ವಿವಹವಾದ ದಂಪತಿಗಳಿಗೆ ಪ್ರೋತ್ಸಾಹ ಧನ	ದೇವದಾಸಿ ಮಗಳು ಪ.ಜಾತಿಯಾಗಿದ್ದರೆ ರೂ.5,00,000/- ಹುಡುಗ ಪ.ಜಾತಿಯಾಗಿದ್ದರೆ ರೂ.3,00,000/-		
4	ಕನಿಷ್ಠ 10 ದಂಪತಿಗಳಿಗೆ ಸಾಮೂಹಿಕ ವಿವಾಹಕ್ಕೆ ಪ್ರೋತ್ಸಾಹ ಧನ	ರೂ.50,000/-		
5	ವಿಧವಾ ಪುನರ್ವಿವಾಹ ಪ್ರೋತ್ಸಾಹ ಧನ	ರೂ.3,00,000/- ನೀಡಲಾಗುವುದು.		
6	ಕಾನೂನು ಪಧವಿದರರ ಸ್ಟೈಫಂಡ್ ತಿಂಗಳಿಗೆ	ಮಾಹೆಯಾನ 10,000/- (2 ವರ್ಷಕ್ಕೆ ಮಾತ್ರ)		
7	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ	ತರಗತಿ	ಬಾಲಕರು (ವಾರ್ಷಿಕ)	ಬಾಲಕಿಯರು (ವಾರ್ಷಿಕ)
		01-05ನೇ ತರಗತಿ	1000/-	1100/-
		06-07 ನೇ ತರಗತಿ	1150/-	1250/-
		8 ನೇ ತರಗತಿ	1250/-	1350/-
		9-10ನೇ ತರಗತಿ	3500/-	3500/-
8	ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ	ಗ್ರೂಪ್	ಡೇ ಸ್ಕಾಲರ್ (ವಾರ್ಷಿಕ)	ಹಾಸ್ಟಲರ್(ವಾರ್ಷಿಕ)
		1	7000/-	13500/-
		2	6500/-	9500/-
		3	3000/-	6000/-
		4	2500/-	4000/-
		ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳಿಗೆ ಸರ್ಕಾರ ನಿಗಧಿ ಮಾಡಿದ ಕಾಲೇಜು ಶುಲ್ಕವನ್ನು ನೀಡಲಾಗುವುದು		
9	ಪ್ರಥಮ ಬಾರಿಗೆ ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ	ದ್ವಿತಿಯ ಪಿ.ಯು.ಸಿ ಹಾಗೂ ಡಿಪ್ಲೋಮಾ	ರೂ.20000/-	
		ಪದವಿ ವಿದ್ಯಾರ್ಥಿಗಳಿಗೆ	ರೂ.25000/-	
		ಸ್ನಾತಕೊತ್ತರ ವಿದ್ಯಾರ್ಥಿಗಳಿಗೆ	ರೂ.30000/-	
		ಅಗ್ರಿಕಲ್ಚರಲ್, ಇಂಜನಿಯರಿಂಗ್, ವೆಟರನರಿ, ಮೆಡಿಕಲ್ ವಿದ್ಯಾರ್ಥಿಗಳಿಗೆ	ರೂ.35000/-	
10	ಎಸ್.ಎಸ್.ಎಲ್.ಸಿ ಪ್ರಥಮ ಶ್ರೇಣಿಯಲ್ಲಿ ಪಾಸಾದ ಪ.ಜಾತಿ ವಿದ್ಯಾರ್ಥಿಗಳಿಗೆ ನಗದು ಬಹುಮಾನ	ಶೇಕಡ 60% ರಿಂದ 74.99	ರೂ.7000/-	
		ಶೇಕಡ 75% ರಿಂದ 100	ರೂ.15000/-	

ಸಹಾಯಕ ನಿರ್ದೇಶಕರ (ಗ್ರೇಡ್ -1)ಕಚೇರಿ , ಸಮಾಜ ಕಲ್ಯಾಣ ಇಲಾಖೆ ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ

ಜಿಲ್ಲಾ ಆಸಂಕ್ರಾಮಿಕ ರೋಗಗಳ ಅಧಿಕಾರಿಗಳು, ವಿಜಯನಗರ ಜಿಲ್ಲೆ.

ಕಾರಣಗಳು :

- ಪಾರ್ಶ್ವವಾಯು
- ಮೆದುಳಿನ ಗಡ್ಡೆ
- ಮೆದುಳಿನ ಸೋಂಕು
- ನಿಕರವಾದ ಕಾರಣಗಳಿಲ್ಲ
- ಅಮ್ಲಜನಕದ ಕೊರತೆ
- ತಲೆಗೆ ಪೆಟ್ಟು
- ಅನುವಂಶೀಯ ಕಾರಣಳು

ಔಷಧಿಗಳನ್ನು ನಿಯಮಿತವಾಗಿ ಸೇವಿಸುವುದರಿಂದ ಮೂರ್ಛೆ ರೋಗವನ್ನು ನಿಯಂತ್ರಿಸಬಹುದು.

ಪಾರ್ಶ್ವವಾಯು : ಪಾರ್ಶ್ವವಾಯು ಅಥವಾ ಮೆದುಳಿನ ಆಘಾತ - ಮೆದುಳಿನ ಭಾಗಕ್ಕೆ ಕಡಿಮೆ ಆಮ್ಲಜನಕ ಪೂರೈಕೆಯಿಂದಾಗಿ ಉಂಟಾಗುವ ಸ್ಥಿತಿ.

ಡಿಮೆನ್ಷಿಯ : ಇದು ಸ್ಮರಣಶಕ್ತಿಯನ್ನು ನಾಶ ಮಾಡುತ್ತದೆ ಮತ್ತು ಪ್ರತಿದಿನ ಮಾಡುವ ಕೆಲಸದಲ್ಲಿ ತೊಂದರೆಯುಂಟುಮಾಡುತ್ತೆ.

ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ನೂತನ ಮತ್ತು ನವೀನ ಕರ್ಯಾಕ್ರಮವಾಗಿದ್ದು, ಕರ್ನಾಟಕ ಸರ್ಕಾರ, ನೀತಿ ಆಯೋಗ ಮತ್ತು ನಿಮಾನ್ಸ್‌ನ ಸಹಕಾರದೊಂದಿಗೆ ಜಾರಿಗೆ ತಂದಿದ್ದು, ಪ್ರಾಯೋಗಿಕವಾಗಿ ಕೋಲಾರ, ಬೆಂಗಳೂರು ಮತ್ತು ಚಿಕಬಳ್ಳಾಪುರ ಜಿಲ್ಲೆಗಳಲ್ಲಿ ಬ್ರೈನ್ ಹೆಲ್ತ್ ಕ್ಲಿನಿಕ್ ಅನ್ನು ಪ್ರರಂಭಿಸಲಾಯಿತು. ಸಾರ್ವಜನಿಕ ಆರೋಗ್ಯ ವಿತರಣಾ ವ್ಯವಸ್ಥೆಯ ವಿವಿಧ ಹಂತಗಳಲ್ಲಿ ನರವೈಜ್ಞಾನಿಕ ಅಸ್ವಸ್ಥತೆಗಳಿಗಾಗಿ ಸಹಾಯೋಗ ಆಧಾರಿತ ಸಮಗ್ರ ಸೇವೆಯನ್ನು ಸ್ಥಾಪಿಸಲು ಪ್ರರಂಭಿಸಲಾಯಿತು. ನರವೈಜ್ಞಾನಿಕ ಕಾಯಿಲೆಗಳ ಆರೈಕೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಸಹ ದೊರಕಿಸುವ ಮಹದುದ್ದೇಶದೊಂದಿಗೆ ಈ ಕಾರ್ಯಕ್ರಮವನ್ನು ಕರ್ನಾಟಕ ಎಲ್ಲಾ ಜಿಲ್ಲೆಗಳಲ್ಲೂ ಪ್ರಾರಂಭಿಲಾಗಿದೆ.

BHI ಕ್ಲಿನಿಕ್‌ನಲ್ಲಿ ದೊರಕುವ ಚಿಕಿತ್ಸೆಗಳು

* ನರಸಂಬಂಧಿ ಕಾಯಿಲೆಗಳಿಗೆ ತಜ್ಞರಿಂದ ಆರೈಕೆ
* ಅಪಸ್ಮಾರ, ಮೂರ್ಛೆ ಮತ್ತು ನರಸಂಬಂಧಿ ಕಾಯಿಲೆಗಳಿಗೆ ತುತ್ತಾದ ರೋಗಿಗಳಿಗೆ ಫಿಸಿಯೋಥೆರಪಿ
* ನರಸಂಬಂಧಿ ಕಾಯಿಲೆಗಳಿಗೆ ಸ್ಪೀಚ್ ಥೆರಪಿ
* ಡಿಮೆನ್ಷಿಯ ಮತ್ತು ಇತರ ನರಸಂಬಂಧಿ ಕಾಯಿಲೆಗಳಿಗೆ ತುತ್ತಾದ ರೋಗಿಗಳಿಗೆ ಆಪ್ತ ಸಮಾಲೋಚನೆ
* ನರಸಂಬಂಧಿ ರೋಗಿಗಳಿಗೆ ನರ್ಸಿಂಗ್ ಆರೈಕೆ

Nursing Care

Physiotherapy Care

Psychological Care

Speech & Language Intervention

ವಿಶ್ವವಾಣಿ
ವಿಶ್ವವಿಖ್ಯಾತ ಹಂಪಿ ಉತ್ಸವ -2026
ವಿಜಯನಗರ ವೈಭವ
ಕಲೆ-ಧರ್ಮ-ಸಂಸ್ಕೃತಿಗಳ ಸಮ್ಮಿಲನ

ವಿಶೇಷ ಚೇತನರಿಗೆ ಮಿಡಿಯುತ್ತಿರುವ 'ಸಾಧ್ಯ' | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ವಿಶೇಷ ಶಾಲೆ ಮತ್ತು ವೃತ್ತಿ ತರಬೇತಿ ಕೇಂದ್ರ

ವಿಶೇಷಚೇತನರ ಬಾಳಿಗೆ ಬೆಳಕಾದ ಸಾಧ್ಯ ಸಂಸ್ಥೆ

ಪ್ರಸ್ತುತ ಸಮಾಜದಲ್ಲಿ ಒಂದೊಂದು ಉದ್ದೇಶ, ಗುರಿಗಳೊಂದಿಗೆ ಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ, ಈ ಪೈಕಿ ಜನಮಾನಸದಲ್ಲಿ ಶಾಶ್ವತವಾಗಿ ಉಳಿಯುವ ಕಾರ್ಯ ನಡೆಸುತ್ತಿರುವ ಐತಿಹಾಸಿಕ ನಗರವಾದ ಹೊಸಪೇಟೆಯಲ್ಲಿ ಸಾಧ್ಯ ಸಂಸ್ಥೆ ವಿಶೇಷವಾಗಿ ಗಮನಸೆಳೆಯುತ್ತದೆ.

2016 ರಲ್ಲಿ ಹಾಸನ ಮತ್ತು ಹೋಸಪೇಟೆಯಲ್ಲಿ ಬುದ್ದಿಮಾಂಧ್ಯ ಮಕ್ಕಳಿಗಾಗಿ ವಿಶೇಷ ಶಾಲೆಗಳನ್ನು ಕ್ರಮವಾಗಿ 4 ಹಾಗೂ 7 ಮಕ್ಕಳೊಂದಿಗೆ ಆರಂಭಿಸಲಾಯಿತು. ಈ ಎರಡು ವಿಶೇಷ ಶಾಲೆಗಳು, ವಿಶೇಷಚೇತನರು ಹಾಗೂ ಹಿರಿಯನಾಗರಿಕ ಸಬಲೀಕರಣ ಇಲಾಖೆಯಿಂದ ಮಾನ್ಯತೆಯನ್ನು ಪಡೆದಿದ್ದು, ಕರ್ನಾಟಕ ಸರಕಾರದಿಂದ ಅನುದಾನಕ್ಕೆ ಒಳಪಟ್ಟಿವೆ. ಮಾನಸಿಕ/ಭಿನ್ನ ಸಾಮರ್ಥ್ಯ ಹೊಂದಿದ ವಿಶೇಷ ಚೇತನರಿಗೆ ಉತ್ತಮ ಸುಸಜ್ಜಿತ ವಸತಿ ನಿಲಯದೊಂದಿಗೆ ಉತ್ತಮ ಗುಣಮಟ್ಟದ ವಿಶೇಷ ಶಿಕ್ಷಣ ಹಾಗೂ ವೃತ್ತಿ ತರಬೇತಿ ನೀಡಿ ಇವರ ಜೀವನ ಮಟ್ಟವನ್ನು ಉತ್ತಮ ಪಡಿಸುವುದು ಉದ್ದೇಶವಾಗಿದೆ.

ಪ್ರಸ್ತುತ ಸಾಧ್ಯ ಸಂಸ್ಥೆ ಹೊಸಪೇಟೆಯಲ್ಲಿ 330 ವಿಶೇಷ ಚೇತನ ಮಕ್ಕಳ ತರಬೇತಿ ಪಡೆಯುತ್ತಿದ್ದಾರೆ. ಈ ಪೈಕಿ 10 ಜಿಲ್ಲೆಗಳಿಂದ 120 ವಸತಿಯುತ ಮಕ್ಕಳಿದ್ದಾರೆ. ಹೊಸಪೇಟೆ ಮತ್ತು ಹಾಸನದಲ್ಲಿ ಸಂಸ್ಥೆಯಲ್ಲಿ 450 ಮಕ್ಕಳಿಗೆ ತರಬೇತಿ ಹಾಗೂ ಹೊಸಪೇಟೆ ತಾಲೂಕಿನ 14 ಗ್ರಾಮ ಪಂಚಾಯತಿಗಳಲ್ಲಿ 0 ಯಿಂದ 8 ವರ್ಷದೊಳಗಿನ ಮಕ್ಕಳಿಗೆ ಎಲ್ಲಾ ವಿಧದ ವಿಶೇಷಚೇತನ ಮಕ್ಕಳ ಶೀಘ್ರ ಪತ್ತೆ ಹಚ್ಚುವ ಮತ್ತು ಪುನಶ್ಚೇತನ ಕಾರ್ಯಕ್ರಮ ನಡೆದಿದೆ.

ಹಳ್ಳಿ, ಗ್ರಾಮ ಪಂಚಾಯತಿ ಮಟ್ಟದಲ್ಲಿ ನಿರ್ವಹಿಸುತ್ತಿದ್ದು ಸುಮಾರು 400 ಮಕ್ಕಳನ್ನು ಪತ್ತೆಹಚ್ಚಿ ಅವರಿಗೆ ಫಿಸಿಯೋಥೆರಪಿ, ಸ್ಪೀಚ್ ಥೆರಪಿ ಮೂಲಕ ಸಮಾಜಮುಖಿಯಾಗಿ ಸಾಮಾನ್ಯ ವಿದ್ಯಾರ್ಥಿಗಳೊಂದಿಗೆ ಬೇರೆತು ಶಿಕ್ಷಣ ಪಡೆಯಲು ತಯಾರು ಮಾಡುವುದು ಉದ್ದೇಶಚಾಗಿದೆ.

ಸಂಸ್ಥೆಯ ವಿಶೇಷ: ನುರಿತ ವಿಶೇಷ ಶಿಕ್ಷಕರು ಫಿಸಿಯೋಥೆರಪಿಸ್ಟ್ ಸ್ಪೀಚ್ಥೆರಪಿಸ್ಟ್, ದೈಹಿಕ ಶಿಕ್ಷಕರು, ಆಯಾ, ತಿಂಗಳಿಗೊಮ್ಮೆ ವೈದ್ಯಕೀಯ ತಪಾಸಣೆ, ಸುಸಜ್ಜಿತವಾದ ಕಟ್ಟಡ ಮತ್ತು ವಿಶೇಷಚೇತನರ ಸುರಕ್ಷಿತ ಆದ್ಯತೆ ನೀಡುವುದರ ಜತೆಗೆ ವಿಶೇಷ ಸ್ನೇಹಿ ಶೌಚಾಲಯ, ರ್ಯಾಂಪ್ ವ್ಯವಸ್ಥೆಯನ್ನು ಮಾಡಲಾಗಿದೆ. ಇದೆಲ್ಲದರೆ ಜತೆಗೆ ಕ್ವಿಜ್, ಯೋಗಾ, ಭಜನೆ ಮೂಲಕ ಸಾಮಾನ್ಯ ಮಕ್ಕಳ ರೀತಿಯಲ್ಲಿಯೇ ತರಬೇತಿ ಪಡೆಯುತ್ತಿದ್ದಾರೆ.

- 330 ಬುದ್ಧಿಮಾಂದ್ಯ ಮಕ್ಕಳಿಗೆ ವಿಶೇಷ ಶಿಕ್ಷಣವನ್ನು ನೀಡಲಾಗುತ್ತಿದೆ.
- ಅಬುಧಾಬಿಯಲ್ಲಿ 2019 ರಲ್ಲಿ ನಡೆದ ವಿಶೇಷ ಒಲಂಪಿಕ್ ವರ್ಲ್ಡ್ ಸಮ್ಮರ್‌ಗೇಮ್ಸ್ ಅಲ್ಲಿ 3 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.
- ವಿಶೇಷ ಒಲಂಪಿಕ್ಸ್ ಮತ್ತು ಖೇಲೋ ಇಂಡಿಯಾ ರಾಷ್ಟ್ರೀಯ ಕ್ರೀಡಾಕೂಟದಲ್ಲಿ 19 ವಿದ್ಯಾರ್ಥಿಗಳು ಭಾಗವಹಿಸಿರುವುದು ವಿಶೇಷ.
- ವಿಶೇಷ ಒಲಂಪಿಕ್ಸ್ ನೃತ್ಯ ಕ್ರೀಡೆಗಳಲ್ಲಿ 2 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.
- 2019 ರ ವಿಶೇಷ ಒಲಂಪಿಕ್ಸ್ ವಿಶ್ವ ಬೇಸಿಗೆ ಕ್ರೀಡಾಕೂಟದಲ್ಲಿ 9 ಪದಕಗಳನ್ನು ಗಳಿಸುವ ಮೂಲಕ ದೇಶಕ್ಕೆ ಕೀರ್ತಿತಂದಿದ್ದಾರೆ. ಈ ವಿದ್ಯಾರ್ಥಿಗಳಿಗೆ ಭಾರತ ಸರಕಾರದ ಯುವಜನ ಸಬಲೀಕರಣ ಮತ್ತು ಕ್ರೀಡಾ ಸಚಿವಾಲಯದಿಂದ 15 ಲಕ್ಷ ನಗದು ಬಹುಮಾನ ದೊರೆತಿದೆ.

ಸಂಸ್ಥೆಯ ಉತ್ತಮ ಕಾರ್ಯಕ್ರಮಗಳು:

ವಿಶೇಷ ಶಿಕ್ಷಣದಿಂದ ವಂಚಿತರಾದ ಮಾನಸಿಕ ಭಿನ್ನ ಸಾಮಾರ್ಥ್ಯ ಮಕ್ಕಳು/ ವ್ಯಕ್ತಿಗಳಿಗೆ ಸಾಧ್ಯ ಸಂಸ್ಥೆಯ ಹಾಸನ ಹಾಗೂ ಹೊಸಪೇಟೆಯ ಎರಡೂ ಶಾಲೆಯ ಬಾಗಿಲುಗಳು ಸದಾ ತೆರೆದಿರುತ್ತದೆ.

ಸಂಸ್ಥೆಯಲ್ಲಿ ಉತ್ತಮ ತರಬೇತಿ ಮತ್ತು ಅನುಭವ ಹೊಂದಿದ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಗಳು ಸಮರ್ಪಿತ ಮನೋಭಾವನೆಯಿಂದ, ಪ್ರೀತಿ ಕಾಳಜಿಯಿಂದ, ವಿಶೇಷ ಮಕ್ಕಳ ಆರೈಕೆ ಮತ್ತು ಸೇವೆಗೆ ದಿನದ 24 ಗಂಟೆ ಧಣಿವಿಲ್ಲದೆ ಸೇವೆ ಮಾಡಲು ಸದಾ ಸಿದ್ಧರಿದ್ದಾರೆ.

ಸೌಮ್ಯ, ಮಧ್ಯಮ ಮತ್ತು ತೀವ್ರವಾಗಿ ಸಮಸ್ಯೆಗೆ ಒಳಗಾದಂತ 3 ವರ್ಷದಿಂದ 25 ವರ್ಷ ವಯಸ್ಸಿನ ಒಳಗಿನ ಮಾನಸಿಕ ಭಿನ್ನ ಸಾಮಾರ್ಥ್ಯರಿಗೆ ತರಬೇತಿ ನೀಡಲು ಸಾಧ್ಯ ಸಂಸ್ಥೆಯು ಸಿದ್ಧವಿದೆ

ಸಾಧ್ಯ ಸಂಸ್ಥೆಯು NIMH ರೂಪಿಸಿರುವ FACP & Basic MR ಶಿಕ್ಷಣ ಪದ್ಧತಿಯಂತೆ ಶಿಕ್ಷಣ ನೀಡುತ್ತಿದೆ. ದಿನ ನಿತ್ಯದ ಚಟುವಟಿಕೆ, ಕ್ರಿಯಾತ್ಮಕ ಶಿಕ್ಷಣ, ವೃತ್ತಿ ತರಬೇತಿಗೆ ಬೇಕಾದ ಕೌಶಲ್ಯಗಳು, ಮಾತಿನ ತರಬೇತಿ, ಫಿಸಿಯೋಥೆರಪಿ, ಯೋಗ ಶಿಕ್ಷಣ, ಸಂಗೀತ, ಸಾಂಸ್ಕೃತಿಕ ಮತ್ತು ಕ್ರೀಡಾಚಟುವಟಿಕೆಗಳನ್ನು ವಿಶೇಷ ಮಕ್ಕಳಿಗೆ ಅನುಗುಣವಾಗಿ ರೂಪಿಸಿ ತರಬೇತಿ ಗೊಳಿಸುತ್ತಿದೆ ವಿಶೇಷವಾಗಿ ಸ್ಪೆಷಲ್ ಒಲಿಂಪಿಕ್ಸ್ ಕ್ರೀಡೆಗೆ ಬೇಕಾಗುವಂತಹ ಕೌಶಲ್ಯ ಮತ್ತು ತರಬೇತಿಗಳನ್ನ ನೀಡುತ್ತಿದೆ.

ವೃತ್ತಿ ತರಬೇತಿ:

18 ವರ್ಷ ಮೇಲ್ಪಟ್ಟ ಮಾನಸಿಕ ಭಿನ್ನ ಸಾಮಾರ್ಥ್ಯರಿಂದ ಕಾಗದದ ಲಕೋಟೆಗಳು ಮತ್ತು ಚೀಲಗಳು, ಮೇಣದ ಬತ್ತಿ, ಡೋರ್‌ಮ್ಯಾಟ್, ಹಬ್ಬ ಆಧಾರಿತ ವಸ್ತುಗಳು, ಮಣಿಗಳ ಹಾರ, ನೇಯ್ದೆ ತರಬೇತಿ ಮುಂತಾದ ಉತ್ಪಾದನೆಗೆ ಬೇಕಾದ ಪೂರ್ವಭಾವಿ ವೃತ್ತಿ ಪೂರ್ವ ಮತ್ತು ವೃತ್ತಿಪರ ತರಬೇತಿಯನ್ನು ನೀಡಲಾಗುತ್ತದೆ. ಇದರ ಜೊತೆಗೆ ರಸಾಯನಿಕ ಮುಕ್ತ ಹೋಲಿ ಕರ್ಲ(ಬಣ್ಣ)ಗಳ ತಯಾರಿಕೆ ತರಬೇತಿ ನೀಡುವುದು ಮಾತ್ರವಲ್ಲದೆ ಇವುಗಳಿಂದ ಬಂದ ಲಾಭಾಂಶ ಮಕ್ಕಳಿಗೆ ನೀಡಲಾಗುತ್ತಿದೆ.

ಸಾಧ್ಯ ವಿಶೇಷ ಚೇತನ ಮಕ್ಕಳ ವಸತಿ ಶಾಲೆಯಲ್ಲಿ ಸುಸಜ್ಜಿತ ವಾದ ಕಟ್ಟಡ, ನುರಿತ ವಿಶೇಷ ಶಿಕ್ಷರು, ಸ್ಪೀಚ್ ಹಾಗೂ ಪಿಸಿಯೋ ಥೆರೆಪಿಸ್ಟ್, ದೈಹಿಕ ಶಿಕ್ಷಕರು ಹಾಗೂ ತರಬೇತಿ ಹೊಂದಿದ ಆರೈಕೆದಾರರಿದ್ದು ,ವಿಶೇಷ ಶಿಕ್ಷಣ, ತೆರಪಿ ಗಳೊಂದಿಗೆ, ಕ್ರೀಡೆ, ಯೋಗ, ಭಜನೆ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ದಿನದ 24ಗಂಟೆಯೂ ವಿಶೇಷ ಮಕ್ಕಳಿಗೆ ಕಾಳಜಿ ವಹಿಸಿ ಅವರ ಸರ್ವೋತೋಮುಖ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಿಸಲಾಗಿದೆ.

ನಮ್ಮೊಂದಿಗೆ ಸೇರಿ, ನಮ್ಮ ಕೈಗಳನ್ನು ಬಲಪಡಿಸಿ

ಯಾವ ಮಗುವು ನಾನು ಹೀಗೆ ಇರಬೇಕೆಂದು ಹೇಳಿಕೊಂಡು ಹುಟ್ಟುವುದಿಲ್ಲ. ಆದರೆ ಮಗುವು ಮಾನಸಿಕ ಭಿನ್ನ ಸಾಮರ್ಥ್ಯದಿಂದ ಹುಟ್ಟಿರುವುದು ಮಗುವಿನ ದೋಷವೇ, ಹೀಗೆ ಹುಟ್ಟಿದ ಮಗುವಿಗೂ ಪ್ರೀತಿಸುವ, ಅರ್ಥಮಾಡಿಕೊಳ್ಳುವ, ಗೌರವಯುತವಾಗಿ ಜೀವನ ನಡೆಸುವ ಹಕ್ಕು ಇಲ್ಲವೆ, ಸಮಾಜದಲ್ಲಿ ಜವಬ್ದಾರಿಯುತ ವ್ಯಕ್ತಿಯಾಗಿ ನಾವು ಹುಟ್ಟಿದ ಮೇಲೆ, ಮಾನಸಿಕ ಭಿನ್ನ ಸಾಮರ್ಥ್ಯದಿಂದ ಹುಟ್ಟಿದ ಮಕ್ಕಳ ಜವಾಬ್ದಾರಿ ಸಹಿತ ನಮ್ಮದಲ್ಲವೇ, ಅದಕ್ಕಾಗಿ ಅವರಿಗೆ ಅವಕಾಶಗಳನ್ನು ಸೃಷ್ಟಿಸಿ ಕೊಡುವುದು ನಮ್ಮ ಕರ್ತವ್ಯವಲ್ಲವೆ, ಇದರಿಂದಾಗಿ ಮಾನಸಿಕ ಬಿನ್ನ ಸಾಮರ್ಥ್ಯ ಮಕ್ಕಳ ಜೀವನ ಬದಲಾವಣೆಗೆ ಪ್ರಯತ್ನಿಸುವುದು ನಮ್ಮೆಲ್ಲರ ಜವಬ್ದಾರಿಯಲ್ಲವೇ. ಒಂದು ಸಣ್ಣ ಅವಕಾಶವು ಒಂದು ದೊಡ್ಡ ಉದ್ಯಮವಾಗಿ ಬೆಳೆಯಬಲ್ಲದು ಅಂತೆಯೆ ನೀವು ನಮ್ಮೊಂದಿಗೆ ಕೈ ಜೋಡಿಸಿ, ನಾವೆಲ್ಲರೂ ಸೇರಿ ಈ ಮಕ್ಕಳನ್ನು ಸುಧಾರಿಸಲು ಪ್ರಯತ್ನಿಸೋಣ. ನಮ್ಮೊಂದಿಗೆ ಸೇರಿ, ನಮ್ಮ ಕೈಗಳನ್ನು ಬಲಪಡಿಸಿ. ಒಟ್ಟಾಗಿ ನಾವು ಬದಲಾವಣೆ ಮಾಡಬಹುದು. ಮಾನಸಿಕವಾಗಿ ಸವಾಲಾಗಿರುವ/ಬೌದ್ಧಿಕ ಅಸಾಮರ್ಥ್ಯ/ಬುದ್ದಿಮಾಂದ್ಯ ಮಕ್ಕಳನ್ನು ನೋಡಿಕೊಳ್ಳುವುದು ಸಂಪೂರ್ಣ ಸಮರ್ಪಣೆ ಮತ್ತು ಬದ್ಧತೆಯ ಕೆಲಸವಾಗಿರುತ್ತದೆ. ಪ್ರಾರಂಭದಿಂದಲೇ ಈ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕೆಂಬ ಉದ್ದೇಶದಿಂದ ಸಾಧ್ಯ ಸಂಸ್ಥೆ ಕೆಲಸ ಮಾಡುತ್ತಿದೆ. ಸಹೃದಯ ದಾನಿಗಳಿಂದ, ಪಾಲಕ, ಪೋಷಕರ ಸಹಾಯದಿಂದ ಇನ್ನು ಹೆಚ್ಚಿನ ಮಕ್ಕಳಿಗೆ ತರಬೇತಿಯನ್ನು ಕೊಡುಬಹುದಾಗಿದೆ. ಅಲ್ಲದೆ ವಿಶೇಷ ಮಕ್ಕಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸಾಧ್ಯ ಸಂಸ್ಥೆಗೆ ದಾನಿಗಳು, ಪಾಲಕರು, ಪೋಷಕರು ಹಾಗೂ ಸಹಾಯ ಮಾಡಲು ಬಯಸುವವರು ಸಂಪರ್ಕಿಸಬಹುದು.

ಸಂಸ್ಥೆಯ ಗುರಿ/ಉದ್ದೇಶಗಳು:-

1. ಮಾನಸಿಕ ಭಿನ್ನ ಸಾಮರ್ಥ್ಯರನ್ನು ಶೀಘ್ರ ಪತ್ತೆಹಚ್ಚುವಿಕೆ ಮತ್ತು ಶಾಲಾ ಸಿದ್ಧತಾ ತರಬೇತಿಯನ್ನು ಸಮುದಾಯ ಮಟ್ಟದಲ್ಲಿ ನೀಡುವುದು.
2. ಮಾನಸಿಕ ಭಿನ್ನ ಸಾಮರ್ಥ್ಯರಿಗೆ ವಿಶೇಷ ಶಿಕ್ಷಣ ಮತ್ತು ವೃತ್ತಿ ತರಬೇತಿಯನ್ನು ನೀಡುವುದು.
3. ಮಾನಸಿಕ ಬಿನ್ನ ಸಾಮರ್ಥ್ಯರನ್ನು ಗುರುತಿಸಿ, ಅವರಿಗೆ ಪುನರ್ ವಸತಿಯನ್ನು ಕಲ್ಪಿಸುವುದು.
4. ಎಲ್ಲಾ ರೀತಿಯ ಕ್ರೀಡಾ ಚಟುವಟಿಕೆಯಲ್ಲಿ ತರಬೇತಿಗೊಳಿಸಿ ವಿಶೇಷ ಒಲಂಪಿಕ್‌ಸ್ನಲ್ಲಿ ಭಾಗವಹಿಸಲು ಸಿದ್ಧತೆಗೊಳಿಸುವುದು.
5. ಮಾನಸಿಕ ಭಿನ್ನ ಸಾಮರ್ಥ್ಯ ಹೊಂದಿದ ವ್ಯಕ್ತಿಗಳಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿ, ಅವರು ಮುಖ್ಯ ವಾಹಿನಿಯಲ್ಲಿ ಜೀವನ ನಡೆಸಲು ಉತ್ತೇಜಿಸುವುದು.
6. ಮಾನಸಿಕ ಭಿನ್ನ ಸಾಮರ್ಥ್ಯ ಹೊಂದಿದ ವ್ಯಕ್ತಿಗಳ ಜೀವನ ಮಟ್ಟವನ್ನು ಉತ್ತಮ ಪಡಿಸುವುದು.
7. ಬುದ್ದಿಮಾಂದ್ಯತೆಗೆ ಕಾರಣಗಳು ಮತ್ತು ತಡೆಗಟ್ಟಲು ಬೇಕಾದ ಜಾಗೃತಿಯನ್ನು ಸಮಾಜದಲ್ಲಿ ಮೂಡಿಸುವುದು.
8. ವಯಸ್ಕ ಮಾನಸಿಕ ಭಿನ್ನ ಸಾಮರ್ಥ್ಯ ಹೊಂದಿದ ವ್ಯಕ್ತಿಗಳಿಗೆ ಶಾಶ್ವತ ಯೋಜನೆಯನ್ನು ರೂಪಿಸಿ ಪುನರ್‌ವಸತಿ ಕಲ್ಪಿಸುವುದು.
9. ಮಾನಸಿಕ ಭಿನ್ನ ಸಾಮರ್ಥ್ಯರಿಗೆ ಮತ್ತು ಬಹುವಿಧ ನ್ಯೂನ್ಯತೆ ಹೊಂದಿದ ವ್ಯಕ್ತಿಗಳಿಗೆ ಬೇಕಾದ ಸಹಾಯ ಮತ್ತು ಸವಲತ್ತುಗಳನ್ನು ಕೊಡಿಸುವುದು.

ವಿಶೇಷ ಚೇತನರಿಗೆ ಅಡೆತಡೆ ಮುಕ್ತ ಸಮನ್ವಯ ಸಮಾಜ ನಿರ್ಮಾಣ ಮಾಡುವ ವಿಶಾಲವಾದ ದೃಷ್ಟಿಕೋನ ಹೊಂದಿರುವ ಸಾಧ್ಯ ಸಂಸ್ಥೆಯೂ ಸ್ವಯಂಪ್ರೇರಣೆಯಿಂದ 2030 ರ ವೇಳೆಗೆ ಸುಮಾರು 2000 ಮಾನಸಿಕ ವಿಕಲಚೇತನರನ್ನು ವಿನೂತನ ಕಾರ್ಯಕ್ರಮಗಳಾದ ವಿಶೇಷ ಶಿಕ್ಷಣ, ಚಿಕಿತ್ಸೆಗಳು, ಕಲೆ, ಸಂಸ್ಕೃತಿ, ಕ್ರೀಡೆ ಮತ್ತು ವೃತ್ತಿಪರ ಕೌಶಲ್ಯ ತರಬೇತಿಯ ಮೂಲಕ ಸಾಮಾಜಿಕ ಸ್ಥಾನಮಾನವನ್ನು ಸುಧಾರಿಸುವ ಜೊತೆಗೆ ಮುಖ್ಯವಾಹಿನಿಯ ಉದ್ಯೋಗವನ್ನು ಉತ್ತೇಜಿಸುವ ಗುರಿಯನ್ನು ಹೊಂದುವ ಮಹತ್ವಧ್ಯೇಯಹೊಂದಿದೆ.

ವಿಳಾಸ:-
ಜಂಬುನಾಥ ರಸ್ತೆ, 35ನೇ ವಾಡ್9, ಕೃಷ್ಣಾನಗರ
HLC ಸೇತುವೆ ಹತ್ತಿರ, ಹೊಸಪೇಟೆ--583201
ವಿಜಯನಗರ ಜಿಲ್ಲೆ. ಮೊ.ಸಂ. 9481160691

ಕೇಂದ್ರ ಕಚೇರಿ:-
ಹೆಮ್ಮತ್ತಾಳು ಗ್ರಾಮ, ಮಕ್ಕಂದೂರು ಅಂಚೆ, ಮಡಿಕೇರಿ, ಕರ್ನಾಟಕ--571201.



ಹಂಪಿ ಉತ್ಸವ
ಹಂಪಿ ಉತ್ಸವ-2026
ನಗರಸಭೆ ಕಾರ್ಯಾಲಯ, ಹೊಸಪೇಟೆ.
ವಿಜಯನಗರ ಜಿಲ್ಲೆ
ವಿಜಯನಗರ ಸಾಮ್ರಾಜ್ಯದ ಗತಕಾಲದ ವೈಭವ ಬಿಂಬಿಸುವ ಐತಿಹಾಸಿಕ,
ವಿಶ್ವಪರಂಪರೆಯ ತಾಣ ಹಂಪಿ ಉತ್ಸವಕ್ಕೆ ಆಗಮಿಸುತ್ತಿರುವ
ಸರ್ವರಿಗೂ ಸುಸ್ವಾಗತ
ಶ್ರೀ ಇ. ತುಕಾರಾಂ
ಮಾನ್ಯ ಲೋಕಸಭಾ ಸದಸ್ಯರು
ಶ್ರೀ ಹೆಚ್.ಆರ್. ಗವಿಯಪ್ಪ
ಮಾನ್ಯ ಶಾಸಕರು, ವಿಜಯನಗರ ಕ್ಷೇತ್ರ
ಶ್ರೀ ಎನ್. ರೂಪೇಶ್ ಕುಮಾರ್
ಅಧ್ಯಕ್ಷರು, ನಗರಸಭೆ, ಹೊಸಪೇಟೆ
ಶ್ರೀ ಬಿ. ಜೀವರತ್ನಂ
ಉಪಾಧ್ಯಕ್ಷರು, ನಗರಸಭೆ, ಹೊಸಪೇಟೆ
ಶ್ರೀ ಸರವಣನ್
ಸ್ಥಾಯಿ ಸಮಿತಿ ಅಧ್ಯಕ್ಷರು, ನಗರಸಭೆ, ಹೊಸಪೇಟೆ
ಐತಿಹಾಸಿಕ ಹೊಸಪೇಟೆ ನಗರವನ್ನು ಸ್ವಚ್ಛ ಹಾಗೂ ಸುಂದರವನ್ನಾಗಿಸಲು ಮನವಿ.
1. ಮನೆಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ಮೂಲದಲ್ಲಿಯೇ ಹಸಿ, ಒಣ ಹಾಗೂ ಅಪಾಯಕಾರಿ ಕಸವನ್ನಾಗಿ ಕಡ್ಡಾಯವಾಗಿ ವಿಂಗಡಿಸಿದ ನಗರಸಭೆಯ ವಾಹನಗಳಿಗೆ ನೀಡುವುದು.
2. ಕಸವನ್ನು ಎಲ್ಲೆಂದರಲ್ಲಿ ಎಸೆಯುವುದು ನಿರ್ಬಂಧಿಸಲಾಗಿದೆ.
3. ಎಲ್ಲಾ ವ್ಯಾಪಾರಸ್ಥರು ತಮ್ಮ-ತಮ್ಮ ಅಂಗಡಿಯಲ್ಲಿ ಕಸದ ಬುಟ್ಟಿಯನ್ನು ಇಟ್ಟು ಕಸ ವಿಂಗಡಿಸಿ ನಗರಸಭೆ ವಾಹನಗಳಿಗೆ ನೀಡುವುದು.
4. ಏಕ ಬಳಕೆ ಪ್ಲಾಸ್ಟಿಕ್‌ನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
5. ಒಂದು ಸ್ವಚ್ಛ ಪರಿಸರ ಒಂದು ಸುರಕ್ಷಿತ ಪರಿಸರ
6. ಕಸವನ್ನು ಗೊಬ್ಬರವನ್ನಾಗಿಸಿ.
7. ಸಮರ್ಪಕ ತ್ಯಾಜ್ಯವನ್ನು ನಿರ್ವಹಣೆ ಮಾಡಿ ತ್ಯಾಜ್ಯವನ್ನು ಸಂಪನ್ಮೂಲವನ್ನಾಗಿಸಿ.
8. ನಿಮ್ಮ ಮನೆಯ ನಲ್ಲಿ ಸಂಪರ್ಕದ ಸೋರಿಕೆ ಸುತ್ತಮುತ್ತಲಿನ ಕಲುಷಿತ ನೀರು ಕೊಳವೆ ಮಾರ್ಗದಲ್ಲಿ ಬೆರೆಯದಂತೆ ಜಾಗರೂಕತೆ ವಹಿಸಿ ಕೂಡಲೇ ನಗರಸಭೆಗೆ ತಿಳಿಸಿ.
9. ನಿಮ್ಮ ಮನೆಯಲ್ಲಿ ಸಂಪರ್ಕ ತೆರೆದ ಚರಂಡಿ ಅಥವಾ ಟಾಯ್ಲೆಟ್ ಹಿಂಗು ಗುಂಡಿಯ ಹತ್ತಿರ ಇದ್ದಲ್ಲಿ ತಕ್ಷಣ ಬದಲಾಯಿಸಿಕೊಳ್ಳಿ
10. ನಿಮ್ಮ ಮನೆಯ ಸುತ್ತಮುತ್ತಲಿನ ನೀರಿನ ಪೈಪ್ ಲೈನ್/ವಾಲ್ವ್‌ಗಳ ಸೋರಿಕೆ ಕೂಡಲೇ ನಗರಸಭೆಗೆ ತಿಳಿಸಿ ದುರಸ್ತಿ ಕೈಗೊಳ್ಳಲು ಸಹಕರಿಸಿ.
11. ಮನೆಯಲ್ಲಿ ನೀರಿನ ಶೇಖರಣಾ ತೊಟ್ಟಿ ಹಾಗೂ ಟ್ಯಾಂಕ್‌ಗಳನ್ನು ನಿಯಮಿತವಾಗಿ ಶುಚಿಗೊಳಿಸಿ ಶುದ್ಧವಾದ ನೀರನ್ನು ಶೇಖರಿಸಿ ಇಡೋಣ.
12. ನಿಮ್ಮ ಮನೆಗೆ ಸರಬರಾಜು ಆಗುವ ನೀರಿನ ಬಣ್ಣ ಹಾಗೂ ವಾಸನೆಯನ್ನು ಸೂಕ್ಷ್ಮವಾಗಿ ಗಮನಿಸಿ ಸಂದೇಹವಿದ್ದಲ್ಲಿ ತಕ್ಷಣ ನಗರಸಭೆಗೆ ಸಿಬ್ಬಂದಿಗಳಿಗೆ ತಿಳಿಸಿ.
13. ನೀರನ್ನು ಉಪಯೋಗಿಸುವ ಮುಂಚೆ ಕಾಯಿಸಿ ಆರಿಸಿ ನಂತರ ಬಳಸಿರಿ.
14. ಸಾರ್ವಜನಿಕವಾಗಿ ಬಳಸುವ ಜಲಮೂಲ ಶುದ್ಧೀಕರಣ ಘಟಕ, ಜಲ ಸಂಗ್ರಹಾರಗಳ ಅಪರಿಚಿತ ವ್ಯಕ್ತಿಗಳು ಕಲುಷಿತಗೊಳಿಸುತ್ತಿದ್ದಲ್ಲಿ ತಕ್ಷಣ ನಗರಸಭೆಗೆ ಮಾಹಿತಿ ನೀಡುವುದು.
15. ಸಾರ್ವಜನಿಕರು ಮನೆಯಲ್ಲಿ ಕುಳಿತು ಅತೀ ಸರಳವಾಗಿ ಇ-ಖಾತಾವನ್ನು ಪಡೆದುಕೊಳ್ಳಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ನಿಗಧಿತ ಕಾಲಾವಧಿಯೊಳಗಾಗಿ ಇ-ಖಾತಾ ಪಡೆಯಬಹುದು.
(www.eaasthi.karnataka.gov.in)

ಹಂಪಿ ಉತ್ಸವ
ಫೆಬ್ರವರಿ 13, 14 ಮತ್ತು 15 ರಂದು ನಡೆಯಲಿರುವ
ಹಂಪಿ ಉತ್ಸವ 2026 ಕ್ಕೆ
ಸರ್ವರಿಗೂ ಹಾರ್ದಿಕ ಸುಸ್ವಾಗತ
ಶುಭಕೋರುವವರು
ಹಳೆಯ ವಿದ್ಯಾರ್ಥಿಗಳು
ಹಂಪಿ ಕನ್ನಡ ವಿಶ್ವವಿದ್ಯಾಲಯ.

ಹಂಪಿ ಉತ್ಸವ
13, 14 ಮತ್ತು 15 ಫೆಬ್ರವರಿ 2026
ಸರ್ವರಿಗೂ ಸ್ವಾಗತ
ಕಾರ್ಯಕ್ರಮ
ಹಂಪಿ ಸ್ಮಾರಕಗಳ
ಕುರಿತು ಡ್ರೋನ್ ಶೋ
ದಿನಾಂಕ 13.02.2026 ರಿಂದ 15.02.2026, ಸಂಜೆ 07.00 ಗಂಟೆಗೆ
ಸ್ಥಳ : ಎಂ ಪಿ ಪ್ರಕಾಶ್ ವೇದಿಕೆ, ಹಂಪಿ
ಫೆಬ್ರವರಿ 13, 14 ಮತ್ತು 15
ರಂದು ನಡೆಯಲಿರುವ
ಹಂಪಿ ಉತ್ಸವ 2026ಕ್ಕೆ
ಸರ್ವರಿಗೂ
ಹಾರ್ದಿಕ
ಸುಸ್ವಾಗತ
ಶುಭಕೋರುವವರು
ಪುರಸಭೆ ಕಾರ್ಯಾಲಯ, ಕಮಲಾಪುರ, ವಿಜಯನಗರ ಜಿಲ್ಲೆ